ಗುರುವಾರ, ಏಪ್ರಿಲ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 95 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಮತ್ತೊಮ್ಮೆ 'ಅರುಣಾಚಲ ವಿವಾದ' ಕೆದಕಿದ ಚೀನಾ!

ಆಳ-ಅಗಲ
ಅರುಣಾಚಲ ಪ್ರದೇಶವನ್ನು ಅತಿಕ್ರಮಿಸುತ್ತಿದೆಯೇ ಚೀನಾ?

6ರಿಂದ ರಾಜ್ಯದ ವಿವಿಧೆಡೆ ಮಳೆ ಸಾಧ್ಯತೆ 5

'ಮೊದಲು ಶಾಂತಿ; ಬಳಿಕ ಮತ ಚಲಾವಣೆ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
73,876 ▼	22,434 ▼	₹71,780 (ಬೆಂಗಳೂರು) ▲	₹79,900 (ಬೆಂಗಳೂರು) ▲

ಬಿಜೆಪಿ–ಜೆಡಿಎಸ್ ನಿರಾಳ ● ಕಾಂಗ್ರೆಸ್‌ಗೂ ನೆಮ್ಮದಿ

ಮರೆಗೆ ಸರಿದ ಬಂಡಾಯ

ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಯ ಮೊದಲ ಹಂತದ 14 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಗುರುವಾರ ಕೊನೆಗೊಳ್ಳಲಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ವಿವಿಧ ಕ್ಷೇತ್ರಗಳಲ್ಲಿದ್ದ ಅತೃಪ್ತಿಯನ್ನು ಶಮನಗೊಳಿಸಿದ್ದಾರೆ. ಈ ಬಾರಿ ಕಾಂಗ್ರೆಸ್‌ಗಿಂತ ಬಿಜೆಪಿಯು ಹೆಚ್ಚು ಕ್ಷೇತ್ರಗಳಲ್ಲಿ ಅಸಮಾಧಾನ, ಭಿನ್ನಮತದ ಬೇಗೆಗೆ ಗುರಿಯಾಗಿತ್ತು. ರಾಜ್ಯ ನಾಯಕರಿಗೆ ಬಗ್ಗದ ಬಂಡುಕೋರರನ್ನು ಮಣಿಸುವಲ್ಲಿ ಗೃಹ ಸಚಿವ ಅಮಿತ್ ಶಾ ಮೊದಲ ಹಂತದ ಯಶಸ್ಸು ಕಂಡಿದ್ದಾರೆ. ಬೆರಳೆಣಿಕೆ ಕ್ಷೇತ್ರಗಳಲ್ಲಿದ್ದ ಅಸಮಾಧಾನಕ್ಕೆ ಕಾಂಗ್ರೆಸ್ ನಾಯಕರು ಉಪಶಮನ ಕಂಡುಕೊಂಡಿದ್ದಾರೆ

'ಕಮಲ'ದೊಳಗೆ ಸೌಹಾರ್ದ

ಬಿಜೆಪಿಯಲ್ಲಿ ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ನಂತರ ಹೆಡೆ ಎತ್ತಿದ್ದ ಬಂಡಾಯ ಬಹುತೇಕ ತಣ್ಣಗಾಗಿದೆ. ಮೊದಲ ಹಂತದಲ್ಲಿ ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಅವರು ಅಸಮಾಧಾನಿತರನ್ನು ಭೇಟಿ ಮಾಡಿ ಸಮಾಧಾನಗೊಳಿಸುವಲ್ಲಿ ಯಶಸ್ವಿಯಾದರೆ, ಪಟ್ಟು ಬಿಡಲೊಪ್ಪದ ಅತೃಪ್ತರನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಕರೆಸಿ ಸಮಸ್ಯೆ ಬಗೆಹರಿಸಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಬಂಡಾಯದ ಬಾವುಟ ಹಾರಿಸಿದ್ದ ಎಸ್.ಆರ್.ವಿಶ್ವನಾಥ್ ಮತ್ತು ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರನ್ನು ಮಂಗಳವಾರ ಒಟ್ಟಿಗೆ ಕೂರಿಸಿಕೊಂಡು ಮಾತನಾಡಿದ್ದ ಶಾ, ಬುಧವಾರ ಬೆಳಿಗ್ಗೆ ಒಟ್ಟಿಗೆ ಉಪಹಾರ ಮಾಡಿ ಕ್ಷೇತ್ರದಲ್ಲಿ ಸಕಾರಾತ್ಮಕ ಸಂದೇಶ ನೀಡಬೇಕು. ಸುಧಾಕರ್ ಅವರನ್ನು ಗೆಲ್ಲಿಸಿಕೊಂಡು ಬರಲು ಶ್ರಮಿಸಬೇಕು ಎಂದು ಸೂಚನೆ ನೀಡಿದ್ದರು. 5

ಬೆಂಕಿ ಆರಿದರೂ 'ಕೈ'ಯಲ್ಲಿ ಕಿಡಿ

ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಒಳಗಿನ ಬೇಗುದಿ ಭಿನ್ನಮತ ಶಮನವಾದಂತಿದ್ದರೂ, ಒಳ ಏಟಿನ ಭೀತಿ ಪಕ್ಷದ ನಾಯಕರನ್ನು ಕಾಡುತ್ತಿದೆ. ಟಿಕೆಟ್ ಸಿಗದ ಕಾರಣಕ್ಕೆ ಮುನಿಸಿಕೊಂಡವರು ಪಕ್ಷ ಘೋಷಿಸಿದ ಅಭ್ಯರ್ಥಿಪರ ಕೆಲಸ ಮಾಡುವುದಾಗಿ ವಾಗ್ದಾನ ನೀಡಿದ್ದಾರೆ. ಆದರೆ, ಕೆಲವರ ತಟಸ್ಥ ಮನೋಭಾವದ 'ಬಂಡಾಯ' ಚಿಂತೆಗೀಡು ಮಾಡಿದೆ.

ಟಿಕೆಟ್ ಗಿಟ್ಟಿಸಿಕೊಳ್ಳಲು ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಕೊನೆಕ್ಷಣದವರೆಗೆ ಆಕಾಂಕ್ಷಿಗಳು ಪ್ರಯತ್ನಪಟ್ಟಿದ್ದರು. ಟಿಕೆಟ್ ಇನ್ನೊಬ್ಬರ ಪಾಲಾಗುತ್ತಿದ್ದಂತೆಯೇ ಅಪಸ್ವರ ಎತ್ತಿದ್ದರು. ಪಕ್ಷೇತರರಾಗಿ ಅಖಾಡಕ್ಕಿಳಿಯುವ ಮಾತೂ ಆಡಿದ್ದರು. ನಾಯಕರ ಮಧ್ಯಪ್ರವೇಶದ ಬಳಿಕ ಕೋಪ ತಣಿದಿದೆ. ಆದರೂ ನಿರಾಶೆಯಲ್ಲಿರುವ ಅಭ್ಯರ್ಥಿಗಳು ಕ್ಷೇತ್ರದಲ್ಲಿ ಕೆಲಸ ಮಾಡದೇ ದೂರನಿಲ್ಲಬಹುದೇ ಎಂಬ ಆತಂಕ ನಾಯಕರಲ್ಲಿದೆ. 5

- **ತುಮಕೂರು:** ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರನ್ನು ಯಡಿಯೂರಪ್ಪ ಸಮಾಧಾನಗೊಳಿಸಿದ್ದರು. ಹಾಗಿದ್ದರೂ ಸೋಮಣ್ಣ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಅವರು ಹಾಜರಿರಲಿಲ್ಲ
- **ದಾವಣಗೆರೆ:** ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ವಿರುದ್ಧ ಮಾಜಿ ಶಾಸಕರೆಲ್ಲರೂ ತಿರುಗಿ ಬಿದ್ದಿದ್ದರು. ಅದನ್ನು ಅಮಿತ್ ಶಾ ಬಗೆಹರಿಸಿದ್ದಾರೆ. ನಾಮಪತ್ರ ಸಲ್ಲಿಕೆ ವೇಳೆ ಅತೃಪ್ತ ನಾಯಕರು ಹಾಜರಿರುತ್ತಾರೊ ಇಲ್ಲವೋ ಎಂಬ ಕುತೂಹಲ ಇದೆ
- **ಬೆಳಗಾವಿ:** ಜಗದೀಶ ಶೆಟ್ಟರ್ ವಿರುದ್ಧ ಇದ್ದ ಅತೃಪ್ತ ನಾಯಕರ ಮನವೊಲಿಸಿರುವ ನಾಯಕರು, ಬಿಜೆಪಿ ಶಾಸಕರಾದ ಜಾರಕಿಹೊಳಿ ಸಹೋದರರ ಜತೆಗೂ ಮಾತುಕತೆ ನಡೆಸಿದ್ದಾರೆ. ಅವರು ಕೈಕೊಟ್ಟರೆ ಕಷ್ಟ ಆಗಬಹುದು ಎಂಬ ಲೆಕ್ಕಾಚಾರವೂ ಇದೆ
- **ಬಾಗಲಕೋಟೆ:** ಟಿಕೆಟ್ ಆಕಾಂಕ್ಷಿ ವೀಣಾ ಕಾಶಪ್ಪನವರ ಮುನಿಸು ತಣಿದರೂ, ಮನಸ್ಸಿನ ನೋವು ಕಡಿಮೆ ಆಗಿಲ್ಲ
- **ಕೋಲಾರ:** 'ಬಣ' ರಾಜಕೀಯದಿಂದ ಮೂರನೇ ವ್ಯಕ್ತಿ ಪಾಲಾದ ಟಿಕೆಟ್. ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ
- **ದಾವಣಗೆರೆ:** ಜನಾಭಿಪ್ರಾಯ ಸಂಗ್ರಹಿಸಿದ ಬಳಿಕ ಪಕ್ಷೇತರರಾಗಿ ಕಣಕ್ಕಿಳಿಯುವ ಕುರಿತು ನಿರ್ಧಾರ ಪ್ರಕಟಿಸಲಿರುವ ಜಿ.ಬಿ. ವಿನಯ್‌ಕುಮಾರ್
- **ಚಿಕ್ಕಬಳ್ಳಾಪುರ:** ರಕ್ಷಾ ರಾಮಯ್ಯಗೆ ಟಿಕೆಟ್ ನೀಡಿರುವುದಕ್ಕೆ ಮಾಜಿ ಶಾಸಕ ಶಿವಶಂಕರ ರೆಡ್ಡಿ, ಸಂಸದ ವೀರಪ್ಪ ಮೊಯಿಲಿ ಅಸಮಾಧಾನ. ಪಕ್ಷ ಚಟುವಟಿಕೆಯಿಂದ ದೂರ
- **ರಾಯಚೂರು:** ಸಂಸದ ರಾಜಾ ಅಮರೇಶ್ವರನಾಯಕಗೆ ಮತ್ತೆ ಟಿಕೆಟ್ ನೀಡಿದ್ದರಿಂದ ಮಾಜಿ ಸಂಸದ ಬಿ.ವಿ. ನಾಯಕ ಆಕ್ರೋಶಗೊಂಡಿದ್ದರು. ಬಹಿರಂಗವಾಗಿ ಯಾವುದೇ ಬಂಡಾಯ ಚಟುವಟಿಕೆ ನಡೆಸುತ್ತಿಲ್ಲ. ಆದರೆ, ಬುಧವಾರ ನಡೆದ ಬಿಜೆಪಿ ಸಭೆಯಿಂದ ದೂರ ಉಳಿದಿದ್ದರು

ಭೂಕಂಪನ

ತೈವಾನ್‌ನಲ್ಲಿ ಬುಧವಾರ ಸಂಭವಿಸಿದ ಪ್ರಬಲ ಭೂಕಂಪನದಿಂದಾಗಿ ಹುವಾಲಿಯನ್‌ನಲ್ಲಿರುವ ಯುರೇನಸ್ ಕಟ್ಟಡ ವಾಲಿದೆ – ಎಎಫ್‌ಪಿ ಚಿತ್ರ

ವಿವರ 10

ಕೇಜ್ರಿವಾಲ್ ಬಂಧನ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ

ತೀರ್ಪು ಕಾಯ್ದಿರಿಸಿದ ಕೋರ್ಟ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತನ್ನನ್ನು ಬಂಧಿಸಿರುವುದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ತೀರ್ಪನ್ನು ದೆಹಲಿ ಹೈಕೋರ್ಟ್ ಬುಧವಾರ ಕಾಯ್ದಿರಿಸಿತು.

ಕೇಜ್ರಿವಾಲ್ ಮತ್ತು ಇ.ಡಿ ಪರ ವಕೀಲರ ವಾದ, ಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ತೀರ್ಪು ಕಾಯ್ದಿರಿಸಿದ್ದೇನೆ ಎಂದರು.

ಎಎಪಿ ನಾಯಕ ಕೇಜ್ರಿವಾಲ್ ಪರ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, ಕೇಜ್ರಿವಾಲ್ ಅವರ ಬಂಧನದ ಸಂದರ್ಭವನ್ನು ಪ್ರಶ್ನಿಸಿದರು. ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ಹಾಗೂ ಚುನಾವಣೆಯಲ್ಲಿ ಸಮಾನ ಅವಕಾಶ ಒದಗಿಸಬೇಕು ಎಂಬ ನೀತಿ ಸೇರಿದಂತೆ ಸಂವಿಧಾನದ ಮೂಲ ಸ್ವರೂಪಕ್ಕೆ ಇದು ವಿರುದ್ಧವಾಗಿದೆ ಎಂದು ಹೇಳಿದರು.

ಈ ಅರ್ಜಿಯನ್ನು ವಿರೋಧಿಸಿದ ಜಾರಿ ನಿರ್ದೇಶನಾಲಯ ಪರ ಹಿರಿಯ ವಕೀಲ, ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, 'ಈ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಆಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದರು.

11ನೇ ಪುಟ ನೋಡಿ

ಸಾಕ್ಷ್ಯ ನಾಶ ಕೂಡದು: ಸಿಂಗ್‌ಗೆ ನಿರ್ದೇಶನ


ಸಂಜಯ್ ಸಿಂಗ್

ನವದೆಹಲಿ (ಪಿಟಿಐ): ಎಎಪಿ ನಾಯಕ ಸಂಜಯ್ ಸಿಂಗ್ ದೆಹಲಿ ಅಬಕಾರಿ ನೀತಿ ಪ್ರಕರಣದ ಸಾಕ್ಷ್ಯಗಳನ್ನು ನಾಶ ಮಾಡದಂತೆ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರದಂತೆ ದೆಹಲಿ ನ್ಯಾಯಾಲಯ ಬುಧವಾರ ಆದೇಶಿಸಿದೆ.

ತಿಹಾರ್ ಜೈಲಿನಿಂದ ಸಿಂಗ್ ಅವರನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸುವ ಮುನ್ನ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಕೆಲ ಷರತ್ತುಗಳನ್ನು ವಿಧಿಸಿದರು.

ಸಿಂಗ್ ಅವರು ಪಾಸ್‌ಪೋರ್ಟ್ ಸಲ್ಲಿಸಬೇಕು. ಎನ್‌ಸಿಆರ್‌ನಿಂದ ಹೊರಡುವ ಮುನ್ನ ಪ್ರಯಾಣದ ಬಗ್ಗೆ ತಿಳಿಸಬೇಕು. ಫೋನ್ ಲೊಕೇಷನ್ ಸದಾ ಚಾಲ್ತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ನ್ಯಾಯಾಧೀಶರು ನಿರ್ದೇಶಿಸಿದರು. ₹2 ಲಕ್ಷದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತದ ಭದ್ರತೆ ಸಲ್ಲಿಸುವಂತೆ ಸೂಚಿಸಿದರು. ಸಿಂಗ್ ಅವರ ಪತ್ನಿಯೇ ಜಾಮೀನುದಾರರಾಗಲಿದ್ದಾರೆ ಎಂದು ಸಿಂಗ್ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

ಆತಿಶಿಗೆ ಬಿಜೆಪಿ ನೋಟಿಸ್

ಆತಿಶಿ

ನವದೆಹಲಿ (ಪಿಟಿಐ): ತಮ್ಮ ಆಪ್ತರ ಮೂಲಕ ಬಿಜೆಪಿ ಸೇರುವಂತೆ ಒತ್ತಡ ಬಂದಿತ್ತು ಎಂದು ಎಎಪಿ ನಾಯಕಿ ಆತಿಶಿ ಆರೋಪಿಸಿರುವುದಕ್ಕೆ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ದೆಹಲಿ ಘಟಕವು ಮಾನನಷ್ಟ ನೋಟಿಸ್ ಕಳುಹಿಸಿದೆ.

'ಬಿಜೆಪಿ ಸೇರಿ, ಇಲ್ಲವಾದರೆ ಆದಷ್ಟು ಬೇಗ ಇ.ಡಿ ಬಂಧನಕ್ಕೆ ಒಳಗಾಗಿ' ಎಂದು ಬಿಜೆಪಿ ಬೆದರಿಸಿದ್ದಾಗಿ ಮಂಗಳವಾರ ಆತಿಶಿ ಆರೋಪಿಸಿದ್ದರು. ತಾವೂ ಸೇರಿದಂತೆ ಎಎಪಿ ನಾಯಕರು ತಿಂಗಳೊಳಗಾಗಿ ಇ.ಡಿ ಬಂಧನಕ್ಕೆ ಒಳಗಾಗುವ ಸಾಧ್ಯತೆಯ ಕುರಿತೂ ಮಾತನಾಡಿದ್ದರು.

11ನೇ ಪುಟ ನೋಡಿ

ತೆಲಂಗಾಣದಲ್ಲಿ ಸ್ಫೋಟ: 5 ಮಂದಿ ಸಾವು

ಹೈದರಾಬಾದ್ (ಪಿಟಿಐ): ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಔಷಧ ತಯಾರಿಕಾ ಕಂಪನಿಯೊಂದರಲ್ಲಿ ಬುಧವಾರ ಸಂಭವಿಸಿದ ಸ್ಫೋಟದಿಂದ ಐವರು ಮೃತಪಟ್ಟಿದ್ದು, 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಜೆ 5 ಗಂಟೆ ಸುಮಾರಿಗೆ ಸ್ಫೋಟ ಸಂಭವಿಸಿದೆ. ಸ್ಫೋಟದ ಪರಿಣಾಮವಾಗಿ ಬೆಂಕಿ ಹೊತ್ತಿಕೊಂಡಿದೆ. 'ಸ್ಫೋಟದ ತೀವ್ರತೆಗೆ ಜನರು ದೂರಕ್ಕೆ ಚಿಮ್ಮಿದರು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

14 ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಕೆ ಇಂದು ಕೊನೆ

ಒಂದೇ ದಿನ 87 ಮಂದಿ ನಾಮಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಕೆಗೆ ಒಂದು ದಿನವಷ್ಟೇ ಬಾಕಿ ಇದೆ. ಬುಧವಾರ ಒಂದೇ ದಿನ 87 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಈವರೆಗೆ ಒಟ್ಟು 199 ಮಂದಿ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಏಪ್ರಿಲ್ 26ರಂದು ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಮಾರ್ಚ್ 28ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. 184 ಪುರುಷರು ಮತ್ತು 15 ಮಹಿಳೆಯರು ನಾಮಪತ್ರ ಸಲ್ಲಿಸಿದ್ದಾರೆ. ಹಲವು ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ನಾಮಪತ್ರಗಳನ್ನು ಸಲ್ಲಿಸಿದ್ದು, ಒಟ್ಟು 268 ನಾಮಪತ್ರಗಳು ಬಂದಿವೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಅತ್ಯಧಿಕ 23 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಬೆಂಗಳೂರು ಗ್ರಾಮಾಂತರದಲ್ಲಿ 20, ಮಂಡ್ಯದಲ್ಲಿ 18, ಮಂಡ್ಯ, ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ದಕ್ಷಿಣದಲ್ಲಿ ತಲಾ 18, ಚಾಮರಾಜನಗರದಲ್ಲಿ 16, ಮೈಸೂರಿನಲ್ಲಿ 15, ಬೆಂಗಳೂರು ಉತ್ತರದಲ್ಲಿ 13, ಹಾಸನ ಮತ್ತು ತುಮಕೂರಿನಲ್ಲಿ ತಲಾ 12, ಚಿತ್ರದುರ್ಗ-ದಲ್ಲಿ 11, ಉಡುಪಿ- ಚಿಕ್ಕಮಗಳೂರು ಮತ್ತು ಕೋಲಾರದಲ್ಲಿ ತಲಾ ಎಂಟು ಹಾಗೂ ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಏಳು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಕೊನೆಯ ದಿನದತ್ತ ಚಿತ್ತ

ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಇನ್ನೂ ನಾಮಪತ್ರ ಸಲ್ಲಿಸಿಲ್ಲ. ಈ ಕ್ಷೇತ್ರಗಳ ಅಭ್ಯರ್ಥಿಗಳಾದ ಡಾ.ಸಿ.ಎನ್. ಮಂಜುನಾಥ್ ಮತ್ತು ತೇಜಸ್ವಿ ಸೂರ್ಯ ಗುರುವಾರ ಉಮೇದುವಾರಿಕೆ ಸಲ್ಲಿಸಲಿದ್ದಾರೆ.

ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಬಾಕಿ ಇದೆ. ಈ ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳಾಗಿರುವ ಬಿ.ಎನ್. ಚಂದ್ರಪ್ಪ, ಎಸ್.ಪಿ. ಮುದ್ದಹನುಮೇಗೌಡ ಮತ್ತು ಕೆ.ವಿ. ಗೌತಮ್ ಕೂಡ ಕೊನೆಯ ದಿನವೇ ಕಣಕ್ಕಿಳಿಯಲಿದ್ದಾರೆ.

ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್‌ಗೆ ಹಂಚಿಕೆಯಾಗಿರುವ ಮೂರು ಕ್ಷೇತ್ರಗಳ ಪೈಕಿ ಹಾಸನ ಮತ್ತು ಕೋಲಾರದಲ್ಲಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಮಂಡ್ಯ ಕ್ಷೇತ್ರದ ಅಭ್ಯರ್ಥಿಯಾಗಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಗುರುವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಹೈಕೋರ್ಟ್‌ನಲ್ಲಿ ಆತ್ಮಹತ್ಯೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರ ಕೋರ್ಟ್ ಹಾಲ್‌ನ ಸಂಖ್ಯೆ-1ರಲ್ಲಿ ಬುಧವಾರ ಮಧ್ಯಾಹ್ನ ಮೈಸೂರಿನ ಚಿನ್ನಂ ಶ್ರೀನಿವಾಸ್ (51) ಬ್ಲೇಡ್‌ನಿಂದ ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು, ಅವರನ್ನು ಶಿವಾಜಿನಗರದ ಬೌರಿಂಗ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಎಚ್.ಪಿ.ಪ್ರಭಾಕರ ಶಾಸ್ತ್ರಿ ಅವರಿದ್ದ ವಿಭಾಗೀಯ ನ್ಯಾಯಪೀಠ ದೈನಂದಿನ ಪ್ರಕರಣಗಳ ವಿಚಾರಣೆ ನಡೆಸುತ್ತಿತ್ತು. ಮಧ್ಯಾಹ್ನ 1.15ರ ಸಮಯದಲ್ಲಿ ಕ್ರಮ ಸಂಖ್ಯೆ-26ರ ಪ್ರಕರಣವನ್ನು ಕೋರ್ಟ್ ಅಧಿಕಾರಿ ಕೂಗುತ್ತಿದ್ದಂತೆಯೇ ಮೈಸೂರಿನ ವಿಜಯನಗರದ ನಿವಾಸಿ ಶ್ರೀನಿವಾಸ್, ನ್ಯಾಯಪೀಠದ ಎದುರು ಹಾಜರಾದರು. ತಕ್ಷಣವೇ ಅವರು ತಂದಿದ್ದ ಬ್ಲೇಡ್‌ನಿಂದ ತಮ್ಮ ಕತ್ತು ಕೊಯ್ದುಕೊಂಡರು' ಎಂದು ಮೂಲಗಳು ತಿಳಿಸಿವೆ.

'ಶ್ರೀನಿವಾಸ್ ಅವರು ದಾಖಲೆಗಳ ಮಧ್ಯದಲ್ಲಿ ಬ್ಲೇಡ್ ಇಟ್ಟುಕೊಂಡು ಹೈಕೋರ್ಟ್ ಒಳಕ್ಕೆ ಬಂದಿದ್ದರು' ಎಂದು ಮೂಲಗಳು ಹೇಳಿವೆ.

'ಮೈಸೂರಿನಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಲಾಭ ಹಂಚಿಕೊಳ್ಳುವ ಸಂಬಂಧ ವ್ಯಕ್ತಿಯೊಬ್ಬರ ಜತೆಗೆ ಶ್ರೀನಿವಾಸ್ ಒಪ್ಪಂದ ಮಾಡಿಕೊಂಡಿದ್ದರು. ಆದರೆ, ಆ ವ್ಯಕ್ತಿ ಲಕ್ಷಾಂತರ ರೂಪಾಯಿ ವಂಚಿಸಿದ್ದು, ಪ್ರಕರಣ ದಾಖಲಾಗಿತ್ತು. ಅದನ್ನು ಪ್ರಶ್ನಿಸಿ ಆ ವ್ಯಕ್ತಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಸಿವಿಲ್ ಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವಂತೆ ಹೈಕೋರ್ಟ್ ಸೂಚಿಸಿತ್ತು. ಈ ಪ್ರಕರಣದ ವಿಚಾರವನ್ನು ದಾಖಲೆಗಳ ಸಹಿತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಲು ಶ್ರೀನಿವಾಸ್ ಬುಧವಾರ ಬಂದಿದ್ದರು.

'ಬಿಗಿ ಭದ್ರತೆ ಇದ್ದರೂ ಬ್ಲೇಡ್ ಜೊತೆಗೆ ವ್ಯಕ್ತಿ ಹೈಕೋರ್ಟ್ ಒಳಗೆ ಹೇಗೆ ಪ್ರವೇಶಿಸಿದರು?' ಎಂದು ನ್ಯಾ. ಪ್ರಭಾಕರ ಶಾಸ್ತ್ರಿ ಅಸಮಾಧಾನ ವ್ಯಕ್ತಪಡಿಸಿದರು.

ಅತ್ಯಾಚಾರ ಸಂತ್ರಸ್ತೆಗೆ ಗಾಯ ತೋರಿಸು ಎಂದ ಮ್ಯಾಜಿಸ್ಟ್ರೇಟ್

ಜೈಪುರ (ಪಿಟಿಐ): 'ಅತ್ಯಾಚಾರ-ಕ್ಕೊಳಗಾದ ದಲಿತ ಯುವತಿಗೆ ಬಟ್ಟೆ ಕಳಚಿ ಗಾಯ ತೋರಿಸುವಂತೆ ಕೇಳಿದ ಆರೋಪದ ಮೇಲೆ ಕರೌಲಿ ಜಿಲ್ಲೆಯ ಹಿಂಡೌನ್ ಕೋರ್ಟ್‌ನ ಮ್ಯಾಜಿಸ್ಟ್ರೇಟ್ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

'ಸಂತ್ರಸ್ತೆಯು ಈ ಕುರಿತು ಮಾರ್ಚ್ 30ರಂದು ದೂರು ನೀಡಿದ್ದಾರೆ' ಎಂದು ಎಸ್‌ಟಿ- ಎಸ್‌ಸಿ ಘಟಕದ ಡೆಪ್ಯುಟಿ ಎಸ್‌ಪಿ ಮಿನಾ ಮೀನಾ ಅವರು ಹೇಳಿದ್ದಾರೆ.

'ಮ್ಯಾಜಿಸ್ಟ್ರೇಟ್ ಹೇಳಿದಂತೆ ಬಟ್ಟೆ ಕಳಚಲು ಸಂತ್ರಸ್ತೆ ನಿರಾಕರಿಸಿದ್ದಾರೆ. ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 345 (ಬಲವಂತದಿಂದ ಇರಿಸಿ-ಕೊಳ್ಳುವುದು) ಮತ್ತು ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

'ಸಂತ್ರಸ್ತೆಯು ಮಾರ್ಚ್ 19ರಂದು ಅತ್ಯಾಚಾರಕ್ಕೊಳಗಾಗಿ-ದ್ದರು. ಈ ಕುರಿತು ಹಿಂಡೌನ್ ಸದರ್ ಪೊಲೀಸ್ ಠಾಣೆಯಲ್ಲಿ ಮಾರ್ಚ್ 27ರಂದು ಎಫ್‌ಐಆರ್ ದಾಖಲಾಗಿತ್ತು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಒಳ ಪುಟಗಳು
ಚಿನ್ನ, ಬೆಳ್ಳಿ ಧಾರಣೆ ಏರಿಕೆ 10
ಆ್ಯಪಲ್ ಬಳಕೆದಾರರಿಗೆ ಸಿಇಆರ್‌ಟಿ ಎಚ್ಚರಿಕೆ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೀತಿ ಸಂಹಿತೆ: ದಾಖಲೆಗಳು ಇಲ್ಲದ ಹಣ ಚೆಕ್‌ಪೋಸ್ಟ್‌ನಲ್ಲಿ ವಶಕ್ಕೆ

ಚುನಾವಣೆ: ಜಾನುವಾರು ಖರೀದಿಗೆ ಕುತ್ತು

● ಬಸವರಾಜ ಹವಾಲ್ದಾರ

ಬಾಗಲಕೋಟೆ: ಲೋಕಸಭಾ ಚುನಾವಣೆಯ ನಿಯಮ, ನಿಬಂಧನೆಗಳು ಅಭ್ಯರ್ಥಿಗಳಿಗೆ ಮತ್ತು ರಾಜಕೀಯ ಪಕ್ಷಗಳಿಗೆ ಅಷ್ಟೇ 'ಬಿಸಿ' ಮುಟ್ಟಿಸಿಲ್ಲ. ಜಾನುವಾರು ಸಂತೆ ಮೇಲೆಯೂ ಪರಿಣಾಮ ಬೀರಿದೆ. ಎತ್ತು, ಕರು, ಕುರಿ ಸೇರಿ ಜಾನುವಾರು ಮಾರಾಟಗಾರರು ಸಂತೆಗೆ ತಂದರೂ ಖರೀದಿ ಪ್ರಕ್ರಿಯೆ ನಡೆಯುತ್ತಿಲ್ಲ.

ಚುನಾವಣೆ ನೀತಿ ಸಂಹಿತೆಯ ಕಾರಣ 'ಸೂಕ್ತ ದಾಖಲೆಯಿಲ್ಲದೆ ಎಲ್ಲಿಯೂ ನಗದು ಒಯ್ಯುವಂತಿಲ್ಲ' ಎಂಬ ನಿಯಮ ಜಾರಿಯಲ್ಲಿ ಇರುವ ಕಾರಣ ಜಾನುವಾರು ಖರೀದಿ ಪ್ರಕ್ರಿಯೆಗೆ ಹಿನ್ನಡೆಯಾಗಿದೆ.

ಜಿಲ್ಲೆಯ ಕೆರೂರು ಹಾಗೂ ಅಮೀನಗಡದಲ್ಲಿ ನಡೆಯುವ ಕುರಿ ಸಂತೆಗೆ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ ರಾಜ್ಯದ ವ್ಯಾಪಾರಸ್ಥರು ಖರೀದಿಗೆ ಬರುತ್ತಾರೆ. ಇಲ್ಲಿ ಬಹುತೇಕ ವಹಿವಾಟು ನಗದು ರೂಪದಲ್ಲೇ ನಡೆಯುತ್ತದೆ. ಬಾಯಿ ಮಾತಿನಲ್ಲೇ ಕೊಡು-ಕೊಳ್ಳುವ ವ್ಯವಹಾರ ನಡೆಯುತ್ತದೆಯೇ ಹೊರತು ದಾಖಲೆಗಳು ಇರುವುದಿಲ್ಲ.

'ರಂಜಾನ್ ಮಾಸದ ಸಂದರ್ಭದಲ್ಲಿ ಉತ್ತಮ ವಹಿವಾಟು ನಿರೀಕ್ಷಿಸಿ-ದ್ದೆವು. ಆದರೆ, ಅದು ನೆರವೇರಲಿಲ್ಲ' ಎಂದು ರೈತರು ತಿಳಿಸಿದರು. ಕೆರೂರು ಹೊರವಲಯದಲ್ಲಿನ ಎರಡು ಚೆಕ್ ಪೋಸ್ಟ್‌ಗಳಲ್ಲಿ ಮಂಗಳವಾರ ಬೆಳಿಗ್ಗೆ ನಗದು ಸಾಗಿಸುತ್ತಿದ್ದ 9 ಪ್ರಕರಣಗಳನ್ನು ದಾಖಲಿಸಿದ್ದು, ₹15.61 ಲಕ್ಷ ವಶಪಡಿಸಿಕೊಳ್ಳಲಾಗಿದೆ.

'ಕುರಿ ಖರೀದಿಗೆ ಮೂವರು ಕೆರೂರಿಗೆ ಹೊರಟಿದ್ದೆವು. ನನ್ನ ಬಳಿ ₹90 ಸಾವಿರ ಇತ್ತು. ಚೆಕ್‌ಪೋಸ್ಟ್‌ನಲ್ಲಿ ಅಧಿಕಾರಿಗಳು ಹಣ ವಶಪಡಿಸಿಕೊಂಡರು. ಪಾಸ್‌ಬುಕ್‌ನಿಂದ ₹40 ಸಾವಿರ ಡ್ರಾ ಮಾಡಿರುವ ದಾಖಲೆ ತೋರಿಸಿ, ₹50 ಸಾವಿರ ಮನೆಯಲ್ಲಿರುವ ಹಣ ತಂದಿರುವುದಾಗಿ ಹೇಳಿದೆ. ಆದರೆ, ಸೂಕ್ತ ದಾಖಲೆಯಿರದ ಕಾರಣ ಅಧಿಕಾರಿಗಳು ಹಣ ನೀಡಲಿಲ್ಲ. ಕುರಿ ಖರೀದಿಸದೆ ಮರಳಿದೆವು' ಎಂದು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಕಾಟಗನಹಳ್ಳಿ ಚಿಕ್ಕನಾಗಪ್ಪ ಹೇಳಿದರು.

'ನೀತಿ ಸಂಹಿತೆಯಿಂದ ನಗದು ಒಯ್ಯಲು ತೊಂದರೆಯಾಗಿದೆ. ಚುನಾವಣೆ ಮುಗಿದ ಬಳಿಕ ಜಾನುವಾರು ಖರೀದಿಸಬೇಕಾದ ಪರಿಸ್ಥಿತಿಯಿದೆ' ಎಂದು ದಲ್ಲಾಳಿ ಸಂತೋಷ ಹೇಳಿದರು.

ಬಾಗಲಕೋಟೆ ಜಿಲ್ಲೆಯ ಕೆರೂರಿನ ಎತ್ತುಗಳ ಸಂತೆ

> **ಕುರಿ ಖರೀದಿಗೆ ತಂದಿರುವುದನ್ನು ಖಚಿತಪಡಿಸಿಕೊಂಡು, ಶೀಘ್ರವೇ ಅವರಿಗೆ ಹಣ ವಾಪಸ್ ನೀಡಲಾಗುವುದು. ಸಂತೆ ವಹಿವಾಟಿಗೆ ತೊಂದರೆಯಾಗದಂತೆ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸುವೆ**
> **ಕೆ.ಎಂ. ಜಾನಕಿ,** ಜಿಲ್ಲಾಧಿಕಾರಿ

ಹೊಸ ತೊಡಕು ಮೇಲೂ ಪರಿಣಾಮ

ಚಿಕ್ಕಬಳ್ಳಾಪುರ: ಯುಗಾದಿ ಹಬ್ಬದ ಸಂದರ್ಭದಲ್ಲಿ ನಡೆಯುವ ಹೊಸ ತೊಡಕು ಮೇಲೆಯೂ ನೀತಿ ಸಂಹಿತೆ ಪರಿಣಾಮ ಬೀರುವ ಸಾಧ್ಯತೆಯಿದೆ. ಹೊಸ ತೊಡಕಿಗಾಗಿ ಕುರಿಗಳ ಖರೀದಿ ಪ್ರಕ್ರಿಯೆ ಈಗಿನಿಂದಲೇ ನಡೆಯುತ್ತದೆ. ಆದರೆ, ಚುನಾವಣೆ ನೀತಿ ಸಂಹಿತೆ ಪರಿಣಾಮ ವಹಿವಾಟಿಗೆ ಹಿನ್ನಡೆಯಾಗಿದೆ.



ಸಂಕ್ಷಿಪ್ತ ಸುದ್ದಿ

ಯುಟಿಲಿಟಿ ಡಾಗ್ ಸ್ಪೋರ್ಟ್ಸ್ ಇದೇ 7ಕ್ಕೆ

ಬೆಂಗಳೂರು: 'ಪೆಟ್ ಫಿಯೆಸ್ಟ್' ವತಿಯಿಂದ ಇದೇ 7ರಂದು ಅಂತರ ರಾಷ್ಟ್ರೀಯ ಯುಟಿಲಿಟಿ ಡಾಗ್ ಸ್ಪೋರ್ಟ್ಸ್ ಜಯಮಹಲ್ ಅರಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಪೆಟ್ ಫಿಸ್ಟ್ ನಿರ್ದೇಶಕ ಕಿರಣ್ ಕುಮಾರ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪೆಟ್ ಫಿಯೆಸ್ಟ್ ಮತ್ತು ಮ್ಯಾನ್‌ಕೈಂಡ್ ಸಹಭಾಗಿತ್ವದಲ್ಲಿ ಬೆಕ್ಕು ಹಾಗೂ ನಾಯಿಗಳ ಪ್ರದರ್ಶನ ಆಯೋಜಿಸಲಾಗಿದೆ. ಪ್ರದರ್ಶನದಲ್ಲಿ 200ಕ್ಕೂ ಹೆಚ್ಚು ಬೆಕ್ಕು ಹಾಗೂ 500ಕ್ಕೂ ಹೆಚ್ಚು ನಾಯಿಗಳು ಭಾಗವಹಿಸಲಿವೆ. ಪ್ರಾಣಿಗಳ ದತ್ತು ಸ್ವೀಕಾರ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದರು.

'ಸಾಕು ನಾಯಿಗಳ ಚುರುಕುತನ ವಲಯ, ಪೂಲ್ ಪಾರ್ಟಿ, ಪೆಟ್ ಮತ್ತು ಫ್ಯಾಶನ್ ಶೊ, ಆಟಗಳು ಮತ್ತು ಲೈವ್ ಸಂಗೀತ ಕಾರ್ಯಕ್ರಮಗಳಿವೆ.

ಸಾಕು ಪ್ರಾಣಿಗಳಿಗಾಗಿ ಉತ್ತಮ ಜಗತ್ತು ಸೃಷ್ಟಿಸುವುದು, ಸಾಕುಪ್ರಾಣಿ ದತ್ತು ಪಡೆಯಲು ಪ್ರೋತ್ಸಾಹಿಸುವುದೇ ಕಾರ್ಯಕ್ರಮದ ಉದ್ದೇಶ' ಎಂದರು.

ಸುಧಾ ಕೋ–ಆಪರೇಟಿವ್ ಬ್ಯಾಂಕ್‌ಗೆ ₹4.58 ಕೋಟಿ ಲಾಭ

ಬೆಂಗಳೂರು: ನಗರದ ಸುಧಾ ಕೋ–ಆಪರೇಟಿವ್ ಬ್ಯಾಂಕ್ 2023–24ನೇ ಸಾಲಿನಲ್ಲಿ ತೆರಿಗೆ ಪೂರ್ವದಲ್ಲಿ ₹6.14 ಕೋಟಿ ಲಾಭ ಹಾಗೂ ತೆರಿಗೆ ನಂತರ ₹4.58 ಕೋಟಿ ನಿವ್ವಳ ಲಾಭಗಳಿಸಿದೆ.

ಬ್ಯಾಂಕ್‌ನ ವಸೂಲಾಗದ ಸಾಲ (ಎನ್‌ಪಿಎ) ಶೇ 2.26 ರಷ್ಟಿದ್ದು, ನಿವ್ವಳ ಎನ್‌ಪಿಎ ಶೂನ್ಯ ಮಟ್ಟದಲ್ಲಿದೆ. ₹25 ಕೋಟಿ ಷೇರು ಬಂಡವಾಳ, ₹369 ಕೋಟಿ ಠೇವಣಿ, ₹217 ಕೋಟಿ ಸಾಲ ನೀಡಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಂ. ತಿಮ್ಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರಿ ವಾಹನಗಳಿಗೆ ಅವಕಾಶ ?

ಪೀಣ್ಯ ಮೇಲ್ಸೇತುವೆಗೆ 240 ಕೇಬಲ್‌ಗಳ ಅಳವಡಿಕೆಯಿಂದ ಹೆಚ್ಚಿದ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಗೆ ಹೊಸದಾಗಿ ಅಳವಡಿಸಿರುವ 240 ಕೇಬಲ್‌ಗಳಿಂದ ಮೇಲ್ಸೇತುವೆ ಸಾಮರ್ಥ್ಯ ಹೆಚ್ಚಿದ್ದು ಸದ್ಯದಲ್ಲೇ ಈ ಮೇಲ್ಸೇತುವೆಯಲ್ಲಿ ಭಾರಿ ವಾಹನ ಸಂಚಾರಕ್ಕೆ ಅವಕಾಶ ಸಿಗುವ ಸಾಧ್ಯತೆಯಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ(ಐಐಎಸ್‌ಸಿ) ತಜ್ಞರು ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆದಿದ್ದು, ಭಾರಿ ವಾಹನ ಸಂಚಾರಕ್ಕೆ ಅನುಮತಿ ನೀಡುವ ನಿರ್ಧಾರಕ್ಕೆ ಬರಲಾಗಿದೆ ಎಂದು ಮೂಲಗಳು ಹೇಳಿವೆ.

ಪೀಣ್ಯ ಮೇಲ್ಸೇತುವೆ.

'ಪೀಣ್ಯ– ಕೆನ್ನಮೆಟಲ್ (ವಿಡಿಯಾ) ನಡುವೆ ಈ ಮೇಲ್ಸೇತುವೆ ಹಾದುಹೋಗಿದ್ದು, 120 ಪಿಲ್ಲರ್‌ಗಳಿವೆ. ಸ್ಪ್ಯಾನ್‌ಗಳ ನಡುವೆ ಇರುವ ಹಳೆಯ ದಾದ 1,200 ಕೇಬಲ್‌ಗಳಬದಲಾವಣೆ ಮಾಡಬೇಕಿದೆ. ಕೇಬಲ್ ಬದಲಾವಣೆ ಮಾಡಿದ ಮೇಲೆ ಕಾಂಕ್ರೀಟ್ ಹಾಕಬೇಕು.

ಕಾಂಕ್ರೀಟ್ ಭದ್ರಗೊಳ್ಳಲು5 ತಾಸು ಬೇಕಿದ್ದು ರಾತ್ರಿ ವೇಳೆ ಕಾಮಗಾರಿ ನಡೆಸಲಾಗುವುದು. ಹೀಗಾಗಿ, ರಾತ್ರಿ ವೇಳೆ ಮೇಲ್ಸೇತುವೆಯಲ್ಲಿಎಲ್ಲ ಮಾದರಿ ವಾಹನಗಳ ಸಂಚಾರವನ್ನು ನಿರ್ಬಂಧಿಸುವಂತೆ ಸಂಚಾರ ಪೊಲೀಸರನ್ನು ಕೋರಲಾಗಿದೆ. ಪೊಲೀಸರು ಅನುಮತಿ ನೀಡಿದರೆ ರಾತ್ರಿ ಎಲ್ಲ ವಾಹನ ಸಂಚಾರ ನಿರ್ಬಂಧಿಸಿ ಕಾಮಗಾರಿ ನಡೆಸಲಾ ಗುವುದು. ಎಲ್ಲ ಕೇಬಲ್‌ಗಳನ್ನು ಬದಲಾವಣೆ ಮಾಡಿದರೆ ಸೇತುವೆ ಮತ್ತಷ್ಟು ಭದ್ರವಾಗಲಿದೆ' ಎಂದು ಮೇಲ್ಸೇತುವೆ ಅಧ್ಯಯನ ಸಮಿತಿ ಸದಸ್ಯ ಚಂದ್ರಕಿಶನ್ ತಿಳಿಸಿದ್ದಾರೆ.

ಮೇಲ್ಸೇತುವೆ 8ನೇ ಮೈಲಿನ ಜಂಕ್ಷನ್ ಸಮೀಪದ 102 ಹಾಗೂ 103ನೇ ಪಿಲ್ಲರ್‌ನಲ್ಲಿ ಕೇಬಲ್‌ಗಳು ಬಾಗಿದ್ದರಿಂದ 2021ರ ಡಿಸೆಂಬರ್‌ನಿಂದ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ನಂತರ, ತಜ್ಞರ ಅನುಮತಿ ಪಡೆದು, ಭಾರಿ ವಾಹನಗಳ ಸಂಚಾರ ನಿಷೇಧಿಸಿ, ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.

ಸುದ್ದಿ 2 ನಿಮಿಷ

ಬಿಜೆಪಿ ಗ್ಯಾರಂಟಿಗೆ ಬೆಲೆ ಇಲ್ಲ: ದಿನೇಶ್ ಗುಂಡೂರಾವ್

ಮಂಗಳೂರು:'ಬಿಜೆಪಿ ಗ್ಯಾರಂಟಿಗೆ ಯಾವುದೇ ಬೆಲೆ ಇಲ್ಲ. ಆದರೆ, ಕಾಂಗ್ರೆಸ್ ನೀಡಿದ್ದ ಭರವಸೆಯಂತೆ ಎಲ್ಲ ಗ್ಯಾರಂಟಿಗಳನ್ನೂ ಈಡೇರಿಸಿದೆ. ಪ್ರತಿಯೊಂದು ಕುಟುಂಬಕ್ಕೂ ಅದರ ಪ್ರಯೋಜನ ಸಿಗುತ್ತಿದೆ. ನಮ್ಮ ಗ್ಯಾರಂಟಿಗಳು ಹಾಗೂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಆಡಳಿತ ವೈಖರಿ ಕಾಂಗ್ರೆಸ್ ಕೈ ಹಿಡಿಯುತ್ತದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಚುನಾವಣಾ ಬಾಂಡ್ ಮೂಲಕ ಕಾನೂನುಬದ್ಧ ಭ್ರಷ್ಟಾಚಾರ ನಡೆಸಿ ಬಿಜೆಪಿ ₹ 12 ಸಾವಿರ ಕೋಟಿಯನ್ನು ಲೂಟಿ ಮಾಡಿದೆ. ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಸಿಬಿಐ ಅಧಿಕಾರಿಗಳನ್ನು ಛೂ ಬಿಟ್ಟು, 'ದುಡ್ಡು ಕೊಡದಿದ್ದರೆ ನಿಮ್ಮನ್ನು ಮುಗಿಸುತ್ತೇವೆ' ಎಂದು ಹೆದರಿಸಿ ಪ್ರಕರಣ ದಾಖಲಿಸಿದ, ದುಡ್ಡು ಬಂದ ಬಳಿಕ ಪ್ರಕರಣ ಮುಚ್ಚಿಹಾಕಿದ ಪ್ರಕರಣಗಳು ಬಯಲಾಗಿವೆ' ಎಂದರು. ಈ ಚುನಾವಣೆ ಸರಿಸಮಾನ ವ್ಯವಸ್ಥೆಯಲ್ಲಿ ನಡೆಯುತ್ತಿಲ್ಲ ಎಂದು ಆರೋಪಿಸಿದರು.

'ಪ್ರತಿ ಡಾಲರ್ ಎದುರು ರೂಪಾಯಿ ಬೆಲೆಯನ್ನು ₹ 45 ಕ್ಕಿಳಿಸುತ್ತೇವೆ ಎಂದು ಬಿಜೆಪಿ ಹೇಳಿತ್ತು. ಈಗ ಪ್ರತಿ ಡಾಲರ್ ಎದುರು ರೂಪಾಯಿ ಬೆಲೆ ₹ 83ಕ್ಕೆ ಏರಿದೆ. ಪೆಟ್ರೋಲ್ ದರ ಹೆಚ್ಚಳ, ಜಿಎಸ್‌ಟಿ ಹೇರುವ ಮೂಲಕ ಅಗತ್ಯ ವಸ್ತುಗಳ ದರ ಹೆಚ್ಚಳ, ಅಡುಗೆ ಅನಿಲ ದರ ಹೆಚ್ಚಳ ಮಾಡಿರುವುದು ಬಿಟ್ಟರೆ ಪ್ರಧಾನಿ ನರೇಂದ್ರ ಮೋದಿಯವರು ಜನರಿಗೆ ಏನು ಸಹಾಯ ಮಾಡಿದ್ದಾರೆ' ಎಂದು ಪ್ರಶ್ನಿಸಿದರು.

ನಗರದಲ್ಲಿ ಗರಿಷ್ಠ ಮಟ್ಟಕ್ಕೆ ತಲುಪಿದ ಉಷ್ಣಾಂಶ

ಬೆಂಗಳೂರು: ನಗರದ ವಾತಾವರಣದಲ್ಲಿ ಉಷ್ಣಾಂಶ ಗರಿಷ್ಠ ಮಟ್ಟಕ್ಕೆ ತಲಿಪಿದ್ದು, ಮುಂದಿನ ಐದು ದಿನಗಳು ಗರಿಷ್ಠ ಉಷ್ಣಾಂಶ 36ರಿಂದ 37 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬುಧವಾರ ಮಧ್ಯಾಹ್ನ 1 ಗಂಟೆಗೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 37.2 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 24.5 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಮುಂದಿನ ಐದು ದಿನಗಳು ಬೆಳಿಗ್ಗೆ ಮೋಡ ಕವಿದ ವಾತಾವರಣ ಇರುತ್ತದೆ. ಮಧ್ಯಾಹ್ನ ಹಾಗೂ ಸಂಜೆಯ ಹೊತ್ತಿಗೆ ಆಕಾಶ ನಿರ್ಮಲವಾಗಿ ಇರಲಿದ್ದು, ತಾಪಮಾನ ಹೆಚ್ಚಳವಾಗಲಿದೆ ಎಂದು ಇಲಾಖೆ ತಿಳಿಸಿದೆ.

CONNECT

ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
Binny Mill Ground, Near ETA Mall, Tank Bund Road, Bengaluru
DUBAI THEME EXHIBITION

Complete Family Shopping & Amusement Exhibition
VISIT TODAY | Daily : 4pm - 9pm | Call : 8904727123

₹9.68 ಲಕ್ಷ ಕೋಟಿ ಮೌಲ್ಯದ ಸಂಪತ್ತು: ವಿಶ್ವದ 9ನೇ ಶ್ರೀಮಂತ

ಫೋಬ್ಸ್ ಪಟ್ಟಿಯಲ್ಲಿ ಅಂಬಾನಿ

ನವದೆಹಲಿ(ಪಿಟಿಐ): ಫೋಬ್ಸ್ ನಿಯತಕಾಲಿಕೆ ಸಿದ್ಧಪಡಿಸಿರುವ 2024ರ ವಿಶ್ವದ ಮೊದಲ 10 ಜನ ಶತಕೋಟ್ಯಧಿಪತಿಗಳ ಪಟ್ಟಿಯಲ್ಲಿ ಭಾರತದ ಉದ್ಯಮಿ ಮುಕೇಶ್ ಅಂಬಾನಿ ಸ್ಥಾನ ಪಡೆದಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಅಧ್ಯಕ್ಷ, 66 ವರ್ಷದ ಅಂಬಾನಿ ಅವರ ಸಂಪತ್ತಿನ ಮೌಲ್ಯ ₹9.68 ಲಕ್ಷ ಕೋಟಿಯಷ್ಟಿದ್ದು, ಈ ಪಟ್ಟಿಯಲ್ಲಿ 9ನೇ ಸ್ಥಾನ ಪಡೆದಿದ್ದಾರೆ. ಕಳೆದ ವರ್ಷ ಅವರ ಸಂಪತ್ತಿನ ಮೌಲ್ಯ ₹6.96 ಲಕ್ಷ ಕೋಟಿಯಷ್ಟಿತ್ತು ಎಂದು ಫೋಬ್ಸ್ ವರದಿಯಲ್ಲಿ ಹೇಳಲಾಗಿದೆ.

ಭಾರತದ ಎರಡನೇ ಶ್ರೀಮಂತ ವ್ಯಕ್ತಿಯಾಗಿರುವ ಗೌತಮ್ ಅದಾನಿ ಅವರು ಫೋಬ್ಸ್ ಪಟ್ಟಿಯಲ್ಲಿ 17ನೇ ಸ್ಥಾನ ಪಡೆದಿದ್ದಾರೆ. ಅವರ ಸಂಪತ್ತಿನ ಮೌಲ್ಯ ₹ 7 ಲಕ್ಷ ಕೋಟಿ ಇದೆ. ಕಳೆದ ವರ್ಷ ₹3.94 ಲಕ್ಷ ಕೋಟಿ ಇತ್ತು.

ಫ್ಯಾಷನ್ ಮತ್ತು ಸೌಂದರ್ಯವರ್ಧಕಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಎಲ್‌ವಿಎಂಎಚ್ ಕಂಪನಿಯ ಬರ್ನಾರ್ಡ್ ಅರ್ನಾಲ್ಟ್ ಅವರು ₹ 19 ಲಕ್ಷ ಕೋಟಿ ಮೌಲ್ಯದ ಸಂಪತ್ತು ಹೊಂದಿದ್ದು, ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಮುಕೇಶ್ ಅಂಬಾನಿ

ನಂತರದ ಸ್ಥಾನದಲ್ಲಿ, ಸಾಮಾಜಿಕ ಜಾಲತಾಣ 'ಎಕ್ಸ್'ನ ಮಾಲೀಕ ಇಲಾನ್ ಮಸ್ಕ್ (₹16.27 ಲಕ್ಷ ಕೋಟಿ ಮೌಲ್ಯದ ಸಂಪತ್ತು), ಅಮೆಜಾನ್ ಮಾಲೀಕ ಜೆಫ್ ಬಿಜೋಸ್ (₹16.19 ಲಕ್ಷ ಕೋಟಿ ಮೌಲ್ಯದ ಸಂಪತ್ತು) ಹಾಗೂ ಫೇಸ್‌ಬುಕ್ ಸಂಸ್ಥಾಪಕ ಮಾರ್ಕ್ ಜುಕರ್‌ಬರ್ಗ್(₹14.77 ಲಕ್ಷ ಕೋಟಿ) ಇದ್ದಾರೆ.

'ಫೋಬ್ಸ್‌ನ 2024ರ ಶತಕೋಟ್ಯಧಿಪತಿಗಳ ಪಟ್ಟಿ'ಯಲ್ಲಿ ವಿಶ್ವದ 2,781 ಶ್ರೀಮಂತರು ಸ್ಥಾನ ಪಡೆದಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಪಟ್ಟಿಯಲ್ಲಿ ಹೆಚ್ಚುವರಿಯಾಗಿ 141 ಮಂದಿ ಸ್ಥಾನಪಡೆದಿದ್ದಾರೆ.

ಅಮೆರಿಕದಲ್ಲಿ ಶತಕೋಟ್ಯಧಿಪತಿಗಳ ಸಂಖ್ಯೆ 813 ಇದ್ದರೆ, ಚೀನಾದಲ್ಲಿ 473 ಹಾಗೂ ಭಾರತದಲ್ಲಿ 200 ಇದೆ. ಕಳೆದ ವರ್ಷದ ಪಟ್ಟಿಗೆ ಹೋಲಿಸಿದಲ್ಲಿ, ಭಾರತದಲ್ಲಿ ಶತಕೋಟ್ಯಧಿಪತಿಗಳ ಸಂಖ್ಯೆಯಲ್ಲಿ 31 ಜನರ ಹೆಚ್ಚಳವಾಗಿದೆ ಎಂದು ನಿಯತಕಾಲಿಕೆಯ ವರದಿಯಲ್ಲಿ ವಿವರಿಸಲಾಗಿದೆ.

ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತೀಯರ ಪೈಕಿ, ಐಟಿ ಕಂಪನಿ ಎಚ್‌ಸಿಎಲ್ ಸಹಸಂಸ್ಥಾಪಕ ಶಿವ ನಾಡಾರ್ 39ನೇ ಸ್ಥಾನದಲ್ಲಿದ್ದಾರೆ. ಇವರ ಸಂಪತ್ತಿನ ಮೌಲ್ಯ ₹ 3 ಲಕ್ಷ ಕೋಟಿ.

ಜಿಂದಾಲ್ ಸಮೂಹದ ಸಾವಿತ್ರಿ ಜಿಂದಾಲ್ ಮತ್ತು ಕುಟುಂಬ–46ನೇ ಸ್ಥಾನ (₹2.79 ಲಕ್ಷ ಕೋಟಿ), ಸನ್ ಫಾರ್ಮಾದ ದಿಲೀಪ್ ಸಂಘವಿ– 69ನೇ ಸ್ಥಾನ (₹2 ಲಕ್ಷ ಕೋಟಿ), ಸೈರಸ್ ಪೂನಾವಾಲಾ–90ನೇ ಸ್ಥಾನ (₹1.77 ಲಕ್ಷ ಕೋಟಿ) ಹಾಗೂ ₹1.74 ಲಕ್ಷ ಕೋಟಿ ಮೌಲ್ಯದ ಸಂಪತ್ತು ಹೊಂದಿರುವ ರಿಯಲ್ ಎಸ್ಟೇಟ್ ಉದ್ಯಮಿ ಕುಶಾಲ್ ಪಾಲ್ ಸಿಂಗ್ 92ನೇ ಸ್ಥಾನದಲ್ಲಿದ್ದಾರೆ.

ಕಾಶ್ಮೀರದಲ್ಲಿ ಎನ್‌ಕೌಂಟರ್ ಪಾತಕಿ ಹತ್ಯೆ

ಜಮ್ಮು (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ಕಠುವಾದ ಬಳಿ ನಡೆದ ಎನ್‌ಕೌಂಟರ್‌ನಲ್ಲಿ ಪಾತಕಿಯೊಬ್ಬನನ್ನು ಪೊಲೀಸರು ಹತ್ಯೆ ಮಾಡಿದ್ದಾರೆ' ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. 'ವಾಸುದೇವ್ ಮೃತ ಪಾತಕಿ. ಈತ ರಾಮಗಢ ಪೊಲೀಸ್ ಠಾಣೆಯಲ್ಲಿ ದಾಖಲಾದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಕಾಗಿದ್ದ ಎಂದು ಹೇಳಿದ್ದಾರೆ.

'ಲೈಂಗಿಕ ಶಿಕ್ಷಣದ ಬಗ್ಗೆ ಜಾಗೃತಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೈಂಗಿಕ ಕಾರ್ಯಕರ್ತೆಯರ ಬಗ್ಗೆ ಸಮಾಜದಲ್ಲಿ ಬೇರೂರಿರುವ ತಪ್ಪು ಪರಿಕಲ್ಪನೆಯನ್ನು ಹೋಗಲಾಡಿಸಿ, ಅವರಿಗೂ ಗೌರವ ಮತ್ತು ಘನತೆಯ ಬದುಕಿಗೆ ಅವಕಾಶ ನೀಡಬೇಕು' ಎಂಬ ಅಭಿಪ್ರಾಯ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ವ್ಯಕ್ತವಾಯಿತು.

ಅಖಿಲ ಭಾರತ ಲೈಂಗಿಕ ಕಾರ್ಯಕರ್ತೆಯರ ಸಂಘಟನೆ (ಎಐಎನ್‌ಎಸ್‌ಡಬ್ಲ್ಯು) ಹಾಗೂ ಅಲೈನ್ಸ್ ಇಂಡಿಯಾ ಸಹಯೋಗದಲ್ಲಿ ಇಲ್ಲಿ ಬುಧವಾರ ಹಮ್ಮಿಕೊಂಡ ಈ ಸಭೆಯಲ್ಲಿ 'ಮಹಿಳೆಯರು, ಬಾಲಕಿಯರು ಮತ್ತು ಅಂಚಿನ ಸಮುದಾಯಗಳಲ್ಲಿ ಲಿಂಗತ್ವ ಸಂವೇದನೆ' ವಿಷಯದ ಮೇಲೆ ಚರ್ಚಿಸಲಾಯಿತು.

ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಕುಲಪತಿ ವಿಕ್ಟರ್ ಲೋಬೊ ಎಸ್.ಜೆ.,'ಲೈಂಗಿಕ ಕಾರ್ಯಕರ್ತೆಯರನ್ನು ಸಮಾಜ ಈಗಲೂ ಒಪ್ಪಿಕೊಂಡಿಲ್ಲ. ಇದರಿಂದ ಅವರ ಜೀವನ ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ಅಂತಹವರಿಗೆ ಸಾಂತ್ವನ ಅಗತ್ಯ. ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಬೇಕು. ಸಾಮಾಜಿಕ ಮಾಧ್ಯಮಗಳ ಈ ಯುಗದಲ್ಲಿ ಯುವಜನರು ತಪ್ಪು ಹಾದಿ ಹಿಡಿಯುವ ಸಾಧ್ಯತೆ ಇರುತ್ತದೆ' ಎಂದು ಹೇಳಿದರು.

ರೆವರೆಂಡ್ ಫಾದರ್ ವಿಕ್ಟರ್ ಲೋಬೊ ಎಸ್‌ಜೆ. ಅವರು ಗಿಡಕ್ಕೆ ನೀರೆರೆಯುವ ಮೂಲಕ ದುಂಡು ಮೇಜಿನ ಸಭೆಯನ್ನು ಉದ್ಘಾಟಿಸಿದರು. ಅಲೈನ್ಸ್ ಇಂಡಿಯಾ ನಿರ್ದೇಶಕಿರೋಸೆನಾರಾ ಹುಯಿಡ್ರೋಮ್, ಕೆ. ದ್ವಾರಕನಾಥ್ ಬಾಬು, ಎಐಎನ್‌ಎಸ್‌ಡಬ್ಲ್ಯು ಕೋರ್ ಕಮಿಟಿ ಸದಸ್ಯೆ ಭಾಗ್ಯಲಕ್ಷ್ಮಿ, ವನಿತಾ ಸಹಾಯವಾಣಿಯ ಡಾ. ಬಿಂದ್ಯಾ ಹಾಗೂ ಬಿಬಿಎಂಪಿ ಅಧಿಕಾರಿ ರಮಣಿ ಡಿ.ಸಿ. ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕ ಕೆ. ದ್ವಾರಕನಾಥ್ ಬಾಬು, 'ಅನಿವಾರ್ಯ ಕಾರಣಗಳಿಂದ ಕೆಲವರು ಲೈಂಗಿಕ ಕಾರ್ಯಕರ್ತೆಯರಾಗುತ್ತಾರೆ. ಆದ್ದರಿಂದ ಮಹಿಳೆಯರ ಸಬಲೀಕರಣಕ್ಕೆ ಕ್ರಮಕೈಗೊಳ್ಳಬೇಕು. ಲೈಂಗಿಕ ಕಾರ್ಯಕರ್ತೆಯರ ಹಕ್ಕುಗಳನ್ನು ಸಂರಕ್ಷಣೆ ಮಾಡಬೇಕು. ಲೈಂಗಿಕ ವೃತ್ತಿ ಹಲವು ದೇಶಗಳಲ್ಲಿ ಕಾನೂನುಬದ್ಧವಾಗಿದೆ. ನಮ್ಮಲ್ಲಿ ಜಾಗೃತಿ ಕೊರತೆಯಿಂದ ಈ ಸಮುದಾಯದವರು ವಿವಿಧ ರೀತಿಯ ಹಿಂಸೆ ಅನುಭವಿಸುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಎಐಎನ್‌ಎಸ್‌ಡಬ್ಲ್ಯು ಕೋರ್ ಕಮಿಟಿ ಸದಸ್ಯ ಅಕ್ರಮ್ ಪಾಷಾ, 'ಲೈಂಗಿಕ ಕಾರ್ಯಕರ್ತೆಯರು ಕೂಡ ಕಾನೂನಿನ ಅಡಿಯಲ್ಲಿ ಘನತೆಯಿಂದ ಬದುಕಲು ಹಾಗೂ ಸಮಾನ ರಕ್ಷಣೆಯನ್ನು ಪಡೆಯಲು ಅರ್ಹರೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಆದರೆ, ಈಗಲೂ ಅವರ ಮೇಲೆ ವಿವಿಧ ರೀತಿಯ ಶೋಷಣೆಗಳು ನಡೆಯುತ್ತಿವೆ. ಅವರ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಅಧಿಕಾರಿಗಳು ಅರಿವಿನ ಕೊರತೆಯಿಂದ ಅವರಿಗೆ ತೊಂದರೆ ನೀಡುತ್ತಿದ್ದಾರೆ. ಅವರಿಗೂ ಘನತೆಯಿಂದ ಬದುಕಲು ಅವಕಾಶ ನೀಡಿ, ಸರ್ಕಾರಿ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಆಗ್ರಹಿಸಿದರು.

ಅರೆಕೆರೆ ಗ್ರಾ.ಪಂ ಉಪಾಧ್ಯಕ್ಷರ ಆಯ್ಕೆ

ಯಲಹಂಕ: ಅರಕೆರೆ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ನೇತ್ರಾವತಿ ಎಸ್.ಆರ್ ಬಾಬು ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಬುಧವಾರ ಆಯ್ಕೆಪ್ರಕ್ರಿಯೆ ನಡೆಯಿತು. ಒಟ್ಟು 21 ಸದಸ್ಯಬಲದಪಂಚಾಯಿತಿಯಲ್ಲಿ ನೇತ್ರಾವತಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಗ್ರಾಮಪಂಚಾಯಿತಿ ಅಧ್ಯಕ್ಷೆ ಮುನಿಲಕ್ಷ್ಮಮ್ಮ ಪರಶುರಾಮ್, ಕೆ.ಆರ್ ತಿಮ್ಮೇಗೌಡ, ಬಿ.ಸಿ ಶಶಿ ಕುಮಾರ್, ಲಕ್ಷ್ಮೀನಾರಾಯಣಗೌಡ, ಎಂ.ವಿ ಪದ್ಮ ಮುನಿಕೃಷ್ಣಪ್ಪ, ಶಿಲ್ಪಾ ರಾಜಣ್ಣ, ಸತೀಶ್ ಕಡತನಮಲೆ, ಸೇರಿ ಹಲವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಂಜಯ್ ನಿರುಪಮ್ 'ಕೈ'ಯಿಂದ ಉಚ್ಚಾಟನೆ

ಮುಂಬೈ(ಪಿಟಿಐ): ಶಿವಸೇನಾ(ಉದ್ಧವ್ ಠಾಕ್ರೆ) ಗುರಿಯಾಗಿಸಿ ಹೇಳಿಕೆ ನೀಡಿದ್ದ ಪಕ್ಷದ ಮುಖಂಡ ಸಂಜಯ್ ನಿರುಪಮ್ ಅವರನ್ನು ಕಾಂಗ್ರೆಸ್‌ನಿಂದ ಆರು ವರ್ಷಗಳ ಅವಧಿಗೆ ಉಚ್ಚಾಟಿಸಲಾಗಿದೆ.

ಅಶಿಸ್ತಿನ ವರ್ತನೆ ಹಾಗೂ ಪಕ್ಷ ವಿರೋಧಿ ಹೇಳಿಕೆ ನೀಡಿರುವ ಹಿನ್ನೆಲೆಯಲ್ಲಿ ನಿರುಪಮ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಕ್ಷದ ಮಹಾರಾಷ್ಟ್ರ ಘಟಕ ವರಿಷ್ಠರಿಗೆ ಮನವಿ ಮಾಡಿತ್ತು. ಇದರ ಬೆನ್ನಲ್ಲೇ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಿರುಪಮ್ ವಿರುದ್ಧ ಕ್ರಮ ಕೈಗೊಂಡಿದ್ದಾರೆ.

ತಮ್ಮ ವಿರುದ್ಧ ಕ್ರಮ ಕೈಗೊಂಡ ನಂತರ ಪ್ರತಿಕ್ರಿಯಿಸಿರುವ ನಿರುಪಮ್, 'ನನ್ನ ಮುಂದಿನ ನಡೆ ಬಗ್ಗೆ ಗುರುವಾರ ಘೋಷಣೆ ಮಾಡುವೆ' ಎಂದಿದ್ದಾರೆ.

ನಗರದಲ್ಲಿ ಇಂದು

2024–25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಚಾಲನೆ: ಅತಿಥಿಗಳು: ಎಸ್. ನಿರಂಜನ, ಲಿಂಗರಾಜ ಗಾಂಧಿ, ಅಧ್ಯಕ್ಷತೆ: ಎಂ.ಆರ್. ಜಯರಾಮ್, ಆಯೋಜನೆ, ಸ್ಥಳ: ರಾಮಯ್ಯ ಕಾಲೇಜ್ ಆಫ್ ಆರ್ಟ್ಸ್ ಆ್ಯಂಡ್ ಸೈನ್ಸ್, ಎಂಎಸ್‌ಆರ್ ನಗರ, ಬೆಳಿಗ್ಗೆ 11

ಡಾ. ರಾಜಾರಾಮಣ್ಣ ಅವರ ಜನ್ಮ ಶತಮಾನೋತ್ಸವ ಸಮಾರಂಭ: 'ಆಧುನಿಕ ವಿಜ್ಞಾನದಲ್ಲಿ ಸಾಂಪ್ರದಾಯಿಕ ಬುದ್ಧಿವಂತಿಕೆಯ ಪ್ರಸ್ತುತತೆ' ಕುರಿತು ಸಂವಾದ: ಶೈಲೇಶ್ ನಾಯಕ್, ಸಿಸಿರ್ ರಾಯ್, ಸುಧಾ ಶೇಷಯ್ಯನ, ತಿಮ್ಮಪ್ಪ ಹೆಗಡೆ, ಎಚ್.ಆರ್. ನಾಗೇಂದ್ರ, ಆಯೋಜನೆ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಆವರಣ, ಮಧ್ಯಾಹ್ನ 2

ವಿ.ಆರ್. ದೇವಿಕಾ ಅವರ 'ರುಕ್ಮಿಣಿ ದೇವಿ ಅರುಂಡೆಳೆ' ಪುಸ್ತಕ ಬಿಡುಗಡೆ: ಅತಿಥಿಗಳು: ಎಚ್.ಎನ್. ಸುರೇಶ್, ಎಂ.ಆರ್. ಕೃಷ್ಣಮೂರ್ತಿ, ಅಯೋಜನೆ: ನಿಯೋಗಿ ಬುಕ್ಸ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ ಬಸವನಗುಡಿ, ಸಂಜೆ 6.15

'ಇಂದಿನ ಮಾನವನ ದಾರಿ ಎತ್ತ ಸಾಗುತ್ತಿದೆ?' ಕುರಿತು ಉಪನ್ಯಾಸ: ಕೆ. ನಟರಾಜ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: 'ಷಟ್ ಪ್ರಶ್ನೋಪನಿಷತ್ ಚಿಂತನೆ' ಕುರಿತು ಉಪನ್ಯಾಸ: ಎ. ಗುರುಪ್ರಸಾದ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಬೃಹತ್ ತಾರತಮ್ಯ ಸಂಧಿ' ಧಾರ್ಮಿಕ ಪ್ರವಚನ: ವಿಜಯ ವಿಠಲಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

TRAVEL CORNER

HITESH HOLIDAYS : BENGALURU
SINGAPORE AND MALAYSIA- 07 DAYS
Date: 29th April 2024 & Rs. 99990/-* P.P.
BALI - 06 DAYS
Date : 12th May 2024 & Rs. 79990/-*P.P.
Contact for other travel packages & GST 5% Extra on all the package
Contact: 9739326102 / 9036568598

JOB OPPORTUNITIES

Teachers/ Professors

VET BVL POLYTECHNIC is inviting applications for the post of HOD-IS, Lecturer in CS / IS, System Admin with B.E/ M.Tech, Lecturer in Mathematics- M.Sc (Maths) Qualification with First Class. Mail the Resume within 3 days to vetbvlpoly362@gmail.com

PERSONAL

Change of Name

CHANGE OF NAME
I, SHALINI Residing at #1946, 4th Cross, 20th Main, J.P. Nagar, 2nd Phase, Bangalore- 560078 have changed my minor son's name from VEDANTH. S to VEDANTH VYBHAV vide affidavit dated 26.03.2024 before notary Mohammed Hussain K, Bangalore. Henceforth he shall be known as VEDANTH VYBHAV only.

CHANGE OF NAME
I, BHAGYALAKSHMI KADUR Residing at No. 49, 2nd Main, 3rd Stage, 3rd Block, Basaveshwaranagar, Bengaluru- 560079, have changed my name to BHAGYALAKSHMI vide affidavit dated 02.04.2024 before notary S. Nagaraja, Bangalore. Henceforth I shall be called BHAGYALAKSHMI only.

CHANGE OF NAME
I, CHANDRAKANT KALASANNAVAR S/o Rudrappa, Residing at #296, Kalasannavar Oni, Kadrolli, Sub-District, Sampgaon, District Belgaum-591153, have changed my name to CHANDRAKANT R KALASANNAVAR vide affidavit dated 03.04.2024 before notary L. Gopalakrishna, Bangalore. Henceforth I shall be called CHANDRAKANT R KALASANNAVAR only.

I ARCHANA, alias Archana Babu, alias Archana B, and alias Archana Sriram, daughter of P.S.Babu and Vathsala Babu, wife of V.S.Sriram aged about 49 years residing at Flat No: 28/004, Mantri Residency, Bannerughatta Main Road, Kalena Agrahara, Bengaluru-560076 do hereby solemnly affirm and sincerely state that all the above said names represent one and the same person i.e. myself. Vide affidavit dated 02.04.2024 advocate K.H.Jagadish, Bangalore.

CHANGE OF NAME
I, ROOPA JOHN Residing at No. 229/5, Flat No.203, 2nd floor, 12th Cross, Sannidhi Castle, Hombegowda, Wilson Garden, Bengaluru- 560027 have changed my name to M ROOPA JOHN vide affidavit dated 03.04.2024 before notary Mohammed Hussain K, Bangalore. Henceforth I shall be called M ROOPA JOHN only.

I, RANJIT KUMAR BARUI S/o.Deenabandu Barui R/a.Near Govt. School, Belathur, Kadugodi Post, Bangalore-67. have changed my Name to RANJIT BARUI vide affidavit dated:5.2.2024 before Notary K.B.Sadha Shivappa, Bangalore

PUBLIC NOTICE

ಗ್ರಾಜುಯೇಟ್ಸ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ.
ಕೇಂದ್ರ ಕಛೇರಿ: ನಂ.1, 1ನೇ 'ಬಿ' ರಸ್ತೆ, 4ನೇ ಮುಖ್ಯರಸ್ತೆ, ಪಾಪಯ್ಯ ಗಾರ್ಡನ್ (ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ ಹಿಂಭಾಗ) ಬಸವೇಶ್ವರನಗರ, ಬೆಂಗಳೂರು–560079. ದೂ.23112888.
ಶಾಖಾ ಕಛೇರಿ: ನಂ.1, ಭಾರತ ಸೇವಾದಳ ಕಛೇರಿ ಆವರಣ, ಕುಮಾರಕೃಪ ರಸ್ತೆ, ಬೆಂಗಳೂರು–560 001. ದೂ.22258627.
ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೆಂಗಳೂರು ಪ್ರಾಂತ ಇವರ ನ್ಯಾಯಾಲಯದ ದಾವಾ ಸಂಖ್ಯೆ: ಜೆಆರ್‌ಬಿ/ಡಿಐಎಸ್/89/2017–18, ದಿನಾಂಕ:20–02–2024ರ ಆದೇಶದಲ್ಲಿ ಈ ಕೆಳಕಂಡ ಪ್ರತಿವಾದಿಯಿಂದ ಸಂಘಕ್ಕೆ ಬರಬೇಕಾಗಿರುವ ರೂ.1,12,21,539.00 (ರೂಪಾಯಿ ಒಂದು ಕೋಟಿ ಹನ್ನೆರಡು ಲಕ್ಷದ ಇಪ್ಪತ್ತೊಂದು ಸಾವಿರದ ಐದುನೂರ ಮೂವತ್ತೊಂಭತ್ತು)ಗಳು ಮತ್ತು ಮುಂದುವರಿದ ಬಡ್ಡಿ ವಸೂಲಾತಿಗಾಗಿ ಇವರ ಸ್ಥಿರಾಸ್ತಿಯನ್ನು ದಾವಾ ಪ್ರಕರಣದ ಅಂತಿಮ ತೀರ್ಪಿಗೆ ಆದೇಶಪೂರ್ವ ಜಪ್ತಿ (ABJ) ಮಾಡಿ ಸ್ವತ್ತನ್ನು ಪರಭಾರೆ ಮಾಡದಲ್ಲಿ ಅದನ್ನು ನೊಂದಣಿ ಮಾಡದಂತೆ ಸಂಬಂಧಪಟ್ಟ ಹಿರಿಯ ಉಪ ನೊಂದಣಾಧಿಕಾರಿಗಳಿಗೆ ಆದೇಶಿಸಿರುತ್ತಾರೆ.
ಪ್ರತಿವಾದಿ 3ಎ: ಲೇಟ್ ಶ್ರೀ ಹೆಚ್. ಎಂ. ರಾಮಯ್ಯ ಇವರ ವಾಸುದಾರರಾದ ಶ್ರೀಮತಿ ಪಿ. ನಾಗರತ್ನಮ್ಮ ರವರ ಸ್ಥಿರಾಸ್ತಿಯ ಸ್ವತ್ತಿನ ಸಂಖ್ಯೆ 1259/691, ಪಿ.ಐ.ಡಿ. ಸಂಖ್ಯೆ: 54–230–1259, 13ನೇ ಕ್ರಾಸ್, 2ನೇ ಹಂತ, ಗಿರಿನಗರ, ಬೆಂಗಳೂರು–85. ಚಕ್ಕುಬಂದಿ: **ಪೂರ್ವಕ್ಕೆ** : 30 ಅಡಿ ರಸ್ತೆ, **ಪಶ್ಚಿಮಕ್ಕೆ** : ಸ್ವತ್ತಿನ ಸಂಖ್ಯೆ 1270, **ಉತ್ತರಕ್ಕೆ** : ಸ್ವತ್ತಿನ ಸಂಖ್ಯೆ 1260, **ದಕ್ಷಿಣಕ್ಕೆ:** ಸ್ವತ್ತಿನ ಸಂಖ್ಯೆ 1258.
ಈ ಮಧ್ಯೆ ಇರುವ ಸ್ವತ್ತಿನ ಅಳತೆ ಪೂರ್ವ–ಪಶ್ಚಿಮ 60 ಅಡಿಗಳು, ಉತ್ತರ–ದಕ್ಷಿಣ 40 ಅಡಿಗಳು.
ಈ ಮೇಲ್ಕಂಡ ಸ್ಥಿರಾಸ್ತಿಯ ಬಗ್ಗೆ ವ್ಯವಹರಿಸದಂತೆ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲಾಗಿದೆ.
ಸಹಿ/– (ಹೆಚ್.ಸಿ.ರಾಮಣ್ಣ) ಕಾರ್ಯದರ್ಶಿ
ಮೊಬೈಲ್ ಸಂಖ್ಯೆ: 8971380504

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: FOIS_TISCO_SAIL_CSDR ದಿನಾಂಕ: 01.04.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿರುವ ಚನ್ನಸಂದ್ರ ನಿಲ್ದಾಣದಲ್ಲಿ ಟಿಐಎಸ್‌ಸಿಓ & ಎಸ್‌ಎಐಎಲ್ ಸೈಡಿಂಗ್‌ಗಳಿಗೆ ಎಫ್‌ಓಐಎಸ್ ನೆಟ್‌ವರ್ಕ್ ಸಂಪರ್ಕದ ಪೂರೈಕೆ.	ರೂ. 10,01,845.79

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.04.2024, 13:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಬೆಂಗಳೂರು
PUB/02/AAD/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: DDHI_PAVAGADA_TK_URU ದಿನಾಂಕ: 22.03.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ದೊಡ್ಡಹಳ್ಳಿ–ಪಾವಗಡ & ತುಮಕೂರು–ಉರುಕೆರೆ (11 ಕಿಮೀ.) ವಿಭಾಗದಲ್ಲಿ ಓಎಫ್‌ಸಿ ಮತ್ತು 6 ಕ್ವಾಡ್ ಕೇಬಲ್ (14.850 ಕಿಮೀ) ಆಧಾರಿತ ಸಂಪರ್ಕ ವ್ಯವಸ್ಥೆಯ ಪೂರೈಕೆ ಹಾಗೂ ಉರುಕೆರೆ ಮತ್ತು ಪಾವಗಡ ಈ ಎರಡು ನಿಲ್ದಾಣಗಳಲ್ಲಿ ಐಪಿ–ಎಂಪಿಎಲ್‌ಎಸ್ ವ್ಯವಸ್ಥೆಯ ಪೂರೈಕೆ ಮತ್ತು ಸ್ಥಾಪನಾ ಕಾರ್ಯಗಳು.	ರೂ. 2,50,76,468.09

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.04.2024, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ನಿರ್ಮಾಣ ಬೆಂಗಳೂರು ದಂಡು
PUB/03/AAD/PRB/SWR/2024-25
South Western Railway - SWR | @SWRRLY | SWRRLY

BEFORE THE PRESIDING OFFICER: INDUSTRIAL TRIBUNAL AT BANGALORE
SLA. No. 367/2023
IN
ID No.13/2013
Between
The Divisional Controller, K.S.R.T.C., Ramanagara Division, Ramanagara.
APPLICANT
And
Sri. Umesh H.R.
RESPONDENT
SUMMONS / NOTICE TO THE RESPONDENT
Sri. Umesh H.R., S/o. Rajegowda, Aged about 39 years, Door No. 193/82, Anjanasagara, Magadi Main Road, Bengaluru-560091
WHEREAS, the Applicant Corporation has filed the above Serial Application under section 33(2) (b) of I.D. Act against you for approval of dismissal order dated 13.07.2023, you are hereby summoned to appear in this Tribunal in person or by pleader of the 4th day of May 2024 at 11 A.M. to answer the same, filing which suit / application will be disposed of exparte.
Given under my hand and the seal of the Court on this 22nd day of March 2024.
BY ORDER OF THE TRIBUNAL
Sd/-
Sheristedar, Industrial Tribunal, Bengaluru
Advocate for applicant
B.L. Sanjeev, Advocate, M/S BLS LEGAL, TF-1, Alpine Arch, Langford Road, Bangalore.
DIPR/CP/LC/4411/2024-25

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9901641752 | +91 9845114560 | +91 9886213331

JOCKEY
FACTORY SECONDS UPTO 50% OFF*
*T & C apply

• 10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS

Venues In Bangalore

Infantry Road:	Safina Plaza, No.84/85 - 560001
Kundalahalli Gate:	S K R Convention hall, Thubarahalli, Varthur Main Road, - 66
Jayanagar:	Prem Chandra Kalyan Mahal, T.Mariappa Road, 2nd block, (Near Ashoka Pillar), – 11.
Banshankari:	Sri Hari Kalyana Mantap, 30th Main, B.S.K. 3rd Stage, Near K.I.M.S. Hospital, - 85 (This venue is closed today & restarts from tomorrow Friday)
J .P. Nagar 3rd Phase:	Shilpa KalaMantapa, No.12, 9th Cross, Bannerghatta Road, -76
Rajarajeswari Nagar:	Vasavi Mahal Kalyana Mantapa, Next To Reliance Digital, Ideal Homes I Phase - 98
Vijay Nagar:	Five O Gallery, 17th Cross, M.C. Road, Near Vijay Nagar Bus Stop - 40
Mahalaxmipuram:	Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next to Anupama English School, - 86
Malleswaram:	The Canara Union, No. 42, 8th Main, Canara Union Road - 03
Koramangala:	Apoorva International, #35A, Raheja Arcade, Opp Star Box - 95
Basavanagudi:	Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.

ವರಿಷ್ಠರ ಮೇಲೆ ಮುನಿಸು: ಮಾಜಿ ಮುಖ್ಯಮಂತ್ರಿ ಚುನಾವಣಾ ರಾಜಕಾರಣ ಮುಗಿಯಿತೇ?

ಮೊಯಿಲಿ, ರೆಡ್ಡಿ ಪ್ರಚಾರದಿಂದ ದೂರ

● ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಕಾಂಗ್ರೆಸ್ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿರುವ ಎರಡು ಬಾರಿ ಚಿಕ್ಕಬಳ್ಳಾಪುರ ಸಂಸದರಾಗಿದ್ದ ಎಂ.ವೀರಪ್ಪ ಮೊಯಿಲಿ ಮತ್ತು ಕಾಂಗ್ರೆಸ್ ಟಿಕೆಟ್ ಸಿಗದೆ ಮುನಿಸಿಕೊಂಡಿರುವ ಮಾಜಿ ಸಚಿವ ಎನ್.ಎಚ್.ಶಿವಶಂಕರ ರೆಡ್ಡಿ ಅವರು ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದಾರೆ.

ನಗರದಲ್ಲಿ ಬುಧವಾರ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಅವರ ರೋಡ್ ಷೊ ಮತ್ತು ನಾಮಪತ್ರ ಸಲ್ಲಿಸುವ ವೇಳೆ ಈ ಇಬ್ಬರೂ ನಾಯಕರ ಗೈರು ಎದ್ದು ಕಾಣುತಿತ್ತು. ರೋಡ್ ಷೊ ವಾಹನದಲ್ಲಿ ಇವರಿಬ್ಬರ ಚಿತ್ರಗಳು ರಾರಾಜಿಸುತ್ತಿದ್ದವು. ಆದರೆ, ಈ ನಾಯಕರು ಮಾತ್ರ ಸುಳಿಯಲಿಲ್ಲ.

ಟಿಕೆಟ್ ಘೋಷಣೆಯಾದ ತಕ್ಷಣ

ವೀರಪ್ಪ ಮೊಯಿಲಿ

ಶಿವಶಂಕರ ರೆಡ್ಡಿ

ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಮತ್ತು ಅವರ ತಂದೆ ಎಂ.ಆರ್. ಸೀತಾರಾಂ ಸೇರಿ ಇಬ್ಬರೂ ನಾಯಕರನ್ನು ಭೇಟಿಯಾಗಿ ಸಹಕಾರ ಕೋರಿದ್ದರು. ಆದರೂ ಇಬ್ಬರೂ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯರಾಗಿಲ್ಲ.

ರಕ್ಷಾ ರಾಮಯ್ಯ ಇತ್ತೀಚೆಗೆ ಬಾಗೇಪಲ್ಲಿಯ ಗಡದಿಂ ದೇವಾಲಯದಲ್ಲಿ ಪ್ರಚಾರಕ್ಕೆ ಚಾಲನೆ ನೀಡಿದರು. ಆಗಲೂ ಮೊಯಿಲಿ ಮತ್ತು ರೆಡ್ಡಿ ಅತ್ತ ಸುಳಿಯಲಿಲ್ಲ.

2009ರ ಲೋಕಸಭಾ ಚುನಾವಣೆ ಸಮೀಪ ಸಂಸದ ಆರ್. ಎಲ್.ಜಾಲಪ್ಪ ರಾಜಕೀಯ ನಿವೃತ್ತಿ ಪಡೆದರು. ಎಂ.ವೀರಪ್ಪ ಮೊಯಿಲಿ ಆ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದರು. 2014ರಲ್ಲಿ ಎರಡನೇ ಬಾರಿ ಗೆಲುವು ಸಾಧಿಸಿದರು. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಪ್ರಭಾವಿ ಸಚಿವರಾಗಿದ್ದರು.

ರಾಜಕೀಯವಾಗಿ ನೇಪಥ್ಯಕ್ಕೆ ಸರಿಯುತ್ತಿದ್ದ ಮೊಯಿಲಿ ಅವರಿಗೆ ರಾಜಕೀಯ ಪುನರ್ಜನ್ಮ ಮತ್ತು ಪ್ರಭಾವಿ ಸ್ಥಾನ ನೀಡಿದ್ದು ಚಿಕ್ಕಬಳ್ಳಾಪುರ ಕ್ಷೇತ್ರ. 2019ರ ಚುನಾವಣೆಯಲ್ಲಿ ಸೋಲು ಕಂಡ ಅವರು ಈ ಬಾರಿ ಟಿಕೆಟ್‌ಗಾಗಿ ತೀವ್ರವಾಗಿ ಪ್ರಯತ್ನಿಸಿ ವಿಫಲರಾದರು.

ಟಿಕೆಟ್ ತಮಗೆ ದೊರೆಯುವುದಿಲ್ಲ ಎನ್ನುವುದು ಖಚಿತವಾಗುತ್ತಲೇ ವೀರಪ್ಪ ಮೊಯಿಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಚಟುವಟಿಕೆಗಳಿಂದ ದೂರವಾದರು. ರಕ್ಷಾ ರಾಮಯ್ಯ ಅವರಿಗೆ ಟಿಕೆಟ್ ನೀಡಿದ ನಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಯಾವ ವಿಧಾನಸಭಾ ಕ್ಷೇತ್ರಕ್ಕೂ ಕಾಲಿಟ್ಟಿಲ್ಲ.

ಶಿವಶಂಕರ ರೆಡ್ಡಿ ಅವರದ್ದೂ ಇದೇ ಕತೆ. ಟಿಕೆಟ್‌ಗಾಗಿ ಪ್ರಯತ್ನಿಸಿ ವಿಫಲರಾದ ಬೇಸರ ಒಂದೆಡೆ ಇದ್ದರೆ ತಮ್ಮ ರಾಜಕೀಯ ವಿರೋಧಿ ಪಕ್ಷೇತರ ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ಅವರ ಪ್ರಾಬಲ್ಯ ಕಾಂಗ್ರೆಸ್‌ನಲ್ಲಿ ಹೆಚ್ಚಿದೆ. ಗೌಡರು ರಕ್ಷಾ ರಾಮಯ್ಯ ಪರ ಪ್ರಚಾರ ನಡೆಸುತ್ತಿದ್ದಾರೆ.

1999ರ ವಿಧಾನಸಭೆ ಚುನಾವಣೆಯಿಂದ 2018ರ ಚುನಾವಣೆವರೆಗೆ ಸತತ ಐದು ಬಾರಿ ಶಿವಶಂಕರ ರೆಡ್ಡಿ ಗೌರಿಬಿದನೂರು ಕ್ಷೇತ್ರದ ಶಾಸಕರಾಗಿದ್ದರು. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಗೌರಿಬಿದನೂರಿನಲ್ಲಿ ಪುಟ್ಟಸ್ವಾಮಿಗೌಡ ಅವರೇ ಕಾಂಗ್ರೆಸ್ ಅಭ್ಯರ್ಥಿಯಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಎನ್ನುವುದು ಅವರ ಮುನಿಸಿಗೆ ಕಾರಣ.

‘ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನನಗೆ ಟಿಕೆಟ್ ನೀಡಬೇಕು. ಕ್ಷೇತ್ರದಲ್ಲಿನ ಪಕ್ಷದ ಬೆಳವಣಿಗೆಗಳ ಬಗ್ಗೆ ನನ್ನ ವಿಚಾರಗಳನ್ನೂ ಪರಿಗಣಿಸಬೇಕು’ ಎಂದು ಶಿವಶಂಕರ ರೆಡ್ಡಿ ಪಟ್ಟು ಹಿಡಿದ್ದಾರೆ. ಲೋಕಸಭೆ ಚುನಾವಣೆಯ ಈ ಹೊತ್ತಿನಲ್ಲಿ ವರಿಷ್ಠರಿಂದ ರೆಡ್ಡಿ ಅವರ ಬೇಡಿಕೆಗೆ ಸ್ಪಂದನೆ ದೊರೆಯುತ್ತಿಲ್ಲ.

ಟಿಕೆಟ್ ಭರವಸೆ ದೊರೆಯದ ಹೊರತು ಲೋಕಸಭೆ ಚುನಾವಣೆಯಲ್ಲಿ ‘ಕೈ’ ಪರ ಕೆಲಸ ಮಾಡುವುದಿಲ್ಲ ಎಂದು ಆಪ್ತರಿಗೆ ತಿಳಿಸಿದ್ದಾರೆ. ಹೀಗೆ ವೀರಪ್ಪ ಮೊಯಿಲಿ ಮತ್ತು ಶಿವಶಂಕರ ರೆಡ್ಡಿ ಮುನಿಸು ಕಾಂಗ್ರೆಸ್ ನಾಯಕರಿಗೆ ತಲೆನೋವಾಗಿದೆ.

ಸುರ್ಜೇವಾಲಾ ಸಂಧಾನ

ಮಾಜಿ ಸಚಿವ ಎನ್.ಎಚ್.ಶಿವಶಂಕರ ರೆಡ್ಡಿ ಅವರ ಮನವೊಲಿಕೆಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮುಂದಾಗಿದ್ದಾರೆ. ಬುಧವಾರ ರಾತ್ರಿ ಬೆಂಗಳೂರಿಗೆ ಶಿವಶಂಕರ ರೆಡ್ಡಿ ಅವರನ್ನು ಸುರ್ಜೇವಾಲ ಕರೆಸಿಕೊಂಡಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದ ಪಕ್ಷದ ಬೆಳವಣಿಗೆಗಳ ಬಗ್ಗೆ ಮಾಹಿತಿ ಪಡೆದು ಮತ್ತು ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಶಿವಶಂಕರ ರೆಡ್ಡಿ ಅವರ ಮನವೊಲಿಸಲು ಮುಂದಾಗಿದ್ದಾರೆ.

ಲೋಕಸಭಾ ಚುನಾವಣೆ | ಮತದಾರರು ಏನಂತಾರೆ?

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಶುದ್ಧ ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ಸ್ವಚ್ಛತೆಯಂತಹ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಬೇಕು. ಈ ಭಾಗದಲ್ಲಿ ಕಸದ ಸಮಸ್ಯೆ ಹೆಚ್ಚಾಗಿದ್ದು, ಅದರ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು. ಪಾದಚಾರಿ ಮಾರ್ಗಗಳಲ್ಲಿ ಅತಿಕ್ರಮಣ ಮಾಡಿಕೊಳ್ಳಲಾಗಿದೆ. ಇದರಿಂದ, ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಉದ್ಯಾನಗಳ ನಿರ್ವಹಣೆ ಕೊರತೆಯಿಂದ ಪಾಳು ಬಿದ್ದಿವೆ. ಇವುಗಳ ನಿರ್ವಹಣೆಗೆ ಆದ್ಯತೆ ನೀಡಬೇಕು. ಬಹುಮುಖ್ಯವಾಗಿ ಸಂಸದರಾಗಿ ಆಯ್ಕೆ ಆಗುವವರು ನಿರಂತರವಾಗಿ ಕ್ಷೇತ್ರದ ಮತದಾರರೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕು.

ಆರ್. ಅರ್ಚನಾ, ಸಹಾಯಕ ಪ್ರಾಧ್ಯಾಪಕರು



ಲೋಕಸಭೆಗೆ ಆಯ್ಕೆ ಆಗುವ ಅಭ್ಯರ್ಥಿಗಳು ದಾಸರಹಳ್ಳಿ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲ ಯೋಜನೆಗಳನ್ನು ಕ್ಷೇತ್ರದಲ್ಲಿರುವ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ತಲುಪಿಸಬೇಕು. ಈ ಭಾಗದ ಕೆಲ ಪ್ರದೇಶಗಳಿಗೆ ಬಸ್ ಸಂಪರ್ಕ ಸರಿಯಾಗಿಲ್ಲ. ಈ ಸಮಸ್ಯೆಯನ್ನು ನಿವಾರಿಸುವುದರ ಜೊತೆಗೆ ಕೆರೆ, ರಸ್ತೆ ಮತ್ತು ಮೂಲಸೌಕರ್ಯದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಿರುದ್ಯೋಗಿ ಯುವಕರಿಗೆ ಉದ್ಯೋಗ ಸೃಷ್ಟಿಸುವ ಕೆಲಸ ಮಾಡಬೇಕು.

ತಾಸೀನಾ ಭಾನು, ಮಾರುತಿನಗರ, ದಾಸರಹಳ್ಳಿ

ಲೋಕಸಭಾ ಸದಸ್ಯರಾಗಿ ಆಯ್ಕೆ ಆಗುವವರು ಮಹಿಳೆಯರ ರಕ್ಷಣೆಗೆ ಹೆಚ್ಚು ಒತ್ತು ನೀಡಬೇಕು. ಶುದ್ಧ ಕುಡಿಯುವ ನೀರು, ವಿದ್ಯುತ್ ಹಾಗೂ ಮೂಲಸೌಕರ್ಯಗಳನ್ನು ಒದಗಿಸಬೇಕು. ದಾಸರಹಳ್ಳಿ ಕ್ಷೇತ್ರದಲ್ಲಿ ಮಧ್ಯಮ ವರ್ಗದ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಮೂಲಸೌಲಭ್ಯಗಳ ಕೊರತೆ ಎದುರಿಸುತ್ತಿದ್ದಾರೆ. ಈ ಪ್ರದೇಶ ಬೆಂಗಳೂರು ಮಹಾನಗರಕ್ಕೆ ಸೇರಿದ್ದರೂ, ಅಭಿವೃದ್ದಿಯಲ್ಲಿ ಹಿಂದುಳಿದಿದೆ. ಸ್ಥಳೀಯ ಶಾಸಕರ ಸಹಕಾರದೊಂದಿಗೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಸೌಭಾಗ್ಯ, ಐಪಿನಗರ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಬುಧವಾರ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಶಾಸಕರಾದ ಬೈರತಿ ಬಸವರಾಜು, ಮುನಿರಾಜು, ಕೆ.ಗೋಪಾಲಯ್ಯ ಜತೆಗಿದ್ದರು

ನಗರದ ಸಂಪಂಗಿರಾಮ ನಗರದ ಶ್ರೀ ಪ್ರಸನ್ನ ಗಣಪತಿ ದೇವಸ್ಥಾನದಿಂದ ಕಾಂಗ್ರೆಸ್ ಪಕ್ಷದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಮೆರವಣಿಗೆಯಲ್ಲಿ ತೆರಳಿ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ.ರಾಜೀವ್ ಗೌಡ ನಾಮಪತ್ರ ಸಲ್ಲಿಸಿದ ಸಂದರ್ಭದಲ್ಲಿ ಸಚಿವರಾದ ಬೈರತಿ ಸುರೇಶ್, ಕೃಷ್ಣ ಬೈರೇಗೌಡ ಇದ್ದರು ಪ್ರಜಾವಾಣಿ ಚಿತ್ರಗಳು

‘ಮಾದರಿ ಕ್ಷೇತ್ರ ಮಾಡುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸುವುದಾಗಿ ಬಿಜೆಪಿ ಅಭ್ಯರ್ಥಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭರವಸೆ ನೀಡಿದರು.

ಬುಧವಾರ ನಾಮಪತ್ರ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿ ಕಾರ್ಯ ಮತ್ತು ನೇತೃತ್ವಕ್ಕೆ ಮೆಚ್ಚುಗೆ ಸೂಚಿಸಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಬೇಕೆಂಬ ಆಶಯದೊಂದಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಬಿಜೆಪಿ ಜೊತೆ ಸೇರಿ ಸ್ಪರ್ಧೆ ಮಾಡಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದರು.

ಮೋದಿ ಅವರ ಸಾಧನೆಯನ್ನು ಮನೆ– ಮನೆಗೆ ತಲುಪಿಸೋಣ. ಎಲ್ಲ ಕ್ಷೇತ್ರಗಳಲ್ಲೂ ದೊಡ್ಡ ಅಂತರದಲ್ಲಿ ಗೆಲುವು ಸಾಧಿಸಲು ಶ್ರಮಿಸೋಣ ಎಂದರು.

‘ಕೈ’ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಮತ್ತು ಬೆಂಗಳೂರು ಕೇಂದ್ರ ಕ್ಷೇತ್ರದ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರು ಬುಧವಾರ ನಾಮಪತ್ರ ಸಲ್ಲಿಸಿದರು. ಉಮೇದುವಾರಿಕೆ ಸಲ್ಲಿಕೆಗೂ ಮೊದಲು ಇಬ್ಬರೂ ಅಭ್ಯರ್ಥಿಗಳು ಕಾರ್ಯಕರ್ತರ ಸಮಾವೇಶದ ಮೂಲಕ ಶಕ್ತಿ ಪ್ರದರ್ಶನ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಸಮಾವೇಶದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ರಾಜೀವ್ ಗೌಡ, ‘ಹತ್ತು ವರ್ಷದಲ್ಲಿ ಮೋದಿ ಸರ್ಕಾರದ ಕೊಡುಗೆ ಬೆಲೆ ಏರಿಕೆ, ನಿರುದ್ಯೋಗ, ನೋಟ್ ರದ್ದತಿ. ಹೀಗಿರುವಾಗ ಬಿಜೆಪಿಗೆ ಏಕೆ ಮತ ಹಾಕಬೇಕು’ ಎಂದು ಪ್ರಶ್ನಿಸಿದರು.

ಸಚಿವ ಬೈರತಿ ಸುರೇಶ್ ಮಾತನಾಡಿ, ‘ದೇಶ ಒಡೆಯುವ ಪಕ್ಷ ಬಿಜೆಪಿ. ಬಿಜೆಪಿಗೆ ಮತ್ತೆ ಅವಕಾಶ ನೀಡಿದರೆ ದೇಶ ನಾಶವಾಗುತ್ತದೆ’ ಎಂದರು. ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ‘ನಮ್ಮ ಗ್ಯಾರಂಟಿ ನಮಗೆ ಶ್ರೀರಕ್ಷೆ ಆಗಲಿದೆ. ಬಿಜೆಪಿ ಕೊಟ್ಟ ಭರವಸೆಯನ್ನು ಈಡೇರಿಸಿಲ್ಲ’ ಎಂದು ಕಿಡಿಕಾರಿದರು. ನಾಮಪತ್ರ ಸಲ್ಲಿಸುವ ವೇಳೆ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶಾಸಕ ಎ.ಸಿ. ಶ್ರೀನಿವಾಸ್ ಇದ್ದರು.

ಮನ್ಸೂರ್ ಅಲಿ ಖಾನ್ ನಾಮಪತ್ರ: ಮನ್ಸೂರ್ ಅಲಿ ಖಾನ್ ನಾಮಪತ್ರ ಸಲ್ಲಿಸಿದ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಶಾಸಕ ರಿಜ್ವಾನ್ ಅರ್ಷದ್, ಪುಟ್ಟಣ್ಣ, ಮಾಜಿ ಶಾಸಕ ನಾಗೇಶ್ ಇದ್ದರು.

‘ದಲಿತರನ್ನು ತುಳಿದ ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್‌ನಲ್ಲಿ ದಲಿತ ನಾಯಕರನ್ನು ಬೆಳೆಯಲು ಬಿಡದೇ ಹಂತ– ಹಂತವಾಗಿ ತುಳಿದವರು ಸಿದ್ದರಾಮಯ್ಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ.

‘ಆದರೆ ನೀವು ದಲಿತರ ಪರ ಮೊಸಳೆ ಕಣ್ಣೀರು ಸುರಿಸಿ, ಬಿಜೆಪಿ ಮೇಲೆ ಗೂಬೆ ಕೂರಿಸಿದರೆ ದಲಿತರ ಚಾಂಪಿಯನ್ ಆಗಿ ಬಿಡಬಹುದು ಎಂದು ಭಾವಿಸಿದ್ದೀರಿ. ದಲಿತರಿಗೆ ನಿಮ್ಮ ನಿಜ ಬಣ್ಣ ಗೊತ್ತಾಗಿದೆ. ಅಹಿಂದದಲ್ಲಿ ನಿಮಗೆ ಉಳಿದಿರುವುದು ‘ಅ’ ಮಾತ್ರ’ ಎಂದು ಅವರು ಕಿಡಿಕಾರಿದ್ದಾರೆ.

ರಾಹುಲ್ ಕ್ಷೇತ್ರದಲ್ಲಿ ಜಮೀರ್ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ಪರ್ಧಿಸಿರುವ ಕೇರಳದ ವಯನಾಡು ಹಾಗೂ ಕೆ.ಸಿ. ವೇಣುಗೋಪಾಲ್ ಸ್ಪರ್ಧಿಸಿರುವ ಅಲೆಪ್ಪಿ ಕ್ಷೇತ್ರಕ್ಕೆ ಬುಧವಾರ ಭೇಟಿ ನೀಡಿದ ಕರ್ನಾಟಕದ ವಸತಿ ಸಚಿವ ಜಮೀರ್ ಅಹಮದ್ ಖಾನ್ ಚುನಾವಣಾ ಕಾರ್ಯತಂತ್ರಗಳ ಕುರಿತು ಸ್ಥಳೀಯ ಮುಖಂಡರ ಜತೆ ಚರ್ಚೆ ನಡೆಸಿದರು.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ರಮೇಶ್ ಚೆನ್ನಿತ್ತಲ, ಕಲ್ಪಟ ಶಾಸಕ ಸಿದ್ದಿಕ್, ಸುಲ್ತಾನ್ ಬತೇರಿ ಶಾಸಕ ಬಾಲಕೃಷ್ಣನ್, ಎಐಸಿಸಿ ಉಸ್ತುವಾರಿ ದೀಪಾ ದಾಸ್ ಉಪಸ್ಥಿತರಿದ್ದರು.

ಮೂರು ದಿನಗಳ ಪ್ರವಾಸದಲ್ಲಿ ಮುಫ್ತಿ ಶೇಕ್ ಅಬೂಬಕರ್ ಅಹಮದ್ (ಎಪಿ ಉಸ್ತಾಸ್) ಸೇರಿದಂತೆ ಮುಸ್ಲಿಂ ಧಾರ್ಮಿಕ ಮುಖಂಡರು, ವಯನಾಡ್ ಯುಡಿಎಫ್ ಅಧ್ಯಕ್ಷ ಕೆ.ಕೆ. ಅಹಮದ್ ಹಾಜಿ ಅವರನ್ನು ಜಮೀರ್ ಅಹಮದ್ ಖಾನ್, ಅಭ್ಯರ್ಥಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದರು.

ಕೇರಳದಲ್ಲಿ ಬುಧವಾರ ವಸತಿ ಸಚಿವ ಜಮೀರ್ ಅಹಮದ್ ಖಾನ್ ಲೋಕಸಭಾ ಚುನಾವಣೆ ಕಾರ್ಯತಂತ್ರಗಳ ಕುರಿತು ಸ್ಥಳೀಯ ಮುಖಂಡರ ಜತೆ ಚರ್ಚೆ ನಡೆಸಿದರು.

ಮಹಾರಾಷ್ಟ್ರದಲ್ಲೂ ಪ್ರಚಾರ: ಮಹಾರಾಷ್ಟ್ರ ಉಸ್ತುವಾರಿ ರಮೇಶ್ ಚೆನ್ನಿತ್ತಲ ಅವರ ಆಹ್ವಾದ ಮೇರೆಗೆ ಜಮೀರ್ ಅವರು ಮಹಾರಾಷ್ಟ್ರದ ಐದು ಲೋಕಸಭಾ ಕ್ಷೇತ್ರಗಳಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ.

ಸುಧಾಕರ್–ವಿಶ್ವನಾಥ್ ಮುನಿಸು ಶಮನ

ಪ್ರಜಾವಾಣಿ ವಾರ್ತೆ

ಯಲಹಂಕ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಬಗ್ಗೆ ಶಾಸಕ ಎಸ್. ಆರ್. ವಿಶ್ವನಾಥ್ ಅವರಿಗಿದ್ದ ಮುನಿಸು ಶಮನವಾಗಿದೆ. ಇಬ್ಬರ ನಡುವಿನ ಮುಸುಕಿನ ಗುದ್ದಾಟ ಹಿರಿಯ ನಾಯಕರ ಸಮ್ಮುಖದಲ್ಲಿ ನಡೆದ ಸಂಧಾನ ಸಭೆಯಲ್ಲಿ ಅಂತ್ಯಗೊಂಡಿದೆ.

ಸುಧಾಕರ್ ಮತ್ತು ಬಿಜೆಪಿಯ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್ವಾಲ್ ಬುಧವಾರ ಬೆಳಿಗ್ಗೆ ವಿಶ್ವನಾಥ್ ಮನೆಗೆ ಭೇಟಿ ನೀಡಿ ಉಪಾಹಾರ ಸೇವಿಸಿದರು.

‘ಅಮಿತ್ ಶಾ ಅವರನ್ನು ಭೇಟಿಮಾಡಿ ಮಾತನಾಡಿದ್ದೇನೆ. ನಾನು ಹೇಳಬೇಕಿರುವುದನ್ನು ಹೇಳಿದ್ದೇನೆ. ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯಾಗಿ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು. ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಎಂಟೂ ವಿಧಾನಸಭಾ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಸೂಚಿಸಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಸುಧಾಕರ್‌ಗೆ ಬಹುಮತ ತಂದು ಕೊಡುತ್ತೇವೆ. ನಾಮಪತ್ರ ಸಲ್ಲಿಕೆಗೆ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಚಿಕ್ಕಬಳ್ಳಾಪುರಕ್ಕೆ ತೆರಳಲಾಗುವುದು’ ಎಂದು ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

‘ನಾನು ವಿಶ್ವನಾಥ್ ಅವರಿಗೆ ಆಭಾರಿಯಾಗಿದ್ದೇನೆ. ತಮ್ಮ ಚುನಾವಣೆಯನ್ನು ಹೇಗೆ ಮಾಡುತ್ತಾರೊ ಅದರಂತೆ ಈ ಚುನಾವಣೆಯನ್ನೂ ಮಾಡುವುದಾಗಿ ತಿಳಿಸಿದ್ದಾರೆ. ಹೆಚ್ಚಿನ ಲೀಡ್‌ನಿಂದ ಗೆಲ್ಲಿಸುವುದಾಗಿ ಭರವಸೆ ನೀಡಿದ್ದಾರೆ. ವಿಶ್ವನಾಥ್ ಬೆಂಬಲದಿಂದ ಆನೆಬಲ ಬಂದಂತಾಗಿದೆ’ ಎಂದು ಸುಧಾಕರ್ ತಿಳಿಸಿದರು.

‘ನಾನೂ ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಆದರೆ ಟಿಕೆಟ್ ಕೈತಪ್ಪಿದ್ದರಿಂದ ಸಹಜವಾಗಿ ಕಾರ್ಯಕರ್ತರಿಗೆ ಬೇಸರವಾಗಿದೆ. ಪಕ್ಷದ ಮೇಲೆ ನನಗೆ ಯಾವುದೇ ಅಸಮಾಧಾನ ವಿಲ್ಲ. ಮೋದಿಯವರು ಮತ್ತೆ ಪ್ರಧಾನಿಯಾಗಬೇಕು ಎಂದು ಒಟ್ಟಾಗಿ ಕಾರ್ಯನಿರ್ವಹಿಸುತ್ತೇವೆ. ಮುಂದೆ ಅವಕಾಶಗಳು ಬರಲಿದ್ದು, ಯಲಹಂಕದಲ್ಲಿ ಸುಧಾಕರ್‌ಗೆ ಒಳ್ಳೆಯ ಲೀಡ್ ನೀಡಲಾಗುವುದು’ ಎಂದು ಟಿಕೆಟ್ ಆಕಾಂಕ್ಷಿಯಾಗಿದ್ದ ಅಲೋಕ್ ವಿಶ್ವನಾಥ್ ಪ್ರತಿಕ್ರಿಯಿಸಿದರು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿ ಕಟ್ಟಾ ಸುಬ್ರಮಣ್ಯ ನಾಯ್ಡು, ಶಾಸಕ ಎಸ್. ಮುನಿರಾಜು, ಮಾಜಿ ಶಾಸಕ ಪಿಳ್ಳಮುನಿಶಾಮಪ್ಪ ಉಪಸ್ಥಿತರಿದ್ದರು.

ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರಿಗೆ ಶಾಲು ಹೊದಿಸಿ, ಹೂಗುಚ್ಛ ನೀಡಿ ಸ್ವಾಗತಿಸಿದರು. ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್ವಾಲ್ ಉಪಸ್ಥಿತರಿದ್ದರು.

ಬೆಂಗಳೂರು ದಕ್ಷಿಣ: ವಾಟಾಳ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವುದಾಗಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಿಂದ ಆಯ್ಕೆಯಾದ ಸಂಸದರು ಕಾವೇರಿ, ಬೆಳಗಾವಿ, ಮಹದಾಯಿ, ಹಿಂದಿ ಹೇರಿಕೆಯ ಬಗ್ಗೆ ಧ್ವನಿ ಎತ್ತುತ್ತಿಲ್ಲ. ಆದ್ದರಿಂದ, ಕನ್ನಡದ ಅಸ್ಮಿತೆಯನ್ನು ಸಂಸತ್ತಿನಲ್ಲಿ ಸಾರಲು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದೇನೆ. ಇದೇ 4ರಂದು (ಗುರುವಾರ) ಮಧ್ಯಾಹ್ನ 1.30ಕ್ಕೆ ನಾಮಪತ್ರ ಸಲ್ಲಿಸುತ್ತೇನೆ’ ಎಂದು ಮಾಹಿತಿ ನೀಡಿದರು.

‘ಚುನಾವಣೆಗಳಲ್ಲಿ ಹಣವಂತರು, ಬಲಾಢ್ಯರು ಮಾತ್ರ ಸ್ಪರ್ಧಿಸುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ. ಚುನಾವಣೆಗಳು ಪಾರದರ್ಶಕವಾಗಿ ನಡೆಯಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಚುನಾವಣಾ ವ್ಯವಸ್ಥೆಯನ್ನು ಸರಿಪಡಿಸಲು ಆಗಿಲ್ಲ’ ಎಂದು ದೂರಿದರು.

ಕನ್ನಡಪರ ಹೋರಾಟಗಾರ ಶಿವರಾಮೇಗೌಡ ಭಾಗವಹಿಸಿದ್ದರು.

‘ಕೈ’ ಅಭ್ಯರ್ಥಿಗೆ ಠೇವಣಿ ಬರಲ್ಲ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ತುಮಕೂರು: ‘ಮೆರವಣಿಗೆಯಲ್ಲಿ ಭಾಗವಹಿಸಿರುವ ಜನರನ್ನು ನೋಡಿದರೆ ಕಾಂಗ್ರೆಸ್ ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸದೆ ವಾಪಸ್ ಕರೆಸಿಕೊಳ್ಳುವುದು ಒಳಿತು ಎನಿಸುತ್ತದೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕಾಂಗ್ರೆಸ್ ನಾಯಕರ ಕಾಲೆಳೆದರು.

ನಗರದಲ್ಲಿ ಬುಧವಾರ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನರನ್ನು ಕಂಡು ಈ ಮಾತುಗಳನ್ನಾಡಿದರು.

‘ಮೈತ್ರಿ ಅಭ್ಯರ್ಥಿ ವಿ.ಸೋಮಣ್ಣ ಅವರಿಗೆ ಇಷ್ಟೊಂದು ಜನ ಬೆಂಬಲ ಸಿಗುತ್ತಿರುವುದನ್ನು ನೋಡಿದರೆ ಕಾಂಗ್ರೆಸ್‌ನಿಂದ ಅಭ್ಯರ್ಥಿ ನಿಲ್ಲಿಸದಿರುವುದೇ ಉಚಿತ. ಸ್ಪರ್ಧೆ ಮಾಡಿದರೆ ಠೇವಣಿ ಕಳೆದುಕೊಳ್ಳಬೇಕಾಗುತ್ತದೆ’ ಎಂದರು.

‘ಜನಪರ ಯೋಜನೆಗಳನ್ನು ನಿಲ್ಲಿಸಿರುವುದನ್ನು ನೋಡಿದರೆ ರಾಜ್ಯ ಸರ್ಕಾರ ಪಾಪರ್ ಆಗಿರುವುದು ಗೊತ್ತಾಗುತ್ತದೆ. ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ರೈತರಿಗೆ ಕೇಂದ್ರ ನೀಡುತ್ತಿರುವ ₹6 ಸಾವಿರದ ಜತೆಗೆ ರಾಜ್ಯ ಸರ್ಕಾರದಿಂದ ₹4 ಸಾವಿರ ಕೊಡಲಾಗುತಿತ್ತು. ಆದರೆ ಈ ಸರ್ಕಾರ ಹಣ ಕೊಡುವುದು ನಿಲ್ಲಿಸಿದೆ. ಭಾಗ್ಯಲಕ್ಷ್ಮಿ ಯೋಜನೆ ಸ್ಥಗಿತಗೊಳಿಸಲಾಗಿದೆ. ಇಂತಹ ಜನಪರ ಯೋಜನೆಗಳನ್ನು ಏಕೆ ನಿಲ್ಲಿಸಿದ್ದೀರಿ, ಉತ್ತರಾ ಕೊಡುತ್ತೀರಾ’ ಎಂದು ಪ್ರಶ್ನಿಸಿದರು.

‘ರಾಜೀನಾಮೆ ಕೊಟ್ಟು ಬನ್ನಿ’

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಗುಡುಗಿದ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ, ಬಹಿರಂಗ ಸವಾಲನ್ನೂ ಹಾಕಿದರು.

‘ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿಟಿಡಿ ಏನು ಕಡಿದು ಕಟ್ಟೆ ಹಾಕಿದ್ದಾರೆ?’ ಎಂಬ ಮುಖ್ಯಮಂತ್ರಿ ಹೇಳಿಕೆಗೆ ಇಲ್ಲಿ ಬುಧವಾರ ಆಕ್ರೋಶ ವ್ಯಕ್ತಪಡಿಸಿದ ಅವರು, ‘ನೀವು ವರುಣ ಕ್ಷೇತ್ರಕ್ಕೆ ರಾಜೀನಾಮೆ ಕೊಡಿ. ನಾನೂ ಕೊಡುತ್ತೇನೆ. ಇಬ್ಬರೂ ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆಯಲ್ಲಿ ಕಣಕ್ಕಿಳಿಯೋಣ. ಯಾರು ಗೆಲುತ್ತಾರೆ ನೋಡೋಣ ಬನ್ನಿ’ ಎಂದು ಸವಾಲು ಹಾಕಿದರು.

‘ಅಭಿವೃದ್ಧಿ ಎಂದರೆ ಏನೆಂಬುದೇ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲ. ಅಭಿವೃದ್ಧಿ ಮಾಡದೇ ರಾಜಕೀಯದಲ್ಲಿ ಬೆಳೆದಿದ್ದಾರೆ ಎಂದರೆ ಅದು ಸಿದ್ದರಾಮಯ್ಯ ಮಾತ್ರ. ಮುಖ್ಯಮಂತ್ರಿಯು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಮಾಡಿದ ಅಭಿವೃದ್ಧಿ ಕಾರ್ಯದ ಶ್ವೇತಪತ್ರ ಹೊರಡಿಸಲಿ’ ಎಂದೂ ಸವಾಲೆಸೆದರು.

ಟಿಕೆಟ್ ತ್ಯಾಗ ಮಾಡಿದರೂ ಮಂಡ್ಯ ಕ್ಷೇತ್ರ ಬಿಡುವುದಿಲ್ಲ, ಪಕ್ಷದ ನಿಲುವಿಗೆ ಬದ್ಧ

ಬಿಜೆಪಿ ಸೇರುವೆ: ಸಂಸದೆ ಸುಮಲತಾ

ಪ್ರಜಾವಾಣಿ ವಾರ್ತೆ

ಮಂಡ್ಯ: ಬಿಜೆಪಿ ಟಿಕೆಟ್ ಸಿಗದ ಸಂಸದೆ ಸುಮಲತಾ ಅವರ ನಡೆಯ ಬಗ್ಗೆ ಇದ್ದ ಕುತೂಹಲಕ್ಕೆ ತೆರೆ ಬಿದ್ದಿದೆ. ಬುಧವಾರ ನಗರ ದಲ್ಲಿ ನಡೆದ ಬೆಂಬಲಿಗರ ಸಭೆಯಲ್ಲಿ ಅವರು ಬಿಜೆಪಿ ಸೇರ್ಪಡೆಯಾಗುವ ನಿರ್ಧಾರ ಪ್ರಕಟಿಸಿದರು.

ನಗರದ ಕಾಳಿಕಾಂಬಾ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ‘ಪಕ್ಷೇತರವಾಗಿ ಸ್ಪರ್ಧಿಸುವ ಹಟ ನನಗಿಲ್ಲ, ಅದರಿಂದ ಆಗುವ ಲಾಭ, ನಷ್ಟದ ಚರ್ಚೆ ಬೇರೆಯೇ ಇದೆ. ಬಿಜೆಪಿ ಟಿಕೆಟ್‌ಗಾಗಿ ಕಡೆಯ ಕ್ಷಣದವರೆಗೂ ಹೋರಾಟ ನಡೆಸಿ ವಿಫಲಳಾದೆ. ಚಿಕ್ಕಬಳ್ಳಾಪುರ, ಮೈಸೂರು ಕ್ಷೇತ್ರದಲ್ಲಿ ಸ್ಪರ್ಧಿಸುವ ಅವಕಾಶ ಬಂದವು. ಮಂಡ್ಯ ಬಿಟ್ಟು ಬೇರೆ ಕಡೆ ರಾಜಕಾರಣ ಮಾಡುವುದಿಲ್ಲ’ ಎಂದು ಪ್ರಮಾಣ ಮಾಡುತ್ತಾ ಭಾವುಕರಾದರು.

> **ಕುಮಾರಸ್ವಾಮಿ ಸೌಜನ್ಯದಿಂದ ಮನೆಗೆ ಬಂದು ಬೆಂಬಲ ಕೋರಿದ್ದಾರೆ. ಹಳೆಯದನ್ನೆಲ್ಲಾ ಮರೆತು ಮುನ್ನಡೆಯೋಣ ಎಂದಿದ್ದಾರೆ. ಜೀವನದುದ್ದಕ್ಕೂ ದ್ವೇಷ ಕಟ್ಟಿಕೊಳ್ಳಲು ನನಗೂ ಇಷ್ಟವಿಲ್ಲ**
> **ಸುಮಲತಾ,** ಮಂಡ್ಯ ಸಂಸದೆ

‘ಕೆಲವರು ಕಾಂಗ್ರೆಸ್ ಸೇರುವಂತೆ ಸಲಹೆ ಕೊಟ್ಟಿದ್ದರು, ಆದರೆ ಅಲ್ಲಿಯ ಕೆಲ ನಾಯಕರು, ಸುಮಲತಾ ಅವಶ್ಯಕತೆ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ ಎಂದಿದ್ದಾರೆ. ನನಗೆ ಗೌರವವಿಲ್ಲದ ಕಡೆ ಕಾಲಿಡುವುದಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪರೋಕ್ಷವಾಗಿ ತಿರುಗೇಟು ನೀಡಿದರು. ‘ಮೈತ್ರಿ ಪರಿಸ್ಥಿತಿಯಲ್ಲಿ ನಿರ್ಣಯ ಕೈಗೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಕಳೆದ ಚುನಾವಣೆಯಂತೆಯೇ ಈ ಬಾರಿಯೂ ಸವಾಲು ಎದುರಿಸಿ ಅಂತಿಮ ನಿರ್ಧಾರಕ್ಕೆ ಬಂದಿದ್ದೇನೆ. ನನ್ನ ಕಾರ್ಯಕರ್ತರಿಗೆ ಶಕ್ತಿ ತುಂಬುವ ಉದ್ದೇಶದಿಂದ ಬಿಜೆಪಿ ಸೇರಲು ನಿರ್ಧರಿಸಿರುವೆ’ ಎಂದರು.

‘ಮೋದಿ ಅವರ ನಾಯಕತ್ವದಲ್ಲಿ ದೇಶ ಉನ್ನತ ಸ್ಥಾನಕ್ಕೆ ತಲುಪಿದೆ. ಅಭಿವೃದ್ಧಿಯನ್ನೇ ಮೂಲ ಮಂತ್ರವನ್ನಾಗಿಸಿಕೊಂಡಿರುವ ಪ್ರಧಾನಿಯೇ ಸ್ಫೂರ್ತಿ. ಅವರು ಈಗಿನ ಚುನಾವಣೆ, 2029ರ ಚುನಾವಣೆ ಕಡೆ ನೋಡುತ್ತಿಲ್ಲ, 2047ರತ್ತ ದೃಷ್ಟಿ ನೆಟ್ಟಿದ್ದಾರೆ. ದೇಶ ಸ್ವಾತಂತ್ರ್ಯ ಹೊಂದಿ 100 ವರ್ಷವಾಗುತ್ತಿರುವ ಹಿನ್ನೆಲೆಯಲ್ಲಿ ಹೊಸ ಭಾರತ ಕಟ್ಟುವ ಉದ್ದೇಶ ಹೊಂದಿದ್ದಾರೆ’ ಎಂದರು.

‘ನನ್ನ ಕ್ಷೇತ್ರದ ಅಭಿವೃದ್ಧಿಗೆ ನರೇಂದ್ರ ಮೋದಿ ₹ 4,500 ಕೋಟಿ ಅನುದಾನ ಕೊಟ್ಟಿದ್ದಾರೆ. ಪ್ರತಿ ಹಂತದಲ್ಲೂ ನನ್ನ ವಿಶ್ವಾಸ ಪಡೆದಿದ್ದಾರೆ. ಪಕ್ಷ ಬಿಡುವ ನಿರ್ಧಾರ ಕೈಗೊಳ್ಳದಂತೆ ಮಾರ್ಗದರ್ಶನ ಮಾಡಿದ್ದಾರೆ. ಇಂದು ನಾನು ಕ್ಷೇತ್ರ ಬಿಟ್ಟುಕೊಡುತ್ತಿರಬಹುದು, ಆದರೆ ನಾಳೆ ಅವಕಾಶ ಬರುತ್ತದೆ ಎಂಬ ವಿಶ್ವಾಸವಿದೆ’ ಎಂದರು.

ಪಕ್ಷದ ನಿಲುವಿಗೆ ಬದ್ಧ: ಮೈತ್ರಿ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಅವರ ಪರ ಪ್ರಚಾರ ಕೈಗೊಳ್ಳುವಿರಾ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಸದ್ಯಕ್ಕೆ ಬಿಜೆಪಿಗೆ ಸೇರ್ಪಡೆಯಾಗುವ ನಿರ್ಣಯ ಕೈಗೊಂಡಿದ್ದೇನೆ, ದಿನಾಂಕವನ್ನು ಶೀಘ್ರ ಪ್ರಕಟಿಸಲಾಗುವುದು. ಚುನಾವಣೆಯಲ್ಲಿ ನನ್ನ ಪಾತ್ರದ ಕುರಿತು ವರಿಷ್ಠರ ಜೊತೆ ಚರ್ಚಿಸಿ ತಿಳಿಸುವೆ. ಪಕ್ಷದ ನಿಲುವೇ ನನ್ನ ನಿಲುವು ಆಗಿರಲಿದೆ’ ಎಂದರು.

ಸಭೆಯಲ್ಲಿ 5 ವರ್ಷಗಳ ಸಾಧನೆಯ ಕೈಪಿಡಿ ಬಿಡುಗಡೆ ಮಾಡಿದರು, ಸಾಕ್ಷ್ಯಚಿತ್ರ ಪ್ರದರ್ಶಿಸಿದರು. ನಟ ದರ್ಶನ್, ಅಭಿಷೇಕ್ ಅಂಬರೀಷ್ ಇದ್ದರು.

ರೈತ ಮುಖಂಡರ ಅಸಮಾಧಾನ

ಸಭೆಯ ಆರಂಭದಿಂದಲೂ ಕೆಲವು ರೈತ ಮುಖಂಡರು ಪಕ್ಷೇತರವಾಗಿ ಸ್ಪರ್ಧಿಸುವಂತೆ ಒತ್ತಾಯಿಸುತ್ತಿದ್ದರು. ‘ಮಂಡ್ಯ ಸ್ವಾಭಿಮಾನ ಉಳಿಸಿ’ ಎಂದು ಘೋಷಣೆ ಕೂಗುತ್ತಿದ್ದರು. ಸುಮಲತಾ ಅವರು ಬಿಜೆಪಿ ಸೇರುವ ನಿರ್ಣಯ ಪ್ರಕಟಿಸುತ್ತಿದ್ದಂತೆ ಅಸಮಾಧಾನ ವ್ಯಕ್ತಪಡಿಸಿ ಸಭಾಂಗಣದಿಂದ ಹೊರನಡೆದರು.

ಎಲ್ಲ ಪಕ್ಷಗಳು ಅನುಷ್ಠಾನಗೊಳಿಸಬೇಕು: ಎಐಡಿಎಸ್‌ಒ

ವಿದ್ಯಾರ್ಥಿ ಪ್ರಣಾಳಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರ: ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ವಿದ್ಯಾರ್ಥಿಗಳ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಎಲ್ಲ ಪಕ್ಷಗಳು ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿಎಸ್‌ಒ ಅಧ್ಯಕ್ಷೆ ಕೆ.ಎಸ್. ಅಶ್ವಿನಿ, ‘ರಾಜ್ಯದಲ್ಲಿ ಅಳವಡಿಸಿಕೊಂಡಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಹಿಂಪಡೆಯಬೇಕು. ಜನಪರ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸಬೇಕು. ಕೇಂದ್ರದ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಶೇ 10ರಷ್ಟು ರಾಜ್ಯ ಬಜೆಟ್‌ನಲ್ಲಿ ಶೇ 30ರಷ್ಟು ಅನುದಾನವನ್ನು ಮೀಸಲಿಡಬೇಕು. ವಿಲೀನದ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ನಿಲ್ಲಿಸಬೇಕು’ ಎಂದು ಒತ್ತಾಯಿಸಿದರು.

‘ಎಲ್ಲ ಸರ್ಕಾರಿ ಶಾಲಾ– ಕಾಲೇಜುಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಕಾಲ–ಕಾಲಕ್ಕೆ ಅನುದಾನ ಬಿಡುಗಡೆಗೊಳಿಸಬೇಕು. ಹೆಚ್ಚು ಸರ್ಕಾರಿ ಶಾಲೆಗಳನ್ನು ತೆರೆಯುವ ಮೂಲಕ ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಿ, ವಿದ್ಯಾರ್ಥಿನಿಲಯಗಳಿಗೆ ಸೌಲಭ್ಯ ಒದಗಿಸಬೇಕು. ಎಲ್ಲ ಅರ್ಹ ವಿದ್ಯಾರ್ಥಿಗಳಿಗೆ ಸರಿಯಾದ ಸಮಯದಲ್ಲಿ ವಿದ್ಯಾರ್ಥಿವೇತನ ಹಂಚಿಕೆಯಾಗಬೇಕು. ನಾಲ್ಕು ವರ್ಷಗಳ ಪದವಿ ಕೋರ್ಸ್ ಹಿಂಪಡೆದುಕೊಳ್ಳಬೇಕು. ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಪಾಸ್ ನೀಡಿ, ಪದವಿ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರವೇಶ ಶುಲ್ಕ ಹೆಚ್ಚಳಕ್ಕೆ ಕಡಿವಾಣ ಹಾಕಬೇಕು’ ಎಂದು ಹೇಳಿದರು.

‘ಪಠ್ಯಪುಸ್ತಕಗಳಲ್ಲಿ ನಮ್ಮ ದೇಶದ ನವೋದಯದ ಮಹಾನ್ ವ್ಯಕ್ತಿಗಳು ಹಾಗೂ ಕ್ರಾಂತಿಕಾರಿಗಳ ಜೀವನದ ಹೋರಾಟಗಳನ್ನು ಸೇರಿಸಬೇಕು. ನಮ್ಮ ದೇಶದಲ್ಲಿ ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ನೀಡಬಾರದು. ಖಾಲಿ ಇರುವ ಬೋಧಕ–ಬೋಧಕೇತರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು. ಶಿಕ್ಷಣದ ಸ್ವ–ಹಣಕಾಸು ವ್ಯವಸ್ಥೆ ಉತ್ತೇಜಿಸುವುದನ್ನು ಸ್ಥಗಿತಗೊಳಿಸಬೇಕು’ ಎಂದರು.

‘ಎಲ್ಲ ಸರ್ಕಾರಿ ಕಾಲೇಜುಗಳಲ್ಲಿ ಎನ್‌ಇಇಟಿ, ಜೆಇಇ ಮೇನ್ ಮತ್ತು ಜೆಇಇ ಅಡ್ವಾನ್ಸ್ ಆಕಾಂಕ್ಷಿಗಳಿಗೆ ಉಚಿತ ಕೋಚಿಂಗ್ ನೀಡಬೇಕು. ಎಲ್ಲ ಜಿಲ್ಲೆಗಳಲ್ಲಿ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಬೇಕು’ ಎಂದು ಆಗ್ರಹಿಸಿದರು.

ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಅಭಯಾ ದಿವಾಕರ್ ಭಾಗವಹಿಸಿದ್ದರು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

ಮತ್ತೊಮ್ಮೆ 'ಅರುಣಾಚಲ ವಿವಾದ' ಕೆದಕಿದ ಚೀನಾ!

ಚನ್ನಬಸಪ್ಪ ರೊಟ್ಟಿ

ಭಾರತದ ಪ್ರಧಾನಿ ನರೇಂದ್ರ ಮೋದಿ ಅರುಣಾಚಲಕ್ಕೆ ಭೇಟಿ ನೀಡಿ, ಅಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು. ಅಲ್ಲದೇ ತವಾಂಗ್ ಸಂಪರ್ಕಿಸುವ 'ಸೇಲಾ' ಸುರಂಗ ಮಾರ್ಗವನ್ನು ಉದ್ಘಾಟಿಸಿದ್ದರು. ಈ ಹಿನ್ನೆಲೆಯಲ್ಲಿ ಭಾರತಕ್ಕೆ ರಾಜತಾಂತ್ರಿಕವಾಗಿ ಚೀನಾ ಪ್ರತಿಭಟನೆ ಸಲ್ಲಿಸಿ ಸುದ್ದಿಯಲ್ಲಿದೆ.

ಅರುಣಾಚಲ ಪ್ರದೇಶಕ್ಕೆ ಭಾರತದ ನಾಯಕರು ಭೇಟಿ ನೀಡಿದಾಗಲೆಲ್ಲಾ ಆಕ್ಷೇಪ ವ್ಯಕ್ತಪಡಿಸುವ ಚಾಳಿಯನ್ನು ಚೀನಾ ರೂಢಿಸಿಕೊಂಡಿದೆ. 'ಭಾರತದ ನಡೆ ಉಭಯ ದೇಶಗಳ ನಡುವಣ ಗಡಿ ವಿವಾದವನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ಭಾರತ ಮತ್ತು ಚೀನಾ ನಡುವಿನ ಗಡಿರೇಖೆಯನ್ನು ಗುರುತಿಸುವ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಅರುಣಾಚಲ ಪ್ರದೇಶ ಭಾರತದ ಭಾಗ ಎಂಬುದನ್ನು ಚೀನಾ ಒಪ್ಪುವುದಿಲ್ಲ. ಝ಼ಾಂಗ್ನಾನ್ (ಅರುಣಾಚಲಕ್ಕೆ ಚೀನಾ ಇಟ್ಟ ಹೆಸರು) ಚೀನಾಕ್ಕೆ ಸೇರಿದೆ. ಈ ಸಂಗತಿಯನ್ನು ನಿರಾಕರಿಸಲು ಸಾಧ್ಯವೇ ಇಲ್ಲ' ಎಂಬ ತನ್ನ ಹಳೆಯ ವಿತಂಡವಾದವನ್ನೇ ಚೀನಾ ಪುನರುಚ್ಚರಿಸಿದೆ.

ಈ ವಿಷಯದಲ್ಲಿ ಚೀನಾಗೆ ಭಾರತ ತಿರುಗೇಟು ನೀಡಿದ್ದು, 'ನಮ್ಮ ಸೇನೆಯನ್ನು ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ ನಿಯೋಜಿಸಲಾಗಿದೆ. ಅರುಣಾಚಲ ಪ್ರದೇಶ ಈ ಹಿಂದೆಯೂ ಭಾರತದ ಅವಿಭಾಜ್ಯ ಅಂಗವಾಗಿತ್ತು, ಈಗಲೂ ಅಂಗವಾಗಿದೆ ಮತ್ತು ಭವಿಷ್ಯದಲ್ಲೂ ಅವಿಭಾಜ್ಯ ಅಂಗವಾಗಿಯೇ ಇರುತ್ತದೆ' ಎಂದು ಸ್ಪಷ್ಟಪಡಿಸಿದೆ. ಅರುಣಾಚಲ ಪ್ರದೇಶದ ಕುರಿತು ಇತ್ತೀಚೆಗೆ ಚೀನಾ ನೀಡಿದ್ದ ಹೇಳಿಕೆಗೆ ಪ್ರತಿಯಾಗಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಹೇಳಿಕೆ ನೀಡಿದೆ.

ಇತ್ತೀಚಿನ ದಿನಗಳಲ್ಲಿ ಅರುಣಾಚಲ ಪ್ರದೇಶ ರಾಜ್ಯದ ಮೇಲೆ ತನ್ನ ಹಕ್ಕು ಸಾಧಿಸಲು ಪ್ರಯತ್ನಿಸುತ್ತಿರುವ ಚೀನಾ, ಮತ್ತೊಂದು ಹೆಜ್ಜೆ ಮುಂದೆ ಹೋಗಿದೆ. ಭಾರತದ ಅರುಣಾಚಲ ಪ್ರದೇಶದ ವಿವಿಧ ಸ್ಥಳಗಳಿಗೆ 30 ಹೊಸ ಹೆಸರಿರುವ ನಾಲ್ಕನೇ ಪಟ್ಟಿಯನ್ನು ಚೀನಾ ಬಿಡುಗಡೆ ಮಾಡಿದೆ. ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಈ ಹೆಸರುಗಳನ್ನು ಘೋಷಿಸಲಾಗಿದ್ದು, ಈ ಹೆಸರುಗಳು ಮೇ 1ರಿಂದ ಜಾರಿಗೆ ಬರಲಿವೆ ಎಂದು ಮಾಹಿತಿ ನೀಡಿದೆ.

ಚೀನಾ ಮಾಡಿರುವ ಈ ಮರುನಾಮಕರಣ ಅರುಣಾಚಲ ಪ್ರದೇಶದ 11 ಜಿಲ್ಲೆಗಳು, 12 ಪರ್ವತಗಳು, ನಾಲ್ಕು ನದಿಗಳು, ಒಂದು ಸರೋವರ, ಒಂದು ಮೌಂಟೇನ್ ಪಾಸ್ ಮತ್ತು ಒಂದು ಭೂಭಾಗವನ್ನು ಒಳಗೊಂಡಿದೆ. ಇವೆಲ್ಲವುಗಳ ಹೆಸರನ್ನೂ ಚೀನೀ ಅಕ್ಷರಗಳಾದ ಟಿಬೆಟಿಯನ್ ಲಿಪಿ ಮತ್ತು ಪಿನ್ಯಿನ್, ಮ್ಯಾಂಡರಿನ್ ಚೈನೀಸ್‌ನ ರೋಮನೈಸ್ಡ್ ರೂಪಗಳಲ್ಲಿ ಚೀನಾ ಸೂಚಿಸಿದೆ!. ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದಂತೆ ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯ 2017ರಲ್ಲಿ 6, 2021ರಲ್ಲಿ 15 ಹಾಗೂ 2023ರಲ್ಲಿ 11 ಸ್ಥಳಗಳಿಗೆ ಹೊಸ ಹೆಸರುಗಳ ಪಟ್ಟಿ ಪ್ರಕಟಿಸಿತ್ತು ಎಂಬುದು ಗಮನಾರ್ಹ.

ವಿವಾದದ ಹಿನ್ನೆಲೆ: ಅರುಣಾಚಲ ಪ್ರದೇಶದ ಮೇಲೆ ಭಾರತದ ಸಾರ್ವಭೌಮತ್ವವನ್ನು ಚೀನಾ ದಶಕಗಳಿಂದ ನಿರಾಕರಿಸುತ್ತಿದೆ. ಟಿಬೆಟ್ ಗಡಿಯಲ್ಲಿರುವ ಈ ಪ್ರದೇಶ ಉಭಯ ದೇಶಗಳ ನಡುವಿನ ವಿವಾದದ ಬಿಂದುವಾಗಿದೆ. ಇದು ಮೇಲಿಂದ ಮೇಲೆ ಸಾಂದರ್ಭಿಕ ಉದ್ವಿಗ್ನತೆ ಮತ್ತು ರಾಜತಾಂತ್ರಿಕ ಜಗಳಗಳಿಗೆ ಕಾರಣವಾಗುತ್ತಿದೆ. ಅದರಲ್ಲೂ ಮತ್ತೊಂದು ಅವಧಿಗೆ ಕ್ಸಿ ಜಿನ್‌ಪಿಂಗ್ ಅವರೇ ಚೀನಾದ ಅಧ್ಯಕ್ಷರಾಗಿ ಮುಂದುವರಿದಿರುವ ಹಿನ್ನೆಲೆಯಲ್ಲಿ ಈ ವಿವಾದ ಹೀಗೆಯೇ ಮುಂದುವರಿಯುವ ಸಾಧ್ಯತೆಯನ್ನು ಮತ್ತಷ್ಟು ಹೆಚ್ಚಿಸಿವೆ. ಭಾರತ-ಚೀನಾ ಗಡಿ ವಿವಾದ ಭಾರತ ಮತ್ತು ಚೀನಾ ನಡುವಿನ ಗಡಿ ವಿವಾದ 1962 ರ ಚೀನಾ-ಭಾರತ ಯುದ್ಧಕ್ಕಿಂತ ಹಿಂದಿನದು. ಈ ಯುದ್ಧದ ನಂತರ ಚೀನಾ 'ಅಕ್ಸಾಯ್ ಚಿನ್' ಮೇಲೆ ನಿಯಂತ್ರಣ ಸಾಧಿಸಿತು. ಅಂದಿನಿಂದ, ಎರಡೂ ದೇಶಗಳು ಗಡಿ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಗಳನ್ನು ನಡೆಸಿವೆ. ಆದರೆ, ಅರುಣಾಚಲ ಪ್ರದೇಶದಂಥ ಹಲವು ಸೂಕ್ಷ್ಮ ಹಾಗೂ ಆಯಕಟ್ಟಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಉಭಯ ರಾಷ್ಟ್ರಗಳ ಭಿನ್ನಾಭಿಪ್ರಾಯಗಳು ಮುಂದುವರಿದಿವೆ. ದಕ್ಷಿಣ ಏಷ್ಯಾ ಭಾಗದಲ್ಲಿ ಪ್ರಾದೇಶಿಕ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಭಾರತ ಹಾಗೂ ಚೀನಾ ಸ್ಪರ್ಧೆಗಿಳಿದಿರುವ ಬೆನ್ನಲ್ಲೇ ಅರುಣಾಚಲ ಪ್ರದೇಶ ಮತ್ತು ಇತರ ಗಡಿ ಪ್ರದೇಶಗಳ ಕುರಿತು ನಡೆಯುತ್ತಿರುವ ವಿವಾದ ಭಾರತ ಮತ್ತು ಚೀನಾ ನಡುವಿನ ರಾಜತಾಂತ್ರಿಕ ಸಂಬಂಧಗಳನ್ನು ಮತ್ತಷ್ಟು ಹದಗೆಡಿಸಿದೆ. ಅಮೆರಿಕ ಕೂಡ ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗ ಎಂದು ಮಾನ್ಯತೆ ನೀಡುವುದಾಗಿ ಹೇಳಿದ್ದು, ಅರುಣಾಚಲ ಪ್ರದೇಶ ಗಡಿ ವಿಚಾರದಲ್ಲಿ ಯಾವುದೇ ಏಕಪಕ್ಷೀಯ ಕ್ರಮವನ್ನು ಅಮೆರಿಕ ವಿರೋಧಿಸುತ್ತದೆ ಎಂದು ಉಲ್ಲೇಖಿಸಿದೆ. ಇದು ಚೀನಾವನ್ನು ಮತ್ತಷ್ಟು ಕೆರಳಿಸಿದೆ. ಉನ್ನತ ಮಟ್ಟದ ಸಭೆಗಳು ಮತ್ತು ರಾಜತಾಂತ್ರಿಕ ನಿಯೋಗಗಳ ಮಾತುಕತೆಗಳ ನಡುವೆಯೂ ಚೀನಾ ಮೇಲಿಂದ ಮೇಲೆ ವಿವಾದಕ್ಕೆ ಕಾರಣವಾಗುವಂಥ ಕೆಲಸಗಳನ್ನು ಮಾಡುತ್ತಲೇ ಇದ್ದು, ಭಾರತದೊಂದಿಗೆ ತನ್ನ ಪ್ರತ್ಯಕ್ಷ ಹಾಗೂ ಪರೋಕ್ಷ ಸಂಘರ್ಷವನ್ನು ಮುಂದುವರಿಸಿದೆ. ಈ ಮುಂಚೆ ಜೂನ್ 2020 ರಲ್ಲಿ ಭಾರತ-ಚೀನಾ ಗಡಿವಿವಾದ ಭುಗಿಲೆದ್ದಿತ್ತು. ಲಡಾಖ್ ಪ್ರದೇಶದಲ್ಲಿ ನಡೆದ ಕಾದಾಟದಲ್ಲಿ ಕನಿಷ್ಠ 20 ಭಾರತೀಯ ಸೈನಿಕರು ಮತ್ತು ನಾಲ್ಕು ಚೀನೀ ಸೈನಿಕರು ಹುತಾತ್ಮರಾಗಿದ್ದರು.ಭಾರತ ತನ್ನ ಗಡಿಭಾಗಗಳಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಲೇ ಇದೆ. ಲಡಾಖ್, ಅರುಣಾಚಲ ಪ್ರದೇಶ, ಸಿಕ್ಕಿಂ, ಹಿಮಾಚಲ ಪ್ರದೇಶ, ಉತ್ತರಾಖಂಡ್, ಪಂಜಾಬ್ ಮತ್ತು ಜಮ್ಮು-ಕಾಶ್ಮೀರದ ಆಯಕಟ್ಟಿನ ಪ್ರದೇಶಗಳಲ್ಲಿ ಭಾರತ ಈಗಾಗಲೇ 50ಕ್ಕೂ ಹೆಚ್ಚು ಸೇತುವೆಗಳನ್ನು ನಿರ್ಣಾಯಕ ಸುರಂಗಗಳು ಹಾಗೂ ರಸ್ತೆಗಳನ್ನು ನಿರ್ಮಿಸಿದೆ. ❖

'ಸೇಲಾ' ಸುರಂಗ ಏನಿದರ ಮಹತ್ವ?

- 2024 ಮಾರ್ಚ್ 9ರಂದು ಅರುಣಾಚಲ ಪ್ರದೇಶದಲ್ಲಿ 'ಸೇಲಾ' ಸುರಂಗ ಮಾರ್ಗವನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು.
- ₹825 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಈ ಸುರಂಗ ಯೋಜನೆಯನ್ನು ಪಶ್ಚಿಮ ಕಮೆಂಗ್ ಜಿಲ್ಲೆಯಲ್ಲಿ ತೇಜ್‌ಪುರದಿಂದ ತವಾಂಗ್‌ಗೆ ಸಂಪರ್ಕಿಸುವ ರಸ್ತೆಯಲ್ಲಿ 13,700 ಅಡಿ ಎತ್ತರದಲ್ಲಿ ನಿರ್ಮಿಸಲಾಗಿದೆ.
- ಫೆಬ್ರವರಿ 2019 ರಲ್ಲಿ ಪ್ರಧಾನಿ ಮೋದಿ ಈ ಯೋಜನೆಗೆ ಅಡಿಗಲ್ಲು ಹಾಕಿದ್ದರು.
- 13,000 ಅಡಿ ಎತ್ತರದಲ್ಲಿ ನಿರ್ಮಿಸಿರುವ ಸೇಲಾ ಸುರಂಗ 3,000 ಮೀಟರ್ (9,800 ಅಡಿ) ಉದ್ದದ ರಸ್ತೆ ಸುರಂಗವಾಗಿದ್ದು, ಇದು ಅಸ್ಸಾಂನ ಗುವಾಹಟಿಯಿಂದ ಅರುಣಾಚಲ ಪ್ರದೇಶದ ತವಾಂಗ್ ನಡುವೆ ಎಲ್ಲ ಹವಾಮಾನದ ಸಂದರ್ಭದಲ್ಲೂ ಸುಗಮ ಸಂಪರ್ಕವನ್ನು ಖಾತ್ರಿಗೊಳಿಸುತ್ತದೆ.
- ಗಡಿ ರಸ್ತೆಗಳ ಸಂಸ್ಥೆ (BRO: Border Roads Organisation) ನಿರ್ಮಿಸಿರುವ ಈ ಸುರಂಗ ವಿಶ್ವದ ಅತಿ ಉದ್ದದ ದ್ವಿಪಥ ಸುರಂಗ ಎಂಬ ಖ್ಯಾತಿ ಪಡೆದಿದೆ.ಈ ಯೋಜನೆಯು ಎರಡು ಸುರಂಗಗಳನ್ನು ಒಳಗೊಂಡಿದೆ. ಒಂದು 980 ಮೀಟರ್ ಮತ್ತು ಇನ್ನೊಂದು 1,555 ಮೀಟರ್ ಉದ್ದವನ್ನು ಹೊಂದಿವೆ. ಒಂದು ದ್ವಿಪಥದ ಟ್ಯೂಬ್ ಅನ್ನು ಸಂಚಾರಕ್ಕಾಗಿ ಮತ್ತು ಇನ್ನೊಂದನ್ನು ತುರ್ತು ಸೇವೆಗಳಿಗಾಗಿ ಬಳಸಲು ನಿರ್ಧರಿಸಲಾಗಿದೆ.
- ಈ ಸುರಂಗವನ್ನು ಸಂಪರ್ಕಿಸಲೆಂದೇ 8.6 ಕಿಲೋಮೀಟರ್ ಸಂಪರ್ಕ ರಸ್ತೆಯನ್ನೂ ನಿರ್ಮಿಸಲಾಗಿದೆ.
- ಸುರಂಗವು ಅತ್ಯಾಧುನಿಕ ಆಸ್ಟ್ರಿಯನ್ ಸುರಂಗ ತಂತ್ರ ಹಾಗೂ ಎಲೆಕ್ಟ್ರೋ-ಮೆಕ್ಯಾನಿಕಲ್ ತಂತ್ರಜ್ಞಾನಗಳನ್ನು ಹೊಂದಿದೆ. SCADA-ನಿಯಂತ್ರಿತ ಮೇಲ್ವಿಚಾರಣಾ ವ್ಯವಸ್ಥೆ, ಅಗ್ನಿಶಾಮಕ ಉಪಕರಣಗಳು, ಗಾಳಿಯ ಗುಣಮಟ್ಟವನ್ನು ಸಂರಕ್ಷಿಸಲು ಜೆಟ್ ಫ್ಯಾನ್ ವಾತಾಯನ ವ್ಯವಸ್ಥೆ ಮತ್ತು CIE ಮಾನದಂಡಗಳನ್ವಯ ವಿವಿಧ ಸೌಕರ್ಯಗಳನ್ನು ಇದರಲ್ಲಿ ಅಳವಡಿಸಲಾಗಿದೆ.
- ಈ ಸುರಂಗದಲ್ಲಿ ಗಂಟೆಗೆ 80 ಕಿ.ಮೀ. ಗರಿಷ್ಠ ವೇಗದಲ್ಲಿ ಪ್ರತಿದಿನ 2,000 ಟ್ರಕ್‌ಗಳು ಮತ್ತು 3,000 ಕಾರುಗಳು ಸಂಚರಿಸಬಹುದಾಗಿದೆ.
- ಈ ಸುರಂಗ ನಿರ್ಮಾಣಕ್ಕಾಗಿ, ಸುಮಾರು 71,000 ಮೆಟ್ರಿಕ್ ಟನ್ ಸಿಮೆಂಟ್, 5,000 ಮೆಟ್ರಿಕ್ ಟನ್ ಉಕ್ಕು ಮತ್ತು 800 ಮೆಟ್ರಿಕ್ ಟನ್ ಸ್ಫೋಟಕಗಳನ್ನು ಬಳಸಲಾಗಿದೆ
- ಚೀನೀ ಸೈನಿಕರು ಲೈನ್ ಆಫ್ ಆಕ್ಚುವಲ್ ಕಂಟ್ರೋಲ್ (LAC) ನಿಂದ ಸೇಲಾ ಸುರಂಗವನ್ನು ನೋಡಬಹುದಾಗಿದೆ.
- ಈ ಸುರಂಗ ಭಾರತದ ಮಿಲಿಟರಿ ಅನುಕೂಲತೆಯನ್ನು ಹೆಚ್ಚಿಸಿದ್ದು, LAC ಸಮೀಪದ ಪ್ರದೇಶಗಳಿಗೆ ಸೈನಿಕರು, ಶಸ್ತ್ರಾಸ್ತ್ರಗಳು ಮತ್ತು ಯುದ್ಧೋಪಕರಣಗಳನ್ನು ತ್ವರಿತವಾಗಿ ನಿಯೋಜಿಸಲು ಅನುವು ಮಾಡಿಕೊಡುತ್ತದೆ. ಈ ಸುರಂಗ ದೇಶದ ರಕ್ಷಣಾ ಸನ್ನದ್ಧತೆಯನ್ನು ಹೆಚ್ಚಿಸುವುದಲ್ಲದೇ, ಈ ಪ್ರದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದೆ. ಈ ಮುಂಚೆ ತವಾಂಗ್ ತಲುಪಲು ಅಪಾಯಕಾರಿ ತಿರುವುಗಳಿಂದ ಕೂಡಿದ್ದ ಕೇವಲ ಒಂದು ಲೇನ್ ಸಂಪರ್ಕವಿತ್ತು. ದೊಡ್ಡ ವಾಹನಗಳು ಮತ್ತು ಕಂಟೈನರ್ ಟ್ರಕ್‌ಗಳ ಸಂಚಾರ ಕಷ್ಟಸಾಧ್ಯವಾಗಿತ್ತು.
- 'ಸೇಲಾ' ಸುರಂಗ ನಿರ್ಮಿಸಿರುವುದೇ ಚೀನಾ ಮತ್ತೊಮ್ಮೆ ಅರುಣಾಚಲಪ್ರದೇಶ ವಿವಾದವನ್ನು ಕೆದಕಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ಕರ್ನಾಟಕ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಮೂಲವೃಂದದ ಹಾಗೂ ಹೈದರಾಬಾದ್ ಕರ್ನಾಟಕ ವೃಂದದ 'ಗ್ರೂಪ್ ಸಿ' ವಿಭಾಗದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

ಕರ್ನಾಟಕ ಸಾರಿಗೆ ಇಲಾಖೆಯಲ್ಲಿ 76 ಸಿ-ಗ್ರೂಪ್ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕರ್ನಾಟಕ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಮೂಲ ವೃಂದದ ಹಾಗೂ ಹೈದರಾಬಾದ್ ಕರ್ನಾಟಕ ವೃಂದದ 'ಗ್ರೂಪ್ ಸಿ' ವಿಭಾಗದ ಒಟ್ಟು 76 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ (Motor Vehicle Inspector-MVI) ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆ ಏಪ್ರಿಲ್ 22 ರಿಂದ ಆರಂಭವಾಗಲಿದ್ದು , ಮೇ 21 ಕಡೆಯ ದಿನವಾಗಿರಲಿದೆ. ಅರ್ಹ ಪುರುಷ, ಮಹಿಳೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಶುಲ್ಕ ಸಾಮಾನ್ಯ ಅಭ್ಯರ್ಥಿಗಳಿಗೆ ₹600, 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ ₹300, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹50 ಹಾಗೂ ಎಸ್‌ಸಿ, ಎಸ್‌ಟಿ ಮತ್ತು ಪ್ರವರ್ಗ 1, ವಿಶೇಷ ಚೇತನರಿಗೆ ಶುಲ್ಕ ವಿನಾಯಿತಿ ಇದೆ.

ಕನಿಷ್ಠ 18 ವರ್ಷ ವಯಸ್ಸು ಪೂರೈಸಿರುವವರು ಗರಿಷ್ಠ 35 ವರ್ಷದೊಳಗಿನವರು ಅರ್ಜಿ ಸಲ್ಲಿಸಲು ಅರ್ಹರು. 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಟಿ ಮತ್ತು ಪ್ರವರ್ಗ 1, ವಿಶೇಷ ಚೇತನರಿಗೆ 5 ವರ್ಷ ಸಡಿಲಿಕೆ ಇದೆ.

ಎಸ್ಸೆಸ್ಸೆಲ್ಸಿ ಜತೆಗೆ ಮೂರು ವರ್ಷದ ಆಟೊಮೊಬೈಲ್ ಎಂಜಿನಿಯರಿಂಗ್ ಡಿಪ್ಲೊಮಾ ಅಥವಾ ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮಾ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿದವರು ಅರ್ಜಿ ಸಲ್ಲಿಸಬಹುದು. ಇದರ ಜೊತೆಗೆ ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್, ಡಿಪ್ಲೊಮಾ ಇನ್ ಆಟೊಮೊಬೈಲ್ ಎಂಜಿನಿಯರಿಂಗ್‌ನಲ್ಲಿ ಬಿಇ ಅಥವಾ ಬಿ.ಟೆಕ್ ಮಾಡಿದವರೂ ಅರ್ಜಿ ಸಲ್ಲಿಸಬಹುದು. ಜೊತೆಗೆ ಚಾಲನಾ ಪರವಾನಗಿ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.

ಪುರುಷರು ಕನಿಷ್ಠ 168 ಸೆಂ.ಮೀ ಹಾಗೂ ಮಹಿಳೆಯರು 157 ಸೆಂ.ಮೀ ಎತ್ತರದ ಜೊತೆ ಇತರೆ ಅಗತ್ಯ ದೈಹಿಕ ಮಾನದಂಡಗಳನ್ನು ಹೊಂದಿರಬೇಕು. ಇದು ಸಿ-ಗ್ರೂಪ್ ವೇತನ ಶ್ರೇಣಿ ಹೊಂದಿದ್ದು ₹62 ಸಾವಿರವರೆಗೆ ವೇತನ ಲಭಿಸಲಿದೆ. ❖

ನೇಮಕಾತಿ ಹೀಗಿರಲಿದೆ..

ಈ ಹುದ್ದೆಗಳಿಗೆ ನೇರ ನೇಮಕಾತಿ ನಡೆಯುತ್ತಿದ್ದು , ಸಂದರ್ಶನ ಇರುವುದಿಲ್ಲ. ಕನ್ನಡ ಕಡ್ಡಾಯ ಭಾಷೆ ಪರೀಕ್ಷೆ ಜೊತೆ ಎರಡು ಪತ್ರಿಕೆಗಳ ಬಹುಆಯ್ಕೆ ಮಾದರಿಯ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬೇಕಾಗುತ್ತದೆ. ನಂತರ ದೈಹಿಕ ಪರೀಕ್ಷೆ, ವೈದ್ಯಕೀಯ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಇರಲಿದೆ. ಮೆರಿಟ್ ಆಧಾರದ ಮೇಲೆ ಮೀಸಲು ಅನ್ವಯ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ.

ಪರೀಕ್ಷೆ ಹೇಗಿರಲಿದೆ?

ಮೊದಲು ಕನ್ನಡ ಕಡ್ಡಾಯ ಭಾಷೆ ಪರೀಕ್ಷೆ ಎದುರಿಸಬೇಕಾಗುತ್ತದೆ. 150 ಅಂಕಗಳ ಈ ಪರೀಕ್ಷೆಯಲ್ಲಿ ಕನಿಷ್ಠ ಶೇ 35 ಅಂಕಗಳನ್ನು ಪಡೆಯುವುದು ಕಡ್ಡಾಯ. ಎರಡನೇಯದಾಗಿ ಬಹು ಆಯ್ಕೆಯ ಎರಡು ಪತ್ರಿಕೆಗಳ ಪರೀಕ್ಷೆ. ಇದರಲ್ಲಿ ಮೊದಲ ಪತ್ರಿಕೆ ಒಂದೂವರೆ ಗಂಟೆಯದ್ದಾಗಿದ್ದು 100 ಪ್ರಶ್ನೆಗಳಿಗೆ 100 ಅಂಕಗಳನ್ನು ಹೊಂದಿರುತ್ತದೆ. ಎರಡನೇ ಪತ್ರಿಕೆ ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲಿಷ್ ಹಾಗೂ ಸಾಮಾನ್ಯ ಕಂಪ್ಯೂಟರ್ ಜ್ಞಾನ ಎಂಬ ಮೂರು ಭಾಗಗಳನ್ನು ಹೊಂದಿರುತ್ತದೆ. ಒಟ್ಟು 100 ಪ್ರಶ್ನೆಗಳಿಗೆ 100 ಅಂಕಗಳು. ಅವಧಿ ಎರಡು ಗಂಟೆ. ಪ್ರತಿ ನಾಲ್ಕು ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ.

ಪೇಪರ್-1ರ ಪರೀಕ್ಷಾ ಪಠ್ಯಕ್ರಮ ಹೀಗಿದೆ: ಪ್ರಚಲಿತ ಘಟನೆಗಳು, ದೈನಂದಿನ ಗ್ರಹಿಕೆಯ ವಿಷಯಗಳು, ಭಾರತದ ಸಂವಿಧಾನ, ಕರ್ನಾಟಕಕ್ಕೆ ಸಂಬಂಧಿಸಿದ ಭಾರತದ ಇತಿಹಾಸ, ಕರ್ನಾಟಕಕ್ಕೆ ಸಂಬಂಧಿಸಿದಂತೆ ಭಾರತದ ಭೂಗೋಳ ವಿಷಯಗಳು, ರಾಜ್ಯ ಮತ್ತು ಪ್ರಾದೇಶಿಕ ಆಡಳಿತದ ಕುರಿತ ವಿಷಯಗಳು, ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಉಪಕ್ರಮಗಳನ್ನು ಒಳಗೊಂಡಂತೆ ಕರ್ನಾಟಕದ ಆರ್ಥಿಕತೆಯ ಅಭಿವೃದ್ಧಿ ಕುರಿತ ವಿಷಯಗಳು ಇರಲಿವೆ.

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆ ದಿಕ್ಸೂಚಿ

NEET CHEMISTRY

1) Iodoform can be prepared from all, except

(a) butan-2-one (b) acetophenone

(c) propan-2-ol (d) propan-1-ol

Ans: (D) propan-1-ol

Iodoform reaction requires a $H_3C-\underset{\underset{O}{\|}}{C}-$ group, which is not present in propan-1-ol even after oxidation.

2) The complex ion having minimum magnitude of Δ_0 (CFSE) is

(a) $[Co(NH_3)_6]^{3+}$ (b) $[Cr(H_2O)_6]^{3+}$

(c) $[Cr(CN)_6]^{3-}$ (d) $[Co(Cl)_6]^{3-}$

Ans: (D) $[Co(Cl)_6]^{3-}$

Co^{3+} - d^6 low spin $\Delta_0 = 4\times(-0.4) + 2(+0.6) = -0.4\,\Delta_0$

Cr^{3+} - d^3 low spin $\Delta_0 = 4 \times (-0.4) = -1.6\,\Delta_0$.

3) Select the correct statements from the following:

A) Atoms of all elements are composed of two fundamental particles.

B) The mass of the electron is 9.10939×10^{-31} kg.

C) All the isotopes of a given element show same chemical properties.

D) Protons and electrons are collectively known as nucleons.

E. Dalton's atomic theory, regarded the atom as an ultimate particle of matter.

Choose the correct answer from the options given below:

a) B, C and E only b) A, B and C only

c) C, D and E only d) A and E only

Ans:- (a) An Atom has three fundamental particles-electron, proton and neutron.

The mass of the electron is 9.10939×10^{-31} kg. Neutrons and protons, both are collectively known as nucleons.

All the isotopes of a given element show same chemical properties.

Dalton's atomic theory, regarded atom as an ultimate particle of matter.

4) The IUPAC name of



a) 4-Hydroxy-2-pentanone

b) 2-Hydroxy-4-pentanone

c) 2-Oxo-4-pentanol d) 4-Keto-2-pentanol

Ans:- a;

5) The statement that is NOT correct is

a) Compressibility factor measures the deviation of real gas from ideal behavior

b) van der Waals constant 'a' measures extent of intermolecular attractive forces for real gases

c) Critical temperature is the lowest temperature at which liquefaction of a gas first occurs

d) Boyle point depends on the nature of real gas.

Ans:-(c) Critical temperature is the temperature above which a gas cannot be liquefied irrespective of the pressure applied.

6) One dm^3 solution containing 10^{-5} moles each of Cl^- ions and CrO_4^{-2} ions is treated with 10^{-4} mole of silver nitrate. Which one of the following observations is made?

$[K_{SP}\ Ag_2CrO_4 = 4\times10^{-12}]$

$[K_{SP}\ AgCl = 1\times10^{-10}]$

a) Silver chromate gets precipitated first

b) Precipitation does not occur

c) Both silver chromate and silver chloride starts precipitating simultaneously

d) Silver chloride gets precipitated first

Ans:- d;

7) The correct statement is

a) cyclohexadiene and cyclohexene cannot be isolated with ease during controlled hydrogenation of benzene

b) One mole each of benzene and hydrogen when reacted gives 1/3 mole of cyclohexene and 2/3 mole unreacted hydrogen

c) Hydrogenation of benzene to cyclohexene is an endothermic process

d) It is essier to hydrogenate benzene when compared to cyclohexene to cyclohexene.

Ans:- a; during the hydrogenation of benzene, only cyclohexene can be isolated.



Benzene Cyclohexane

8) Which one of the following statements is FALSE?

a) The ore is freed from almost all nonmetallic impurities

b) During roasting, moisture is removed from the ore

c) The concentrated zinz blende is subjected to calcinations during its extraction by pyrometallurgy

d) Calcination of ore is carried out in the absence of any blast of air.

Ans:- c;

9) Cryolite is..................

(a) Na_3AlF_6 and is used in the electrolysis of alumina for lowering the melting point of alumina only

(b) Na_3AlF_6 and is used in the electrolytic refining of alumina

(c) Na_3AlF_6 and is used in the electrolysis of alumina for decreasing electrical conductivity

(d) Na_3AlF_6 and is used in the electrolysis of alumina for lowering the melting point and increasing the conductivity of alumina.

Ans: (D) Na_3AlF_6 and is used in the electrolysis of alumina for lowering the melting point and increasing the conductivity of alumina.

II PUC CET MATHS

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MODEL QUESTIONS

24) If $y = 2x^{n+1} + \frac{3}{x^n}$ then $x^2\frac{d^2y}{dx^2}$ is ....

a) y b) 6n(n + 1)y

c) n(n +1)y d) $x\frac{dy}{dx} + y$

Solution:

Ans: (c)

$y = (2x)^{(n+1)} + (3x)^{(-n)}$

$\Rightarrow dy/dx = 2(n+1)x^n - (3nx)^{(-n-1)}$

$\Rightarrow (d^2y)/(dx^2) =$

$= 2n(n+1)x^{(n-1)} + 3n(n+1)x^{(-n-2)}$

$\Rightarrow x^2 (d^2y)/(dx^2) = n(n+1)\,[(2x)^{(n+1)} + 3/x^n]$

$\Rightarrow x^2 (d^2y)/(dx^2) = n(n+1)y$

25) If $y = |\cos x| + |\sin x|$, then $\frac{dy}{dx}$ at $x = \frac{2\pi}{3}$ is

(A) $\frac{1-\sqrt{3}}{2}$ (B) 0

(C) $\frac{1}{2}(\sqrt{3}-1)$ (D) None of these

Ans : (C) $\frac{1}{2}(\sqrt{3}-1)$

$\frac{dy}{dx} = \sin x + \cos x \quad \therefore \left(\frac{dy}{dx}\right)_{x=\frac{2\pi}{3}} = \sin 120^0 + \cos 120^0$

$= \frac{\sqrt{3}}{2} - \frac{1}{2} = \frac{\sqrt{3}-1}{2}.$

26) If $\sqrt[3]{y}\sqrt{x} = \sqrt[6]{(x+y)^5}$ then dy/dx equal to…………..

a) x/y b) x+y

c) x-y d) y/x

Ans: (d)

$\sqrt[3]{y}\sqrt{x} = \sqrt[6]{(x+y)^5}$

Apply log on both sides

$\log(y^{1/3}x^{1/2}) = \log(x+y)^{5/6}$

$(1/3)\log y + (1/2)\log x = (5/6)\log(x+y)$

$(1/3y)(dy/dx) + (1/2x) =$

$= (5/6(x+y))(1 + dy/dx)$

$(1/3y)(dy/dx) - (5/6(x+y))dy/dx =$

$= (5/6(x+y)) - (1/2x)$

$(dy/dx)[(1/3y) - (5/6(x+y)] =$

$= 5x - 3(x+y)/6x(x+y)$

$(dy/dx) =$

$= [(2x-3y)/6x(x+y)][6y(x+y)/(2x-3y)]$

$dy/dx = y/x$

27) $\int e^x\left(\frac{1+\sin x}{1+\cos x}\right)dx$ is

(A) $\tan\left(\frac{x}{2}\right) + C$ (B) $e^x \sin x + C$

(C) $e^x \tan\left(\frac{x}{2}\right) + C$ (D) $e^x + C$

Ans : (C) $e^x \tan\left(\frac{x}{2}\right) + C$

$\frac{1+\sin x}{1+\cos x} = \frac{1 + 2\sin\frac{x}{2}\cos\frac{x}{2}}{2\cos^2\frac{x}{2}} = \frac{1}{2}\sec^2\frac{x}{2} + \tan\frac{x}{2}$

Let $f(x) = \tan\frac{x}{2}$. Then $f'(x) = \frac{1}{2}\sec^2\frac{x}{2}$.

$\therefore \int e^x\left(\frac{1+\sin x}{1+\cos x}\right)dx = \int e^x[f(x) + f'(x)]$ form.

$= e^x f(x) = e^x.\tan\frac{x}{2} + C.$

28) If a, b, c are in A.P. then the value of the determinant $\begin{vmatrix} x+2 & x+3 & x+2a \\ x+3 & x+4 & x+2b \\ x+4 & x+5 & x+2c \end{vmatrix}$ is

(A) 0 (B) 1

(C) x (D) 2x

Ans: (A) 0

Expln:-The transformations $R_2 - R_1$, $R_3 - R_2$ give

$\Delta = \begin{vmatrix} x+2 & x+3 & x+2a \\ 1 & 1 & 2b-2a \\ 1 & 1 & 2c-2b \end{vmatrix} \sim R_3 - R_2 \begin{vmatrix} x+2 & x+3 & x+2a \\ 1 & 1 & 2b-2a \\ 0 & 0 & 2c-4b+2a \end{vmatrix}$

$= 2\begin{vmatrix} x+2 & x+3 & x+2a \\ 1 & 1 & 2b-2a \\ 0 & 0 & c-2b+a \end{vmatrix}$ As a, b, c are in A.P., $a + c = 2b$

$\therefore \Delta = 2\begin{vmatrix} x+2 & x+3 & x+2a \\ 1 & 1 & 2b-2a \\ 0 & 0 & 0 \end{vmatrix} = 0.$

29) If $A = \begin{bmatrix} a & 0 & 0 \\ 0 & a & 0 \\ 0 & 0 & a \end{bmatrix}$, then det (adj A) is

(A) a^{27} (B) a^9 (C) a^6 (D) a^2

Ans : (C) a^6

Note : If A is a square matrix of order 3 then $|adj\ A| = |A|^2$ and if A is a square matrix of order 2 then $|adj\ A| = |A|$.

Here A is of order 3. $\therefore |adj\ A| = |A|^2$

$|A| = a^3$. $\therefore |A|^2 = a^6$.

ಮುಬಾರತ್ ಮಾನ್ಯ ಮಾಡದೆ ಅರ್ಜಿ ವಜಾಗೊಳಿಸಿದ್ದ ಕೌಟುಂಬಿಕ ನ್ಯಾಯಾಲಯ

‘ಮುಬಾರತ್ ವಿಚ್ಛೇದನಕ್ಕೆ ರಹದಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಬಾರತ್ (ಒಬ್ಬರು ಮತ್ತೊಬ್ಬರಿಂದ ಬೇರ್ಪಡುವುದು) ಒಪ್ಪಂದ ಮಾಡಿಕೊಂಡು ವಿವಾಹ ರದ್ದು ಮಾಡಿಕೊಳ್ಳಲು ಪರಸ್ಪರ ನಿರ್ಧರಿಸಿ ಕೊಂಡಿರುವ ಮುಸ್ಲಿಂ ದಂಪತಿಗೆ ವಿವಾಹ ವಿಚ್ಛೇದನ ಮಂಜೂರು ಮಾಡುವ ಅಧಿಕಾರ ಕೌಟುಂಬಿಕ ನ್ಯಾಯಾಲಯಕ್ಕೆ ಇದೆ’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಶಬನಂ ಪರ್ವೀನ್ ಅಹಮದ್ ದಂಪತಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

‘ದಂಪತಿ ಮುಬಾರತ್ ಒಪ್ಪಂದದ ಬಗ್ಗೆ ಸಂಪೂರ್ಣ ತಿಳಿವಳಿಕೆ ಹೊಂದಿಯೇ ಪರಸ್ಪರ ಸಮ್ಮತಿಯ ಮೇರೆಗೆ ಸಂಬಂಧ ಮುಂದುವರಿಸದೇ ಇರಲು ನಿರ್ಧರಿಸಿದ್ದಾರೆ. ಹೀಗಾಗಿ, ಕೌಟುಂಬಿಕ ನ್ಯಾಯಾಲಯ ಅವರ ಅರ್ಜಿಯನ್ನು ಮಾನ್ಯ ಮಾಡದೆ ತಪ್ಪೆಸಗಿದೆ’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ದಂಪತಿಗೆ ವಿಚ್ಛೇದನ ಮಂಜೂರು ಮಾಡಿದೆ.

ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲರು, ‘ಮುಸ್ಲಿಂ ವಿವಾಹ ರದ್ದತಿ ಕಾಯ್ದೆ-1937, ಮುಸ್ಲಿಂ ವೈಯಕ್ತಿಕ ಕಾನೂನು (ಷರಿಯತ್) ಅನ್ವಯಿಸುವ ಕಾಯ್ದೆ-1939 ಮತ್ತು ಕೌಟುಂಬಿಕ ನ್ಯಾಯಾಲಯಗಳ ಕಾಯ್ದೆ- 1984ರ ಕಲಂ 7ರ ಅನ್ವಯ ಮುಬಾರತ್ ಒಪ್ಪಂದ ಮಾಡಿಕೊಂಡಿದ್ದರೆ ಅದನ್ನು ಕೌಟುಂಬಿಕ ನ್ಯಾಯಾಲಯ ಮಾನ್ಯ ಮಾಡಿ,

ಮದುವೆಯನ್ನು ಅನೂರ್ಜಿತಗೊಳಿಸಬೇಕು. ಆದರೆ, ಈ ಪ್ರಕರಣದಲ್ಲಿ ಕೌಟುಂಬಿಕ ನ್ಯಾಯಾಲಯ ಅರ್ಜಿ ತಿರಸ್ಕರಿಸಿರುವುದು ನಿಯಮಗಳಿಗೆ ವಿರುದ್ಧವಾಗಿದೆ’ ಎಂದು ಪ್ರತಿಪಾದಿಸಿದ್ದರು.

ಪ್ರಕರಣವೇನು?: ದಂಪತಿ ‘ಉತ್ತರ ಪ್ರದೇಶದ ಅಲಹಾಬಾದ್‌ನ ಕರ್ಬಾಲದ ನಂದ ಗಾರ್ಡನ್‌ನಲ್ಲಿ 2019ರ ಏಪ್ರಿಲ್ 7ರಂದು ನಡೆದಿದ್ದ ನಮ್ಮ ವಿವಾಹವನ್ನು ರದ್ದುಗೊಳಿಸಬೇಕು’ ಎಂದು ಕೋರಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಅಂತೆಯೇ, ಮಹಮ್ಮದೀಯ ಸಂಪ್ರದಾಯಂತೆ ಮದುವೆ ರದ್ದುಗೊಳಿಸಿಕೊಳ್ಳಲು 2021ರ ಏಪ್ರಿಲ್ 3ರಂದು ಮಾಡಿಕೊಂಡಿದ್ದ ಮುಬಾರತ್ ಡೀಡ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಆದರೆ, ಕೌಟುಂಬಿಕ ನ್ಯಾಯಾಲಯ, ‘ಮುಸ್ಲಿಂ ವಿವಾಹ ರದ್ದತಿ ಕಾಯ್ದೆ-1937ರ ಪ್ರಕಾರ ಪರಸ್ಪರ ಸಮ್ಮತಿಯ ಮೇರೆಗೆ ಮಹಮ್ಮದೀಯ ಮದುವೆಯನ್ನು ರದ್ದು ಮಾಡಲು ಅವಕಾಶವಿಲ್ಲ’ ಎಂದು ಮುಬಾರತ್ ಅನ್ನು ಮಾನ್ಯ ಮಾಡದೆ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ದಂಪತಿ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಬಿಎಂಟಿಸಿ ಬಸ್ಸಿನ ಅಡಿಯಲ್ಲಿ ಅವಿತಿದ್ದ ವನ್ಯಜೀವಿ

ಅಪಘಾತ: ಚಿರತೆ ಮರಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಅರಸುತ್ತಾ ನಗರಕ್ಕೆ ಬಂದ ಏಳೆಂಟು ತಿಂಗಳ ವಯೋಮಾನದ ಹೆಣ್ಣು ಚಿರತೆ ಮರಿಯೊಂದನ್ನು ಪೀಪಲ್ ಫಾರ್ ಅನಿಮಲ್(ಪಿಎಫ್‌ಎ) ತಂಡ ರಕ್ಷಿಸಿದೆ.

ಚಿರತೆ ಮರಿ, ತುರಹಳ್ಳಿ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿರುವ ಮುಖ್ಯ ರಸ್ತೆಯನ್ನು ದಾಟುವ ಅವಸರದಲ್ಲಿದ್ದಾಗ ವಾಹನವೊಂದಕ್ಕೆ ಡಿಕ್ಕಿ ಹೊಡೆಯಿತು. ಚಿರತೆ ಕಂಡು ವಾಹನದ ವೇಗ ಕಡಿಮೆ ಮಾಡಿದ್ದರಿಂದ ಅದಕ್ಕೆ ಅಷ್ಟಾಗಿ ಪೆಟ್ಟು ಬಿದ್ದಿರಲಿಲ್ಲ. ಈ ವೇಳೆ ಸ್ಥಳದಲ್ಲಿ ಸಾರ್ವಜನಿಕರು ಒಮ್ಮೆಲೇ ಜಮಾಯಿಸಿದ್ದರಿಂದ ಗಾಬರಿಗೊಂಡ ಚಿರತೆ ಮರಿ, ರಸ್ತೆಯಲ್ಲಿದ್ದ ಬಿಎಂಟಿಸಿ ಬಸ್‌ನ ಅಡಿಯಲ್ಲಿ ಅಡಗಿ ಕುಳಿತುಬಿಟ್ಟಿತ್ತು.

ಈ ಬಗ್ಗೆ ಮಾಹಿತಿ ಪಡೆದ ಮುಖ್ಯ ವನ್ಯಜೀವಿ ಪಶುವೈದ್ಯ ಕರ್ನಲ್ ಡಾ. ನವಾಜ್ ಷರೀಫ್ ನೇತೃತ್ವದ ಪಿಎಫ್‌ಎ ಕೇಂದ್ರದ ಸದಸ್ಯರು ಸ್ಥಳಕ್ಕೆ ಧಾವಿಸಿ ಬಂದು, ಯಾವುದೇ ಅರಿವಳಿಕೆ ನೀಡದೇ ಚಿರತೆ ಮರಿಯನ್ನು ಸೆರೆ ಹಿಡಿದರು. ಬಳಿಕ ಸಮೀಪದಲ್ಲೇ ಇದ್ದ ಪಿಎಫ್‌ಎ ವನ್ಯಜೀವಿ ಆಸ್ಪತ್ರೆಗೆ ಒಯ್ದು ಚಿಕಿತ್ಸೆ ನೀಡಲಾಯಿತು. ಪಶುವೈದ್ಯ ಡಾ.ಮಾಧವ್ ಎಚ್.ವಿ., ರಕ್ಷಣಾ ಸಂಯೋಜಕ ಸಲ್ಮಾನ್ ಖಾನ್, ರಕ್ಷಕ ಭರತ್, ಕ್ಯುರೇಟರ್ ರಾಹುಲ್ ಜೆ., ಪುನರ್ವಸತಿ ಕಲ್ಪಿಸುವ ವಸಂತ ಆರ್. ರಕ್ಷಣಾ ತಂಡದಲ್ಲಿದ್ದರು.

ಚಿರತೆ ಮರಿ 9.5 ಕೆ.ಜಿ ತೂಕವಿತ್ತು. ತೂಕದ ಆಧಾರದಲ್ಲಿ ಮರಿಗೆ 7 ರಿಂದ 8 ತಿಂಗಳ ವಯಸ್ಸಾಗಿದೆ ಎಂದು ಅಂದಾಜಿಸಲಾಗಿದೆ. ಚಿರತೆಯ ಬಗ್ಗೆ ಮಾಹಿತಿ ಪಡೆಯಲು, ಯೋಗಕ್ಷೇಮ ವೀಕ್ಷಿಸಲು ಎಸಿಎಫ್ ಸುರೇಶ್ ಮತ್ತು ಅಧಿಕಾರಿಗಳು ಪಿಎಫ್‌ಎ ಕೇಂದ್ರಕ್ಕೆ ಭೇಟಿ ನೀಡಿದರು.

‘ಚಿರತೆ ಮರಿಗೆ ಯಾವುದೇ ಗಾಯಗಳಾಗಿಲ್ಲ. ಪಿಎಫ್‌ಎ ನಿಗಾದಲ್ಲಿದ್ದು, ಚೇತರಿಸಿಕೊಳ್ಳುತ್ತಿದೆ. ಪೂರ್ಣ ಚೇತರಿಸಿಕೊಂಡ ಬಳಿಕ ಬನ್ನೇರುಘಟ್ಟ ಅಥವಾ ಬೇರೆ ಯಾವುದಾದರೂ ಕಾಡಿಗೆ ಒಯ್ದು ಬಿಡಲಾಗುವುದು’ ಎಂದು ಬೆಂಗಳೂರು ನಗರ ಡಿಸಿಎಫ್ ರವೀಂದ್ರ ಕುಮಾರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.



ಬೆಂಗಳೂರು ನಗರದ ತುರಹಳ್ಳಿ ಅರಣ್ಯ ಪ್ರದೇಶ ಸಮೀಪದ ಮುಖ್ಯರಸ್ತೆಯಲ್ಲಿ ಸೆರೆ ಹಿಡಿದ ಚಿರತೆ ಮರಿಗೆ ಪಿಎಫ್‌ಎ ವನ್ಯಜೀವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು

‘ಕೆಫೆ’ ಸ್ಫೋಟ: ಕಸ್ಟಡಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿ ರಾಮೇಶ್ವರಂ ಕೆಫೆ’ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದ ಶಂಕಿತ ಮುಜಾಮಿಲ್ ಷರೀಫ್‌ನ ಎನ್‌ಐಎ ಕಸ್ಟಡಿ ಅಂತ್ಯವಾಗಿದ್ದು, ಬುಧವಾರ ಆತನನ್ನು ಎನ್‌ಐಎ ವಿಶೇಷ ಕೋರ್ಟ್‌ಗೆ ಹಾಜರು ಪಡಿಸಲಾಯಿತು.

ಶಂಕಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದರು.

ತಲೆ ಮರೆಸಿಕೊಂಡಿರುವ ಶಂಕಿತರಾದ ಮುಸಾವೀರ್ ಹುಸೇನ್ ಶಬೀಬ್ ಹಾಗೂ ಅಬ್ದುಲ್ ಮತೀನ್ ತಾಹಾನ ಸೂಚನೆ ಮೇರೆಗೆ ಬಾಂಬ್ ತಯಾರಿಸಲು ಷರೀಫ್ ಕಚ್ಚಾ ಸಾಮಗ್ರಿ ಪೂರೈಸುತ್ತಿದ್ದ ಎಂಬ ಆರೋಪದ ಮೇಲೆ ಬಂಧಿಸಲಾಗಿತ್ತು.

ಈ ಹಿಂದೆ ನಡೆದ ಶಿವಮೊಗ್ಗ ಜಿಲ್ಲೆಯಲ್ಲಿ ಸ್ಫೋಟದ ಪ್ರಯೋಗ ಹಾಗೂ ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲೂ ಈತ ಸಹಕಾರ ನೀಡಿದ್ದ. ಈ ಸಹಾಯಕ್ಕಾಗಿ ತಲೆ ಮರೆಸಿಕೊಂಡಿರುವ ಶಂಕಿತರಿಂದ ಹಣ ಪಡೆದುಕೊಂಡಿದ್ದ. ಅದಕ್ಕೆ ಪೂರಕ ಸಾಕ್ಷ್ಯಾಧಾರಗಳು ದೊರೆತಿವೆ ಎಂದು ಮೂಲಗಳು ತಿಳಿಸಿವೆ.

ಪಡಿತರ ಕಿಟ್: ದಂಪತಿಯ ಸುಲಿಗೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆ ಬದಿ ನಿಂತಿದ್ದ ವೃದ್ಧ ದಂಪತಿಗೆ ರಂಜಾನ್ ಹಬ್ಬದ ಅಂಗವಾಗಿ ಪಡಿತರ ಕಿಟ್ ಕೊಡಿಸುವುದಾಗಿ ನಂಬಿಸಿ, ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುರಪ್ಪನಪಾಳ್ಯ ನಿವಾಸಿ ಅಬ್ದುಲ್ (43) ಬಂಧಿತ ಆರೋಪಿ. ಈತ ಎರಡು ದಿನಗಳ ಹಿಂದಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದ.

ಅಖಿಲಾ ಹಾಗೂ ರಶೀದ್ ದಂಪತಿಗೆ ಕಿಟ್ ಕೊಡಿಸುವುದಾಗಿ ಕರೆದೊಯ್ದಿದ್ದ ಆರೋಪಿ, ₹9 ಸಾವಿರ ನಗದು ಮತ್ತು 21 ಗ್ರಾಂ ಚಿನ್ನಾಭರಣ ಸುಲಿಗೆ ಮಾಡಿದ್ದ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ 21 ಗ್ರಾಂ ಚಿನ್ನಾಭರಣ ಮತ್ತು ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಮಾರ್ಚ್ 26ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ದಂಪತಿ ಆನೆಪಾಳ್ಯದ 4ನೇ ಕ್ರಾಸ್ ಬಳಿ ರಸ್ತೆಬದಿ ನಿಂತಿದ್ದರು. ಆಗ ಬೈಕ್‌ನಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿ, ವೃದ್ಧ ದಂಪತಿಗೆ ಕಿಟ್ ಆಮಿಷವೊಡ್ಡಿದ್ದ. ಅದಕ್ಕೆ ಒಪ್ಪಿದ್ದ ರಶೀದ್ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೊಸೂರು ಮುಖ್ಯರಸ್ತೆಯ ಆನೇಪಾಳ್ಯ ಮೋರಿಯ ಬಳಿ ಇಳಿಸಿದ್ದ. ಬಳಿಕ ಚಾಕು ತೋರಿಸಿ ₹5 ಸಾವಿರ ನಗದು ಕಸಿದುಕೊಂಡಿದ್ದ. ಆ ನಂತರ ಅಖಿಲಾ ಬಳಿ ಬಂದು ‘ನಿಮ್ಮ ಪತಿಯಿಂದ ಕಿಟ್ ತರಲು ಸಾಧ್ಯವಾಗುತ್ತಿಲ್ಲ. ಅವರನ್ನು ಅಲ್ಲಿಯೇ ಬಿಟ್ಟು ಬಂದಿದ್ದೇನೆ’ ಎಂದು ತನ್ನ ಬೈಕ್‌ನಲ್ಲಿ ಅವರನ್ನೂ ಕರೆದೊಯ್ದಿದ್ದ. ಬನ್ನೇರುಘಟ್ಟ ರಸ್ತೆಯ ಸುಬ್ಬಣ್ಣ ಗಾರ್ಡನ್ ಬಳಿ ಇಳಿಸಿ, ಅವರಿಗೂ ಮಾರಕಾಸ್ತ್ರ ತೋರಿಸಿ ಬೆದರಿಸಿ 14 ಗ್ರಾಂ ತೂಕದ ಚಿನ್ನದ ಸರ, 7 ಗ್ರಾಂ ತೂಕದ ಕಿವಿಯೋಲೆ, ₹4 ಸಾವಿರ ನಗದು ಕಿತ್ತುಕೊಂಡು ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ಆರೋಪಿ ಅಬ್ದುಲ್ ಗುಜರಿ ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ವೃದ್ಧರನ್ನೇ ಗುರಿಯಾಗಿಸಿ ಹಬ್ಬಗಳ ಸಂದರ್ಭದಲ್ಲಿ ರೇಷನ್ ಕಿಟ್ ಕೊಡಿಸುತ್ತೇನೆ. ಇತರೆ ಸೌಲಭ್ಯ ನೀಡುತ್ತೇನೆ ಎಂದು ಹೇಳಿಕೊಂಡು ಕರೆದೊಯ್ದು ಸುಲಿಗೆ ನಡೆಸುತ್ತಿದ್ದ. ಈ ಸಂಬಂಧ ಈತನ ವಿರುದ್ಧ ಕುಮಾರಸ್ವಾಮಿ ಲೇಔಟ್, ಜಯನಗರ ಮತ್ತು ತಿಲಕ್‌ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದವು. ಸುಲಿಗೆ ಪ್ರಕರಣದಲ್ಲಿ ತಿಲಕ್‌ನಗರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಮಾರ್ಚ್ 24ರಂದು ಜೈಲಿನಿಂದ ಬಿಡುಗಡೆಯಾಗಿದ್ದ ಆರೋಪಿ, ಎರಡು ದಿನಗಳ ಬಳಿಕ ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ್ದಾನೆ ಎಂದು ಮೂಲಗಳು ಹೇಳಿವೆ.

ನಗದು ಕದ್ದು ಪರಾರಿಯಾದ ಸೆಕ್ಯೂರಿಟಿ ಗಾರ್ಡ್!

ಪ್ರಜಾವಾಣಿ ವಾರ್ತೆ

ಆನೇಕಲ್: ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬಂದಿದ್ದ ನೇಪಾಳ ಮೂಲದ ವ್ಯಕ್ತಿಯೊಬ್ಬ ತನ್ನ ಮೂರು ಮಂದಿ ಸಹಚರರೊಂದಿಗೆ ಕೆಲಸ ಮಾಡುತ್ತಿದ್ದ ಮನೆಯ ಮಾಲೀಕನ ಕೈ ಕಾಲು ಕಟ್ಟಿಹಾಕಿ ನಗದು ಹಾಗೂ ಚಿನ್ನಾಭರಣ ದೋಚಿರುವ ಘಟನೆ ತಾಲ್ಲೂಕಿನ ಸರ್ಜಾಪುರದ ರಾಮರೆಡ್ಡಿ ಕಾಂಪ್ಲೆಕ್ಸ್‌ನಲ್ಲಿ ಬುಧವಾರ ಬೆಳಗಿನ ಜಾವ ನಡೆದಿದೆ.

ಮನೆಯ ಲಾಕರ್‌ನಲ್ಲಿದ್ದ ₹ 30 ಲಕ್ಷ ನಗದು ಮತ್ತು ₹ 12 ಲಕ್ಷ ಬೆಲೆ ಬಾಳುವ 250 ಗ್ರಾಂ ಚಿನ್ನಾಭರಣಗಳನ್ನು ದೋಚಲಾಗಿದೆ.

ಬಿ.ಆರ್. ಮಧುಸೂದನ್ ರೆಡ್ಡಿ ಎಂಬುವವರ ಮನೆಯಲ್ಲಿ ಈ ಘಟನೆ ನಡೆದಿದೆ. ಮಧುಸೂದನ್ ಅವರ ಮಗ ಮತ್ತು ಪತ್ನಿ ಕೂಡ್ಲುನಲ್ಲಿರುವ ಮನೆಗೆ ಹೋಗಿದ್ದರು. ಸರ್ಜಾಪುರದ ಮನೆಯಲ್ಲಿ ಮಧುಸೂದನ್ ಒಬ್ಬರೇ ವಾಸವಾಗಿದ್ದರು. ಅವರು ಒಬ್ಬರೇ ಇರುವುದನ್ನು ಗಮನಿಸಿದ್ದ ನೇಪಾಳ ಮೂಲದ ಸೆಕ್ಯೂರಿಟಿ ಗಾರ್ಡ್ ರೋಷನ್ ತನ್ನ ಮೂರು ಮಂದಿ ಸಹಚರರೊಂದಿಗೆ ಸಂಚು ಹೂಡಿ ಈ ಕೃತ್ಯ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ರೋಷನ್ ಮತ್ತು ಆತನ ಹೆಂಡತಿ ಕಾಂಪ್ಲೆಕ್ಸ್‌ನಲ್ಲಿ ಲೇಬರ್ ಶೆಡ್‌ನಲ್ಲಿ ವಾಸವಾಗಿದ್ದರು. ಮನೆಯ ಸಂಪ್ ಸ್ವಚ್ಛಗೊಳಿಸಲು ರೋಷನ್ ಸೋಮವಾರ ಪರಿಚಯದ ವ್ಯಕ್ತಿಯೊಬ್ಬರನ್ನು ಕರೆಯಿಸಿದ್ದರು. ಸಂಪ್ ಸ್ವಚ್ಛಗೊಳಿಸಿದ ನಂತರ ಮಂಗಳವಾರ ರಾತ್ರಿ ಸಂಪ್ ಕ್ಲೀನ್ ಮಾಡಿದ್ದ ವ್ಯಕ್ತಿ, ರೋಷನ್ ಮತ್ತು ಇತರೆ ಇಬ್ಬರು ಮನೆಯ ಮಹಡಿಯ ಬಾಗಿಲ ಶೀಟ್ ಅನ್ನು ಕತ್ತರಿಸಿ ಒಳನುಗ್ಗಿ ಒಂಟಿಯಾಗಿದ್ದ ಮನೆಯ ಮಾಲೀಕ ಮಧೂಸೂದನ್ ರೆಡ್ಡಿ ಅವರ ಕೈಕಾಲು ಕಟ್ಟಿಹಾಕಿ ನಗದು ಮತ್ತು ಚಿನ್ನವನ್ನು ದೋಚಿದ್ದಾರೆ.

ಘಟನಾ ಸ್ಥಳಕ್ಕೆ ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಮುಂದಿನ ತನಿಖೆ ಕೈಗೊಳ್ಳಲಾಗಿದೆ ಎಂದು ಇನ್‌ಸ್ಪೆಕ್ಟರ್ ನವೀನ್ ಅವರು ತಿಳಿಸಿದರು.

ಕ್ಲರ್ಕ್ ಹುದ್ದೆ: ನೇಮಕಾತಿ ಪರೀಕ್ಷೆ ಬರೆದಿದ್ದ ನಕಲಿ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಿಲಿಟರಿ ಸ್ಕೂಲ್ ಕ್ಯಾಂಪಸ್‌ನಲ್ಲಿ ಡಿವಿಷನ್ ಕ್ಲರ್ಕ್ ಹುದ್ದೆಗೆ ನಡೆದಿದ್ದ ಪರೀಕ್ಷೆಯಲ್ಲಿ ನಕಲಿ ಅಭ್ಯರ್ಥಿಗಳನ್ನು ಕಳುಹಿಸಿದ್ದ ಇಬ್ಬರು ಅಸಲಿ ಅಭ್ಯರ್ಥಿಗಳನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹರಿಯಾಣದ ಅತೀಶ್ (19) ಮತ್ತು ಅಜಯ್ ಕುಮಾರ್(21) ಬಂಧಿತರು.

ಮಾರ್ಚ್ 24ರಂದು ಕ್ಯಾಂಪಸ್‌ನಲ್ಲಿ ಪರೀಕ್ಷೆ ನಡೆದಿತ್ತು. ಆ ಪರೀಕ್ಷೆಗೆ ಆರೋಪಿಗಳು, ನಕಲಿ ಅಭ್ಯರ್ಥಿಗಳನ್ನು ಕಳುಹಿಸಿದ್ದರು ಎಂದು ಮೂಲಗಳು ಹೇಳಿವೆ. ‘ಶಾಲೆಯ ಅಧಿಕಾರಿ ಸುಮಿತ್ ಧಿಮನ್ ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ.’

ಕ್ಲರ್ಕ್ ಹುದ್ದೆಗೆ ಮಾರ್ಚ್ 9ರಂದು ನೋಟಿಫಿಕೇಷನ್ ಹೊರಡಿಸಲಾಗಿತ್ತು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದ ಆರೋಪಿಗಳು, ಡಿ.ಡಿ ಮೂಲಕ ಹಣ ಪಾವತಿಸಿದ್ದರು. ಆದರೆ, ಮಾರ್ಚ್ 24ರಂದು ನಡೆದಿದ್ದ ಲಿಖಿತ ಪರೀಕ್ಷೆಗೆ ಆರೋಪಿಗಳ ಪರವಾಗಿ ಇಬ್ಬರು ನಕಲಿ ಅಭ್ಯರ್ಥಿಗಳು ಹಾಜರಾಗಿದ್ದರು. ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಬೆರಳಚ್ಚು ಮತ್ತು ಆಧಾರ್ ಕಾರ್ಡ್ ನಕಲು ಪಡೆದುಕೊಳ್ಳಲಾಗಿತ್ತು. ನಂತರ, ನಡೆದ ಕೌಶಲ ಪರೀಕ್ಷೆಗೆ ಅಸಲಿ ಅಭ್ಯರ್ಥಿಗಳೇ ಹಾಜರಾಗಿದ್ದರು. ಆಗ ಅವರ ಬೆರಳಚ್ಚು ಮತ್ತು ಆಧಾರ್‌ಕಾರ್ಡ್ ಹೆಸರು, ಫೋಟೊ ಪರಿಶೀಲನೆ ನಡೆಸಲಾಯಿತು. ದಾಖಲೆಗಳು ಹೊಂದಾಣಿಕೆ ಆಗಿರಲಿಲ್ಲ. ಆಗ ವಂಚನೆ ನಡೆಸಿರುವುದು ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ. ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಕಿಗೆ ಆಹುತಿಯಾದ ಬೈಕ್‌ಗಳನ್ನು ಜನರು ವೀಕ್ಷಿಸಿದರು.

ಬೆಂಕಿ: ನಾಲ್ಕು ಬೈಕ್ ಭಸ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಾರಕ್ಕಿಯ ಚಾಮುಂಡಿಪುರದಲ್ಲಿ ಮನೆ ಎದುರು ನಿಲ್ಲಿಸಿದ್ದ ನಾಲ್ಕು ಬೈಕ್‌ಗಳು ಮಂಗಳವಾರ ರಾತ್ರಿ ಬೆಂಕಿಗೆ ಆಹುತಿಯಾಗಿವೆ.

ರಾತ್ರಿ ಕೆಲಸ ಮುಗಿಸಿಕೊಂಡು ಬಂದ ವಿಜಯ್ ಸೇರಿದಂತೆ ನಾಲ್ವರು ಅಕ್ಕಪಕ್ಕದಲ್ಲಿ ಬೈಕ್‌ಗಳನ್ನು ನಿಲ್ಲಿಸಿದ್ದರು. ಹೊಗೆಯಿಂದ ಎರಡು ಗಿಳಿಗಳು ಸಹ ಮೃತಪಟ್ಟಿವೆ.

‘ರಾತ್ರಿ ಏಕಾಏಕಿ ಬೆಂಕಿ ಹೊತ್ತಿ ಉರಿಯುತ್ತಿರುವುದನ್ನು ಗಮನಿಸಿ ಹೊರಗೆ ಬಂದು ನೋಡಿದಾಗ ಬೈಕ್‌ಗೆ ಬೆಂಕಿ ಹಚ್ಚಿರುವುದು ತಿಳಿಯಿತು. ಇನ್ನೂ ಕೆಲವು ಬೈಕ್‌ಗಳು ಪಕ್ಕದಲ್ಲಿದ್ದವು. ಅವುಗಳನ್ನು ತಕ್ಷಣವೇ ಬೇರೆಡೆ ಸ್ಥಳಾಂತರ ಮಾಡಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿತು. ಮನೆಯೊಂದರ ಕಿಟಕಿ ತೆರೆದಿದ್ದರಿಂದ ಬೆಂಕಿ ರಭಸಕ್ಕೆ ಮನೆಯಲ್ಲಿದ್ದ ಟೈಲರಿಂಗ್ ಮಷಿನ್ ಹಾಗೂ ಬಟ್ಟೆಗಳಿಗೂ ಹಾನಿಯಾಗಿದೆ’ ಎಂದು ಬೈಕ್ ಮಾಲೀಕರು ತಿಳಿಸಿದ್ದಾರೆ.

‘ಬೈಕ್ ನಿಲುಗಡೆ ಮಾಡಿದ್ದ ಸುತ್ತಮುತ್ತ ಸಿಸಿಟಿವಿ ಕ್ಯಾಮೆರಾ ಇಲ್ಲ. ಕೃತ್ಯ ಎಸಗಿದವರು ಯಾರು ಎಂದು ಈಗಲೇ ಹೇಳಲು ಸಾಧ್ಯವಾಗುತ್ತಿಲ್ಲ. ಆ ಸ್ಥಳದಲ್ಲಿ ಬೈಕ್ ನಿಲುಗಡೆ ಮಾಡಿದ್ದ ಮಾಲೀಕರ ನಡುವೆ ವೈಮನಸ್ಸು ಇತ್ತೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ರಾತ್ರಿ 12 ಗಂಟೆ ಸುಮಾರಿಗೆ ಕೊನೆಯ ಬೈಕ್ ನಿಲ್ಲಿಸಲಾಗಿತ್ತು. ಬೇಸಿಗೆ ಕಾರಣಕ್ಕೆ ಏನಾದರೂ ಕಿಡಿ (ಸ್ಪಾರ್ಕ್) ಉಂಟಾಗಿ ಬೆಂಕಿ ಹೊತ್ತಿರಬಹುದೇ ಅಥವಾ ಇದು ಕಿಡಿಗೇಡಿಗಳ ಕೃತ್ಯವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಏಳು ಸಾವಿರ ಲೀಟರ್ ಮದ್ಯ ವಶ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಸಾಗಣೆ ಮಾಡಲಾಗುತ್ತಿದ್ದ, ₹47.51 ಲಕ್ಷ ಮೌಲ್ಯದ 7,463 ಲೀಟರ್ ಮದ್ಯವನ್ನು ಚೆಕ್‌ಪೋಸ್ಟ್ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

₹90 ಸಾವಿರ ಮೌಲ್ಯದ ಮಾದಕವಸ್ತು, ₹60 ಸಾವಿರ ಮೌಲ್ಯದ ಉಡುಗೊರೆಗಳು ಸೇರಿದಂತೆ ₹53 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪೊಲೀಸ್ ಠಾಣೆಯಲ್ಲಿ ನಾಲ್ಕು ಹಾಗೂ ಅಬಕಾರಿ ಇಲಾಖೆಯಲ್ಲಿ 75 ಸೇರಿದಂತೆ ಒಟ್ಟು 79 ಎಫ್‌ಐಆರ್ ದಾಖಲಿಸಲಾಗಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ವಿಶೇಷ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಸ್‌ಆರ್‌ಪಿ: ಪ್ರಮುಖ ನಗರಗಳಿಗೆ ವಿಸ್ತರಿಸುವ ಪ್ರಸ್ತಾವ ನಿರಾಕರಿಸಿದ್ದ ನೈರುತ್ಯ ರೈಲ್ವೆ

ಅಧ್ಯಯನ: ಮರು ಪರಿಶೀಲನೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯನ್ನು (ಬಿಎಸ್‌ಆರ್‌ಪಿ) ಮೈಸೂರು ಸೇರಿದಂತೆ ಸಮೀಪದ ನಗರಗಳಿಗೆ ವಿಸ್ತರಿಸಲು ಕಾರ್ಯ ಸಾಧ್ಯತಾ ಅಧ್ಯಯನಕ್ಕಾಗಿ ಕರ್ನಾಟಕ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತಕ್ಕೆ(ಕೆ–ರೈಡ್) ನೈರುತ್ಯ ರೈಲ್ವೆ ಅನುಮತಿ ನಿರಾಕರಿಸಿದ್ದು, ಈ ಪ್ರಸ್ತಾವನೆಯನ್ನು ಮರುಪರಿಶೀಲಿಸುವಂತೆ ಕೋರಿ ಕೆ–ರೈಡ್ ಮತ್ತೆ ಪತ್ರ ಬರೆದಿದೆ.

ಒಟ್ಟು 452 ಕಿ.ಮೀ. ಉದ್ದಕ್ಕೆ ಬಿಎಸ್ ಆರ್‌ಪಿಯನ್ನು ವಿಸ್ತರಿಸುವುದಕ್ಕಾಗಿ ರೈಲ್ವೆ ಮಂಡಳಿಯಿಂದ ಅನುಮೋದನೆ ಪಡೆಯಲು ಕೆ–ರೈಡ್ 2023ರ ಜುಲೈನಲ್ಲಿ ಪತ್ರ ಬರೆದಿತ್ತು. 'ಕಾರ್ಯ ಸಾಧ್ಯತಾ ಅಧ್ಯಯನ ಅಗತ್ಯವಿಲ್ಲ' ಎಂದು ನೈರುತ್ಯ ರೈಲ್ವೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಈ ಪತ್ರಕ್ಕೆ ನವೆಂಬರ್‌ನಲ್ಲಿ ಉತ್ತರ ಬರೆದಿದ್ದರು. ಈ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಕೆ–ರೈಡ್ ಕೋರಿದೆ.

ಉಪನಗರ ರೈಲು

ಯೋಜನೆ ಏನು?: ಬಿಎಸ್ ಆರ್‌ಪಿ ಅಡಿ ಕೆಎಸ್‌ಆರ್ ಬೆಂಗಳೂರು–ದೇವನಹಳ್ಳಿ, ಬೈಯಪ್ಪನಹಳ್ಳಿ–ಚಿಕ್ಕಬಾಣಾವರ, ಕೆಂಗೇರಿ–ವೈಟ್‌ಫೀಲ್ಡ್, ಹೀಲಲಿಗೆ–ರಾಜಾನುಕುಂಟೆ, ಒಟ್ಟು 148.17 ಕಿ.ಮೀ. ಹೊಂದಿರುವ ನಾಲ್ಕು ಕಾರಿಡಾರ್‌ಗಳು ನಿರ್ಮಾಣಗೊಳ್ಳುತ್ತಿವೆ. ದೇವನಹಳ್ಳಿಯಿಂದ ಕೋಲಾರ, ಚಿಕ್ಕ ಬಾಣಾವರದಿಂದ ತುಮಕೂರು ಮತ್ತು ಮಾಗಡಿ, ಕೆಂಗೇರಿಯಿಂದ ಮೈಸೂರು, ವೈಟ್‌ಫೀಲ್ಡ್‌ನಿಂದ ಬಂಗಾರಪೇಟೆ, ಹೀಲಲಿಗೆಯಿಂದ ಹೊಸೂರು ಹಾಗೂ ರಾಜಾನುಕುಂಟೆಯಿಂದ ದೊಡ್ಡಬಳ್ಳಾಪುರಕ್ಕೆ ವಿಸ್ತರಿಸುವ ಯೋಜನೆ ಇದಾಗಿದೆ. ಯೋಜನೆ ಜಾರಿಗಾಗಿ ಕಾರ್ಯಸಾಧ್ಯತಾ ಅಧ್ಯಯನ ನಡೆಸಲು ಕೆ- ರೈಡ್ ಸಿದ್ಧವಿದೆ ಎಂದು ಮೊದಲು ಬರೆದ ಪತ್ರದಲ್ಲಿ ತಿಳಿಸಲಾಗಿತ್ತು.

ಬೆಂಗಳೂರು–ಜೋಲಾರ್‌ಪೇಟೆ, ಬೆಂಗಳೂರು–ಧರ್ಮಾವರಂ, ಬೆಂಗಳೂರು–ತುಮಕೂರು ಮಾರ್ಗಗಳಲ್ಲಿ ಗಂಟೆಗೆ 130/160 ಕಿ.ಮೀ. ವೇಗದಲ್ಲಿ ಚಲಿಸುವ ರೈಲುಗಳು ಸಂಚರಿಸಲಿವೆ. ಸ್ವಯಂಚಾಲಿತ ಬ್ಲಾಕ್ ಸಿಗ್ನಲಿಂಗ್ ಒದಗಿಸಲಾಗುತ್ತಿದೆ. ಪ್ರಮುಖ ಕಾರಿಡಾರ್‌ಗಳಲ್ಲಿ ದ್ವಿಪಥ, ಚತುಷ್ಪಥ ಕೆಲಸಗಳಾಗುತ್ತಿವೆ. ನಿಡವಂದ–ದೊಡ್ಡಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲದ ಸಮೀಕ್ಷೆಯನ್ನು ಇತ್ತೀಚೆಗೆ ರೈಲ್ವೆ ಮಂಡಳಿಯು ಮಂಜೂರು ಮಾಡಿದೆ. ಹೀಗೆ ಸ್ಯಾಟಲೈಟ್ ನಗರಗಳಿಗೆ ರೈಲು ಸೇವೆ ವಿಸ್ತರಿಸಲು ಹಲವು ಯೋಜನೆಗಳನ್ನು ಹಾಕಿಕೊಂಡಿರುವುದರಿಂದ ಬಿಎಸ್‌ಆರ್‌ಪಿ ವಿಸ್ತರಣೆಯ ಅಗತ್ಯ ಕಾಣುತ್ತಿಲ್ಲ ಎಂದು ನೈರುತ್ಯ ರೈಲ್ವೆ ಪ್ರತಿ ಪತ್ರ ಬರೆದು ತಿಳಿಸಿತ್ತು.

ಬೆಂಗಳೂರು ಸುತ್ತಲಿನ ನಗರಗಳಿಗೆ ಉಪನಗರ ಯೋಜನೆ ವಿಸ್ತರಿಸಿದಾಗ ಪ್ರತಿ ಊರಿನಲ್ಲಿ ನಿಲ್ದಾಣಗಳಿರುತ್ತವೆ. ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತದೆ. ಈಗಿರುವ ರೈಲು ಯೋಜನೆಗಳಿಗಿಂತ ಭಿನ್ನವಾಗಿರುತ್ತದೆ. ಜನದಟ್ಟಣೆಯನ್ನು ಕಡಿಮೆ ಮಾಡಲಿದೆ ಎಂದು ಕೆ–ರೈಡ್ ಈಗ ಮರು ಪರಿಶೀಲಿಸಲು ಬರೆದ ಪತ್ರದಲ್ಲಿ ವಿವರಣೆ ನೀಡಿದೆ.

ನಿಡವಂದ–ದೊಡ್ಡಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲ ನಿರ್ಮಿಸುವ ಯೋಜನೆಯನ್ನು ರೈಲ್ವೆ ಬೋರ್ಡ್ ಹೊಂದಿದೆ. ಈ ಜಾಲವನ್ನು ಬಿಎಸ್‌ಆರ್‌ಪಿ ಪ್ರಸ್ತಾವಿತ ಯೋಜನೆ ಹಾದು ಹೋಗುವುದರಿಂದ ಇನ್ನಷ್ಟು ಅನುಕೂಲ ಆಗುವುದನ್ನು ಪತ್ರದಲ್ಲಿ ವಿವರಿಸಲಾಗಿದೆ ಎಂದು ಕೆ–ರೈಡ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರಾಮೋಜಿ: ಉಚಿತ ಚಿತ್ರ ನಿರ್ಮಾಣ ಕೋರ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈದರಾಬಾದ್‌ನ ರಾಮೋಜಿ ಗ್ರೂಪ್ 'ರಾಮೋಜಿ ಅಕಾಡೆಮಿ ಆಫ್ ಮೂವೀಸ್' ಆರಂಭಿಸಿದ್ದು, ಇದರ ಮೂಲಕ ಚಿತ್ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಉಚಿತ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸುತ್ತಿದೆ. ಕಥೆ, ಚಿತ್ರಕಥೆ, ನಿರ್ದೇಶನ, ಚಿತ್ರ ನಿರ್ಮಾಣ, ಸಂಕಲನ ಮತ್ತು ಡಿಜಿಟಲ್ ಚಿತ್ರ ನಿರ್ಮಾಣದ ಕೋರ್ಸ್‌ಗಳು ಇದರಲ್ಲಿವೆ.

ಈ ಕೋರ್ಸ್‌ಗೆ ಸೇರಲು ಕನಿಷ್ಠ 15 ವರ್ಷ ವಯಸ್ಸು ಆಗಿರಬೇಕು. ಜೊತೆಗೆ ಆಯ್ದುಕೊಂಡ ಭಾಷೆಯ ಮೇಲೆ ಹಿಡಿತವಿರಬೇಕು. ಆನ್‌ಮೈಲ್ ಮೂಲಕ ಸೇಫ್ ಎಕ್ಸಾಮ್ ಬ್ರೌಸರ್(ಎಸ್‌ಇಬಿ) ಯಲ್ಲಿ ಕೋರ್ಸ್‌ಗಳು ನಡೆಯಲಿದ್ದು, ಕನ್ನಡದ ಜೊತೆಗೆ ಹಿಂದಿ, ಮರಾಠಿ, ತೆಲುಗು, ಮಲಯಾಳಂ, ತಮಿಳು, ಬಂಗಾಳಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲೂ ಕೋರ್ಸ್‌ಗಳು ಲಭ್ಯವಿವೆ. ಹೆಚ್ಚಿನ ಮಾಹಿತಿಗೆ www.ramojiacademy.com ಗೆ ಲಾಗ್‌ಇನ್ ಆಗಿ.

750 ಪಡಿತರ ವಿತರಕರಿಗೆ ಪಾವತಿಯಾಗದ ಕಮಿಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ವರ್ಷಾಂತ್ಯಕ್ಕೂ ಮೊದಲೇ ಅಧಿಕಾರಿಗಳು ಖಜಾನೆಗೆ ಬಿಲ್ ಸಲ್ಲಿಸದ ಕಾರಣದಿಂದ ಬೆಂಗಳೂರು ನಗರದ ಅನೌಪಚಾರಿಕ ಪಡಿತರ ವಲಯದ (ಐಆರ್‌ಎ) 750 ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಎರಡು ತಿಂಗಳ ಕಮಿಷನ್ ಪಾವತಿಯಾಗಿಲ್ಲ. ಇದಕ್ಕಾಗಿ ಬಿಡುಗಡೆಯಾಗಿದ್ದ ಅನುದಾನವೂ ಸರ್ಕಾರದ ಖಜಾನೆಗೆ ವಾಪಸ್ ಹೋಗಿದೆ.

ಮಾರ್ಚ್ 31ಕ್ಕೆ ಆರ್ಥಿಕ ವರ್ಷ ಕೊನೆಗೊಳ್ಳಲಿದ್ದ ಕಾರಣದಿಂದ ಮುಂಚಿತವಾಗಿ ಬಿಲ್ ಸಲ್ಲಿಸಬೇಕಿತ್ತು. ಮಾರ್ಚ್ 18ಕ್ಕೆ ಎಲ್ಲ ನ್ಯಾಯಬೆಲೆ ಅಂಗಡಿಗಳ ಕಮಿಷನ್ ಪಾವತಿಗೆ ಸಂಬಂಧಿಸಿದ ಬಿಲ್‌ಗಳನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಚೇರಿಗೆ ಸಲ್ಲಿಸಲಾಗಿತ್ತು. ಮಾರ್ಚ್ ಕೊನೆಯ ವಾರ ಅಂತಿಮ ಕಂತಿನ ಅನುದಾನ ಬಿಡುಗಡೆ ಆಗಿತ್ತು. ಆದರೆ, ಬಿಲ್‌ಗಳಿಗೆ ಅನುಮೋದನೆ ನೀಡಿ ಖಜಾನೆಗೆ ಸಲ್ಲಿಸದೇ ಇರುವ ಕಾರಣ ಕಮಿಷನ್ ಪಾವತಿಯಾಗಿಲ್ಲ.

ಈ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಿರುವ ಬೆಂಗಳೂರು ನಗರ ಸರ್ಕಾರಿ ಪಡಿತರ ವಿತರಕರ ಹಿತರಕ್ಷಣಾ ಸಂಘ, 'ಸಕಾಲಕ್ಕೆ ಬಿಲ್ ಸಲ್ಲಿಸಿ, ಅನುದಾನ ಲಭ್ಯವಿದ್ದಾಗ್ಯೂ ಕೆಲವು ಅಧಿಕಾರಿಗಳ ಬೇಜವಾಬ್ದಾರಿತನದಿಂದ ಪಡಿತರ ವಿತರಕರಿಗೆ ಕಮಿಷನ್ ಪಾವತಿಯಾಗಿಲ್ಲ' ಎಂದು ದೂರಿದೆ.

'ಖಜಾನೆಗೆ ಬಿಲ್‌ಗಳನ್ನು ಸಲ್ಲಿಸಲು ಮಾರ್ಚ್ 27 ಮತ್ತು 28ರಂದು ಅವಕಾಶ ನೀಡಿದ್ದರೂ ಕ್ರಮ ಕೈಗೊಂಡಿಲ್ಲ. ತ್ವರಿತವಾಗಿ ಕಮಿಷನ್ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಜೂನ್ ತಿಂಗಳವರೆಗೂ ಪಡಿತರ ವಿತರಣೆ ಸ್ಥಗಿತಗೊಳಿಸಲಾಗುವುದು' ಎಂದು ಸಂಘದ ಅಧ್ಯಕ್ಷ ಜೆ.ಬಿ. ಕುಮಾರ್, ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಾದಪ್ಪ ಮತ್ತು ಖಜಾಂಚಿ ರಾಮಯ್ಯ ತಿಳಿಸಿದ್ದಾರೆ.

'ಏಪ್ರಿಲ್‌ನಲ್ಲಿ ಪಾವತಿಗೆ ಕ್ರಮ': ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಬೆಂಗಳೂರು–ಐಆರ್‌ಎ ಹೆಚ್ಚುವರಿ ನಿರ್ದೇಶಕಿ ಪ್ರಜ್ಞಾ ಅಮ್ಮೆಂಬಳ, 'ಖಜಾನೆಗೆ ಬಿಲ್ ಸಲ್ಲಿಸಲು ಗಡುವು ಮುಗಿಯುವ ಹಿಂದಿನ ದಿನ ರಾತ್ರಿ 9.20ಕ್ಕೆ ಅನುದಾನ ಬಿಡುಗಡೆ ಮಾಡಲಾಗಿತ್ತು. ಹೀಗಾಗಿ ಎಲ್ಲ ಬಿಲ್‌ಗಳನ್ನೂ ಅಪ್‌ಲೋಡ್ ಮಾಡಲು ಸಾಧ್ಯವಾಗಿಲ್ಲ' ಎಂದರು.

'ಅನುದಾನ ಮರಳಿ ಸರ್ಕಾರದ ಖಜಾನೆಗೆ ಹೋಗಿದೆ. ಏಪ್ರಿಲ್‌ನಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ 750 ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೂ ಹಿಂಬಾಕಿ ಸೇರಿಸಿ ಕಮಿಷನ್ ಪಾವತಿಸಲಾಗುವುದು' ಎಂದು ತಿಳಿಸಿದರು.

'ನ್ಯಾಯಮೂರ್ತಿಗಳಿಗೆ ಬ್ರ್ಯಾಂಡ್ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ನ್ಯಾಯಮೂರ್ತಿಯನ್ನು ಪರಿಹಾರ ಒದಗಿಸುವ ಅಥವಾ ಉದಾರವಾದಿ ನ್ಯಾಯಮೂರ್ತಿ ಎಂದು ಬಿಂಬಿಸುವುದಕ್ಕೆ ನನ್ನ ಸಹಮತ ಇಲ್ಲ' ಎಂದು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಪ್ರಭಾಕರ್ ಶಾಸ್ತ್ರಿ ಹೇಳಿದರು.

ಕೋರ್ಟ್ ಹಾಲ್ 1ರಲ್ಲಿ ಬುಧವಾರ ತಮಗೆ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಈ ಮಾತುಗಳನ್ನು ಆಡಿದರು.

'ನ್ಯಾಯಮೂರ್ತಿಗಳನ್ನು ಪರಿಹಾರ ನೀಡುವ ನ್ಯಾಯಮೂರ್ತಿ ಅಥವಾ ಪ್ರಗತಿಪರ ನ್ಯಾಯಮೂರ್ತಿ ಎಂದು ಬ್ರ್ಯಾಂಡ್ ಮಾಡಿ ಗುರುತಿಸುವುದನ್ನು ನಾನು ನೋಡಿದ್ದೇನೆ. ನನ್ನ ಪ್ರಕಾರ ನ್ಯಾಯಮೂರ್ತಿಯು ಎಲ್ಲಾ ವಿಧಗಳಲ್ಲಿಯೂ ನ್ಯಾಯಮೂರ್ತಿ ಆಗಿರಬೇಕು. ಯಾವುದೇ ಪ್ರಭಾವಕ್ಕೆ ಒಳಗಾಗಬಾರದು' ಎಂದು ಅವರು ವಿವರಿಸಿದರು.

'ನ್ಯಾಯಮೂರ್ತಿಗಳು ತಮ್ಮ ಮುಂದಿರುವ ಪ್ರಕರಣಗಳಲ್ಲಿ ಕಠಿಣವಾಗಿ ನಡೆದುಕೊಳ್ಳಬೇಕು ಎಂದು ಬಯಸಿದರೆ ಹಾಗೆಯೇ ನಡೆದುಕೊಳ್ಳಬೇಕಾಗುತ್ತದೆ. ಅಗತ್ಯ ಇರುವ ಪ್ರಕರಣಗಳಲ್ಲಿ ನ್ಯಾಯಮೂರ್ತಿಯು ಸಹಾನುಭೂತಿಯಿಂದ ಮತ್ತು ಹೂವಿನಂತೆ ಇರಬೇಕಾಗುತ್ತದೆ' ಎಂದು ಹೇಳಿದರು.

'ಪ್ರಕರಣದ ಅರ್ಹತೆಯಿಂದ ಅವರು ವಿಮುಖರಾಗಬಾರದು. ತಮಗೆ ದೊರೆತಿರುವ ವಿಶೇಷ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಎಲ್ಲಾ ಪ್ರಕರಣಗಳಲ್ಲೂ ಪ್ರಗತಿಪರ ಮನೋಭಾವದಿಂದ ನೋಡುವುದು ಅಥವಾ ಅನಗತ್ಯವಾದ ಪ್ರಕರಣದಲ್ಲಿ ವಿಶೇಷ ಅಧಿಕಾರ ಬಳಕೆ ಮಾಡುವುದು ಒಳ್ಳೆಯ ನ್ಯಾಯಮೂರ್ತಿಯ ಲಕ್ಷಣ ಅಲ್ಲ' ಎಂದು ಅವರು ಹೇಳಿದರು.

'ಈ ರೀತಿ ಮಾಡುವುದರಿಂದ ಅವರು ಜನಪ್ರಿಯ ನ್ಯಾಯಮೂರ್ತಿ ಆಗಬಹುದೇ ಹೊರತು ಉತ್ತಮ ಮತ್ತು ಗೌರವಾನ್ವಿತ ನ್ಯಾಯಮೂರ್ತಿ ಎನಿಸಿಕೊಳ್ಳಲಾರರು. ಆದ್ದರಿಂದ, ನಿಜದೃಷ್ಟಿಯಲ್ಲಿ ಉದಾರವಾದಿ ಅಥವಾ ಸಂಪ್ರದಾಯವಾದಿ ಆಗುವುದು ನ್ಯಾಯಮೂರ್ತಿಯ ದೋಷವಾಗಿದೆ' ಎಂದು ನ್ಯಾಯಮೂರ್ತಿ ಪ್ರಭಾಕರ್ ಶಾಸ್ತ್ರಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಲಂಚ: ಅಧೀಕ್ಷಕಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿರುವ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಹಕಾರ ಸಂಘದ ವ್ಯವಸ್ಥಾಪಕರ ನೇಮಕಾತಿ ಪ್ರಕ್ರಿಯೆಗೆ ಸಹಕಾರ ಇಲಾಖೆಯ ಪ್ರತಿನಿಧಿಯನ್ನು ನಿಯೋಜಿಸಲು ₹ 40,000 ಲಂಚ ಪಡೆದ ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಚೇರಿಯ ನಗರ ಸಹಕಾರ ಬ್ಯಾಂಕ್‌ಗಳ ವಿಭಾಗದ ಅಧೀಕ್ಷಕಿ ಶುಭಾ ಆರ್. ವಾಡ್ಕರ್ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ವ್ಯವಸ್ಥಾಪಕರ ನೇಮಕಾತಿ ಪ್ರಕ್ರಿಯೆ ನಡೆಸಲು ಇಲಾಖೆಯ ಪ್ರತಿನಿಧಿಯೊಬ್ಬರನ್ನು ನಿಯೋಜಿಸುವಂತೆ ಸಹಕಾರ ಸಂಘದ ಆಡಳಿತ ಮಂಡಳಿಯು ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಚೇರಿಗೆ ಪ್ರಸ್ತಾವ ಸಲ್ಲಿಸಿತ್ತು. ಕಡತವು ನಗರ ಸಹಕಾರ ಬ್ಯಾಂಕ್‌ಗಳ ವಿಭಾಗದಲ್ಲಿತ್ತು. ಪ್ರತಿನಿಧಿ ನೇಮಕಕ್ಕೆ ₹ 40,000 ಲಂಚ ನೀಡುವಂತೆ ಅಧೀಕ್ಷಕಿ ಶುಭಾ ಬೇಡಿಕೆ ಇಟ್ಟಿದ್ದರು. ಲಂಚದ ಬೇಡಿಕೆ ಕುರಿತು ಸಹಕಾರ ಸಂಘದ ಆಡಳಿತ ಮಂಡಳಿ ಪ್ರತಿನಿಧಿಗಳು ಲೋಕಾಯುಕ್ತದ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–1ಕ್ಕೆ ದೂರು ನೀಡಿದ್ದರು.

ಆರೋಪಿಯ ಸೂಚನೆಯಂತೆ ಸಹಕಾರ ಸಂಘದ ಪ್ರತಿನಿಧಿಗಳು ಬುಧವಾರ ಭೇಟಿಮಾಡಿ ಲಂಚದ ಹಣ ತಲುಪಿಸಿದರು. ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀಕಾಂತ್ ಎಸ್. ಮತ್ತು ತಂಡ ತಕ್ಷಣ ದಾಳಿಮಾಡಿ ಶುಭಾ ವಾಡ್ಕರ್ ಅವರನ್ನು ಬಂಧಿಸಿತು.

ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ–1 ಘಟಕದ ಎಸ್‌ಪಿ ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆದಿದೆ.

ಕಚೇರಿ ಸ್ಥಳಾಂತರಕ್ಕೆ ರೈತರ ವಿರೋಧ

ದಾಬಸ್‌ಪೇಟೆ: ವಿಶೇಷ ಭೂಸ್ವಾಧೀನಾಧಿಕಾರಿಗಳ ಮತ್ತು ಸಕ್ಷಮ ಪ್ರಾಧಿಕಾರ ಕಚೇರಿಯನ್ನು ಸ್ಥಳಾಂತರಿಸಲು ಬಂದ ಅಧಿಕಾರಿಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು.

'ನೆಲಮಂಗಲ ತಾಲ್ಲೂಕಿನ ಸೋಂಪುರ, ತ್ಯಾಮಗೊಂಡ್ಲು ಮತ್ತು ಕಸಬಾ ಹೋಬಳಿಯ ಹಲವು ಗ್ರಾಮಗಳ ರೈತರ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಅವರ ಅನುಕೂಲಕ್ಕಾಗಿಯೇ ದಾಬಸ್‌ಪೇಟೆ ಪಟ್ಟಣದಲ್ಲಿ ಕಚೇರಿಯನ್ನು ತೆರೆಯಲಾಗಿತ್ತು. ಆದರೆ, ಈಗ ನಮಗೆ ಮಾಹಿತಿ ನೀಡದೆ ಕಚೇರಿಯನ್ನು ಸ್ಥಳಾಂತರಿಸುತ್ತಿರುವುದು ಏಕೆ' ಎಂದು ರೈತರು ಅಧಿಕಾರಿಗಳನ್ನು ಪ್ರಶ್ನಿಸಿದರು.

ಪತ್ರಕರ್ತೆಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

'ಶಿಕ್ಷಣ ಪಡೆದರೂ ಸಶಕ್ತರಾಗದ ಮಹಿಳೆಯರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದು ಮಹಿಳೆಯರಿಗೆ ಶಿಕ್ಷಣ ದೊರೆಯುತ್ತಿದೆ. ಆದರೆ, ಬಹಳಷ್ಟು ಮಂದಿ ಸಶಕ್ತರಾಗಲು ಹಿಂಜರಿಯುತ್ತಿದ್ದಾರೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ನಾಗಾಂಬಿಕಾ ದೇವಿ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಪತ್ರಕರ್ತೆಯರ ಸಂಘ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಬುಧವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ, ಪತ್ರಕರ್ತೆಯರು, ಸಾಧಕಿಯರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅನಕ್ಷರಸ್ಥ ಹೆಣ್ಣು ಮಕ್ಕಳಿಗೆ ಇರುವ ಧೈರ್ಯ ವಿದ್ಯಾವಂತ ಹೆಣ್ಣುಮಕ್ಕಳಲ್ಲಿ ಕಾಣುತ್ತಿಲ್ಲ. ವಿದ್ಯೆಯ ಜೊತೆಗೆ ಸಶಕ್ತರಾಗುವುದನ್ನು ಕಲಿಯಬೇಕು. ಐಎಎಸ್ ಅಧಿಕಾರಿಯಾಗಲಿ, ಪತ್ರಕರ್ತರಾಗಲಿ ಕೆಲಸದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಎಂಬುದಿಲ್ಲ. ಕೆಲಸ ಮಾಡುವ ಸ್ಥಳಗಳಲ್ಲಿ ಈ ತಾರತಮ್ಯ ಏಕಿರಬೇಕು ಎಂದು ಪ್ರಶ್ನಿಸಿದರು.

ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಬೃಂದಾ ಅಡಿಗೆ ಮಾತನಾಡಿ, 'ಎಲ್ಲ ಧರ್ಮಗಳ ಅಡಿಪಾಯ, ಮನೋಧರ್ಮ, ಚಿಂತನೆ ಪುರುಷ ಪ್ರಧಾನವಾಗಿದೆ. ಜನರ

ನಗರದಲ್ಲಿ ಬುಧವಾರ 'ಕರ್ನಾಟಕ ಪತ್ರಕರ್ತೆಯರ ಸಂಘ' ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮೂಹ ಸಂವಹನ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಪ್ರಜಾವಾಣಿ' ಉಪಸಂಪಾದಕಿ ಅನಿತಾ ಎಚ್., ಚಂದ್ರಯಾನ–3 ಇಸ್ರೊ ಡೆಪ್ಯುಟಿ ಪ್ರಾಜೆಕ್ಟ್ ಡೈರೆಕ್ಟರ್ ರೂಪಾ ಎಂ.ವಿ., ನಾಗರಿಕ ಹಕ್ಕುಗಳ ಹೋರಾಟಗಾರ್ತಿ ಕಾತ್ಯಾಯಿನಿ ಚಾಮರಾಜ್ ಮತ್ತು ದೂರದರ್ಶನದ ಪತ್ರಕರ್ತೆ ಗಾಯತ್ರಿ ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು. –ಪ್ರಜಾವಾಣಿ ಚಿತ್ರ

ಯೋಚನೆ, ವರ್ತನೆ ಮತ್ತು ಭಾಷೆಯಲ್ಲಿ ಇದು ವ್ಯಕ್ತವಾಗುತ್ತಿದೆ. ಬೈಗುಳದ ಭಾಷೆ ನೋಡಿದರೂ ಸ್ತ್ರೀ ನಿಂದನೆಯ ಭಾಷೆಯನ್ನೇ ಬಳಸಲಾಗುತ್ತದೆ. ಭಾಷೆಯ ಬಳಕೆಯ ರೀತಿ ಬದಲಾಗಬೇಕು' ಎಂದು ತಿಳಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಮಾತನಾಡಿ, 'ಮಾನಸಿಕ ಸಂಕೋಲೆಯಿಂದ ಬಿಡುಗಡೆಯಾಗದೇ ಸಶಕ್ತರಾಗಲು ಸಾಧ್ಯವಿಲ್ಲ. ಇದು ಪುರುಷ ಮತ್ತು ಮಹಿಳೆ ಎರಡೂ ಕಡೆಯಿಂದ ಆಗಬೇಕು. ವೈಚಾರಿಕತೆ ಮತ್ತು ಪ್ರಜಾಸತ್ತಾತ್ಮಕ ಚಿಂತನೆಯಿಂದ ಸಮಾನತೆ ಸಾಧ್ಯ' ಎಂದರು.

ಪತ್ರಕರ್ತೆ ಗಾಯತ್ರಿ ಚಂದ್ರಶೇಖರ್, ಪ್ರಜಾವಾಣಿ ಉಪಸಂಪಾದಕಿ ಅನಿತಾ ಎಚ್., ಚಂದ್ರಯಾನ–3 ಇಸ್ರೊ ಡೆಪ್ಯುಟಿ ಪ್ರಾಜೆಕ್ಟ್ ಡೈರೆಕ್ಟರ್ ರೂಪಾ ಎಂ.ವಿ., ನಾಗರಿಕ ಹಕ್ಕುಗಳ ಹೋರಾಟಗಾರ್ತಿ ಕಾತ್ಯಾಯಿನಿ ಚಾಮರಾಜ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವ ಟಿ. ಜವರೇಗೌಡ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಮುಖ್ಯಸ್ಥ ಎನ್. ನರಸಿಂಹಮೂರ್ತಿ, ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ಪ್ರಧಾನ ಕಾರ್ಯದರ್ಶಿ ಮಂಜುಶ್ರೀ ಕಡಕೋಳ ಉಪಸ್ಥಿತರಿದ್ದರು.

ಅಖಾಡದಲ್ಲಿ ನಾಯಕರ ಮಾತಿನೇಟು – ಎದಿರೇಟು

ರಾಜೀನಾಮೆ ಕೊಡ್ತೀನಿ, ಶಾ ಕೊಡುತ್ತಾರೆಯೇ?- ಸಿ.ಎಂ

ಸಿದ್ದರಾಮಯ್ಯ

ಮೈಸೂರು: 'ಬರ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಅಲ್ಲಿಂದ ತಂಡವೂ ಬಂದು ಅಧ್ಯಯನ ಮಾಡಿ ವರದಿ ಸಲ್ಲಿಸಿದೆ. ಅದು ಸುಳ್ಳಾದರೆ ನಾನು ರಾಜೀನಾಮೆ ಕೊಡಲು ಸಿದ್ಧವಿದ್ದೇನೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ಕೊಡುತ್ತಾರೆಯೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಇಲ್ಲಿನ ಸುತ್ತೂರು ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಬುಧವಾರ ಭೇಟಿಯಾಗಿ ಆಶೀರ್ವಾದ ಪಡೆದು, ಉಪಾಹಾರ ಸ್ವೀಕರಿಸಿದ ಬಳಿಕ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

'ನಾವು ಹೋದ ವರ್ಷ ಅಕ್ಟೋಬರ್‌ನಲ್ಲೇ ಮೂರು ಮನವಿ ಸಲ್ಲಿಸಿದ್ದೇವೆ. ನಂತರ ಕೇಂದ್ರದ ಅಧಿಕಾರಿಗಳ ತಂಡ ಬಂದಿತ್ತು. ಪರಿಶೀಲನೆ ನಡೆಸಿ ವರದಿ ಕೊಟ್ಟಿದೆ. ನಾನು ಡಿಸೆಂಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಮನವಿ ಕೊಟ್ಟಿದ್ದೆ. ಅಮಿತ್ ಶಾ ಅವರನ್ನೂ ಭೇಟಿಯಾಗಿದ್ದೆ. ಅದಾಗಿ ನಾಲ್ಕು ತಿಂಗಳಾದರೂ ಪರಿಹಾರ ಬಂದಿಲ್ಲ. ವಿಳಂಬ ಮಾಡುತ್ತಿರುವುದೇಕೆ?' ಎಂದು ಕೇಳಿದರು.

'ಶಾ ದೇಶದ ಗೃಹ ಸಚಿವ. ಅವರು ಸುಳ್ಳು ಹೇಳುವುದಕ್ಕೂ ಒಂದು ಮಿತಿ ಬೇಡವೇ? ಸತ್ಯದ ತಲೆ ಮೇಲೆ ಒಡೆದಂತೆ ಸುಳ್ಳು ಹೇಳುತ್ತಾರೆ. ನಾವ್ಯಾಕೆ ಸುಳ್ಳು ಹೇಳೋಣ?' ಎಂದು ಕೇಳಿದರು.

'ನಾವು ಎಲ್ಲ ದಾಖಲೆಗಳನ್ನು ಸುಪ್ರೀಂ ಕೋರ್ಟ್‌ಗೇ ಕೊಟ್ಟಿದ್ದೇವೆ. ದಾಖಲೆಗಳು ಇಲ್ಲದಿದ್ದರೆ ಕೋರ್ಟ್‌ಗೆ ಹೋಗಲಾದೀತೇ' ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯಗೆ ದೇವೇಗೌಡರ ಭಜನೆಯೇ ಕೆಲಸ: ಎಚ್‌ಡಿಕೆ

ಎಚ್‌.ಡಿ. ಕುಮಾರಸ್ವಾಮಿ

ಮೈಸೂರು: 'ಸಿದ್ದರಾಮಯ್ಯ ಅವರಿಗೆ ಯಾವಾಗಲೂ ಎಚ್‌.ಡಿ.ದೇವೇಗೌಡರ ಭಜನೆ ಮಾಡುವುದೇ ಕೆಲಸ. ಮುಖ್ಯಮಂತ್ರಿ ಜವಾಬ್ದಾರಿ ಜೊತೆಗೆ ಈಚೆಗೆ ಜ್ಯೋತಿಷ್ಯ ಕಲಿತು ದೊಡ್ಡ ಜ್ಯೋತಿಷಿಯೂ ಆಗಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಲೇವಡಿ ಮಾಡಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ಅವರಿಗೆ ಈಗ ಒಕ್ಕಲಿಗರ ಮೇಲೆ ಮಮತೆ ಬಂದಿದೆ. ಅವರ ಕಣ್ಣೀರು ಕೃತಕ. ನಮ್ಮ ಕಣ್ಣೀರು ಭಾವನಾತ್ಮಕ' ಎಂದರು. 'ಕಾಂಗ್ರೆಸ್ ಸರ್ಕಾರ ನಿತ್ಯ ಜಾತಿ ರಾಜಕಾರಣ ಮಾಡುತ್ತಿದೆ' ಎಂದು ದೂರಿದರು.

'ಚಾಮುಂಡೇಶ್ವರಿ, ಬಾದಾಮಿ ಕ್ಷೇತ್ರಕ್ಕೆ ಅವರ ಕೊಡುಗೆ ಏನು? ನಾನು ಮುಖ್ಯಮಂತ್ರಿಯಾಗಿದ್ದಾಗ ಅವರಂತೆ ನನ್ನ ಮಗನಿಗೆ ಕ್ಷೇತ್ರ ಬಿಟ್ಟುಕೊಟ್ಟಿರಲಿಲ್ಲ. ಯಡಿಯೂರಪ್ಪ ಅವರಿಗೆ ಅವತ್ತು ನಮ್ಮ ಸರ್ಕಾರ ಬೀಳಿಸಲು ಸಹಾಯ ಮಾಡಿದ್ದು ಯಾರು? ಶಾಂತಿವನದಲ್ಲಿ ಸಿದ್ಧ ಔಷಧ ಸಿದ್ಧ ಮಾಡಿದ್ದು ಯಾರು? ವಿಧಾನಸೌಧದಲ್ಲಿ ಮೈಸೂರು ಪೈಲ್ವಾನ್ ಥರ ತೊಡೆ ತಟ್ಟಿ ಗರ್ವ ತೋರಿಸಿದ್ದು ಯಾರು' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ –ಜೆಡಿಎಸ್ ಮೈತ್ರಿ ಇದ್ದಾಗ ಮೈತ್ರಿ ಧರ್ಮ ಪಾಲಿಸಿದ್ದೇವೆ. ನಾನು ಅದನ್ನು ಮುರಿದಿದ್ದರೆ ಕಳೆದ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲೂ ಬಿಜೆಪಿ ಗೆಲ್ಲುತ್ತಿತ್ತು' ಎಂದರು.

'ದೇವೇಗೌಡರು ಪ್ರತಾಪ ಸಿಂಹಗೆ ಟಿಕೆಟ್ ತಪ್ಪಿಸಿದ್ದಾರೆ ಎಂಬುದು ಜಗತ್ತಿನ ಎಂಟನೇ ಅದ್ಭುತ' ಎಂದು ಟೀಕಿಸಿದರು.

ಕಾಂಗ್ರೆಸ್ ಅಧಿಕಾರದ ಅಮಲು, ಭ್ರಮೆಯಲ್ಲಿದೆ: ವಿಜಯೇಂದ್ರ

ಬಿ.ವೈ. ವಿಜಯೇಂದ್ರ

ಚಾಮರಾಜನಗರ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಟ್ಟಿ ಹಾಕುವಂತಹ ದೊಡ್ಡ ವ್ಯಕ್ತಿ ನಾನಲ್ಲ. ಆದರೆ, ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಹಾಕುವ ಶಕ್ತಿ, ಈ ರಾಜ್ಯದ ಮತದಾರರಿಗೆ ಹಾಗೂ ಬಿಜೆಪಿ–ಜೆಡಿಎಸ್ ಕಾರ್ಯಕರ್ತರಿಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬುಧವಾರ ಹೇಳಿದರು.

ನಗರದಲ್ಲಿ ಮೈತ್ರಿ ಅಭ್ಯರ್ಥಿ ಎಸ್.ಬಾಲರಾಜು ಅವರು ನಾಮಪತ್ರ ಸಲ್ಲಿಸಿದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರದ ಅಮಲಿನಲ್ಲಿ, ಬಿಜೆಪಿಗೆ ಹೆಚ್ಚು ಸ್ಥಾನಗಳು ಬರುವುದಿಲ್ಲ ಎನ್ನುತ್ತಿದ್ದಾರೆ. ಅಂತಹ ಭ್ರಮೆಯಲ್ಲಿದ್ದಾರೆ. ಅವರು ಏನು ಹೇಳುತ್ತಾರೆಂಬುದು ಮುಖ್ಯವಲ್ಲ. ರಾಜ್ಯದ ಜನ ಏನು ಹೇಳುತ್ತಾರೆಂಬುದೇ ಮುಖ್ಯ. ಕಾಂಗ್ರೆಸ್‌ನವರನ್ನು ಭ್ರಮೆಯಿಂದ ಹೊರತರುತ್ತೇವೆ' ಎಂದರು.

'ಕಾಂಗ್ರೆಸ್‌ನ ಬಣ್ಣದ ಮಾತುಗಳಿಗೆ ಮೋಸ ಹೋಗಿದ್ದೇವೆ. ಮತ್ತೊಮ್ಮೆ ಮೋದಿಯವರನ್ನು ಪ್ರಧಾನಿ ಮಾಡುವ ಸಲುವಾಗಿ ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ಮತದಾರರು ಮಾತನಾಡುತ್ತಿದ್ದಾರೆ' ಎಂದರು.

ಸಂಸದ ಶ್ರೀನಿವಾಸ ಪ್ರಸಾದ್ ಬೆಂಬಲಿಗರು ಕಾಂಗ್ರೆಸ್‌ಗೆ ಸೇರ್ಪಡೆಯಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, 'ಶ್ರೀನಿವಾಸ ಪ್ರಸಾದ್ ಅವರನ್ನು ಭೇಟಿಯಾಗಿದ್ದೇನೆ. ತಾವು ರಾಜಕೀಯದಿಂದ ನಿವೃತ್ತಿಯಾಗುತ್ತಿದ್ದು, ಯಾರ ಪರವಾಗಿಯೂ ನಿಲ್ಲುವುದಿಲ್ಲವೆಂದಿದ್ದಾರೆ. ಪ್ರಧಾನಿ ಮೋದಿ ಬಗ್ಗೆ ಅವರಿಗೆ ಒಳ್ಳೆಯ ಅಭಿಪ್ರಾಯವಿದೆ. ಅವರ ಅಳಿಯ ಹರ್ಷವರ್ಧನ್ ನಮ್ಮ ಜೊತೆಗಿದ್ದಾರೆ. ಮತ್ತೊಬ್ಬ ಅಳಿಯ ಮೋಹನ್ ಕೂಡ ನಮ್ಮೊಂದಿಗೆ ಇರಲಿದ್ದಾರೆ' ಎಂದರು.

ಚುನಾವಣೆಯಲ್ಲಿ ಬಿಜೆಪಿ 200 ಸ್ಥಾನವನ್ನೂ ಗೆಲ್ಲುವುದಿಲ್ಲ: ಡಿಕೆಶಿ


ಡಿ.ಕೆ. ಶಿವಕುಮಾರ್

ಮೈಸೂರು: 'ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 200 ಸ್ಥಾನಗಳನ್ನೂ ಗೆಲ್ಲುವುದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಪಾದಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ನಾಮಪತ್ರ ಸಲ್ಲಿಕೆ ನಂತರ ಬುಧವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿ, 'ರಾಜ್ಯದ 28 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲಲಿದೆ. ಹಾಗೆಂದು ಆಮ್ ಆದ್ಮಿ ಪಕ್ಷ ಹಾಗೂ ಕಮ್ಯುನಿಸ್ಟ್ ಪಕ್ಷದವರೇ ಹೇಳುತ್ತಿದ್ದಾರೆ. ಈ ಎರಡೂ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮತಗಟ್ಟೆ ಮಟ್ಟದಲ್ಲಿ ವ್ಯಾಪಕ ಪ್ರಚಾರ ಮಾಡಬೇಕು' ಎಂದರು.

'ಚಾಮರಾಜನಗರದ ಬಿಜೆಪಿ ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರ ಬೆಂಬಲಿಗರು, ನೆಂಟರು ನನ್ನನ್ನು ಭೇಟಿಯಾಗಿ, 'ನಮಗೆ ಬಿಜೆಪಿಯಲ್ಲಿ ಇರಲು ಆಗುವುದಿಲ್ಲ' ಎಂದು ಹೇಳಿ ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದಾರೆ' ಎಂದರು.

'ಅಮಿತ್ ಶಾ ಅವರೇ, ನಿಮ್ಮಲ್ಲಿರುವಷ್ಟು ಭಿನ್ನಾಭಿಪ್ರಾಯ, ಕಿತ್ತಾಟ ನಮ್ಮಲ್ಲಿಲ್ಲ. ಅಧಿಕಾರಕ್ಕಾಗಿ ಶಿವಕುಮಾರ್ ಕಾಯುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ಆದರೆ, ನಾನು ಮತ್ತು ಸಿದ್ದರಾಮಯ್ಯ ಒಗ್ಗಟ್ಟಾಗಿದ್ದೇವೆ. ಇಡೀ ಸಚಿವ ಸಂಪುಟ ಒಗ್ಗಟ್ಟಾಗಿದೆ. ಸರ್ಕಾರವನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದೇವೆ. ಅಧಿಕಾರಕ್ಕೆ ನಾನು ಕಾದಿರುವೆ ಎಂಬುದು ನಿಮ್ಮ ಭ್ರಮೆ' ಎಂದು ತಿರುಗೇಟು ನೀಡಿದರು. ಬಳಿಕ ಅವರು, ಸುತ್ತೂರು ಮಠಕ್ಕೆ ಭೇಟಿ ನೀಡಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಸೋಮಣ್ಣ ನಾಮಪತ್ರ: ಮಾಧುಸ್ವಾಮಿ ಗೈರು

ಪ್ರಜಾವಾಣಿ ವಾರ್ತೆ

ತುಮಕೂರು: ಮೈತ್ರಿ ಅಭ್ಯರ್ಥಿ ವಿ.ಸೋಮಣ್ಣ ಬುಧವಾರ ನಾಮಪತ್ರ ಸಲ್ಲಿಸುವ ವೇಳೆ ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಗೈರು ಹಾಜರಿ ಎದ್ದು ಕಾಣುತಿತ್ತು.

ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾಸ್ವಾಮಿ ಭಾಗವಹಿಸಿದ ಈ ಕಾರ್ಯಕ್ರಮದ ಪಟ್ಟಿಯಲ್ಲಿ ಮಾಧುಸ್ವಾಮಿ ಹೆಸರು ಕೂಡ ಇತ್ತು.

ಬಿಜೆಪಿ ಟಿಕೆಟ್ ಸಿಗದೆ ಅಸಮಾಧಾನಗೊಂಡಿರುವ ಅವರು ಮೆರವಣಿಗೆ, ಕಾರ್ಯಕ್ರಮದಿಂದ ದೂರವೇ ಉಳಿದರು. ವಿ. ಸೋಮಣ್ಣ ಬೆಂಬಲಿಸುವ ಬಗ್ಗೆ ಈವರೆಗೂ ಅವರು ಯಾವುದೇ ನಿರ್ಧಾರ ಪ್ರಕಟಿಸಿಲ್ಲ.

'ವಿರೋಧ ಪಕ್ಷದವರಿಗಿಂತ ₹ 100 ಹೆಚ್ಚು ನೀಡಿದರೆ ಮತ'

ಮೊಳಕಾಲ್ಮುರು: 'ತಾಲ್ಲೂಕಿನ ಮತದಾರರು ಹಣಕ್ಕೆ ಮಾತ್ರ ಮಾನ್ಯತೆ ನೀಡುತ್ತಾರೆ. ಲೋಕಸಭೆ ಚುನಾವಣೆಯಲ್ಲಿ ಜಯಗಳಿಸುವುದಕ್ಕಾಗಿ ಹಣ ಹಂಚಲು ಸಿದ್ಧತೆ ಮಾಡಿಕೊಳ್ಳಿ' ಎಂದು ಹೇಳಿಕೆ ನೀಡಿರುವ ಬಿಜೆಪಿ ಎಸ್‌.ಟಿ ಮೋರ್ಚಾದ ಮೊಳಕಾಲ್ಮುರು ಮಂಡಲ ಅಧ್ಯಕ್ಷ ಜೀರಳ್ಳಿ ತಿಪ್ಪೇಸ್ವಾಮಿ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಪರ ಪ್ರಚಾರ ನಡೆಸುವ ಹಾಗೂ ನಾಮಪತ್ರ ಸಲ್ಲಿಕೆ ಮೆರವಣಿಗೆಗೆ ತೆರಳುವ ಸಂಬಂಧ ಪಕ್ಷದ ಇಲ್ಲಿನ ಕಚೇರಿಯಲ್ಲಿ ಮಂಗಳವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಅವರು ಈ ಹೇಳಿಕೆ ನೀಡಿದ್ದು, ವಿಡಿಯೊ ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಬಿಜೆಪಿಯ ನೇರ್ಲಗುಂಟೆ ತಿಪ್ಪೇಸ್ವಾಮಿ ಅವರ ಸೋಲಿಗೆ ಕಡಿಮೆ ಹಣ ಹಂಚಿದ್ದು ಕಾರಣ. ಮಂಡಲಾಧ್ಯಕ್ಷರು ಪ್ರತಿ ಮತಕ್ಕೆ ₹ 500ರಿಂದ ₹ 600 ನೀಡೋಣ ಎಂದು ಮುಂಚಿತವಾಗಿ ಹೇಳಿದ್ದರೆ, ನೇರ್ಲಗುಂಟೆ ತಿಪ್ಪೇಸ್ವಾಮಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈ ಚುನಾವಣೆಯಲ್ಲೂ ಹಣ ನೀಡಿದರೆ

ನಿಧನ ವಾರ್ತೆ

ಎಂ.ಕೆ.ಭಾಸ್ಕರರಾವ್

ಬೆಂಗಳೂರು: ಪತ್ರಕರ್ತ ಎಂ.ಕೆ. ಭಾಸ್ಕರ ರಾವ್ (76) ಅವರು ಬುಧವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಕೆಲ ದಿನಗಳಿಂದ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಚಾಮರಾಜಪೇಟೆಯ ವಿದ್ಯುತ್ ಚಿತಾಗಾರದಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು.

ಶಿವಮೊಗ್ಗ ಜಿಲ್ಲೆಯ ಸಾಗರದವರಾದ ಅವರು, 1968ರಲ್ಲಿ 'ಸಂಯುಕ್ತ ಕರ್ನಾಟಕ'ದಲ್ಲಿ ಪತ್ರಕರ್ತರಾಗಿ ವೃತ್ತಿ ಆರಂಭಿಸಿದ್ದರು. 'ಪ್ರಜಾವಾಣಿ' ಪತ್ರಿಕೆಯ ಸಹಾಯಕ ಸಂಪಾದಕರಾಗಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರವೂ ಅಂಕಣಕಾರರಾಗಿ, ರಾಜಕೀಯ ವಿಶ್ಲೇಷಕರಾಗಿ ಗುರುತಿಸಿಕೊಂಡಿದ್ದರು.

ದಿನೇಶ್ ಬಾಬು ನಿರ್ದೇಶನದ 'ಹಾಲಿವುಡ್' ಸಿನಿಮಾ ಸೇರಿದಂತೆ ಕೆಲ ಚಲನಚಿತ್ರಗಳಲ್ಲಿ ಅಭಿನಯಿಸಿದ್ದ ಅವರು, ರಂಗಕರ್ಮಿಯಾಗಿಯೂ ಸಕ್ರಿಯರಾಗಿದ್ದರು.

ಮಾಧ್ಯಮ ಕ್ಷೇತ್ರದ ಸಾಧನೆಗೆ ಅವರಿಗೆ 'ಖಾದ್ರಿ ಶಾಮಣ್ಣ ಪ್ರಶಸ್ತಿ', ಕರ್ನಾಟಕ ಮಾಧ್ಯಮ ಅಕಾಡೆಮಿಯ 'ಜೀವಮಾನ ಸಾಧನೆ ಪ್ರಶಸ್ತಿ' ಸೇರಿ ವಿವಿಧ ಪ್ರಶಸ್ತಿಗಳು ಸಂದಿವೆ. ಅವರು 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ' ಸೇರಿದಂತೆ ಹಲವು ಪ್ರಶಸ್ತಿಗಳ ಆಯ್ಕೆ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದರು.

ಬೆಂಕಿ ಆರಿದರೂ 'ಕೈ'ಯಲ್ಲಿ ಕಿಡಿ

ಒಂದನೇ ಪುಟದಿಂದ...

ಕಾಂಗ್ರೆಸ್‌ಗೆ ತೀವ್ರ ತಲೆನೋವು ತಂದಿಟ್ಟಿದ್ದ ಕೋಲಾರ ಕ್ಷೇತ್ರದಲ್ಲಿ ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್ ರಮೇಶ್ ಕುಮಾರ್ ಮತ್ತು ಕೆ.ಎಚ್‌. ಮುನಿಯಪ್ಪ ಅವರ 'ಬಣ'ಗಳ ನಡುವಣ ರಾಜಕೀಯ ಮೇಲಾಟ ನುಂಗಲಾರದ ತುತ್ತಾಗಿದೆ. ರಾಜ್ಯಸಭೆ ಮಾಜಿ ಸದಸ್ಯ ಎಲ್. ಹನುಮಂತಯ್ಯ ಮತ್ತು ಮುನಿಯಪ್ಪ ಅವರ ಅಳಿಯ ಚಿಕ್ಕಪೆದ್ದಣ್ಣ ನಡುವೆ ಟಿಕೆಟ್‌ಗಾಗಿ ಭಾರಿ ಪೈಪೋಟಿ ಏರ್ಪಟ್ಟಿತ್ತು. ಅಳಿಯನಿಗೆ ಟಿಕೆಟ್ ಕೊಡಿಸಲು ಮುನಿಯಪ್ಪ ಇನ್ನಿಲ್ಲದ ಪ್ರಯತ್ನಪಟ್ಟಿದ್ದರು. ಈ ಪೈಪೋಟಿಯಿಂದ ಟಿಕೆಟ್ ಮೂರನೇ ವ್ಯಕ್ತಿ ಪಾಲಾಗಿದೆ. ಚುನಾವಣಾ ಫಲಿತಾಂಶದಲ್ಲಿ ಈ ಬಣ ರಾಜಕೀಯ ಯಾವ ರೀತಿಯ ಪರಿಣಾಮ ಬೀರಬಹುದು ಎನ್ನುವ ಕುತೂಹಲವಿದೆ.

ಬಾಗಲಕೋಟೆಯಿಂದ ಟಿಕೆಟ್ ಸಿಕ್ಕಿಲ್ಲವೆಂದು ಮುನಿಸಿಕೊಂಡಿದ್ದ ವೀಣಾ ಕಾಶಪ್ಪನವರ ಪಕ್ಷದ ನಾಯಕರ ಮಾತಿಗೆ ಮಣಿದಿದ್ದಾರೆ. ಅವರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನ ನೀಡಲಾಗಿದೆ. ಆದರೆ, ಟಿಕೆಟ್ ಕೈತಪ್ಪಿದ ನೋವು ಇನ್ನೂ ಅವರಲ್ಲಿದೆ. ದಾವಣಗೆರೆಯಲ್ಲಿ ಟಿಕೆಟ್ ನಿರೀಕ್ಷಿಸಿದ್ದ ಜಿ.ಬಿ. ವಿನಯ್‌ಕುಮಾರ್ (ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ) ಕೂಡಾ ಬೇಸರದಲ್ಲಿದ್ದಾರೆ. ಚಿತ್ರದುರ್ಗ ಟಿಕೆಟ್ ವಿಚಾರದಲ್ಲಿಯೂ ಗೊಂದಲ ಉಂಟಾಗಿತ್ತು. ಬಿ.ಎನ್ ಚಂದ್ರಪ್ಪ (ಪರಿಶಿಷ್ಟ ಜಾತಿ ಎಡಗೈ) ಅವರಿಗೆ ಟಿಕೆಟ್ ಘೋಷಣೆಯಾದ ನಂತರವೂ ಭೋವಿ ಸಮುದಾಯಕ್ಕೆ ಚಿತ್ರದುರ್ಗದ ಟಿಕೆಟ್ ನೀಡಬೇಕೆಂಬ ಕೂಗು ಮುನ್ನೆಲೆಗೆ ಬಂದಿದೆ.

ಚಿಕ್ಕಬಳ್ಳಾಪುರದಲ್ಲಿ ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದ ಶಿವಶಂಕರ ರೆಡ್ಡಿ ಮತ್ತು ವೀರಪ್ಪ ಮೊಯಿಲಿ ಅವರು, ರಕ್ಷಾ ರಾಮಯ್ಯ ಅವರಿಗೆ ಟಿಕೆಟ್ ಘೋಷಣೆ ಆಗುತ್ತಿದ್ದಂತೆ ಪಕ್ಷ ಚಟುವಟಿಕೆಯಿಂದಲೇ ದೂರವಾಗಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಗೌರಿಬಿದನೂರು ಕ್ಷೇತ್ರದಲ್ಲಿ ಸೋಲು ಕಂಡಿದ್ದ ಶಿವಶಂಕರರೆಡ್ಡಿ, ಲೋಕಸಭೆ ಚುನಾವಣೆಯ ಟಿಕೆಟ್ ಗಿಟ್ಟಿಸಿಕೊಳ್ಳಲು ಕಸರತ್ತು ನಡೆಸಿದ್ದರು. ರಕ್ಷಾ ರಾಮಯ್ಯ ಅವರು ಬುಧವಾರ ನಾಮಪತ್ರ ಸಲ್ಲಿಸುವ ವೇಳೆ ಅಂತರ ಕಾಯ್ದುಕೊಂಡ ರೆಡ್ಡಿ ನಡೆ ಮುಂದಿನ ದಿನಗಳಲ್ಲಿ ಹೇಗಿರಬಹುದು ಎನ್ನುವುದು ಗೊಂದಲಕ್ಕೆ ಕಾರಣವಾಗಿದೆ. ಚಾಮರಾಜನಗರದಲ್ಲಿ ವಿರೋಧ ವ್ಯಕ್ತಪಡಿಸಿದ್ದ ಶಾಸಕರನ್ನು ಒಲಿಸಿಕೊಂಡು, ಸುನಿಲ್ ಬೋಸ್‌ಗೆ ಪಕ್ಷ ಟಿಕೆಟ್ ನೀಡಿದೆ. ನಾಮಪತ್ರ ಸಲ್ಲಿಸುವ ವೇಳೆ, ಕೆಲವು ಕಡೆಗಳಲ್ಲಿ 'ಬೋಸ್ ಗೋಬ್ಯಾಕ್' ಭಿತ್ತಿಪತ್ರಗಳು ಕಾಣಿಸಿಕೊಂಡಿವೆ. ಇದು ಬಿಜೆಪಿಯವರ ಕೆಲಸ ಎಂದು ಬೋಸ್ ಮತ್ತು ಅವರ ತಂದೆ ಸಚಿವ ಮಹದೇವಪ್ಪ ಹೇಳಿದ್ದಾರೆ.

ಕಮಲದೊಳಗೆ ಸೌಹಾರ್ದ

ಒಂದನೇ ಪುಟದಿಂದ...

ಚುನಾವಣಾ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಅವರ ಜತೆ ಎಸ್‌.ಆರ್. ವಿಶ್ವನಾಥ್ ಅವರನ್ನು ಸುಧಾಕರ್ ಭೇಟಿ ಮಾಡಿದರು. ಯಲಹಂಕ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದ ಮತ ಕೊಡಿಸುವುದಾಗಿಯೂ ವಿಶ್ವನಾಥ್ ಭರವಸೆ ನೀಡಿದರು.

ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು, 'ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ಬಿಜೆಪಿಯನ್ನು ಸೇರುತ್ತೇನೆ' ಎಂದು ಹೇಳುವ ಮೂಲಕ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಇದ್ದ ಮೊದಲ ಸವಾಲನ್ನು ನಿವಾರಿಸಿದ್ದಾರೆ.

ಚಾಮರಾಜನಗರ ಕ್ಷೇತ್ರದಲ್ಲಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ಕಾಂಗ್ರೆಸ್‌ಗೆ ಬೆಂಬಲ ವ್ಯಕ್ತಪಡಿಸಿದರೆ ಕಷ್ಟ ಆಗಬಹುದು ಎಂಬ ಕಾರಣಕ್ಕೆ ಬಿ.ವೈ.ವಿಜಯೇಂದ್ರ ಅವರು ಶ್ರೀನಿವಾಸ್‌ಪ್ರಸಾದ್ ಅವರನ್ನು ಭೇಟಿ ಮಾಡಿ ಪಕ್ಷದ ಅಭ್ಯರ್ಥಿಗೆ ಬೆಂಬಲ ಕೋರಿದರು. ತಾವು ತಟಸ್ಥವಾಗಿ ಉಳಿಯುವುದಾಗಿ ಪ್ರಸಾದ್ ಹೇಳಿದ್ದಾಗಿ ಎಂದು ಮೂಲಗಳು ಹೇಳಿವೆ.

ಮೈಸೂರಿನಲ್ಲಿ ವಿಧಾನಪರಿಷತ್ತಿನ ಸದಸ್ಯ ಎಚ್. ವಿಶ್ವನಾಥ್ ಅವರನ್ನು ಭೇಟಿ ಮಾಡಿ ಯದುವೀರ ಒಡೆಯರ್ ಅವರನ್ನು ಬೆಂಬಲಿಸುವಂತೆ ವಿಜಯೇಂದ್ರ ಮನವಿ ಮಾಡಿದರು. ತಾವು ಒಡೆಯರ್ ಅವರನ್ನೇ ಬೆಂಬಲಿಸುವುದಾಗಿ ವಿಶ್ವನಾಥ್ ಭರವಸೆ ನೀಡಿದರು.

ಕೊಪ್ಪಳದಲ್ಲಿ ಸಂಸದ ಕರಡಿ ಸಂಗಣ್ಣ, ಚಿತ್ರದುರ್ಗದಲ್ಲಿ ಹೊಳಲ್ಕೆರೆ ಶಾಸಕ ಚಂದ್ರಪ್ಪ, ಹಾಸನದಲ್ಲಿ ಮಾಜಿ ಶಾಸಕ ಪ್ರೀತಂಗೌಡ ಅವರ ಮನವೊಲಿಸುವಲ್ಲಿ ರಾಜ್ಯನಾಯಕರು ಯಶಸ್ವಿಯಾಗಿದ್ದಾರೆ.

ಈಶ್ವರಪ್ಪ ಸ್ಪರ್ಧೆಯಿಂದ ಹಿಂದಕ್ಕೆ: ಬಿಜೆಪಿ

ಶಿವಮೊಗ್ಗದಲ್ಲಿ ಬಂಡಾಯವಾಗಿ ಸ್ಪರ್ಧಿಸಲು ಮುಂದಾಗಿರುವ ಕೆ.ಎಸ್.ಈಶ್ವರಪ್ಪ ಅವರು ಅಮಿತ್ ಶಾ ಅವರ ಭೇಟಿಯ ಬಳಿಕ ನಿರ್ಧಾರ ಬದಲಿಸಬಹುದು ಎಂದು ಬಿಜೆಪಿಯ ರಾಜ್ಯ ನಾಯಕರು ವಿಶ್ವಾಸ ಇರಿಸಿಕೊಂಡಿದ್ದಾರೆ. ದೆಹಲಿಗೆ ತೆರಳಿರುವ ಈಶ್ವರಪ್ಪ, ಅಮಿತ್ ಶಾ ಅವರನ್ನು ಭೇಟಿಯಾಗಲಿದ್ದಾರೆ. ಆ ಬಳಿಕವೇ, ಈಶ್ವರಪ್ಪ ನಡೆ ಏನೆಂದು ಸ್ಪಷ್ಟವಾಗಲಿದೆ.

ಗೊಂದಲ ಸಂಪೂರ್ಣ ನಿವಾರಣೆ

'ಕಳೆದ ಎರಡು– ಮೂರು ದಿನಗಳಿಂದ ನಮ್ಮ ಹಿರಿಯ ನಾಯಕರು ಮಾಡಿದ ಪ್ರಯತ್ನ, ಮನವೊಲಿಕೆಯ ಪರಿಣಾಮ ರಾಜ್ಯದ ಕೆಲವು ಕ್ಷೇತ್ರಗಳಲ್ಲಿದ್ದ ಸಣ್ಣ ಪುಟ್ಟ ಭಿನ್ನಾಭಿಪ್ರಾಯ, ಗೊಂದಲ ಈಗ ಸಂಪೂರ್ಣ ನಿವಾರಣೆಯಾಗಿದೆ. ಇಡೀ ಬಿಜೆಪಿ ರಾಜ್ಯ ಘಟಕ ಒಗ್ಗಟ್ಟಿನಿಂದ ಧರ್ಮ ಯುದ್ಧಕ್ಕೆ ಸನ್ನದ್ಧವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಅಪರೂಪದ ಸರ್ಪ

ಉಡುಪಿ ಬಳಿಯ ಹೆಬ್ರಿ ತಾಲ್ಲೂಕಿನ ನಾಡ್ಪಾಲು ಗ್ರಾಮದ ಭಾಸ್ಕರ ಶೆಟ್ಟಿ ಎಂಬುವರ ಮನೆ ಬಳಿ 15 ಅಡಿ ಉದ್ದ, 12.5 ಕೆ.ಜಿ. ತೂಕದ ಅಪರೂಪದ ಕಾಳಿಂಗ ಸರ್ಪವನ್ನು ಮಂಗಳವಾರ ಉರಗ ರಕ್ಷಕ ಪಿ. ಗೌರಿಶಂಕರ್ ರಕ್ಷಿಸಿದ್ದಾರೆ – ಪ್ರಜಾವಾಣಿ ಚಿತ್ರ

ಕೊಳವೆಬಾವಿಗೆ ಬಿದ್ದ ಮಗು

ಪ್ರಜಾವಾಣಿ ವಾರ್ತೆ

ವಿಜಯಪುರ: ಇಂಡಿ ತಾಲ್ಲೂಕಿನ ಲಚ್ಯಾಣ ಗ್ರಾಮದ ತೋಟದ ಮನೆ ಬಳಿ ಪಾಳುಬಿದ್ದ ಕೊಳವೆಬಾವಿಗೆ ಬುಧವಾರ ಸಂಜೆ 5 ಗಂಟೆ ಸುಮಾರಿಗೆ ಸಾತ್ವಿಕ್ ಎಂಬ 14 ತಿಂಗಳ ಮಗು ಬಿದ್ದಿದ್ದು, ರಕ್ಷಣಾ ಕಾರ್ಯಾಚರಣೆ ನಡೆದಿದೆ.

'ಲಚ್ಯಾಣ ಗ್ರಾಮದ ಸತೀಶ ಮುಜಗೊಂಡ ಅವರ ಪುತ್ರ ಸಾತ್ವಿಕ್ ಆಟವಾಡಲು ಹೋಗಿದ್ದ ವೇಳೆ ಆಯತಪ್ಪಿ ಕೊಳವೆ ಬಾವಿಗೆ ಬಿದ್ದು, 16 ಅಡಿ ಆಳದಲ್ಲಿ ಸಿಲುಕಿರಬಹುದು. ಕ್ಯಾಮೆರಾವನ್ನು ಕೊಳವೆಬಾವಿ ಒಳಗೆ ಇಳಿ ಬಿಟ್ಟು ಮಗುವಿನ ಸ್ಥಿತಿ ಮೇಲೆ ನಿಗಾ ವಹಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮಗುವಿನ ಕೈಕಾಲು ಅಲುಗಾಡುತ್ತಿದ್ದು, ಉಸಿರಾಟಕ್ಕೆ ಪೈಪ್ ಮೂಲಕ ಆಮ್ಲಜನಕದ ವ್ಯವಸ್ಥೆ ಮಾಡಲಾಗಿದೆ. ರಾತ್ರಿ ಆದ ಕಾರಣ ಸಾತ್ವಿಕ್ ರಕ್ಷಣಾ ಕಾರ್ಯಾಚರಣೆ ನಿಧಾನವಾಗಿದೆ. ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಕೊಳವೆಬಾವಿಗೆ ಸಮಾನವಾಗಿ ಪಕ್ಕದಲ್ಲೇ ಜೆಸಿಬಿ ಯಂತ್ರದ ಮೂಲಕ ಗುಂಡಿ ತೋಡಿ, ಮಣ್ಣನ್ನು ಹೊರ ತೆಗೆಯಲಾಗುತ್ತಿದೆ' ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

'ಎರಡು ದಿನಗಳ ಹಿಂದಷ್ಟೇ ಈ ಕೊಳವೆಬಾವಿಯನ್ನು ಕೊರೆಯಿಸಲಾಗಿತ್ತು. ಸುಮಾರು 280 ಅಡಿ ಕೊರೆದರೂ ನೀರು ಬಾರದ ಕಾರಣ ಹಾಗೆಯೇ ಬಿಡಲಾಗಿತ್ತು' ಎಂದು ಗ್ರಾಮಸ್ಥರು ತಿಳಿಸಿದರು.

ಇಂದು, ನಾಳೆ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳ?

6ರಿಂದ ರಾಜ್ಯದ ವಿವಿಧೆಡೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಇದೇ 6 ರಿಂದ ನಾಲ್ಕು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಗುರುವಾರ ಹಾಗೂ ಶುಕ್ರವಾರವೂ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆಯಿದೆ. ಬಾಗಲಕೋಟೆ, ಕಲಬುರಗಿ, ವಿಜಯಪುರ, ಕೊಪ್ಪಳ ಮತ್ತು ಗದಗ ಜಿಲ್ಲೆಯಲ್ಲಿ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಂಭವವಿದೆ. ಉಳಿದೆಡೆಯೂ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಬಹುದು ಎಂದು ಇಲಾಖೆ ತಿಳಿಸಿದೆ.

6 ರಿಂದ ನಾಲ್ಕು ದಿನ ದಕ್ಷಿಣ ಕನ್ನಡ, ಬೀದರ್, ಕಲಬುರಗಿ, ಕೊಡಗು, ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. 7 ರಂದು ಚಿಕ್ಕಮಗಳೂರು, ಹಾಸನ ಹಾಗೂ ತುಮಕೂರಿನಲ್ಲಿಯೂ ಮಳೆಯಾಗುವ ಸಂಭವವಿದೆ. 9ರಂದು ಕರಾವಳಿಯ ಎಲ್ಲ ಜಿಲ್ಲೆಗಳು, ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳು ಸೇರಿ 18 ಜಿಲ್ಲೆಗಳಲ್ಲಿ ಮಳೆಯಾಗಬಹುದು ಎಂದು ಮುನ್ಸೂಚನೆ ನೀಡಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕಲಬುರಗಿಯಲ್ಲಿ ಗರಿಷ್ಠ (42.3 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ. ವಿಜಯಪುರ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ತುಮಕೂರಿನಲ್ಲಿಯೂ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ.

ವರ್ಷದ ಮೊದಲ ಮಳೆಯ ಸಿಂಚನ

ಭದ್ರಾವತಿ: ಕೆಂಡದಂತಹ ಬಿಸಿಲ ಝಳದಿಂದ ಬಳಲಿದ್ದ ನಗರದ ಜನತೆಗೆ ಬುಧವಾರ ಸಂಜೆ ಸುರಿದ ಈ ವರ್ಷದ ಮೊದಲ ಮಳೆ ತಂಪೆರೆಯಿತು. 20 ನಿಮಿಷಗಳ ಕಾಲ ಸುರಿದ ಮಳೆಯಿಂದಾಗಿ ತಣ್ಣನೆಯ ಗಾಳಿ ಬೀಸಿ ಮೈ–ಮನಗಳನ್ನು ಮುದಗೊಳಿಸಿತು.

ಬೆಳಿಗ್ಗೆಯಿಂದ ಬಿಸಿಲ ಝಳ ಹೆಚ್ಚಿದ್ದು, ಹೊತ್ತು ಏರುತ್ತಿದ್ದಂತೆಯೇ ಗಾಳಿ–ಧೂಳು, ಗುಡುಗಿನೊಂದಿಗೆ ಪ್ರತ್ಯಕ್ಷನಾದ ಮಳೆರಾಯ ಬಂದಷ್ಟೇ ವೇಗವಾಗಿ ಮರೆಯಾದ. ಯುಗಾದಿಯ ಆಸುಪಾಸಿನಲ್ಲಿ ಮಳೆ ಸುರಿಯಬಹುದು ಎಂಬ ಸ್ಥಳೀಯರ ನಿರೀಕ್ಷೆ ಹುಸಿಯಾಗಲಿಲ್ಲ.

ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲೂ ಮಳೆ ಸುರಿದ ವರದಿಯಾಗಿದೆ. ಯುಗಾದಿ ಪೂರ್ವ ಮಳೆ ಶುಭಸೂಚಕ. ಈ ಬಾರಿ ಮಳೆಗಾಲ ಸಮೃದ್ಧಿಯಾಗಬಹುದು. ದಾವಣಗೆರೆ ವರದಿ: ದಾವಣಗೆರೆ ತಾಲ್ಲೂಕಿನ ಆನಗೋಡು, ಮಾಯಕೊಂಡ ಹೋಬಳಿ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಬುಧವಾರ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗಿದೆ. ಬಿರುಗಾಳಿಗೆ ಕೊಡಗನೂರು ಕ್ರಾಸ್ ಬಳಿ ಮರವೊಂದು ಬಿದ್ದಿದ್ದು, ಕೆಲ ಕಾಲ ಸಂಚಾರಕ್ಕೆ ಅಡ್ಡಿಯಾಯಿತು. ಹೆಬ್ಬಾಳು ಬಳಿಯೂ ಮಳೆ ಸುರಿದಿದೆ.

ಮಾಯಕೊಂಡದಲ್ಲಿ ಬಿರುಗಾಳಿ ಮಳೆಗೆ ಕೊಡಗನೂರು ಕ್ರಾಸ್ ಬಳಿ ಮರವೊಂದು ಬಿದ್ದಿರುವುದು

ಯುಬಿ ಬಿಯರ್ ತಯಾರಿಕಾ ಘಟಕದಲ್ಲಿ ತಪಾಸಣೆ

₹98 ಕೋಟಿ ಮೌಲ್ಯದ ಬಿಯರ್ ಜಪ್ತಿ

ಚಾಮರಾಜನಗರ: ಲೆಕ್ಕಕ್ಕಿಂತ ಹೆಚ್ಚುವರಿಯಾಗಿ 7 ಸಾವಿರ ಬಿಯರ್ ರಟ್ಟಿನ ಪೆಟ್ಟಿಗೆಗಳು ಪತ್ತೆಯಾದ ಕಾರಣ, ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ತಾಂಡ್ಯಾ ಕೈಗಾರಿಕಾ ಪ್ರದೇಶದಲ್ಲಿರುವ ಯುನೈಟೆಡ್ ಬ್ರಿವರೀಸ್ (ಯುಬಿ) ಲಿಮಿಟೆಡ್‌ನ ಬಿಯರ್ ತಯಾರಿಕಾ ಘಟಕವನ್ನು ಅಬಕಾರಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಘಟಕದಲ್ಲಿದ್ದ 6.03 ಲಕ್ಷ ಬಿಯರ್ ಪೆಟ್ಟಿಗೆಗಳು, ಕೆಗ್‌ಗಳಲ್ಲಿರುವ 23,160 ಲೀಟರ್, ದಾಸ್ತಾನು 5.16 ಲಕ್ಷ ಲೀಟರ್, ಯುಟಿ ಟ್ಯಾಂಕ್‌ನಲ್ಲಿರುವ 66.16 ಲಕ್ಷ ಲೀಟರ್ ಬಿಯರ್, 6.50 ಲಕ್ಷ ಕೆಜಿ ಕಚ್ಚಾವಸ್ತು ಸೇರಿದಂತೆ ಒಟ್ಟು ₹98.52 ಕೋಟಿ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ.

'ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಕ್ರಮ ಕೈಗೊಳ್ಳಲಾಗಿದೆ' ಎಂದು ಜಿಲ್ಲಾ ಚುನಾವಣಾ ಅಧಿಕಾರಿ ಸಿ.ಟಿ. ಶಿಲ್ಪಾ ನಾಗ್ ಹೇಳಿದ್ದಾರೆ.

ಘಟಕದಲ್ಲಿ ನಿಗದಿಗಿಂತ ಹೆಚ್ಚುವರಿ ಬಿಯರ್ ತಯಾರಿಸಿ ಕೇರಳಕ್ಕೆ ಸಾಗಿಸಿರುವ ಬಗ್ಗೆ ಮಂಗಳವಾರ ಬಂದ ಕರೆಯನ್ನು ಆಧರಿಸಿ, ಪರಿಶೀಲಿಸುವಂತೆ ಜಿಲ್ಲಾ ಅಬಕಾರಿ ಉಪ ಆಯುಕ್ತ ನಾಗಶಯನ ಅವರಿಗೆ ಸೂಚಿಸಿದ್ದರು. ಮೈಸೂರಿನ ಅಬಕಾರಿ ಜಂಟಿ ಆಯುಕ್ತರ ಮಾರ್ಗದರ್ಶನೊಂದಿಗೆ ಅಧಿಕಾರಿಗಳು ನಂಜನಗೂಡಿನ ಯುಬಿ ಘಟಕಕ್ಕೆ ಮಂಗಳವಾರ ಮಧ್ಯಾಹ್ನ ಭೇಟಿ ನೀಡಿ, ದಾಸ್ತಾನು ಪರಿಶೀಲಿಸಿದಾಗ 7 ಸಾವಿರದಷ್ಟು ಬಿಯರ್ ಪೆಟ್ಟಿಗೆಗಳನ್ನು ಹೆಚ್ಚುವರಿಯಾಗಿದ್ದದ್ದು ಕಂಡು ಬಂದಿತ್ತು.

'ಗಂಭೀರ ಪ್ರಕರಣವಾಗಿರುವುದರಿಂದ, ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಂಡು ಘಟಕದಲ್ಲಿರುವ ಎಲ್ಲ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂಬಂಧ, ಘಟಕ ಮತ್ತು 17 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಎಲ್ಲರೂ ತಲೆ ಮರೆಸಿಕೊಂಡಿದ್ದಾರೆ.

ಕೇರಳಕ್ಕೆ ಹೋಗಿ ವಾಪಸ್ ಬಂದಿತ್ತು: 'ಘಟಕದಲ್ಲಿ 14 ಸಾವಿರ ಪೆಟ್ಟಿಗೆಗಳಷ್ಟು ಬಿಯರ್ ತಯಾರಿಸಿ 7 ಸಾವಿರಕ್ಕೆ ಮಾತ್ರ ಲೆಕ್ಕ ತೋರಿಸಲಾಗಿತ್ತು. 7 ಸಾವಿರ ಪೆಟ್ಟಿಗೆಗಳನ್ನು ಕೇರಳಕ್ಕೆ ಸಾಗಿಸಲಾಗಿತ್ತು. ಆ ಬಗ್ಗೆ ಮಾಹಿತಿ ಸಂಗ್ರಹಿಸಿ ಅಧಿಕಾರಿಗಳು ಭೇಟಿ ನೀಡುವ ಹೊತ್ತಿಗೆ ಪೆಟ್ಟಿಗೆಗಳನ್ನು ಘಟಕದಲ್ಲಿ ತಂದಿರಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಬೋಸ್ ವಿರುದ್ಧ 'ಗೋ ಬ್ಯಾಕ್'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಉಲ್ಲೇಖಿಸಿ 'ಮರಳು ಮಾಫಿಯಾದ ಅನಭಿಷಿಕ್ತ ದೊರೆ ಗೋ ಬ್ಯಾಕ್' ಎಂಬ ಪೋಸ್ಟರ್‌ಗಳನ್ನು ನಗರದ ಕೆಲವೆಡೆ ಅಂಟಿಸಲಾಗಿತ್ತು.

ಬುಧವಾರ ಸುನೀಲ್ ಬೋಸ್ ಅವರು ನಾಮಪತ್ರ ಸಲ್ಲಿಸಿದರು. ಅವರ ಪರವಾಗಿ ರೋಡ್ ಶೋ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವರು ಬರುತ್ತಿದ್ದುದನ್ನು ಗುರಿಯಾಗಿಸಿಕೊಂಡು ಕಿಡಿಗೇಡಿಗಳು ಮಂಗಳವಾರ ರಾತ್ರಿ ಭುವನೇಶ್ವರಿ ವೃತ್ತ, ಕೊಳ್ಳೇಗಾಲ ರಸ್ತೆ, ನಂಜನಗೂಡು ರಸ್ತೆಯ ಕೆಲವೆಡೆ ಪೋಸ್ಟರ್‌ಗಳನ್ನು ಅಂಟಿಸಿದ್ದರು.

ವಿಷಯ ಗೊತ್ತಾಗುತ್ತಲೇ ಪೊಲೀಸರು ಅವುಗಳನ್ನು ತೆರವುಗೊಳಿಸಿದರು.ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸುನೀಲ್ ಬೋಸ್, 'ಮರಳು ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿ ಇತ್ತು. ನ್ಯಾಯಾಲಯ ನನ್ನನ್ನು ನಿರ್ದೋಷಿ ಎಂದು ಹೇಳಿದೆ. ಇದು ಬಿಜೆಪಿಯವರ ಕೆಲಸವಾಗಿರಬಹುದು. ಅವರಿಗೆ ಮಾಡುವುದಕ್ಕೆ ಬೇರೇನೂ ಕೆಲಸ ಇಲ್ಲ. ಹತಾಶೆಯಿಂದ ಈ ರೀತಿ ಮಾಡಿರುತ್ತಾರೆ' ಎಂದರು.

ಬೋಸ್ ತಂದೆ, ಸಮಾಜ ಕಲ್ಯಾಣ ಸಚಿವ ಡಾ. ಎಚ್‌.ಸಿ.ಮಹದೇವಪ್ಪ ಪ್ರತಿಕ್ರಿಯಿಸಿ, 'ತಲೆ ಕೆಟ್ಟವರು ಮಾಡಿರುವ ಪಿತೂರಿ ಇದು. ಕ್ಷೇತ್ರದ ಎಲ್ಲ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಸಭೆಗಳನ್ನು ಮಾಡಿದ್ದೇವೆ. ಅಲ್ಲೆಲ್ಲೂ ವಿರೋಧ ಕಂಡು ಬಂದಿಲ್ಲ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕೆಪಿಸಿಸಿ ಪದಾಧಿಕಾರಿ ಪಟ್ಟಿ ಪರಿಷ್ಕರಣೆ

ಬೆಂಗಳೂರು: ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಯನ್ನು ಪರಿಷ್ಕರಿಸಿ ಎಐಸಿಸಿ ಬುಧವಾರ ಪ್ರಕಟಿಸಿದೆ. ಏಪ್ರಿಲ್ 1ರಂದು ಪ್ರಕಟವಾಗಿದ್ದ 43 ಉಪಾಧ್ಯಕ್ಷರು, 138 ಪ್ರಧಾನ ಕಾರ್ಯದರ್ಶಿಗಳ ಪಟ್ಟಿಗೆ ಕೆಲವು ಶಾಸಕರು, ಹಿರಿಯ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಹೀಗಾಗಿ ಕೆಲವು ಹೆಸರುಗಳನ್ನು ಕೈಬಿಟ್ಟು, ಕೆಲವು ಹೆಸರುಗಳನ್ನು ಸೇರಿಸಿ ಮತ್ತೆ ಪ್ರಕಟಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಹೊಸ ಪಟ್ಟಿಯಲ್ಲಿ ಉಪಾಧ್ಯಕ್ಷರ ಸಂಖ್ಯೆಯನ್ನು 44ಕ್ಕೆ ಹೆಚ್ಚಿಸಲಾಗಿದೆ. ಪ್ರಧಾನ ಕಾರ್ಯದರ್ಶಿಗಳ ಸಂಖ್ಯೆಯನ್ನು 144ಕ್ಕೆ ಹೆಚ್ಚಿಸಲಾಗಿದೆ. ಹೊಸ ಪಟ್ಟಿಯಲ್ಲಿ ಬಿ.ಆರ್. ನಾಯ್ಡು, ಡಾ. ಸುಶ್ರುತ ಗೌಡ, ಭವ್ಯಾ ನರಸಿಂಹಮೂರ್ತಿ ಹೆಸರು ಸೇರಿಸಲಾಗಿದೆ. ತಾವು ಶಿಫಾರಸು ಮಾಡಿದ್ದ ಕೆಲವು ಹೆಸರುಗಳನ್ನು ಕೈಬಿಟ್ಟಿರುವುದಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡಾ ಬೇಸರಗೊಂಡಿದ್ದರು. ಹೀಗಾಗಿ ಕೆಲವರನ್ನು ಪಟ್ಟಿಗೆ ಎಐಸಿಸಿ ಹೊಸತಾಗಿ ಸೇರಿಸಿದೆ ಎಂದೂ ಮೂಲಗಳು ತಿಳಿಸಿವೆ.

ಸಮಾವೇಶದಲ್ಲಿ ಕಿಸೆಗಳವು: 13 ಮಂದಿ ಸೆರೆ

ಮಡಿಕೇರಿ: ರಾಜಕೀಯ ಪಕ್ಷಗಳ ರ್‍ಯಾಲಿ ಹಾಗೂ ಬಹಿರಂಗ ಸಭೆಗಳಲ್ಲಿ ವ್ಯವಸ್ಥಿತವಾಗಿ ಕಿಸೆಗಳ್ಳತನ ಮಾಡುತ್ತಿದ್ದ ತಂಡವೊಂದನ್ನು ಸೋಮವಾರಪೇಟೆ ಉಪವಿಭಾಗದ ಪೊಲೀಸರು ಬಂಧಿಸಿದ್ದಾರೆ. ಶಿವಮೊಗ್ಗದ ಭದ್ರಾವತಿ ಮತ್ತು ಬೆಂಗಳೂರಿನ ಒಟ್ಟು 13 ಮಂದಿ ಆರೋಪಿಗಳನ್ನು ಬಂಧಿಸಿ, ಅವರಿಂದ ₹ 65,960 ನಗದು, 12 ಮೊಬೈಲ್ ಫೋನ್‌ಗಳು ಹಾಗೂ 2 ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ನಿವಾಸಿಗಳಾದ ಜಯಣ್ಣ (38), ಪುಟ್ಟರಾಜು (39), ಸಿ.ನಾಗರಾಜ (43), ಆರ್.ವೆಂಕಟೇಶ (44), ರಾಮು (43), ಉಮೇಶ್ (36), ಜಯಣ್ಣ (53), ಬೋಜಪ್ಪ (50), ಮೆಹಬೂಬ್ ಸುಭಾನ್ (48), ಡಿ.ಗಿರೀಶ (31), ಬಾಲು (35), ಬೆಂಗಳೂರಿನ ಹೆಬ್ಬಗೋಡಿಯ ಹರೀಶ್ (35), ನೆಲಮಂಗಲದ ರಂಗಣ್ಣ (50) ಬಂಧಿತ ಆರೋಪಿಗಳು.

ಆರೋಪಿಗಳು ಮಡಿಕೇರಿ ನಗರ ಮತ್ತು ಕುಶಾಲನಗರ ಪಟ್ಟಣದಲ್ಲಿ ಈಚೆಗೆ ನಡೆದಿದ್ದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮುಖಂಡರು ಮತ್ತು ಕಾರ್ಯಕರ್ತರ ಕಿಸೆಗಳಿಂದ ₹ 1.96 ಲಕ್ಷ ನಗದು ಕಳವು ಮಾಡಿದ್ದರು. ಬಿಜೆಪಿಯ ಹಿರಿಯ ನಾಯಕರಾದ ಕೆ.ಜಿ.ಬೋಪಯ್ಯ ಹಾಗೂ ಎಂ.ಪಿ. ಅಪ್ಪಚ್ಚುರಂಜನ್ ಕೂಡ ಹಣ ಕಳೆದುಕೊಂಡಿದ್ದರು.

ಸಿಇಟಿ ಪ್ರವೇಶ ಪತ್ರ ಬಿಡುಗಡೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇದೇ ಏ.18 ಮತ್ತು 19ರಂದು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಪ್ರವೇಶಪತ್ರ ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳು, ಕೆಇಎ ವೆಬ್‌ಸೈಟ್‌ನಲ್ಲಿ (http://kea.nic.in) ಯುಜಿಸಿಇಟಿ-24 ಲಿಂಕ್ ಮೇಲೆ ಕ್ಲಿಕ್ ಮಾಡಿ ತಮ್ಮ ಅರ್ಜಿಯ ಸಂಖ್ಯೆ, ಹೆಸರು ಮತ್ತು ಜನ್ಮ ದಿನಾಂಕ ನಮೂದಿಸುವುದರ ಮೂಲಕ ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು. 2024ನೇ ಸಾಲಿನ ಸಿಇಟಿಯನ್ನು 3.28 ಲಕ್ಷ ಅಭ್ಯರ್ಥಿಗಳು ತೆಗೆದುಕೊಂಡಿದ್ದಾರೆ. ಏ.20ರಂದು ನಡೆಯುವ ಕನ್ನಡ ಭಾಷಾ ಪರೀಕ್ಷೆಗೂ ಇದೇ ಪ್ರವೇಶ ಪತ್ರ ಅನ್ವಯ ಆಗುತ್ತದೆ ಎಂದು ಕೆಇಎ ಹೇಳಿದೆ.

ಲಿಂಗಸುಗೂರು: ಬಿಸಿಲಿನ ತಾಪಕ್ಕೆ ವ್ಯಕ್ತಿ ಸಾವು?


ಕೃಷ್ಣಪ್ಪ

ಲಿಂಗಸುಗೂರು (ರಾಯಚೂರು ಜಿಲ್ಲೆ): ಇಲ್ಲಿನ ಬಸ್ ನಿಲ್ದಾಣದಲ್ಲಿ ಬುಧವಾರ ವೃದ್ಧರೊಬ್ಬರು ಮೃತಪಟ್ಟಿದ್ದು, ಬಿಸಿಲಿನ ತಾಪದಿಂದ ಅಸ್ವಸ್ಥಗೊಂಡಿರಬೇಕು ಎಂದು ಶಂಕಿಸಲಾಗಿದೆ.

ಮಸ್ಕಿ ತಾಲ್ಲೂಕಿನ ಆನಂದಗಲ್ಲ ಗ್ರಾಮದ ಕೃಷ್ಣಪ್ಪ ಬಳ್ಳಾರೆಪ್ಪ (62) ಅವರು ರಕ್ತದ ಒತ್ತಡ ಹಾಗೂ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾ, ಮಕ್ಕಳ ರಕ್ಷಣಾ ಘಟಕ, ಕೊಪ್ಪಳ
ಜಿಲ್ಲಾ ಆಡಳಿತ ಭವನ, ಹೊಸಪೇಟೆ ರಸ್ತೆ, ಕೊಪ್ಪಳ.
ದೂ.ಸಂ:08539–225030

ಕ್ರ ಸಂ	ವಿವರ		ಭಾವಚಿತ್ರ
1	ಮಗುವಿನ ಹೆಸರು	ರಾಜೇಶ	
2	ವಯಸ್ಸು	5 ವರ್ಷ	
3	ಲಿಂಗ	ಗಂಡು	
4	ತೂಕ	13 ಕೆ.ಜಿ	
5	ಆರೋಗ್ಯದ ಸ್ಥಿತಿ	ಉತ್ತಮ	
6	ಮಗು ದೂರೆತ ಸ್ಥಳ	ಕೊಪ್ಪಳ ನಗರದ ಬಸ್ ನಿಲ್ದಾಣ	

ಈ ಮಗುವಿನ ಪಾಲಕರು, ಪೋಷಕರು ಅಥವಾ ವಾರಸುದಾರರು ಯಾರಾದರೂ ಇದ್ದಲ್ಲಿ ಅಥವಾ ಮಗುವಿನ ಪೋಷಕರ ಕುರಿತು ಮಾಹಿತಿಯುಳ್ಳ ಸಾರ್ವಜನಿಕರು ಈ ಕೆಳಗೆ ನಮೂದಿಸಲಾದ ದೂರವಾಣಿಗೆ ಸಂಪರ್ಕಿಸಲು ಕೋರಿದೆ.

1. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಕೊಪ್ಪಳ ದೂ.ಸಂ– 08539–200755,
2. ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ದೂ.ಸಂ: 08539–225030

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕೊಪ್ಪಳ.

ಡಿಐಪಿಆರ್/ಕೊಪ್ಪಳ/01/ಕೆಎಸ್‌ಎಂಸಿಎ/2024–25

ಮತ ಪತ್ರ

ಮತಕ್ಕೆ ಅಂಟಿರುವ 'ಯಾಚನೆ', 'ದಾನ', 'ನೆರಗೊತ್ತಿ' ಮುಂತಾದ ಪದಗಳು ಅಪವ್ಯಾಖ್ಯಾನಗೊಳ್ಳಲಾಗಿ ದುರ್ಬಳಕೆಯಾಗುತ್ತಿವೆ. ಇದು ಅಪಾತ್ರರಿಗೆ 'ದಾನ' ಮಾಡಿ ಗಳಿಸುವ 'ಪುಣ್ಯ' ವಲ್ಲ. ಲಿಂಗ, ಜಾತಿ, ಧರ್ಮ, ಪ್ರಾಂತ್ಯ, ಹಣ, ಉಡುಗೊರೆ ಮುಂತಾದ ಯಾವುದೇ ಆಮಿಷಕ್ಕೊಳಗಾಗದೆ ಯಾವ ನೆಪವನ್ನೂ ಒಡ್ಡಿ ತಪ್ಪಿಸಿಕೊಳ್ಳದೆ, ಅರ್ಹ ಪ್ರಜೆಯೊಬ್ಬ ಅರ್ಹ ಅಭ್ಯರ್ಥಿಗೆ ಗುಪ್ತವಾಗಿ ಮತ್ತು ನೇರವಾಗಿ ಚಲಾಯಿಸುವ ಸಂವಿಧಾನದತ್ತ ಘನವಾದ ಹಕ್ಕು. ನಿಜಕ್ಕೂ ಆದರ್ಶ ಅಭ್ಯರ್ಥಿ ಅಲಭ್ಯವಾದಾಗ ಕಡಿಮೆ ಕೆಟ್ಟವರನ್ನಾದರೂ ಆಯ್ಕೆ ಮಾಡುವುದು ಪ್ರಜೆಗೆ ಅನಿವಾರ್ಯ. ಬುದ್ಧಿ-ಭಾವಗಳ ಸಮನ್ವಯದಿಂದಾಗುವ ಆಯ್ಕೆ ಮಾತ್ರ ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಬಲ್ಲದು. ಆದರೆ ನಮ್ಮ ಚುನಾವಣೆಗಳಲ್ಲಿ ಬುದ್ಧಿ ಪ್ರಾಧಾನ್ಯಕ್ಕಿಂತ ಭಾವಪ್ರಾಧಾನ್ಯವೇ ಹೆಚ್ಚು. ಇದು ಅಪಾಯಕಾರಿ. ನಮ್ಮಗಳ ಪ್ರಜಾಧರ್ಮ ನಶಿಸಿದರೆ ಮಾತ್ರ ಆಳುವವರ ರಾಜಕೀಯ ಧರ್ಮ ಕಾಣೆಯಾಗಿ ಹೋಗುತ್ತದೆ. ವ್ಯಕ್ತಿ ಧರ್ಮವೆಂಬುದೂ ಪರ ಪ್ರಜಾಧರ್ಮವನ್ನು ದಾರಿತಪ್ಪಿಸಬಲ್ಲುದು. ಚುನಾವಣೆಗಳು ಪ್ರಜಾಪ್ರಭುತ್ವದ ಅಳಿವು-ಉಳಿವಿನ ಗುರುತರ ಪ್ರಶ್ನೆಗಳಾಗಿದ್ದಾ ಒಂದು ವಿಚಿತ್ರ ಭಾವಾವೇಶದಲ್ಲಿ, ಸತ್ಯವನ್ನು ಮರೆಮಾಚುವ ಸದ್ದುಗದ್ದಲದಲ್ಲಿ ಕಳೆದುಹೋಗುತ್ತಿರುವುದು ಆತಂಕಕಾರಿಯಾಗಿದೆ.

ನಾಗತಿಹಳ್ಳಿ ಚಂದ್ರಶೇಖರ

ಮತ ಆಮಿಷ: ಆಯೋಗದ ವಶ

₹26.68 ಕೋಟಿ ನಗದು

ಉಚಿತ ಉಡುಗೊರೆ	₹1.75 ಕೋಟಿ
ಮದ್ಯ	₹33.06 ಕೋಟಿ (10.73 ಲಕ್ಷ ಲೀ)
ಮಾದಕವಸ್ತು	₹3.13 ಕೋಟಿ (286.91 ಕೆ.ಜಿ.)
ಚಿನ್ನ	₹9.43 ಕೋಟಿ (16.02 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ರಾಜಪ್ರಭುತ್ವದ ಕುಡಿ ಪ್ರಜಾಪ್ರಭುತ್ವದ ಪ್ರತಿನಿಧಿಯಾಗಲು ಸ್ಪರ್ಧಿಸಿದ್ದಾರೆ. ಯದುವೀರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕಿದೆ. ಕಾಂಗ್ರೆಸ್‌ಗೆ ಇನ್ನೂ ಕಾಲ ಮಿಂಚಿಲ್ಲ. ಅನ್ನ, ಅಕ್ಷರ, ಆರೋಗ್ಯ ಕೊಟ್ಟ ಯದುವಂಶಕ್ಕೆ ಗೌರವ ಕೊಟ್ಟು ಯದುವೀರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕು. ಮೈಸೂರಿನ ಅರಸರು ಜಾತಿ ಮುಂದಿಟ್ಟುಕೊಂಡು ಅಭಿವೃದ್ಧಿ ಮಾಡಿಲ್ಲ. ಯದುವಂಶದವರು ಜಾತಿ ಮೀರಿದವರು.

ಎಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

ಗೆಲುವು ಅರಸಿ ಮಹಾ ವಲಸೆ

ಬೆಂಗಳೂರು: ಚುನಾವಣಾ ಸಮಯದಲ್ಲಿ ರಾಜಕಾರಣಿಗಳು ಗೆಲುವಿನ ಏಕೈಕ ಉದ್ದೇಶದಿಂದ ಸುರಕ್ಷಿತ ಕ್ಷೇತ್ರಗಳನ್ನು ಹುಡುಕುವುದು ಹೊಸತೇನಲ್ಲ. ಇಂದಿರಾಗಾಂಧಿ, ಸೋನಿಯಾಗಾಂಧಿ, ಸುಷ್ಮಾ ಸ್ವರಾಜ್ ಅಂತಹ ನಾಯಕಿಯರೇ ಗೆಲುವಿನ 'ಗ್ಯಾರಂಟಿ'ಗಾಗಿ ಬೇರೆ ರಾಜ್ಯಗಳಿಂದ ಕರ್ನಾಟಕದವರೆಗೂ ವಲಸೆ ಬಂದಿದ್ದುಂಟು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ ರಾಜ್ಯದ ಹಲವು ನಾಯಕರು ತಾವು ಹಿಂದೆ ಪ್ರತಿನಿಧಿಸಿದ್ದ ಕ್ಷೇತ್ರಗಳಲ್ಲಿ ಸೋಲು ಕಂಡು ಅಥವಾ ಸೋಲುವ ಭೀತಿಯಿಂದ ಮತ್ತೊಂದು ಕ್ಷೇತ್ರದತ್ತ ಹೆಜ್ಜೆ ಹಾಕಿದ್ದಾರೆ. ಒಂದು ಕ್ಷೇತ್ರದಲ್ಲಿ ನೆಲೆ ನಿಂತ ಕೆಲ ರಾಜಕಾರಣಿಗಳು ಇದೇ ಮೊದಲ ಬಾರಿ ತಮ್ಮದಲ್ಲದ ಹೊಸ ಕ್ಷೇತ್ರಗಳಲ್ಲಿ ರಾಜಕೀಯ ಅದೃಷ್ಟವನ್ನು ಪರೀಕ್ಷೆಗೆ ಒಡ್ಡಿದ್ದಾರೆ.

28 ಲೋಕಸಭಾ ಕ್ಷೇತ್ರಗಳ ಪೈಕಿ 12 ಕ್ಷೇತ್ರಗಳಲ್ಲಿ ಹೊರಗಿನ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಅಂತಹ ರಾಜಕೀಯ ನೆಲೆಯ ವಲಸೆ ಪರ್ವದಲ್ಲಿ ಕಾಂಗ್ರೆಸ್‌ನ ಏಳು, ಬಿಜೆಪಿಯ ನಾಲ್ಕು ಹಾಗೂ ಜೆಡಿಎಸ್‌ನ ಒಬ್ಬರು ಇದ್ದಾರೆ. ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಹಾಲಿ ಸಂಸದೆ ಶೋಭಾ ಕರಂದ್ಲಾಜೆ ಕ್ಷೇತ್ರ ತೊರೆದು ಬೆಂಗಳೂರು ಉತ್ತರ ಕ್ಷೇತ್ರದತ್ತ ವಲಸೆ ಬಂದಿದ್ದಾರೆ.

	ಎಲ್ಲಿಂದ?	ಎಲ್ಲಿಗೆ?
ಎಚ್.ಡಿ. ಕುಮಾರಸ್ವಾಮಿ ಜೆಡಿಎಸ್	ರಾಮನಗರ	ಮಂಡ್ಯ
ಗೋವಿಂದ ಕಾರಜೋಳ ಬಿಜೆಪಿ	ಬಾಗಲಕೋಟೆ	ಚಿತ್ರದುರ್ಗ
ವಿ. ಸೋಮಣ್ಣ ಬಿಜೆಪಿ	ಬೆಂಗಳೂರು	ತುಮಕೂರು
ಶೋಭಾ ಕರಂದ್ಲಾಜೆ ಬಿಜೆಪಿ	ಉಡುಪಿ-ಚಿಕ್ಕಮಗಳೂರು	ಬೆಂಗಳೂರು ಉತ್ತರ
ಜಗದೀಶ ಶೆಟ್ಟರ್ ಬಿಜೆಪಿ	ಧಾರವಾಡ	ಬೆಳಗಾವಿ
ಆನಂದ ಗಡ್ಡದೇವರಮಠ ಕಾಂಗ್ರೆಸ್	ಬೆಳಗಾವಿ	ಹಾವೇರಿ
ಅಂಜಲಿ ನಿಂಬಾಳ್ಕರ್ ಕಾಂಗ್ರೆಸ್	ಬೆಳಗಾವಿ	ಉತ್ತರ ಕನ್ನಡ
ಜಿ.ಕುಮಾರ ನಾಯಕ ಕಾಂಗ್ರೆಸ್	ತುಮಕೂರು	ರಾಯಚೂರು
ಸಂಯುಕ್ತಾ ಪಾಟೀಲ ಕಾಂಗ್ರೆಸ್	ವಿಜಯಪುರ	ಬಾಗಲಕೋಟೆ
ಸುನಿಲ್ ಬೋಸ್ ಕಾಂಗ್ರೆಸ್	ಮೈಸೂರು	ಚಾಮರಾಜನಗರ
ಕೆ.ವಿ. ಗೌತಮ್ ಕಾಂಗ್ರೆಸ್	ಬೆಂಗಳೂರು	ಕೋಲಾರ
ರಕ್ಷಾ ರಾಮಯ್ಯ ಕಾಂಗ್ರೆಸ್	ಬೆಂಗಳೂರು	ಚಿಕ್ಕಬಳ್ಳಾಪುರ

ಚುನಾವಣೆ ಬಂದಾಗಲಷ್ಟೇ ಗಡಿ ಗುಮ್ಮ

• ರಾಹುಲ ಬೆಳಗಲಿ

ಬೇಸಿಗೆಯ ಸುಡು ಬಿಸಿಲಿನಂತೆ ತಾರಕಕ್ಕೇರಿ ತಣ್ಣಗಾಗುವ ಗಡಿ ವಿವಾದ ಈಗ ಮತ್ತೆ ಮುಂಚೂಣಿಗೆ ಬಂದಿದೆ. 'ಬೇರೆ ಎಂಥದ್ದೇ ತುರ್ತು ಇರಲಿ, ಎಲ್ಲದಕ್ಕೂ ಮೊದಲು ಗಡಿ ಸಮಸ್ಯೆ ಬಗೆಹರಿಯಬೇಕು' ಎಂಬ ಬೇಡಿಕೆ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಆದ್ಯತೆ ಪಡೆಯುತ್ತದೆ. ಈಗಲೂ ಗಡಿ ವಿಷಯ ಮುಂದಿರಿಸಿಕೊಂಡು 'ಪ್ರಭಾವ' ಬೀರುವ ಮತ್ತು 'ಐಡೆಂಟಿಟಿ' ಸ್ಥಾಪಿಸಿಕೊಳ್ಳುವ ಪ್ರಯತ್ನ ನಡೆದಿದೆ.

ಗಡಿ ವಿಷಯವನ್ನು 'ಸುದ್ದಿ'ಯಲ್ಲಿ ಇಡಲು ಏನೆಲ್ಲ ಮಾಡಬೇಕೋ, ಅದರದ್ದೆಲ್ಲ 'ತಯಾರಿ' ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಡೆಸಿದೆ. ಬೆಳಗಾವಿ ಮತ್ತು ಚಿಕ್ಕೋಡಿ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ಸೇರಿಸಿ 'ಗಡಿ ಸಮಸ್ಯೆ ಬಗೆಹರಿಸಿ' ಎಂಬ ವಿಷಯಕ್ಕೆ ಅಭಿಯಾನದ ಸ್ವರೂಪ ನೀಡಲು ಯೋಜನೆ ರೂಪಿಸಿದೆ.

ಮರಾಠಿ ಭಾಷಿಕರ ಒಲವು ಗಳಿಸುವ ಮತ್ತು ಗಡಿಯಲ್ಲಿನ 865 ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಏಕಮೇವ ಗುರಿ ಹೊತ್ತ ಎಂಇಎಸ್; ಈ ಸಲದ ಚುನಾವಣೆಯಲ್ಲಿ ತನ್ನ ಅಭ್ಯರ್ಥಿಗಳ ಪರ ಪ್ರಚಾರ ಮಾಡುವ ನೆಪದಲ್ಲಿ ಗಡಿ ವಿಷಯಕ್ಕೆ ಭಾವನಾತ್ಮಕ ಸ್ಪರ್ಶ ನೀಡುವ ಉದ್ದೇಶವೂ ಹೊಂದಿದೆ. ಈ ಎಲ್ಲಾ ಬೆಳವಣಿಗೆಗಳು ಇತ್ತೀಚಿನದ್ದಲ್ಲ. ಇದಕ್ಕೆ ದಶಕಗಳ ಹಿನ್ನೆಲೆಯಿದೆ.

'ಬೆಳಗಾವಿ, ಬೀದರ್, ಭಾಲ್ಕಿ, ಖಾನಾಪುರ, ನಿಪ್ಪಾಣಿ, ಕಾರವಾರ ಸೇರಿಸಿ ಸಂಯುಕ್ತ ಮಹಾರಾಷ್ಟ್ರ ಆಗಲೇಬೇಕು' ಎಂಬ ಘೋಷಣೆಯೊಂದಿಗೆ ಗಡಿ ವಿಷಯ ಕೇಂದ್ರೀಕರಿಸಿ ಒಂದಿಲ್ಲೊಂದು ಸ್ವರೂಪದಲ್ಲಿ 'ಪ್ರಭಾವ' ಬೀರಲು ಯತ್ನಿಸುವ ಎಂಇಎಸ್. ವಿಧಾನಸಭೆ ಚುನಾವಣೆಗಳಲ್ಲಿ ಮಾತ್ರ ಇಂತಿಷ್ಟು ಸ್ಥಾನ ಗಳಿಸಿದೆ ಹೊರತು ಲೋಕಸಭಾ ಚುನಾವಣೆಯಲ್ಲಿ ಖಾತೆ ತೆರೆಯಲು ಸಾಧ್ಯವಾಗಿಲ್ಲ. ಇತ್ತೀಚೆಗೆ 2013ರ ವಿಧಾನಸಭೆ ಚುನಾವಣೆಯಲ್ಲಿ 2 ಸ್ಥಾನ ಗೆದ್ದಿದ್ದು ಬಿಟ್ಟರೆ,2018 ಮತ್ತು 2023ರ ಚುನಾವಣೆಯಲ್ಲಿ ಒಂದು ಸ್ಥಾನವೂ ಗೆಲ್ಲಲಿಲ್ಲ.

'ಗಡಿ ವಿವಾದ ಎಂಬುದಿಲ್ಲ. ಬೆಳಗಾವಿ ಕರ್ನಾಟಕದ್ದು. ಇಲ್ಲಿನ ಸುವರ್ಣ ಸೌಧದಲ್ಲಿ ನಿಯಮಿತವಾಗಿ ವಿಧಾನಮಂಡಲ ಅಧಿವೇಶನ ನಡೆಯುತ್ತವೆ' ಎಂದು ರಾಜ್ಯ ಸರ್ಕಾರ ಹಲವು ಸಲ ಹೇಳಿದೆ. ಆದರೆ, ಇದನ್ನು ಸುತಾರಾಂ ಒಪ್ಪದ ಎಂಇಎಸ್‌ನ ಬೇಡಿಕೆಗೆ ಪೂರಕವಾಗಿ ಮಹಾರಾಷ್ಟ್ರ ಸರ್ಕಾರ, 'ಬೆಳಗಾವಿ ಸೇರಿ ಗಡಿಪ್ರದೇಶದ 865 ಗ್ರಾಮಗಳು ಮಹಾರಾಷ್ಟ್ರಕ್ಕೆ ಸೇರಬೇಕು. ಅಲ್ಲಿ ಮರಾಠಿ ಭಾಷಿಕರ ಸಂಖ್ಯೆ ಹೆಚ್ಚಿದೆ. ಅವರನ್ನು ಕೈಬಿಡಲ್ಲ' ಎಂದು ಹೇಳುತ್ತದೆ.

ಇದರ ಇತ್ಯರ್ಥಕ್ಕೆಂದೇ 2022ರ ಡಿಸೆಂಬರ್ 14ರಂದು ಕೇಂದ್ರದ ಗೃಹ ಸಚಿವ ಅಮಿತ್ ಶಾ, ಕರ್ನಾಟಕ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ನೇತೃತ್ವದಲ್ಲಿ 'ಸಮನ್ವಯ ಸಮಿತಿ' ರಚನೆಯಾಯಿತು.

ಗಡಿ ವಿವಾದ ಸುಪ್ರೀಂಕೋರ್ಟ್‌ನಲ್ಲಿ ಬಗೆಹರಿಯುವವರೆಗೆ 'ಹಕ್ಕು ಸಾಧಿಸುವ ಹೇಳಿಕೆ' ನೀಡದಂತೆ ತಾಕೀತು ಮಾಡಲಾಯಿತು. ಆದರೆ, ನಂತರದ ದಿನಗಳಲ್ಲಿ ಸಮಿತಿಗೆ ಸಂಬಂಧಿಸಿದಂತೆ ಪ್ರಗತಿ ಕಾಣಲಿಲ್ಲ. ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಸಮಿತಿಗೆ ಸಚಿವರ ನೇಮಕಾತಿ ಆಗಲಿಲ್ಲ. ಸಮಿತಿ ನಿಯಮಗಳ ಪಾಲನೆಗೆ ಕೇಂದ್ರ ಸರ್ಕಾರ ನೋಟಿಸ್ ನೀಡಿದರೂ ಪರಿಣಾಮ ಬೀರಲಿಲ್ಲ.

ಬೆಳಗಾವಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕರ್ನಾಟಕ ಗಡಿ ಮತ್ತು ನದಿಗಳ ಸಂರಕ್ಷಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಶಿವರಾಜ ಪಾಟೀಲ,'ಬೆಳಗಾವಿಯ ಸುವರ್ಣ ಸೌಧದಲ್ಲಿ ಆಯೋಗದ ಪ್ರಾದೇಶಿಕ ಕಚೇರಿಯನ್ನು ತೆರೆಯಲು ಶಿಫಾರಸು ಮಾಡುವೆ. ಜನರಿಗೆ ಅಹವಾಲು ಸಲ್ಲಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಅನುಕೂಲವಾಗಲಿದೆ' ಎಂದಿದ್ದರು. ಆದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ.

'ಗಡಿ ಸಮಸ್ಯೆ ಎಂಬುದು ರಾಜಕೀಯ ಪಕ್ಷಗಳು ಮತ್ತು ಸಂಘಸಂಸ್ಥೆಗಳ ಸೃಷ್ಟಿಯೇ ಹೊರತು ಕನ್ನಡ ಮತ್ತು ಮರಾಠಿ ಭಾಷಿಕರ ನಡುವೆ ವೈಮನಸ್ಸು, ತಾರತಮ್ಯ ಇಲ್ಲ. ಕರ್ನಾಟಕ ಮತ್ತು ಮಹಾರಾಷ್ಟ್ರದ ಜನರ ವೈವಾಹಿಕ ಸಂಬಂಧಗಳು ಮತ್ತು ಸಾಂಸ್ಕೃತಿಕ ಅನುಬಂಧಗಳಿವೆ. ಬೆಳಗಾವಿ ಜಿಲ್ಲೆಯ ಬಹುತೇಕ ಮಂದಿ ಕನ್ನಡದ ಜೊತೆ ಮರಾಠಿಯನ್ನೂ ಸ್ಪಷ್ಟವಾಗಿ ಮಾತನಾಡುತ್ತಾರೆ. ಎರಡೂ ಭಾಷೆಗಳ ಮೇಲೆ ದಟ್ಟ ಪ್ರಭಾವವಿದೆ. 'ಗಡಿ ಸಮಸ್ಯೆ' ಜೀವಂತವಾಗಿಡಲು ಕೆಲ ಸಂಘಟನೆಯವರು ಪ್ರಯತ್ನಿಸುತ್ತಾರೆ' ಎನ್ನುತ್ತಾರೆ ಬೆಳಗಾವಿಯ ನಿವಾಸಿಗಳು.

ಆದರೆ, ಅಲ್ಲಿನ ಕನ್ನಡಪರ ಹೋರಾಟಗಾರರಲ್ಲಿ ಕರ್ನಾಟಕ ಸರ್ಕಾರದ ಬಗ್ಗೆ ಕೊಂಚ ಬೇಸರವಿದೆ. 'ಬೆಳಗಾವಿಯನ್ನು ಹೇಗಾದರೂ ಮಾಡಿ ತನ್ನದಾಗಿಸಿಕೊಳ್ಳಲು ಮಹಾರಾಷ್ಟ್ರ ಸರ್ಕಾರದ ನಿರಂತರ ಪ್ರಯತ್ನಕ್ಕೆ ಕರ್ನಾಟಕ ಸರ್ಕಾರವು ಪ್ರತಿರೋಧ ಒಡ್ಡುವುದಿಲ್ಲ. ಗಡಿಪ್ರದೇಶವನ್ನು ಸುಭದ್ರವಾಗಿ ಉಳಿಸಿಕೊಳ್ಳಲು ಮತ್ತು ಕನ್ನಡಿಗರಲ್ಲಿ ಆತ್ಮವಿಶ್ವಾಸ ತುಂಬಲು ಪ್ರಯತ್ನಿಸುವುದಿಲ್ಲ. ಎಂಇಎಸ್‌ಗೆ ತಕ್ಕ ಉತ್ತರ ನೀಡುವುದಿಲ್ಲ. ಮಹಾರಾಷ್ಟ್ರ ಸರ್ಕಾರವು ಗಡಿ ಸಚಿವರನ್ನು ನೇಮಿಸಿ, ಗಡಿ ವಿಷಯಕ್ಕೆ ಆದ್ಯತೆ ನೀಡುತ್ತದೆ. ಆದರೆ, ಕರ್ನಾಟಕ ಸರ್ಕಾರವು ಗಡಿ ಸಚಿವರ ನೇಮಕಾತಿ ಇರಲಿ, ಗಡಿ ಪ್ರದೇಶದ ಜನರ ಬದುಕಿನ ಸ್ಥಿತಿ ಬಗ್ಗೆಯೂ ಕಾಳಜಿ ವಹಿಸಲ್ಲ' ಎಂದು ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ನೋವಿನಿಂದ ಹೇಳುತ್ತಾರೆ.

'ಎಂಇಎಸ್‌ನ ಚುನಾವಣೆ ಪ್ರಣಾಳಿಕೆಯಲ್ಲಿ ಗಡಿ ವಿಚಾರವೇ ಪ್ರಧಾನವಾಗಿರುತ್ತದೆ. ಆದರೆ, ಬಿಜೆಪಿ ಮತ್ತು ಕಾಂಗ್ರೆಸ್‌ನವರು ಗಡಿ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಎಂಇಎಸ್ ಹೊರತುಪಡಿಸಿದರೆ, ಬೇರೆ ಯಾವ ಪಕ್ಷದವರು ಚುನಾವಣೆಯಲ್ಲಿ ಗಡಿ ವಿಷಯ ಪ್ರಸ್ತಾಪಿಸಲ್ಲ' ಎನ್ನುತ್ತಾರೆ ಅವರು.

> ಗಡಿ ವಿಷಯದ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು? ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಯಾವ ನಿಲುವು ತಳೆಯುವರು ಎಂಬುದನ್ನು ಸ್ಪಷ್ಟಪಡಿಸಬೇಕು. ಎಂಇಎಸ್‌ಗೆ ತಕ್ಕ ಉತ್ತರ ನೀಡಬೇಕು
> **ಅಶೋಕ ಚಂದರಗಿ,** ಅಧ್ಯಕ್ಷ, ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

> 865 ಹಳ್ಳಿ- ಪಟ್ಟಣಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಮತ್ತು ಮರಾಠಿ ಭಾಷಿಕರ ಹಿತಾಸಕ್ತಿ ಕಾಯ್ದುಕೊಳ್ಳಬೇಕು ಎಂಬ ವಿಷಯವನ್ನು ಕೇಂದ್ರೀಕರಿಸಿ ಎಂಇಎಸ್ ಚುನಾವಣೆಯಲ್ಲಿ ಸ್ಪರ್ಧಿಸಲಿದೆ
> **ಮನೋಹರ ಕಿಣೇಕರ,** ಎಂಇಎಸ್ ಮುಖಂಡ

ಗಡಿಯಲ್ಲಿ ವಿಮೆ ಪ್ರಭಾವ...

ಬೆಳಗಾವಿಯಲ್ಲಿನ ಮರಾಠಿಗರನ್ನು ಸೆಳೆಯುವುದು ಅಲ್ಲದೇ ಗಡಿಯಲ್ಲಿ ತನ್ನ ಪ್ರಭಾವ ಬೇರೂರುವಂತೆ ಮಾಡಲು ಮಹಾರಾಷ್ಟ್ರ ಸರ್ಕಾರವು ಮಹಾರಾಷ್ಟ್ರದ ಶಿನೋಳಿ ಗ್ರಾಮದಲ್ಲಿ (ಬೆಳಗಾವಿಯಿಂದ 15 ಕಿ.ಮೀ. ದೂರ) ವಿಶೇಷ ಕಚೇರಿ ತೆರೆದು, ಅಧಿಕಾರಿಗಳನ್ನೂ ನಿಯೋಜಿಸಿದೆ.

'ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ವಿಮೆ' ಯೋಜನೆ ಮೂಲಕ ಗಡಿ ಗ್ರಾಮ, ಪಟ್ಟಣದ ನಿವಾಸಿಗಳನ್ನು ಸೆಳೆಯಲು ಬೆಳಗಾವಿ ನಗರದಲ್ಲೇ 5 ಕೇಂದ್ರ ತೆರೆದಿತ್ತು. ಆದರೆ ಕನ್ನಡಪರ ಹೋರಾಟಗಾರರು, ಸಂಘಸಂಸ್ಥೆಗಳ ಹೋರಾಟದ ಪರಿಣಾಮ ಮತ್ತು ಜಿಲ್ಲಾಡಳಿತದ ಆದೇಶದ ಮೇರೆಗೆ 5 ಕೇಂದ್ರಗಳು ಮುಚ್ಚಲ್ಪಟ್ಟವು. ಆದರೆ, ಶಿನೋಳಿ ಗ್ರಾಮದಲ್ಲಿ ಆರೋಗ್ಯ ವಿಮೆಗೆ ನೋಂದಣಿ ಪ್ರಕ್ರಿಯೆ ನಡೆದಿದೆ.

ಅಭ್ಯರ್ಥಿಗಳ ಆಸ್ತಿ ವಿವರ

ಬುಧವಾರ ಹಲವು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ತಾವು ಘೋಷಿಸಿಕೊಂಡ ಆಸ್ತಿ ವಿವರ ಇಲ್ಲಿದೆ. ಬುಧವಾರ ನಾಮಪತ್ರ ಸಲ್ಲಿಸಿದವರಲ್ಲಿ ಕಾಂಗ್ರೆಸ್‌ನ ಮನ್ಸೂರ್ ಅಲಿಖಾನ್ ಅತಿ ಹೆಚ್ಚು ಆಸ್ತಿ ಹೊಂದಿದ ಅಭ್ಯರ್ಥಿ ಎನಿಸಿದ್ದಾರೆ.

ಮನ್ಸೂರ್ ಅಲಿಖಾನ್

ಕ್ಷೇತ್ರ: ಬೆಂಗಳೂರು ಕೇಂದ್ರ		
ಪಕ್ಷ	ಕಾಂಗ್ರೆಸ್	ಪತ್ನಿ: ತಸ್ಬಿಯಾ ಖಾನಂ
ಒಟ್ಟು ಆಸ್ತಿಯ ಮೌಲ್ಯ	₹92.81 ಕೋಟಿ	27.15ಕೋಟಿ
ನಗದು	₹4.50 ಲಕ್ಷ	₹4 ಲಕ್ಷ
ಒಟ್ಟು ಚರಾಸ್ತಿ	₹14.81ಕೋಟಿ	10.34 ಕೋಟಿ
ಸ್ಥಿರಾಸ್ತಿ	₹77.99ಕೋಟಿ	16.80ಕೋಟಿ
ವಾಹನ	ಜೀಪ್ ಕಾರು	ಬಿಎಂಡಬ್ಲು ಕಾರು, ಹುಂಡೈ ಕ್ರೆಟಾ ಕಾರು
ಚಿನ್ನ	2.2 ಕೆ.ಜಿ	3.7 ಕೆ.ಜಿ.
ಸಾಲ	₹6.84 ಕೋಟಿ	₹2.19ಕೋಟಿ
ಅಪರಾಧ ಪ್ರಕರಣ	1	

ಎಂ.ವಿ. ರಾಜೀವ್ ಗೌಡ

ಕ್ಷೇತ್ರ: ಬೆಂಗಳೂರು ಉತ್ತರ		
ಪಕ್ಷ	ಕಾಂಗ್ರೆಸ್	ಪತ್ನಿ- ಶರ್ಮಿಳಾ ಭಕ್ತರಾಮ್
ಒಟ್ಟು ಆಸ್ತಿಯ ಮೌಲ್ಯ	₹34.58 ಕೋಟಿ	₹99.42ಕೋಟಿ
ನಗದು	₹4 ಲಕ್ಷ	₹2.50 ಲಕ್ಷ
ಒಟ್ಟು ಚರಾಸ್ತಿ	₹7.84 ಕೋಟಿ	₹6.85ಕೋಟಿ
ಸ್ಥಿರಾಸ್ತಿ	₹26.74 ಕೋಟಿ	₹92.57 ಕೋಟಿ
ವಾಹನ	ಟೊಯಟೊ ಇನ್ನೋವಾ	ಹುಂಡೈ ಕಾರು
ಡೈಮಂಡ್		₹25 ಲಕ್ಷ ಮೌಲ್ಯ
ಚಿನ್ನ	-	200 ಗ್ರಾಂ
ಬೆಳ್ಳಿ	-	
ಸಾಲ	-	

ಎಂ. ಲಕ್ಷ್ಮಣ

ಕ್ಷೇತ್ರ: ಮೈಸೂರು-ಮಡಿಕೇರಿ				
ಪಕ್ಷ	ಕಾಂಗ್ರೆಸ್	ಪತ್ನಿ: ರೂಪಶ್ರೀ	ಪುತ್ರಿ: ಎಲ್. ವರ್ಷಿತಾ	ಪುತ್ರ: ಆದಿತ್ಯ ಲಕ್ಷ್ಮಣ
ಒಟ್ಟು ಆಸ್ತಿಯ ಮೌಲ್ಯ	₹1.96 ಕೋಟಿ	₹39.50 ಲಕ್ಷ	₹45.90 ಲಕ್ಷ	₹18.96 ಲಕ್ಷ
ನಗದು	₹6.45 ಲಕ್ಷ	5.31 ಲಕ್ಷ	₹1 ಲಕ್ಷ	₹5ಸಾವಿರ
ಒಟ್ಟು ಚರಾಸ್ತಿ	₹46.65 ಲಕ್ಷ	39.50 ಲಕ್ಷ	45.90 ಲಕ್ಷ	₹18.96 ಲಕ್ಷ
ಸ್ಥಿರಾಸ್ತಿ	₹1.50 ಕೋಟಿ	ಇಲ್ಲ	ಇಲ್ಲ	ಇಲ್ಲ
ವಾಹನ	₹16 ಲಕ್ಷ ಮೌಲ್ಯದ ಇನೋವಾ ಕಾರ್	2 ಹೋಂಡಾ ಆಕ್ಟಿವಾ ಸ್ಕೂಟರ್	₹15 ಲಕ್ಷ ಮೌಲ್ಯದ ಕೊರೊಲ್ಲಾ ಆಲ್ಟಿಸ್ ಕಾರ್	ಇಲ್ಲ
ಚಿನ್ನ	ಇಲ್ಲ	ಚಿನ್ನ+ಬೆಳ್ಳಿ: 100 ಗ್ರಾಂ.	ಇಲ್ಲ	ಇಲ್ಲ
ಬೆಳ್ಳಿ	ಇಲ್ಲ		ಇಲ್ಲ	ಇಲ್ಲ
ಸಾಲ	₹35.30 ಲಕ್ಷ	ಇಲ್ಲ	ಇಲ್ಲ	ಇಲ್ಲ
ಅಪರಾಧ ಪ್ರಕರಣ	4 (ಬಿಜೆಪಿ ಸಂಸದ ಪ್ರತಾಪ ಸಿಂಹ 2 ಮಾನನಷ್ಟ ಮೊಕದ್ದಮೆ ಪ್ರಕರಣ ದಾಖಲಿಸಿದ್ದಾರೆ)			

ಶೋಭಾ ಕರಂದ್ಲಾಜೆ

ಕ್ಷೇತ್ರ: ಬೆಂಗಳೂರು ಉತ್ತರ	
ಪಕ್ಷ	ಬಿಜೆಪಿ
ಒಟ್ಟು ಆಸ್ತಿಯ ಮೌಲ್ಯ	₹16.02 ಕೋಟಿ
ಚರಾಸ್ತಿ	₹9.23 ಕೋಟಿ
ಸ್ಥಿರಾಸ್ತಿ	₹6.78 ಕೋಟಿ
ವಾಹನ	ಹೋಂಡಾ ಆಕ್ಟಿವಾ(ದ್ವಿಚಕ್ರವಾಹನ)
ಚಿನ್ನ	1 ಕೆ.ಜಿ ಚಿನ್ನದ ಬಿಸ್ಕತ್, 650 ಗ್ರಾಂ ಆಭರಣ
ಬೆಳ್ಳಿ	1,620 ಗ್ರಾಂ
ಸಾಲ	₹4.06 ಕೋಟಿ
ಅಪರಾಧ ಪ್ರಕರಣ	5

ಸುನೀಲ್ ಬೋಸ್

ಕ್ಷೇತ್ರ: ಚಾಮರಾಜನಗರ	
ಪಕ್ಷ	ಕಾಂಗ್ರೆಸ್
ಒಟ್ಟು ಆಸ್ತಿಯ ಮೌಲ್ಯ	₹7.84 ಕೋಟಿ
ನಗದು	₹9.09 ಲಕ್ಷ
ಒಟ್ಟು ಚರಾಸ್ತಿ	₹3.53 ಕೋಟಿ
ಸ್ಥಿರಾಸ್ತಿ	₹4.31ಕೋಟಿ
ವಾಹನ	ಇಲ್ಲ
ಚಿನ್ನ	620 ಗ್ರಾಂ
ಬೆಳ್ಳಿ	3.200 ಕೆಜಿ
ಸಾಲ	₹5.56 ಕೋಟಿ
ಅಪರಾಧ ಪ್ರಕರಣ	1

(2017ರ ಮಾರ್ಚ್ 23ರಂದು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮಜ್ಜಿಗೆ, ಹಣ್ಣು ವಿತರಣೆ ಮಾಡಿದ ಸಂಬಂಧ ನಂಜನಗೂಡು ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ)

ಆರ್. ಪದ್ಮರಾಜ್

ಕ್ಷೇತ್ರ: ದಕ್ಷಿಣ ಕನ್ನಡ		
ಪಕ್ಷ	ಕಾಂಗ್ರೆಸ್	ಪತ್ನಿ: ರಶ್ಮಿ
ಒಟ್ಟು ಆಸ್ತಿಯ ಮೌಲ್ಯ	₹1.48 ಕೋಟಿ	₹35.36 ಲಕ್ಷ
ನಗದು	₹1.40 ಲಕ್ಷ	₹89 ಸಾವಿರ
ಒಟ್ಟು ಚರಾಸ್ತಿ	₹64.91 ಲಕ್ಷ	₹35.36 ಲಕ್ಷ
ಸ್ಥಿರಾಸ್ತಿ	₹83.10 ಲಕ್ಷ	ಇಲ್ಲ
ವಾಹನ: 1 ಇನ್ನೋವಾ ಕಾರು ₹37.40 ಲಕ್ಷ		ಇಲ್ಲ
ಚಿನ್ನ	₹12.40 ಲಕ್ಷ	₹33.00 ಲಕ್ಷ
ಬೆಳ್ಳಿ	ಇಲ್ಲ	ಇಲ್ಲ
ಸಾಲ	₹1.26 ಕೋಟಿ	ಇಲ್ಲ
ಅಪರಾಧ ಪ್ರಕರಣ	ಇಲ್ಲ	-

ಕೋಟ ಶ್ರೀನಿವಾಸ ಪೂಜಾರಿ

ಕ್ಷೇತ್ರ: ಉಡುಪಿ-ಚಿಕ್ಕಮಗಳೂರು		
ಪಕ್ಷ	ಬಿಜೆಪಿ	ಪತ್ನಿ: ಶಾಂತಾ
ಒಟ್ಟು ಆಸ್ತಿಯ ಮೌಲ್ಯ	₹1.12 ಕೋಟಿ	₹1.73 ಕೋಟಿ
ನಗದು	₹90 ಸಾವಿರ	₹20 ಸಾವಿರ
ಒಟ್ಟು ಚರಾಸ್ತಿ	₹31.95 ಲಕ್ಷ	₹10.29 ಲಕ್ಷ
ಸ್ಥಿರಾಸ್ತಿ	₹79.95 ಲಕ್ಷ	₹1.62 ಕೋಟಿ
ವಾಹನ: ಮಾರುತಿ ಆಲ್ಟೋ, ಇನ್ನೋವಾ ಮೌಲ್ಯ ₹23.50 ಲಕ್ಷ		ಇಲ್ಲ
ಚಿನ್ನ	₹63,850	₹9.57 ಲಕ್ಷ
ಬೆಳ್ಳಿ	ಇಲ್ಲ	ಇಲ್ಲ
ಸಾಲ	₹69 ಲಕ್ಷ	₹35.43 ಲಕ್ಷ
ಅಪರಾಧ ಪ್ರಕರಣ	ಇಲ್ಲ	-



ಕೆ. ಜಯಪ್ರಕಾಶ್ ಹೆಗ್ಡೆ

ಕ್ಷೇತ್ರ: ಉಡುಪಿ-ಚಿಕ್ಕಮಗಳೂರು		
ಪಕ್ಷ	ಕಾಂಗ್ರೆಸ್	ಪತ್ನಿ: ಶೋಭಾ
ಒಟ್ಟು ಆಸ್ತಿಯ ಮೌಲ್ಯ	₹13.47 ಕೋಟಿ	₹1.86 ಕೋಟಿ
ನಗದು	₹85 ಸಾವಿರ	₹92 ಸಾವಿರ
ಒಟ್ಟು ಚರಾಸ್ತಿ	₹35.34 ಲಕ್ಷ	₹81.46 ಲಕ್ಷ
ಸ್ಥಿರಾಸ್ತಿ	₹13.12 ಕೋಟಿ	₹1.05 ಕೋಟಿ
ವಾಹನ	ಇಲ್ಲ	ಇಲ್ಲ
ಚಿನ್ನ	₹1.84 ಲಕ್ಷ	₹64.41 ಲಕ್ಷ
ಬೆಳ್ಳಿ	₹1.29 ಲಕ್ಷ	ಇಲ್ಲ
ಸಾಲ	₹15 ಲಕ್ಷ	ಇಲ್ಲ
ಅಪರಾಧ ಪ್ರಕರಣ	ಇಲ್ಲ	-

ಕಣದತ್ತ ಕಿರುನೋಟ

ಚಿತ್ರದುರ್ಗ

ಅಭ್ಯರ್ಥಿಗಳು



ಬಿ.ಎನ್.ಚಂದ್ರಪ್ಪ
ಕಾಂಗ್ರೆಸ್

ಗೋವಿಂದ ಕಾರಜೋಳ
ಬಿಜೆಪಿ

ಅಭ್ಯರ್ಥಿಗಳಿಗೆ ಬಿಸಿತುಪ್ಪವಾದ ಬಂಡಾಯ

ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಬಂಡಾಯ ಬಿಸಿತುಪ್ಪವಾಗಿದೆ. ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡ ಆಕಾಂಕ್ಷಿಗಳು ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ಬೀದಿ ರಂಪ ಮಾಡುತ್ತಿದ್ದಾರೆ. ಬಿಜೆಪಿಯಲ್ಲಿ ಬಂಡಾಯ ಶಮನವಾಗುತ್ತಿದ್ದಂತೆ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಹೊಗೆ ಕಾಣಿಸಿಕೊಂಡಿದೆ.

ಕಾಂಗ್ರೆಸ್‌ನಿಂದ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಅವರನ್ನು ಕಣಕ್ಕೆ ಇಳಿಸಲಾಗಿದೆ. ಬಿಜೆಪಿಯು ಹಾಲಿ ಸಂಸದ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಬದಲಿಗೆ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಗೆ ಟಿಕೆಟ್ ನೀಡಿದೆ. 'ಹೊರಗಿನವರು' ಬೇಡ ಎಂದರೂ ಎರಡೂ ಪಕ್ಷಗಳು ಹೊರಗಿನವರನ್ನೇ ಅಭ್ಯರ್ಥಿಯನ್ನಾಗಿ ಘೋಷಿಸಿವೆ. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿಗೆ ವೇದಿಕೆ ಸಜ್ಜಾಗಿದೆ.

ಚಿತ್ರದುರ್ಗ ಜಿಲ್ಲೆಯ ಆರು ಹಾಗೂ ತುಮಕೂರು ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳು ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಕ್ಷೇತ್ರವನ್ನು ಇದುವರೆಗೂ 'ಹೊರಗಿನವರೇ' ಪ್ರತಿನಿಧಿಸಿದ್ದು ಹೆಚ್ಚು ಎಂಬ ಅಸಮಾಧಾನ ಮತದಾರರಲ್ಲಿದೆ. 'ಸ್ಥಳೀಯ ಅಭ್ಯರ್ಥಿ' ಹೆಸರಿನಲ್ಲಿ ಅಖಾಡಕ್ಕೆ ಇಳಿಯಲು ಬಿಜೆಪಿ ಶಾಸಕ ಎಂ.ಚಂದ್ರಪ್ಪ ಅವರ ಪುತ್ರ ಎಂ.ಸಿ.ರಘುಚಂದನ್ ಸಜ್ಜಾಗಿದ್ದರು. ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಧ್ಯಪ್ರವೇಶದಿಂದ ಕಮಲ ಪಾಳೆಯದ ಬಂಡಾಯ ಶಮನವಾಗಿದೆ. 'ಭೋವಿ ಸಮುದಾಯಕ್ಕೆ ಅವಕಾಶ ನೀಡಿಲ್ಲ' ಎಂಬ ಅಸಮಾಧಾನ ಕಾಂಗ್ರೆಸ್ ವಿರುದ್ಧ ಶುರುವಾಗಿದೆ. ಕಾಂಗ್ರೆಸ್ ಮುಖಂಡರು ಅಭ್ಯರ್ಥಿ ಬದಲಾವಣೆಗೆ ಪಟ್ಟುಹಿಡಿದಿದ್ದಾರೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್ 7 | ಬಿಜೆಪಿ 1

ಮತದಾರರ ಸಂಖ್ಯೆ

9,19,064 ಪುರುಷರು | 9,22,769 ಮಹಿಳೆಯರು | 104 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 18,41,937

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಎ.ನಾರಾಯಣಸ್ವಾಮಿ	ಬಿಜೆಪಿ	6,26,195
ಸಮೀಪದ ಪ್ರತಿಸ್ಪರ್ಧಿ	ಬಿ.ಎನ್.ಚಂದ್ರಪ್ಪ	ಕಾಂಗ್ರೆಸ್	5,46,017

ಬೆಳಗಾವಿ

ಅಭ್ಯರ್ಥಿಗಳು



ಜಗದೀಶ ಶೆಟ್ಟರ್
ಬಿಜೆಪಿ

ಮೃಣಾಲ್ ಹೆಬ್ಬಾಳಕರ
ಕಾಂಗ್ರೆಸ್

ಹಿರಿಯ– ಕಿರಿಯರ ಮಧ್ಯೆ ಪೈಪೋಟಿ

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಕಣಕ್ಕಿಳಿದ ಕಾರಣ ಬೆಳಗಾವಿ ಲೋಕಸಭಾ ಕ್ಷೇತ್ರ ಗಮನ ಸೆಳೆದಿದೆ. ಈ ಹಿರಿಯ ರಾಜಕಾರಣಿ ಎದುರು ಯುವ ನಾಯಕ, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪುತ್ರ ಮೃಣಾಲ್ ಸ್ಪರ್ಧೆ ಒಡ್ಡಿದ್ದಾರೆ. ನೇರ ಹಣಾಹಣಿ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಬೆಳಗಾವಿ ಕ್ಷೇತ್ರವನ್ನು ಬಿಜೆಪಿಯ 'ಭದ್ರಕೋಟೆ' ಮಾಡಿದವರು ಸುರೇಶ ಅಂಗಡಿ. ಸತತ ನಾಲ್ಕು ಸಲ ಗೆದ್ದ ಅವರು ಒಮ್ಮೆ ಕೇಂದ್ರ ರೈಲ್ವೆ ರಾಜ್ಯ ಸಚಿವರಾಗಿದ್ದರು. ಅಕಾಲಿಕ ನಿಧನರಾದ ಬಳಿಕ ಅವರ ಪತ್ನಿ ಮಂಗಲಾ 2021ರ ಉಪ ಚುನಾವಣೆಯಲ್ಲಿ ಗೆದ್ದರು. ಹೀಗೆ ಬಿಜೆಪಿ ಇಲ್ಲಿ ಸತತ ಐದು ಬಾರಿ ಗೆದ್ದಿದೆ.

ಶೆಟ್ಟರ್ ಅವರು ಅಂಗಡಿ ಕುಟುಂಬದ ಬೀಗರು. ಹೀಗಾಗಿ, ಸಂಸದೆ ಮಂಗಲಾ ಯಾವುದೇ ತಕರಾರಿಲ್ಲದೇ ಕ್ಷೇತ್ರ ಬಿಟ್ಟುಕೊಟ್ಟರು. ಸುರೇಶ ಅಂಗಡಿ ಸಾಧನೆ, ಬಿಜೆಪಿಯ ಮತ ಬ್ಯಾಂಕ್, ಪ್ರಧಾನಿ ಮೋದಿ ಮೇನಿಯಾ, ರಾಮ ಮಂದಿರ... ಹೀಗೆ ಹಲವು ಬಾಣಗಳು ಶೆಟ್ಟರ್ ಬತ್ತಳಿಕೆಯಲ್ಲಿವೆ. ಎರಡು ಅವಧಿಗೆ ಅವರು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದನ್ನು ನೆನಪಿಸಿಕೊಂಡು ಪ್ರಚಾರ ನಡೆಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯಾಗಿ ಲಕ್ಷ್ಮಿ ಹೆಬ್ಬಾಳಕರ ಮಾಡಿದ ಸಾಧನೆ, ಪಂಚ ಗ್ಯಾರಂಟಿಗಳು, ಒಗ್ಗಟ್ಟಾಗಿ ನಿಂತ ಕಾಂಗ್ರೆಸ್ ನಾಯಕರು ಮೃಣಾಲ್ ಬಲ ಹೆಚ್ಚಿಸಿದ್ದಾರೆ. ಪಂಚಮಸಾಲಿ ಮತ್ತು ಅಹಿಂದ ಮತಗಳನ್ನು ಅವರು ನೆಚ್ಚಿಕೊಂಡಿದ್ದಾರೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್ 5 | ಬಿಜೆಪಿ 3 | ಜೆಡಿಎಸ್ 0

ಮತದಾರರ ಸಂಖ್ಯೆ

9,48,282 ಪುರುಷರು | 9,55,725 ಮಹಿಳೆಯರು | 92 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 19,04,099

2021 (ಉಪ ಚುನಾವಣೆ)	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಮಂಗಲಾ ಅಂಗಡಿ	ಬಿಜೆಪಿ	4,40,327
ಸಮೀಪದ ಪ್ರತಿಸ್ಪರ್ಧಿ	ಸತೀಶ ಜಾರಕಿಹೊಳಿ	ಕಾಂಗ್ರೆಸ್	4,35,087

‘ಅಮೃತ’ ಸ್ಪರ್ಶ ಆದೀತೇ ಮತ ‘ಕವಚ’

• ಮಂಜುನಾಥ ಹೆಬ್ಬಾರ್

ನವದೆಹಲಿ: ಭಾರತೀಯರ ದಿನನಿತ್ಯದ ಬದುಕಿನ ಜೀವನಾಡಿ ‘ರೈಲ್ವೆ’. ರಾಷ್ಟ್ರದಲ್ಲಿ ಪ್ರತಿದಿನ ರೈಲಿನಲ್ಲಿ ಪ್ರಯಾಣಿಸುವವರ ಸಂಖ್ಯೆ 2.5 ಕೋಟಿಯಷ್ಟು ಇದೆ. ರೈಲು ಸೇವೆ ಗುಣಮಟ್ಟ ಹಾಗೂ ಸುರಕ್ಷತೆಯನ್ನು ಜಾಗತಿಕ ಮಾನದಂಡಗಳಿಗೆ ಅನುಸಾರವಾಗಿ ಆಧುನೀಕರಿಸುವ ದೀರ್ಘಾವಧಿ ದೃಷ್ಟಿಕೋನದ ಹಲವು ಯೋಜನೆಗಳನ್ನು ಕೇಂದ್ರದ ಬಿಜೆಪಿ ಸರ್ಕಾರ ಅನುಷ್ಠಾನಗೊಳಿಸಿದೆ. ಈ ಉಪಕ್ರಮಗಳು ಲೋಕಸಭಾ ಚುನಾವಣೆಯಲ್ಲಿ ಜನರ ಮೇಲೆ ಪ್ರಭಾವಿಸಿ ಮತಗಳಾಗಿ ‘ಪರಿವರ್ತನೆ’ಯಾಗಲಿದೆ ಎಂಬುದು ಬಿಜೆಪಿಯ ಅಪೇಕ್ಷೆ.

ಬಿಜೆಪಿಗೆ ‘ಹಿಂದಿ ನೆಲದ ಪಕ್ಷ’ ಎಂಬ ಹಣೆಪಟ್ಟಿ ಇದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕೇಸರಿ ಪಾಳಯವನ್ನು ಸುಲಭದಲ್ಲಿ ಗೆಲುವಿನ ದಡ ಮುಟ್ಟಿಸಿದ್ದೇ ಈ ಸೀಮೆಯ ಜನರು. ಉತ್ತರ ಭಾರತದ ಜನರಿಗೆ ರೈಲು ನೆಚ್ಚಿನ ಸಾರಿಗೆ. ಉತ್ತಮ ಪ್ರಯಾಣ ಸೇವೆ ಒದಗಿಸುವ ಉದ್ದೇಶದ ಜತೆಗೆ ಮತಗಳ ಮೇಲೆ ಕಣ್ಣಿಟ್ಟು ರೈಲ್ವೆ ಅಭಿವೃದ್ಧಿಯ ‘ರೈಲು ಗಾಡಿ’ಯನ್ನು ಮತ್ತಷ್ಟು ಮುಂದಕ್ಕೆ ಒಯ್ಯುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ. ಕಳೆದೊಂದು ದಶಕದಲ್ಲಿ ರೈಲು ಪ್ರಯಾಣ ದರ ಹೆಚ್ಚಳ ಆಗಿಲ್ಲ. ಈ ಕೆಲಸಗಳು ರಕ್ಷಾ ‘ಕವಚ’ವಾಗಿ ಚುನಾವಣೆಯಲ್ಲಿ ‘ಅಮೃತ’ ಉಣಿಸಬಹುದು ಎಂಬ ನಿರೀಕ್ಷೆ ಕಮಲ ಪಾಳಯದ್ದು.

ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಹತ್ತು ಹಲವು ಅಭಿವೃದ್ಧಿ ಯೋಜನೆಗಳನ್ನು ಚಾಲನೆ ನೀಡಿದ್ದರು. ಸುಮಾರು 15 ದಿನಗಳವರೆಗೆ ‘ಲೋಕಾರ್ಪಣೆ ಪರ್ವ’ ಮುಂದುವರಿದಿತ್ತು. ನಿತ್ಯವೂ ಒಂದಿಲ್ಲೊಂದು ರೈಲು ಅಭಿವೃದ್ಧಿ ಯೋಜನೆ ಇದ್ದೇ ಇರುತ್ತಿತ್ತು. ಈ ಯೋಜನೆಗಳು ಜನರ ಮನಸ್ಸಿಗೆ ‘ಬುಲೆಟ್’ ರೈಲಿನಂತೆ ನುಗ್ಗಿ ಮತಗಳಾಗಿ ಪರಿವರ್ತನೆಯಾಗಲಿವೆ ಎಂಬ ಲೆಕ್ಕಾಚಾರ ಇದರ ಹಿಂದಿತ್ತು.

ಬುಲೆಟ್ ರೈಲು, ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಂತಹ ಯೋಜನೆಗಳನ್ನು ರಾಷ್ಟ್ರೀಯ ಪ್ರತಿಷ್ಠೆಯ ಭಾವನೆಗಳನ್ನು ಹೆಚ್ಚಿಸಲು ಮೋದಿ ಸರ್ಕಾರ ಬಳಸಿಕೊಂಡಿದೆ. ‘ವಂದೇ ಭಾರತ್’, ‘ಕವಚ’, ‘ಅಮೃತ ಭಾರತ ನಿಲ್ದಾಣ ಯೋಜನೆ’ ಪ್ರಧಾನಿ ಅವರ ಅಚ್ಚುಮೆಚ್ಚಿನ ಯೋಜನೆಗಳಾಗಿವೆ. ತಮ್ಮ ಹೆಚ್ಚಿನ ಚುನಾವಣಾ ಭಾಷಣಗಳಲ್ಲಿ ಈ ಯೋಜನೆಗಳ ಕುರಿತು ಪ್ರಸ್ತಾಪಿಸುವ ಪರಿಪಾಟವನ್ನು ಅನುಸರಿಸಿಕೊಂಡು ಬಂದಿದ್ದಾರೆ.

‘ಯುಪಿಎ ಅವಧಿಗೆ ಹೋಲಿಸಿದರೆ ಎನ್‌ಡಿಎ ಅವಧಿಯಲ್ಲಿ ರೈಲ್ವೆ ಮೂಲಸೌಕರ್ಯ ಕಾಮಗಾರಿಗಳು ಹತ್ತು ಪಟ್ಟು ಹೆಚ್ಚಾಗಿವೆ’ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಪದೇ ಪದೇ ಹೇಳುತ್ತಾರೆ. ಯುಪಿಎ ಅವಧಿಯಲ್ಲಿ ಕರ್ನಾಟಕದ ರೈಲ್ವೆ ಯೋಜನೆಗಳಿಗೆ ಪ್ರತಿವರ್ಷ ₹850 ಕೋಟಿ ನೀಡಲಾಗುತ್ತಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಈ ಮೊತ್ತ ₹6 ಸಾವಿರ ಕೋಟಿಗೆ ಏರಿದೆ’ ಎಂದು ಅವರು ಹತ್ತಾರು ಬಾರಿ ಹೇಳಿದ್ದಾರೆ. ರೈಲ್ವೆ ವಿದ್ಯುದೀಕರಣ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ತಂತ್ರಜ್ಞಾನ ಮೇಲ್ದರ್ಜೆಗೆ ಏರಿಸಿದ್ದರಿಂದ ಅಪಘಾತ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇನ್ನೊಂದೆಡೆ, ಪ್ರಯಾಣಿಕರ ಸವಲತ್ತುಗಳನ್ನು ಸದ್ದಿಲ್ಲದೆ ಕಿತ್ತುಕೊಳ್ಳಲಾಗಿದೆ. ರೈಲ್ವೆಯ ಭಯಾನಕ ಆರ್ಥಿಕ ಸ್ಥಿತಿ ಬಗ್ಗೆ ಸಿಎಜಿ ವರದಿಯಲ್ಲಿ ಬೊಟ್ಟು ಮಾಡಿ ತೋರಿಸಲಾಗಿದೆ. ರೈಲ್ವೆಯಲ್ಲಿ ಸುಮಾರು 3 ಲಕ್ಷದಷ್ಟು ಹುದ್ದೆಗಳು ಭರ್ತಿಯಾಗಿಲ್ಲ.

‘ಶ್ರೀಮಂತರನ್ನು ದೃಷ್ಟಿಯಲ್ಲಿಟ್ಟುಕೊಂಡು ಮೋದಿ ಸರ್ಕಾರ ರೈಲ್ವೆ ಯೋಜನೆಗಳನ್ನು ರೂಪಿಸುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಹೇಳುತ್ತಿದ್ದಾರೆ. ಬಡವರ ಕಾಳಜಿಯ ಈ ‘ದಾಳ’ ಒಂದಿಷ್ಟು ಮತಗಳನ್ನು ತಂದುಕೊಡಬಲ್ಲದು ಎಂಬುದು ಅವರ ಹವಣಿಕೆ. ಈ ವಿಷಯದಲ್ಲಿ ಆಡಳಿತ ಹಾಗೂ ವಿಪಕ್ಷಗಳ ನಡುವೆ ವಾಕ್ಸಮರ ನಡೆಯುತ್ತಿದೆ. ಬಿಜೆಪಿ ‘ರೈಲ್ವೆಯ ಅಮೃತ ಕಾಲ’ ಎಂದರೆ, ಕಾಂಗ್ರೆಸ್ ‘ವಿನಾಶ ಕಾಲ’ ಎಂದು ಜರೆಯುತ್ತಿದೆ. ಆದರೆ, ಈ ವಿಚಾರವು ಲೋಕಸಭಾ ಚುನಾವಣೆಯಲ್ಲಿ ಪರಿಣಾಮ ಬೀರುವ ಸಾಧ್ಯತೆ ಕಡಿಮೆ ಎನ್ನಬಹುದು.

ರೈಲ್ವೆ ಕಾಮಗಾರಿಗಳ ಪ್ರಗತಿ

ವರ್ಷ	2020–21	2021–22	2022–23	2023–24
ಹೊಸ ಮಾರ್ಗ (ಕಿ.ಮೀ)	286	289	1,815	2,629
ಗೇಜ್ ಪರಿವರ್ತನೆ (ಕಿ.ಮೀ)	470	636	242	133
ದ್ವಿಪಥ (ಕಿ.ಮೀ)	1,614	1,983	3,186	1,332
ವಿದ್ಯುದೀಕರಣ (ಕಿ.ಮೀ)	6,015	6,366	6,565	2,696

ರೈಲ್ವೆ ವರಮಾನವೆಷ್ಟು?



ಸಾಲ ಮರುಪಾವತಿ ಹೊರೆಯೆಷ್ಟು?



ಮಾಹಿತಿ: ರೈಲ್ವೆ ಇಲಾಖೆ

ರೈಲು ನಿಲ್ದಾಣಗಳ ಮೇಲ್ದರ್ಜೆ

ರೈಲು ನಿಲ್ದಾಣಗಳಿಗೆ ಆಧುನಿಕ ಸ್ಪರ್ಶ ನೀಡಲು ಇಲಾಖೆಯು ‘ಅಮೃತ ಭಾರತ ನಿಲ್ದಾಣ ಯೋಜನೆ’ ಕಾರ್ಯಗತಗೊಳಿಸುತ್ತಿದೆ. ಕರ್ನಾಟಕದ 55 ನಿಲ್ದಾಣಗಳು ಸೇರಿದಂತೆ ದೇಶದ 1,318 ನಿಲ್ದಾಣಗಳಿಗೆ ನವ ರೂಪ ನೀಡಲು ಯೋಜಿಸಲಾಗಿದೆ. ಇದಕ್ಕಾಗಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗಿದೆ. ರಾಜ್ಯದ 15 ನಿಲ್ದಾಣಗಳು ಸೇರಿದಂತೆ 555 ನಿಲ್ದಾಣಗಳ ಮೇಲ್ದರ್ಜೆಗೆ ಕಳೆದ ತಿಂಗಳು ಶಿಲಾನ್ಯಾಸ ನೆರವೇರಿಸಲಾಗಿದೆ.

ನೂರು ದಾಟಿದ ‘ವಂದೇ ಭಾರತ್’

ಬಿಜೆಪಿ ಸರ್ಕಾರದ ಮತ್ತೊಂದು ಮಹತ್ವಾಕಾಂಕ್ಷಿ ಯೋಜನೆಯೆಂದರೆ ‘ವಂದೇ ಭಾರತ್ ರೈಲು’ . ಈ ರೈಲುಗಳಲ್ಲಿ ವಿಶ್ವದರ್ಜೆಯ ವ್ಯವಸ್ಥೆ ಕಲ್ಪಿಸಲಾಗಿದೆ ಎಂಬುದು ಸರ್ಕಾರದ ಹೇಳಿಕೆ. ಈವರೆಗೆ 100 ಮಾರ್ಗಗಳಲ್ಲಿ ವಂದೇ ಭಾರತ್ ರೈಲುಗಳ ಸೇವೆ ಆರಂಭವಾಗಿದೆ. ಆದರೆ, ಈ ರೈಲಿನ ಪ್ರಯಾಣ ದರ ದುಬಾರಿ. ಇದು ಶ್ರೀಮಂತರ ರೈಲು ಎಂಬ ಅಪಖ್ಯಾತಿಗೂ ಗುರಿಯಾಗಿದೆ. ಈ ರೈಲುಗಳು ಆಗಾಗ ಕಲ್ಲೆಸೆತಕ್ಕೆ ಸಾಕ್ಷಿಯಾಗಿವೆ.

ರಿಯಾಯಿತಿಗಳಿಗೆ ‘ಕತ್ತರಿ’

ರೈಲು ಪ್ರಯಾಣ ದರದಲ್ಲಿ ಹಿರಿಯ ನಾಗರಿಕರಿಗೆ ಈ ಹಿಂದೆ ರಿಯಾಯಿತಿ ನೀಡಲಾಗುತ್ತಿತ್ತು. ಕೋವಿಡ್ ಸಾಂಕ್ರಾಮಿಕದ ನೆಪವೊಡ್ಡಿ ರೈಲ್ವೆ ಇಲಾಖೆಯು ಎಲ್ಲ ರಿಯಾಯಿತಿಗಳಿಗೆ ‘ಕತ್ತರಿ ಪ್ರಯೋಗ’ ಮಾಡಿತ್ತು. ಲಾಕ್‌ಡೌನ್ ಮುಗಿದ ಬಳಿಕ ರೈಲು ಸೇವೆ ಸಹಜ ಸ್ಥಿತಿಗೆ ಬಂದ ಬಳಿಕವೂ ಇವುಗಳನ್ನು ಮರು ಜಾರಿಗೊಳಿಸಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಹಿರಿಯ ನಾಗರಿಕರು ಟಿಕೆಟ್ ಮೊತ್ತವನ್ನು ಪೂರ್ಣವಾಗಿ ಪಾವತಿಸಿ ಪ್ರಯಾಣ ಮಾಡಿದ್ದರಿಂದ ರೈಲ್ವೆಗೆ ₹5,800 ಕೋಟಿ ಹೆಚ್ಚುವರಿ ವರಮಾನ ಬಂದಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಇಲಾಖೆಯೇ ಈ ಬಗ್ಗೆ ಮಾಹಿತಿ ನೀಡಿದೆ.

ಓಡದ ‘ಬುಲೆಟ್ ರೈಲು’

ಎನ್‌ಡಿಎ ಸರ್ಕಾರದ ಚೊಚ್ಚಲ ಬಜೆಟ್‌ನಲ್ಲೇ ನರೇಂದ್ರ ಮೋದಿ ಅವರ ಕನಸಿನ ‘ಬುಲೆಟ್ ರೈಲು’ ಯೋಜನೆ ಪ್ರಕಟಿಸಲಾಗಿತ್ತು. ಮೊದಲ ಬುಲೆಟ್ ರೈಲು ಮುಂಬೈ–ಅಹಮದಾಬಾದ್ ನಡುವೆ ಸಂಚರಿಸಲಿದೆ ಎಂದು ಪ್ರಕಟಿಸಲಾಗಿತ್ತು. ಈ ರೈಲು 508 ಕಿ.ಮೀ.ಯನ್ನು 2 ಗಂಟೆಯಲ್ಲೇ ಕ್ರಮಿಸಲಿದೆ ಎಂದು ಪ್ರಧಾನಿ ಹಾಗೂ ರೈಲ್ವೆ ಸಚಿವರು ಹಲವು ಸಲ ಹೇಳಿದ್ದಾರೆ. ಆದರೆ, ಈ ಯೋಜನೆಯ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ‘ಯಾವುದೂ ಕನಸಲ್ಲ, ವಾಸ್ತವ.. ಮೋದಿ 3.0ನಲ್ಲಿ ಬುಲೆಟ್ ರೈಲಿಗಾಗಿ ಟ್ಯೂನ್ ಮಾಡಿ’ ಎಂದು ಭರವಸೆ ನೀಡಿದ್ದಾರೆ. 2026ರಲ್ಲಿ ಈ ಯೋಜನೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

‘ರಾಮ–ಕೃಷ್ಣನ ಅಂಶ ಪ್ರಧಾನಿ ಮೋದಿ’

ಮಂಡಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ರಾಮ ಮತ್ತು ಕೃಷ್ಣನ ಅಂಶವಾಗಿದ್ದಾರೆ ಎಂದು ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಬುಧವಾರ ಹೇಳಿದ್ದಾರೆ.

ಕರ್ಸೋಗ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅವರು, ‘ಮೊದಲ ಬಾರಿಗೆ ಮಹಿಳೆಯರು ತಮ್ಮ ಬಗ್ಗೆ ಕಾಳಜಿ ತೋರುವವರೂ ಇದ್ದಾರೆ ಎನ್ನುವ ಭಾವನೆ ಅನುಭವಿಸುತ್ತಿದ್ದಾರೆ’ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರು ಮಹಿಳೆಯರ ವಿರುದ್ಧ ಅಸಭ್ಯ ಮತ್ತು ನಿಂದನೀಯ ಭಾಷೆ ಬಳಸುತ್ತಿದ್ದು, ಅದು ಅವರ ಸಂಕುಚಿತ ಮನೋಭಾವವನ್ನು ತೋರಿಸುತ್ತಿದೆ. ಮೋದಿ ‘ಮಂಡಿ’ಯ ಮಗಳನ್ನು ಅಭ್ಯರ್ಥಿಯನ್ನಾಗಿಸಿದ್ದು, ಅವರು ಮೂರನೇ ಬಾರಿ ಪ್ರಧಾನಿಯಾಗಲು ತನ್ನನ್ನು ಗೆಲ್ಲಿಸಬೇಕೆಂದು ಕಂಗನಾ ಮತದಾರರಲ್ಲಿ ಮನವಿ ಮಾಡಿದರು. ಕಾಂಗ್ರೆಸ್ ಹಗರಣಗಳಿಗೆ ಮತ್ತೊಂದು ಹೆಸರಾಗಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 2ಜಿ ಮತ್ತು ಕಲ್ಲಿದ್ದಲು ಹಗರಣಗಳು ನಡೆದಿದ್ದವು ಎಂದು ಅವರು ಆರೋಪಿಸಿದರು.

ದೇಶದ ಎಂಟು ಕೋಟಿ ಕುಟುಂಬಗಳ ತಲುಪಲು ಕಾಂಗ್ರೆಸ್ ಚಿಂತನೆ

‘ಮನೆ ಮನೆ ಗ್ಯಾರಂಟಿ’ಗೆ ಚಾಲನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ : ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಪಕ್ಷದ ‘ಮನೆ ಮನೆ ಗ್ಯಾರಂಟಿ’ (ಘರ್ ಘರ್ ಗ್ಯಾರಂಟಿ) ಯೋಜನೆಗೆ ಚಾಲನೆ ನೀಡಿದರು. ಈ ಯೋಜನೆ ಅಡಿಯಲ್ಲಿ ದೇಶದಾದ್ಯಂತ ಎಂಟು ಕೋಟಿ ಕುಟುಂಬಗಳಿಗೆ ಪಕ್ಷದ ಗ್ಯಾರಂಟಿಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶವನ್ನು ಕಾಂಗ್ರೆಸ್ ಹೊಂದಿದೆ.

ಈಶಾನ್ಯ ದೆಹಲಿ ಲೋಕಸಭಾ ಕ್ಷೇತ್ರದ ಉಸ್ಮಾನ್‌ಪುರದಲ್ಲಿ ಯೋಜನೆಗೆ ಚಾಲನೆ ನೀಡಿದ ಅವರು ಪಕ್ಷದ ‘ಐದು ನ್ಯಾಯ, ಇಪ್ಪತ್ತೈದು ಗ್ಯಾರಂಟಿ’ (ಪಂಚ್ ನ್ಯಾಯ್ ಪಚೀಸ್ ಗ್ಯಾರಂಟಿ) ಕರಪತ್ರಗಳನ್ನು ಹಂಚಿದರು.

‘ಕಾಂಗ್ರೆಸ್ ಪಕ್ಷದ ಎಲ್ಲ ಮುಖಂಡರು ಮತ್ತು ಕಾರ್ಯಕರ್ತರು ಈ ಕರಪತ್ರಗಳನ್ನು ದೇಶದ ಎಂಟು ಕೋಟಿ ಮನೆಗಳಿಗೆ ಮುಟ್ಟಿಸುತ್ತಾರೆ. ನಮ್ಮ ಮೈತ್ರಿ ಸರ್ಕಾರವು ಅಧಿಕಾರಕ್ಕೆ ಬಂದರೆ ಏನು ಮಾಡುತ್ತದೆ ಎನ್ನುವುದನ್ನು ಜನರಿಗೆ ಹೇಳುತ್ತಾರೆ’ ಎಂದು ಖರ್ಗೆ ವಿವರಿಸಿದರು. ‘ನಮ್ಮ ಸರ್ಕಾರವು ಜನರಿಗಾಗಿಯೇ ಸದಾ ಕೆಲಸ ಮಾಡಿದೆ ಮತ್ತು ಮುಂದೆಯೂ ಮಾಡುತ್ತದೆ ಎನ್ನುವ ಗ್ಯಾರಂಟಿಯನ್ನು ನಾವು ನೀಡುತ್ತೇವೆ. ಪ್ರಧಾನಿ ನರೇಂದ್ರ ಮೋದಿ ಅವರು ‘ಮೋದಿ ಗ್ಯಾರಂಟಿ’ ಬಗ್ಗೆ ಮಾತನಾಡುತ್ತಾರೆ. ಆದರೆ, ಅವರ ಗ್ಯಾರಂಟಿ ಎಂದಿಗೂ ಜನರನ್ನು ಮುಟ್ಟುವುದಿಲ್ಲ’ ಎಂದು ಹೇಳಿದರು.

> ಕೇಂದ್ರ ಸರ್ಕಾರ ನಮ್ಮನ್ನು ಭಯಪಡಿಸಲು ಹೊರಟಿದೆ. ಆದಾಯ ತೆರಿಗೆ ಇಲಾಖೆಯು ನಮ್ಮ ಹಣದಲ್ಲಿ ₹135 ಕೋಟಿ ಪಡೆದಿದೆ. ಈ ರೀತಿ ಆದರೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಯನ್ನು ನ್ಯಾಯಸಮ್ಮತವಾಗಿ ನಡೆಸಲು ಸಾಧ್ಯವೇ?
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

‘ನಾವು ಏನು ಭರವಸೆ ನೀಡಿದ್ದೇವೋ ಅದನ್ನು ಈಡೇರಿಸುತ್ತೇವೆ ಎಂದು ದೇಶಕ್ಕೆ ಹೇಳಲು ಹೊರಟಿದ್ದೇವೆ’ ಎಂದ ಖರ್ಗೆ, ಈ ಹಿಂದೆ ಕಾಂಗ್ರೆಸ್ ಸರ್ಕಾರ ಉದ್ಯೋಗ ಖಾತ್ರಿ, ಆರ್‌ಟಿಐ, ಆಹಾರದ ಹಕ್ಕು, ಶಿಕ್ಷಣ ಹಕ್ಕು ಮುಂತಾಗಿ ಹಲವು ಗ್ಯಾರಂಟಿಗಳನ್ನು ಈಡೇರಿಸಿದ್ದನ್ನು ಮತ್ತು ಭರವಸೆ ನೀಡದೆಯೂ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿದ್ದನ್ನು ಸ್ಮರಿಸಿದರು.

ಹಾಥ್ ಬದ್ಲೇಗಾ ಹಾಲಾತ್: ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮಾತನಾಡಿ, 1978ರಲ್ಲಿ ಪಕ್ಷವು ಮೊದಲ ಬಾರಿಗೆ ‘ಹಸ್ತ’ ಚಿಹ್ನೆ ಬಳಸಿದ ಸ್ಥಳದಿಂದಲೇ ‘ಮನೆ ಮನೆ ಗ್ಯಾರಂಟಿ’ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದು ಹೇಳಿದರು. 1978ರಲ್ಲಿ ಫೊಂಡಾ ಮಹಾನಗರ ಪಾಲಿಕೆಗೆ ನಡೆದಿದ್ದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಮೊದಲ ಬಾರಿಗೆ ಇದೇ ಸ್ಥಳದಲ್ಲಿ ‘ಹಸ್ತ’ ಚಿಹ್ನೆಯನ್ನು ಬಳಸಿತ್ತು. 1977ರಲ್ಲಿ ಕಾಂಗ್ರೆಸ್ ಹೋಳಾದಾಗ ದೇವರಾಜ ಅರಸು ಅವರ ಬಣವು ‘ಹಸು ಮತ್ತು ಕರು’ ಚಿಹ್ನೆ ಬಳಸಿದರೆ, ಇಂದಿರಾ ಗಾಂಧಿ ‘ಹಸ್ತ’ದ ಚಿಹ್ನೆ ಆಯ್ಕೆ ಮಾಡಿಕೊಂಡಿದ್ದರು.

ಆಸಕ್ತಿಕರ ವಿಚಾರವೇನೆಂದರೆ, ಈ ಬಾರಿ ಕಾಂಗ್ರೆಸ್ ಪ್ರಚಾರದ ಅಡಿಬರಹವು ‘ಹಾಥ್ ಬದ್ಲೇಗಾ ಹಾಲಾತ್’ (ಕೈ ಪರಿಸ್ಥಿತಿಯನ್ನು ಬದಲಿಸಲಿದೆ) ಎಂಬುದಾಗಿದ್ದು, ಅದು ಪಕ್ಷದ ‘ಚಿಹ್ನೆ’ಗೆ ಸಂಬಂಧಿಸಿದಂತೆಯೇ ಇದೆ.

ಎಲ್ಲ ಕ್ಷೇತ್ರಗಳಲ್ಲಿ ಪಿಡಿಪಿ ಸ್ಪರ್ಧೆ

ಶ್ರೀನಗರ (ಪಿಟಿಐ): ‘ಇಂಡಿಯಾ’ ಕೂಟದಲ್ಲಿರುವ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ತಮಗೆ ಯಾವುದೇ ಆಯ್ಕೆಯನ್ನು ಬಿಡದೇ ಇರುವುದರಿಂದ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷವು (ಪಿಡಿಪಿ) ಕಾಶ್ಮೀರದ ಎಲ್ಲ ಮೂರು ಲೋಕಸಭಾ ಕ್ಷೇತ್ರಗಳಲ್ಲಿಯೂ ಸ್ಪರ್ಧಿಸುವುದಾಗಿ ಪಕ್ಷದ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಬುಧವಾರ ಹೇಳಿದ್ದಾರೆ.

‘ಫಾರೂಕ್ ಅಬ್ದುಲ್ಲಾ ನಮ್ಮ ಹಿರಿಯ ನಾಯಕರಾಗಿದ್ದರಿಂದ ಸ್ಥಾನ ಹಂಚಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ಮುಂಬೈನಲ್ಲಿ ನಡೆದ ‘ಇಂಡಿಯಾ’ ಕೂಟದ ಸಭೆಯಲ್ಲಿ ನಾನು ಅವರಿಗೆ ಸೂಚಿಸಿದ್ದೆ. ಪಕ್ಷದ ಹಿತಾಸಕ್ತಿ ಬದಿಗಿಟ್ಟು ಅವರು ನ್ಯಾಯ ಸಲ್ಲಿಸುತ್ತಾರೆಂದು ನಾನು ಭಾವಿಸಿದ್ದೆ. ಆದರೆ, ಕಾಶ್ಮೀರದ ಮೂರು ಸ್ಥಾನಗಳಲ್ಲಿಯೂ ಸ್ಪರ್ಧಿಸುವ ಏಕಪಕ್ಷೀಯ ನಿರ್ಧಾರವನ್ನು ಅವರು ಕೈಗೊಂಡರು. ಪಿಡಿಪಿಗೆ ಜನಬೆಂಬಲವಿಲ್ಲ ಮತ್ತು ಪಕ್ಷ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಿಲ್ಲ ಎಂದು ಒಮರ್ ಹೇಳುವ ಮೂಲಕ ನಮಗೆ ಅವಮಾನ ಮಾಡಿದ್ದಾರೆ’ ಎಂದು ಮೆಹಬೂಬಾ ಹೇಳಿದರು.

ಮತ್ತೆ 4 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಿಸಿದ ಯುಬಿಟಿ

ಮುಂಬೈ(ಪಿಟಿಐ): ಶಿವಸೇನಾ ಉದ್ಧವ್ ಠಾಕ್ರೆ ಬಣವು (ಯುಬಿಟಿ) ಮತ್ತೆ ನಾಲ್ಕು ಕ್ಷೇತ್ರಗಳಿಗೆ ಬುಧವಾರ ಅಭ್ಯರ್ಥಿಗಳನ್ನು ಘೋಷಿಸಿದೆ.

ಪ್ರತಿಷ್ಠಿತ ಕಲ್ಯಾಣ್ ಲೋಕಸಭಾ ಕ್ಷೇತ್ರದಿಂದ ವೈಷ್ಣವಿ ದರೇಕರ್ ರಾಣೆ ಅವರನ್ನು ಕಣಕ್ಕಿಳಿಸಲಾಗಿದೆ. ಹಟ್ಕಾನಂಗಲೆ ಕ್ಷೇತ್ರದಿಂದ ಸತ್ಯಜಿತ್ ಪಾಟೀಲ್, ಪಾಲ್ಘರ್‌ನಿಂದ ಭಾರತಿ ಕಾಮದಿ ಮತ್ತು ಜಲಗಾಂವ್‌ನಿಂದ ಕರಣ್ ಪವಾರ್ ಸ್ಪರ್ಧಿಸಲಿದ್ದಾರೆ ಎಂದು ಉದ್ಧವ್ ಠಾಕ್ರೆ ಪ್ರಕಟಿಸಿದರು.

ಪೂಜೆ ಬಿಜೆಪಿ ಅಭ್ಯರ್ಥಿ ಹೇಮಾ ಮಾಲಿನಿ ಅವರು ಉತ್ತರಪ್ರದೇಶದ ಮಥುರಾದಲ್ಲಿ ಬುಧವಾರ ಯಮುನಾ ಪೂಜೆ ನೆರವೇರಿಸಿದರು –ಪಿಟಿಐ ಚಿತ್ರ

ವಯನಾಡ್: ರಾಹುಲ್ ನಾಮಪತ್ರ ಸಲ್ಲಿಕೆ

ವಯನಾಡ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದರು.

ತಂಗಿ ಪ್ರಿಯಾಂಕಾ ಗಾಂಧಿ ವಾದ್ರಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಪಕ್ಷದ ಹಿರಿಯ ಮುಖಂಡರೊಂದಿಗೆ ಚುನಾವಣಾಧಿಕಾರಿಯೂ ಆಗಿರುವ ವಯನಾಡ್ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್, ‘ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಮತ್ತು ಬಿಜೆಪಿಯ ಇತರರು ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ನಾಶ ಮಾಡಲು ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ಮತ್ತು ‘ಇಂಡಿಯಾ’ ಕೂಟ ಅದನ್ನು ತಡೆಯಲು ಯತ್ನಿಸುತ್ತಿದೆ’ ಎಂದು ಪ್ರತಿಪಾದಿಸಿದರು.

ನಾಮಪತ್ರ ಸಲ್ಲಿಕೆಗೂ ಮುನ್ನ ರಾಹುಲ್ ಗಾಂಧಿ ರೋಡ್ ಶೋ ನಡೆಸಿದರು. ಪ್ರಿಯಾಂಕಾ ಗಾಂಧಿ ವಾದ್ರಾ, ಹಾಗೂ ಪಕ್ಷದ ಇತರ ಮುಖಂಡರು ಜೊತೆಗಿದ್ದರು –ಎಎಫ್‌ಪಿ ಚಿತ್ರ

ಬೆಳಿಗ್ಗೆ ಹೆಲಿಕಾಪ್ಟರ್ ಮೂಲಕ ವಯನಾಡ್‌ಗೆ ಬಂದ ರಾಹುಲ್, ನಾಮಪತ್ರ ಸಲ್ಲಿಕೆಗೂ ಮುನ್ನ ಕಲ್ಪೆಟ್ಟದಿಂದ ಸಿವಿಲ್ ಸ್ಟೇಷನ್‌ವರೆಗೆ ರೋಡ್ ಶೋ ನಡೆಸಿದರು. ರೋಡ್ ಶೋಗಾಗಿ ಸಾವಿರಾರು ಮಂದಿ ಸೇರಿದ್ದರು. ಈ ವೇಳೆ ‘ಜೈ ಜೈ ರಾಹುಲ್ ಗಾಂಧಿ’, ‘ಡೌನ್ ಡೌನ್ ನರೇಂದ್ರ ಮೋದಿ’ ಘೋಷಣೆಗಳು ಕೇಳಿ ಬಂದವು.

ಜಿಲ್ಲಾಧಿಕಾರಿ ಕಚೇರಿ ಮುಟ್ಟುವ ಮುನ್ನ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಹಲವರನ್ನು ಬಲಿ ಪಡೆದ ಮಾನವ–ಪ್ರಾಣಿ ಸಂಘರ್ಷ ಸೇರಿದಂತೆ ಎಲ್ಲ ಸಮಸ್ಯೆಗಳ ಸಂದರ್ಭದಲ್ಲಿಯೂ ತಾವು ಸದಾ ವಯನಾಡ್ ಜನರೊಂದಿಗೆ ಇರುವುದಾಗಿ ಹೇಳಿದರು. ಬೆಟ್ಟ ಗುಡ್ಡಗಳಿಂದ ಕೂಡಿರುವ ಕ್ಷೇತ್ರದ ಸಮಸ್ಯೆಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಒಯ್ಯುವುದಾಗಿ ಮತದಾರರಿಗೆ ಭರವಸೆ ನೀಡಿದರು.

ನಾಮಪತ್ರ ಸಲ್ಲಿಸಿದ ನಂತರ ಸಂವಿಧಾನ ಎತ್ತಿಹಿಡಿಯುವ ಪ್ರತಿಜ್ಞೆ ಸ್ವೀಕರಿಸುವ ಮೂಲಕ ಅವರು ಕಾರ್ಯಕ್ರಮ ಅಂತ್ಯಗೊಳಿಸಿದರು.

ವಯನಾಡ್‌ನ ಹಾಲಿ ಸಂಸದರಾಗಿರುವ ರಾಹುಲ್ ಗಾಂಧಿ ಅವರು ಕ್ಷೇತ್ರದಿಂದ ಪುನರಾಯ್ಕೆ ಬಯಸುತ್ತಿದ್ದು, ಅವರ ವಿರುದ್ಧ ಬಿಜೆಪಿಯಿಂದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಮತ್ತು ಸಿಪಿಐನಿಂದ ಅನ್ನಿ ರಾಜಾ ಸ್ಪರ್ಧಿಸಿದ್ದಾರೆ.

‘ಕಾಂಗ್ರೆಸ್ ಚಲಾವಣೆಯಲ್ಲಿ ಇಲ್ಲದ ನೋಟು’

ಗುವಾಹಟಿ (ಪಿಟಿಐ): ರಾಹುಲ್ ಗಾಂಧಿ ಪ್ರಚಾರಕ್ಕಾಗಿ ರಾಜ್ಯಕ್ಕೆ ಬಂದರೆ ಕಾಂಗ್ರೆಸ್‌ನ ಉಳಿದ ಸದಸ್ಯರೂ ಬಿಜೆಪಿ ಸೇರುತ್ತಾರೆ. ಅವರು ರಾಜ್ಯಕ್ಕೆ ಬಂದು ಪ್ರಚಾರ ಮಾಡಲಿ ಎಂದು ನಾನು ಬಯಸುತ್ತೇನೆ ಎಂದು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಬುಧವಾರ ಹೇಳಿದ್ದಾರೆ.

ಸಿಲ್ಚಾರ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಹಳೆಯ ನೋಟು ಇದ್ದಂತೆ, ಅದರಿಂದ ಪ್ರಯೋಜನವಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ರಾಹುಲ್ ಗಾಂಧಿ ನಡುವೆ ಹೋಲಿಕೆ ಇರಲು ಸಾಧ್ಯವಿಲ್ಲ’ ಎಂದರು.

ಚುಟುಕು

ಅಮೇಠಿ ಮತದಾರರಾದ ಸ್ಮೃತಿ ಇರಾನಿ

ಅಮೇಠಿ (ಪಿಟಿಐ): ಮತದಾರರಿಗೆ ಭರವಸೆ ನೀಡಿದಂತೆ ಕ್ಷೇತ್ರದೊಂದಿಗೆ ಕುಟುಂಬದ ನಂಟು ಬೆಸೆದಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ, ಅಮೇಠಿ ಲೋಕಸಭಾ ಕ್ಷೇತ್ರದ ಮತದಾರರಾಗಿದ್ದಾರೆ.

ಸ್ಮೃತಿ ಅವರು ಗೌರಿಗಂಜ್‌ನ ಮೇದನ್ ಮವಯಿ ಹಳ್ಳಿಯಲ್ಲಿ ಫೆಬ್ರುವರಿ 2024ರಲ್ಲಿ ಮನೆ ನಿರ್ಮಿಸಿದ್ದರು. ನಂತರ ಇಲ್ಲಿನ ಮತದಾರರಾಗಲು ಅರ್ಜಿ ಸಲ್ಲಿಸಿದ್ದರು. ಇದೀಗ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅವರು ಹಳ್ಳಿಯ ಮತದಾರರಾಗಿದ್ದಾರೆ ಎಂದು ಸಂಸದರ ಪ್ರತಿನಿಧಿ ವಿಜಯ್ ಗುಪ್ತ ಹೇಳಿದ್ದಾರೆ.

ಜಿಗಿ–ನೆಗೆದಾಟ

ವಿಜೇಂದರ್ ಸಿಂಗ್ ಬಿಜೆಪಿಗೆ

ನವದೆಹಲಿ: ಒಲಿಂಪಿಕ್ ಪದಕ ವಿಜೇತ ಬಾಕ್ಸರ್ ಹಾಗೂ ಕಾಂಗ್ರೆಸ್ ಮುಖಂಡ ವಿಜೇಂದರ್ ಸಿಂಗ್ ಅವರು ಬುಧವಾರ ಬಿಜೆಪಿಗೆ ಸೇರ್ಪಡೆಯಾದರು. ಪಕ್ಷದ ಮುಖ್ಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಮತ್ತು ಇತರ ಮುಖಂಡರ ಸಮ್ಮುಖದಲ್ಲಿ ವಿಜೇಂದರ್ ಪಕ್ಷಕ್ಕೆ ಸೇರಿದರು.

ಬಿಜೆಪಿ ಉಪಾಧ್ಯಕ್ಷ ಬಿಜೆಡಿಗೆ(ಭುವನೇಶ್ವರ ವರದಿ): ಒಡಿಶಾದ ಬಿಜೆಪಿ ಉಪಾಧ್ಯಕ್ಷ ಭೃಗು ಬಕ್ಷಿ ಪಾತ್ರಾ ಅವರು ಪಕ್ಷ ತೊರೆದು ಬಿಜೆಡಿಗೆ ಬುಧವಾರ ಸೇರಿದರು.

ಭೃಗು ಅವರನ್ನು ಬಿಜೆಡಿಯು ಬರ್ಹಾಂಪುರ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಸಂಸದ ಯುಬಿಟಿಗೆ(ಮುಂಬೈ ವರದಿ): ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿಯಿಂದ ಟಿಕೆಟ್ ನಿರಾಕರಿಸಿದ್ದರಿಂದ ಮಹಾರಾಷ್ಟ್ರದ ಜಲಗಾಂವ್ ಕ್ಷೇತ್ರದ ಸಂಸದ ಉನ್ಮೇಶ್ ಪಾಟೀಲ್ ಅವರು ಪಕ್ಷ ತೊರೆದು, ಶಿವಸೇನಾ (ಯುಬಿಟಿ) ಸೇರ್ಪಡೆಗೊಂಡರು.

ಬಿಜೆಪಿ ಸೇರಿದ ಎಸ್.ಪಿ. ಸಿಂಗ್(ಡೆಹ್ರಾಡೂನ್ ವರದಿ): ಉತ್ತರಾಖಂಡ ಕಾಂಗ್ರೆಸ್ ರಾಜ್ಯ ಘಟಕದ ಮಾಜಿ ಉಪಾಧ್ಯಕ್ಷ ಎಸ್.ಪಿ. ಸಿಂಗ್ ಎಂಜಿನಿಯರ್ ಅವರು ಬೆಂಬಲಿಗರೊಂದಿಗೆ ಬುಧವಾರ ಬಿಜೆಪಿಗೆ ಸೇರಿದರು.

ಎಂಥಾ ಮಾತು!

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವುದರ ಪರ ಇರಲಿಲ್ಲ. ಕಾಂಗ್ರೆಸ್ ಕೂಡ ಆಡಳಿತದಲ್ಲಿದ್ದಾಗ ಈ ಕುರಿತು ಏನೂ ಮಾಡಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಜನರ ಭಾವನೆಗಳಿಗೆ ಗೌರವ ಕೊಟ್ಟು ರಾಮಮಂದಿರ ನಿರ್ಮಿಸಿದೆ. ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿರುವುದಕ್ಕೆ ಕೇಂದ್ರ ಸರ್ಕಾರವನ್ನು ಜನರು ಪ್ರಶಂಸಿಸಿದ್ದಾರೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಬಿಜೆಪಿಯು ಶ್ರೀರಾಮನನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ. ಶ್ರೀರಾಮ ಎಲ್ಲರಿಗೂ ದೇವರಾಗಿದ್ದು, ದೇವರ ಹೆಸರಿನಲ್ಲಿ ಮತ ಕೇಳುತ್ತಿರುವುದು ‘ಅಸಹ್ಯಕರ ಕಾರ್ಯ’. ಪೌರತ್ವ ನೋಂದಣಿ ಕಾಯ್ದೆಯ (ಸಿಎಎ) ಕಾರಣದಿಂದ ಜನರು ಪ್ರಕ್ಷುಬ್ಧರಾಗಿದ್ದಾರೆ ಮತ್ತು ಪ್ರತಿಭಟನೆ ನಡೆಸಲು ಬಯಸಿದ್ದಾರೆ. ಆದರೆ ಅಸ್ಸಾಂನ ಬಿಜೆಪಿ ಸರ್ಕಾರವು ಜನರ ಪ್ರತಿಭಟಿಸುವ ಹಕ್ಕನ್ನೇ ಕಸಿದುಕೊಂಡಿದೆ. ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರೆ ಅವರನ್ನು ಜೈಲಿಗೆ ಹಾಕಲಾಗುತ್ತಿದೆ

ಗೌರವ್ ಗೊಗೋಯಿ, ಕಾಂಗ್ರೆಸ್ ಮುಖಂಡ

ಕ್ಷೇತ್ರ ಮಹಾತ್ಮೆ

ಪಂಜಾಬ್‌ನ ಪ್ರತಿಷ್ಠಿತ ಫರೀದ್‌ಕೋಟ್ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಸೂಫಿ ಗಾಯಕ ಮತ್ತು ಪಂಜಾಬಿ ನಟನ ನಡುವೆ ನೇರ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ. ಆಡಳಿತಾರೂಢ ಎಎಪಿಯು ಪಂಜಾಬಿ ನಟ ಕರಮ್‌ಜೀತ್ ಅನ್ಮೋಲ್ ಅವರನ್ನು ಅಖಾಡಕ್ಕಿಳಿಸಿದರೆ, ಬಿಜೆಪಿಯು ಸೂಫಿ ಗಾಯಕ ಹಾಗೂ ವಾಯವ್ಯ ದೆಹಲಿಯ ಸಂಸದ ಹನ್ಸ್ ರಾಜ್ ಹನ್ಸ್ ಅವರನ್ನು ಸ್ಪರ್ಧೆಗಿಳಿಸಿದೆ. ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮೊಹಮ್ಮದ್ ಸಾದಿಕ್ ಅವರು 4,19,065 ಮತಗಳನ್ನು ಪಡೆದು ಗೆದ್ದಿದ್ದರು. 2009ರಲ್ಲಿ ಶಿರೋಮಣಿ ಅಕಾಲಿದಳಕ್ಕೆ ಸೇರುವ ಮೂಲಕ ರಾಜಕೀಯ ಪ್ರವೇಶಿಸಿದ್ದ ಹನ್ಸ್ ರಾಜ್ ಅವರು, ಆ ವರ್ಷ ಜಲಂಧರ್ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಸೋತಿದ್ದರು. 2014ರಲ್ಲಿ ಕಾಂಗ್ರೆಸ್‌ಗೆ ಸೇರಿದ ಇವರು ಬಳಿಕ ಆ ಪಕ್ಷವನ್ನೂ ತೊರೆದಿದ್ದರು. ಹನ್ಸ್ ರಾಜ್ ಅವರು 2016ರಲ್ಲಿ ಬಿಜೆಪಿಗೆ ಸೇರಿದ್ದರು. ಗಾಯಕರೂ ಆಗಿರುವ ಕರಮ್‌ಜೀತ್ ಅವರು ಹಲವು ಪಂಜಾಬಿ ಸಿನಿಮಾಗಳಲ್ಲಿ ನಟಿಸುವ ಮೂಲಕ ಜನಜನಿತರಾಗಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ಆಪ್ತರಾಗಿರುವ ಇವರು, 2022ರ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಪರ ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಹನ್ಸ್ ರಾಜ್ ಅವರು ಕಳೆದ ಚುನಾವಣೆಯಲ್ಲಿ ವಾಯವ್ಯ ದೆಹಲಿ ಕ್ಷೇತ್ರದಲ್ಲಿ 8,48,630 ಮತಗಳನ್ನು ಪಡೆದು ಎಎಪಿಯ ಗುಗನ್ ಸಿಂಗ್ ರಂಗಾ ಅವರನ್ನು ಸೋಲಿಸಿದ್ದರು. 15 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿರುವ ಹನ್ಸ್ ರಾಜ್ ಅವರು ಕರಮ್‌ಜೀತ್ ಅವರನ್ನು ಮಣಿಸುತ್ತಾರೊ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಕಡಪ (ಆಂಧ್ರಪ್ರದೇಶ)



ವೈ.ಎಸ್.ಶರ್ಮಿಳಾ (ಕಾಂಗ್ರೆಸ್)

ಆಂಧ್ರಪ್ರದೇಶದ ಕಡಪ ಲೋಕಸಭಾ ಕ್ಷೇತ್ರವು ಈ ಬಾರಿ ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ಕುಟುಂಬದ ಸದಸ್ಯರ ನಡುವಿನ ಹೋರಾಟಕ್ಕೆ ಸಾಕ್ಷಿಯಾಗಲಿದೆ. ರಾಜಶೇಖರ ರೆಡ್ಡಿ ಅವರ ಪುತ್ರಿ ಹಾಗೂ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಸಹೋದರಿ ವೈ.ಎಸ್. ಶರ್ಮಿಳಾ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಆಂಧ್ರ ಪ್ರದೇಶ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆಯೂ ಆಗಿರುವ ಶರ್ಮಿಳಾ ಅವರು, ಚಿಕ್ಕಪ್ಪ ವೈ.ಎಸ್. ವಿವೇಕಾನಂದ ರೆಡ್ಡಿ ಕೊಲೆ ಪ್ರಕರಣದ ಸಂಚಿನಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ವೈ.ಎಸ್.ಅವಿನಾಶ್ ರೆಡ್ಡಿ ಅವರನ್ನು ಸೋಲಿಸಲೇಬೇಕೆಂದು ಪಣತೊಟ್ಟು ಅಖಾಡಕ್ಕಿಳಿದಿದ್ದಾರೆ. ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ಪ್ರವೇಶಿಸಿದ್ದ ಶರ್ಮಿಳಾ ಅವರು, 2021ರಲ್ಲಿ ವೈಎಸ್‌ಆರ್ ತೆಲಂಗಾಣ ಪಕ್ಷವನ್ನು ಸ್ಥಾಪಿಸಿದ್ದರು. ಈಚೆಗೆ ಈ ಪಕ್ಷವನ್ನು ಕಾಂಗ್ರೆಸ್ ಜೊತೆಗೆ ವಿಲೀನಗೊಳಿಸಿದ್ದರು.

V/S



ವೈ.ಎಸ್. ಅವಿನಾಶ್ ರೆಡ್ಡಿ (ವೈಎಸ್‌ಆರ್ ಕಾಂಗ್ರೆಸ್ ಪಕ್ಷ)

ಕಡಪ ಕ್ಷೇತ್ರದಿಂದ ಎರಡು ಬಾರಿ ಸಂಸತ್‌ಗೆ ಆಯ್ಕೆಯಾಗಿರುವ ವೈ.ಎಸ್.ಅವಿನಾಶ್ ರೆಡ್ಡಿ ಈ ಬಾರಿಯೂ ಸ್ಪರ್ಧೆಗಿಳಿದಿದ್ದಾರೆ. ಕಳೆದ ಬಾರಿ ಎದುರಾಳಿ ಟಿಡಿಪಿ ಅಭ್ಯರ್ಥಿಯನ್ನು ಪರಾಭವಗೊಳಿಸಿದ್ದ ಇವರಿಗೆ ಈ ಬಾರಿ ಸಂಬಂಧಿ ಶರ್ಮಿಳಾ ಅವರು ಕಣಕ್ಕಿಳಿದಿರುವುದರಿಂದ ಭಾರಿ ಸವಾಲು ಎದುರಾಗಿದೆ. 2019 ಮಾರ್ಚ್ 15ರಂದು ನಡೆದಿದ್ದ ವಿವೇಕಾನಂದ ರೆಡ್ಡಿ ಹತ್ಯೆ ಪ್ರಕರಣದ ಸಂಚಿನಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಇವರಿಗೆ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ರಕ್ಷಣೆ ನೀಡುತ್ತಿದ್ದಾರೆಂದು ಈ ಹಿಂದೆ ಶರ್ಮಿಳಾ ಆರೋಪಿಸಿದ್ದರು. ಈ ಬಾರಿ ಶರ್ಮಿಳಾ ಅವರೇ ಸ್ಪರ್ಧೆಗಿಳಿದಿರುವುದರಿಂದ ಕಣವು ತೀವ್ರ ಜಿದ್ದಾಜಿದ್ದಿಗೆ ವೇದಿಕೆಯಾಗಲಿದೆ. ಅವಿನಾಶ್ ಅವರು ಕಳೆದ ಚುನಾವಣೆಯಲ್ಲಿ 7,83,499 ಮತಗಳನ್ನು ಪಡೆದು ಜಯ ಗಳಿಸಿದ್ದರು.

ಸುಭಾಷಿತ

ನಮಗೆ ಏನು ಸಿಕ್ಕಿದೆ ಎನ್ನುವುದಕ್ಕಿಂತ, ನಮ್ಮ ಬಳಿ ಇರುವುದರಲ್ಲಿ ನಾವೇನು ಮಾಡಿದ್ದೇವೆ ಎಂಬುದು, ಒಬ್ಬ ವ್ಯಕ್ತಿಯನ್ನು ಮತ್ತೊಬ್ಬ ವ್ಯಕ್ತಿಗಿಂತ ಬೇರೆಯಾಗಿಸುತ್ತದೆ.
-ನೆಲ್ಸನ್ ಮಂಡೇಲಾ

ಚುನಾವಣೆಯ ಅಲ್ಪ ಲಾಭಕ್ಕಾಗಿ ಶ್ರೀಲಂಕಾ ಜೊತೆಗಿನ ಸಂಬಂಧ ಕೆಡಿಸಬೇಡಿ

ನಮ್ಮ ನೆರೆಯ ದೇಶ ಶ್ರೀಲಂಕಾದ ಜೊತೆಗಿನ ಸಂಬಂಧದ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತಹ ವಿಚಾರವೊಂದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕೆದಕಿದ್ದಾರೆ. ಚುನಾವಣೆಯಲ್ಲಿ ಆಗಬಹುದಾದ ಅಲ್ಪ ಲಾಭದ ಏಕೈಕ ಉದ್ದೇಶದಿಂದ ಪ್ರಧಾನಿಯವರು ಈ ರೀತಿ ಮಾಡಿರುವುದು ದುರದೃಷ್ಟಕರ. ಕಚ್ಚತೀವು ದ್ವೀಪವನ್ನು ಭಾರತವು ಶ್ರೀಲಂಕಾಕ್ಕೆ ಕೊಟ್ಟಿರುವುದು ಸರಿಯಲ್ಲ ಎಂದು ಪ್ರಧಾನಿ ಹೇಳಿದ್ದಾರೆ. ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವು ಕಚ್ಚತೀವು ವಿಚಾರವನ್ನು 'ಅಸಡ್ಡೆ'ಯಿಂದ ನಿರ್ವಹಿಸುವ ಮೂಲಕ ರಾಷ್ಟ್ರೀಯ ಭದ್ರತೆಯಲ್ಲಿ ರಾಜಿ ಮಾಡಿಕೊಳ್ಳಲಾಗಿದೆ ಎಂದು ಮೋದಿ ಅವರು ಆರೋಪಿಸಿದ್ದಾರೆ. ಈಗ ಬಹಿರಂಗವಾಗಿರುವ ಕೆಲವು ಮಾಹಿತಿಗಳು ಡಿಎಂಕೆಯ ದ್ವಂದ್ವ ನೀತಿಯನ್ನೂ ಬಯಲು ಮಾಡಿವೆ. ಆಗ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂ. ಕರುಣಾನಿಧಿ ಅವರು ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ನೀಡಲು 1974ರಲ್ಲಿ ಸಮ್ಮತಿ ಸೂಚಿಸಿದ್ದರು. ಆದರೆ, ಅವರ ಪಕ್ಷವು ಸಾರ್ವಜನಿಕವಾಗಿ ಇದಕ್ಕೆ ತದ್ವಿರುದ್ಧ ನಿಲುವು ತಳೆದಿತ್ತು ಎಂದೂ ಪ್ರಧಾನಿಯವರು ಆರೋಪ ಮಾಡಿದ್ದಾರೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಮೋದಿ ಅವರ ಪ್ರತಿಪಾದನೆಯನ್ನು ಬೆಂಬಲಿಸಿದ್ದಾರೆ.

ಈ ದ್ವೀಪಕ್ಕೆ ಸಂಬಂಧಿಸಿ ಮಾಡಿಕೊಂಡ ಒಪ್ಪಂದದ ಕುರಿತು ತಮಿಳುನಾಡಿನ ರಾಜಕೀಯ ಪಕ್ಷಗಳು ಆಗಾಗ ಅಸಮಾಧಾನ ವ್ಯಕ್ತಪಡಿಸಿ, ದ್ವೀಪವನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯ ಮಾಡಿದ್ದು ಇದೆ. ಆದರೆ, ಇದಕ್ಕಾಗಿ ಬಲವಾದ ಬೇಡಿಕೆ ಕೇಳಿಬಂದಿಲ್ಲ ಅಥವಾ ಚಳವಳಿಯೂ ನಡೆದಿಲ್ಲ. ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರವೂ ಸೇರಿ ಈ ಹಿಂದಿನ ಯಾವುದೇ ಸರ್ಕಾರವು ಈ ದ್ವೀಪಕ್ಕೆ ಸಂಬಂಧಿಸಿ ಭಿನ್ನವಾದ ನಿಲುವನ್ನು ವ್ಯಕ್ತಪಡಿಸಿದ್ದೇ ಇಲ್ಲ. ಈ ದ್ವೀಪದ ಮೇಲೆ ಭಾರತಕ್ಕೆ ಚಾರಿತ್ರಿಕವಾದ ಯಾವುದೇ ಹಕ್ಕು ಇಲ್ಲ; ಹಾಗಾಗಿ ಈ ದ್ವೀಪವನ್ನು ಶ್ರೀಲಂಕಾಕ್ಕೆ ಹಸ್ತಾಂತರಿಸಲಾಯಿತು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು 2013ರಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಭಾರತ–ಶ್ರೀಲಂಕಾ ಅಂತರ ರಾಷ್ಟ್ರೀಯ ಜಲಗಡಿಯ ಶ್ರೀಲಂಕಾ ಭಾಗದಲ್ಲಿ ಕಚ್ಚತೀವು ದ್ವೀಪ ಇದೆ ಎಂದು ಈಗಿನ ಸರ್ಕಾರವು ರಾಜ್ಯಸಭೆಗೆ 2022ರಲ್ಲಿ ಹೇಳಿತ್ತು. 1974 ಮತ್ತು 1976ರಲ್ಲಿ ಶ್ರೀಲಂಕಾ ಜೊತೆಗೆ ಮಾಡಿಕೊಂಡ ಒಪ್ಪಂದಗಳ ಅಂಶಗಳನ್ನು ವಿದೇಶಾಂಗ ಸಚಿವಾಲಯವು ಮದ್ರಾಸ್ ಹೈಕೋರ್ಟ್‌ಗೆ 2014ರ ಜುಲೈನಲ್ಲಿ ವಿವರಿಸಿ, ಇದು ಮುಗಿದ ವಿಚಾರ ಎಂದು ತಿಳಿಸಿತ್ತು. ಕಚ್ಚತೀವು ದ್ವೀಪವನ್ನು ಸ್ವಾಧೀನಪಡಿಸಿಕೊಂಡೂ ಇಲ್ಲ, ಹಸ್ತಾಂತರಿಸಿಯೂ ಇಲ್ಲ, ಈ ದ್ವೀಪವು ಅಂತರರಾಷ್ಟ್ರೀಯ ಜಲಗಡಿಯ ಶ್ರೀಲಂಕಾ ಭಾಗದಲ್ಲಿ ಇದೆ ಎಂದು ವಿದೇಶಾಂಗ ಸಚಿವಾಲಯವು ಮಾಹಿತಿ ಹಕ್ಕು ಅಡಿಯಲ್ಲಿ ನೀಡಿದ ಮಾಹಿತಿಯಲ್ಲಿ 2015ರಲ್ಲಿ ಹೇಳಿತ್ತು. ಚಾರಿತ್ರಿಕ ದಾಖಲೆಗಳು ಕೂಡ ಇದೇ ನಿಲುವಿಗೆ ಪೂರಕವಾಗಿ ಇವೆ.

ಬಗೆಹರಿದ ವಿಚಾರವೊಂದನ್ನು ಹಲವು ವರ್ಷಗಳ ಬಳಿಕ ಕೆದಕುವುದು ಸರಿಯಲ್ಲ ಮತ್ತು ವಿವೇಕಯುತವಾದ ನಡೆಯೂ ಅಲ್ಲ

ಬಗೆಹರಿದ ವಿಚಾರವೊಂದನ್ನು ಹಲವು ವರ್ಷಗಳ ಬಳಿಕ ಕೆದಕುವುದು ಸರಿಯಲ್ಲ ಮತ್ತು ವಿವೇಕಯುತವಾದ ನಡೆಯೂ ಅಲ್ಲ. ರಾಜಕೀಯ ಪಕ್ಷಗಳು ವಿವಿಧ ವಿಚಾರಗಳ ಕುರಿತು ತಮ್ಮದೇ ಆದ ನಿಲುವುಗಳನ್ನು ಹೊಂದಿರುತ್ತವೆ ಮತ್ತು ರಾಜಕೀಯ ಅಥವಾ ಚುನಾವಣಾ ಲಾಭಕ್ಕೆ ಬೇಕಾದ ರೀತಿಯಲ್ಲಿ ಅವುಗಳನ್ನು ವ್ಯಕ್ತಪಡಿಸುತ್ತವೆ. ಆದರೆ, ಪ್ರಧಾನಿಯವರು ವಿವಾದಕ್ಕೆ ಕಾರಣವಾಗಬಹುದಾದ ವಿಚಾರಗಳ ಕುರಿತು ಹೇಳಿಕೆಗಳನ್ನು ನೀಡುವಾಗ ಹೆಚ್ಚು ಜವಾಬ್ದಾರಿಯುತವಾಗಿ ಇರಬೇಕು. ಅವರ ಹೇಳಿಕೆಯು ತಮಿಳುನಾಡಿನಲ್ಲಿ ಪ್ರಾದೇಶಿಕ ಭಾವನೆಯನ್ನು ಕೆರಳಿಸಬಹುದು; ಶ್ರೀಲಂಕಾ ಜೊತೆಗಿನ ದ್ವಿಪಕ್ಷೀಯ ಸಂಬಂಧವು ಹದಗೆಡುವಂತೆ ಮಾಡಬಹುದು. ತಮಿಳುನಾಡಿನಲ್ಲಿ ರಾಜಕೀಯ ನೆಲೆ ಕಂಡುಕೊಳ್ಳಲು ಬಿಜೆಪಿ ಶತಾಯ ಗತಾಯ ಪ್ರಯತ್ನ ಮಾಡುತ್ತಿದೆ. ರಾಷ್ಟ್ರೀಯ ಭದ್ರತೆ ಮತ್ತು ನೆರೆಯ ದೇಶದ ಜೊತೆಗಿನ ಉತ್ತಮ ಸಂಬಂಧಕ್ಕಿಂತ ಪಕ್ಷದ ಚುನಾವಣಾ ಹಿತಾಸಕ್ತಿಯೇ ಮುಖ್ಯ ಎಂದು ಮೋದಿ ಅವರು ಪರಿಗಣಿಸಬಾರದಿತ್ತು. ಈ ವಿಚಾರದಲ್ಲಿ ಕರುಣಾನಿಧಿ ಅವರು ತೋರಿದ ಮುತ್ಸದ್ದಿತನ ಅಭಿನಂದನಾರ್ಹ. ಹಾಗೆಯೇ 1974ರಲ್ಲಿ ಆದ ಒಪ್ಪಂದವನ್ನು ಆಗ ವಿರೋಧಿಸಿದ್ದ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಒಪ್ಪಂದವನ್ನು ಮರುಪರಿಶೀಲನೆ ಮಾಡದೇ ಇರುವ ಮೂಲಕ ಶ್ಲಾಘನೀಯವಾಗಿ ವರ್ತಿಸಿದ್ದಾರೆ.

ದಿನದ ಟ್ವೀಟ್

ವೋಟಿಗಾಗಿ ಎಲ್ಲ ವೋಟಿಗಾಗಿ...

ಮತದಾನಕ್ಕೆ ಒಂದು ವಾರ ಇರುವಾಗ ಒಂದು ದಿನ ರಜೆ ಕೊಡುವಂತೆ ನಮ್ಮ ಮನೆಗೆಲಸದವಳು ಕೇಳಿದಳು. ಯಾಕೆ ಎಂದೆ. ಪ್ರತಿಸಲದಂತೆ ಈ ಸಲವೂ ಎರಡೂ ಪಕ್ಷಗಳು ಮತ ಹಾಕುವುದಕ್ಕೆ ಎಲ್ಲರಿಗೂ ಹಣ ವಿತರಿಸುತ್ತಿದ್ದು, ಅದನ್ನು ಪಡೆಯುವ ಸಲುವಾಗಿ ಎಂದಳು. ಯಾರಿಗೆ ಮತ ಹಾಕುತ್ತೀಯೆ ಎಂದದ್ದಕ್ಕೆ, ಇನ್ನೂ ತೀರ್ಮಾನಿಸಿಲ್ಲ ಎಂದಳು.

ಅಪರ್ಣ ಶ್ರೀಧರ್

ಕಿಡಿನುಡಿ

'ನನ್ನ ಸಾರ್ವಜನಿಕ ಜೀವನ ಒಂದು ತೆರೆದ ಪುಸ್ತಕ'– ಪ್ರಧಾನಿಯಾಗಿ ಡಾ. ಮನಮೋಹನ್ ಸಿಂಗ್ ಅವರ ಕೊನೆಯ ಹೇಳಿಕೆ ಇದು. 33 ವರ್ಷಗಳ ಬಳಿಕ ಸಂಸತ್ತಿನ ಇನಿಂಗ್ಸ್ ಅನ್ನು ಅವರೀಗ ಮುಗಿಸುತ್ತಿರುವ ಸಂದರ್ಭದಲ್ಲಿ, ಅವರ ಟೀಕಾಕಾರರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಅವರ ಅನುಯಾಯಿಗಳು ಸಂಭ್ರಮಿಸಬೇಕಾಗಿದೆ ಮತ್ತು ದೇಶವು ಅವರಿಗೆ ಧನ್ಯವಾದ ಅರ್ಪಿಸಬೇಕಾಗಿದೆ.

ಪಂಕಜ್ ಪಚೌರಿ, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 4.4.1999

- **ಫ್ರೆಂಚ್ ಗಯಾನಾದಿಂದ ಇನ್ಸಾಟ್– 2ಇ ಉಪಗ್ರಹ ಯಶಸ್ವಿ ಉಡಾವಣೆ**

ಕೌರು, ಫ್ರೆಂಚ್ ಗಯಾನಾ (ದಕ್ಷಿಣ ಅಮೆರಿಕ), ಏ. 3 (ಪಿಟಿಐ)– ಭಾರತ ಬಾಹ್ಯಾಕಾಶ ಸಂಸ್ಥೆಯ ಅತ್ಯಂತ ಮಹತ್ವಾಕಾಂಕ್ಷೆಯ, ಇನ್ಸಾಟ್ ಸರಣಿಯ ಕೊನೆಯ ಉಪಗ್ರಹವಾದ ಬಹೂಪಯೋಗಿ ಇನ್ಸಾಟ್ -2ಇ ಇಂದು ಬೆಳಗಿನ ಜಾವ ಅಂತರರಾಷ್ಟ್ರೀಯ ಸಮಯ 03.33ಕ್ಕೆ ಕೌರು ಬಾಹ್ಯಾಕಾಶ ಕೇಂದ್ರದಲ್ಲಿ ಏರಿಯಾನ್– 42ಪಿ ಉಡಾವಣಾ ವಾಹನದಿಂದ ಯಶಸ್ವಿಯಾಗಿ ಮತ್ತು ಕರಾರುವಾಕ್ಕಾಗಿ ನಭಕ್ಕೆ ಹಾರಿತು.

ಉಡಾವಣಾ ವಾಹಕ ಭಾರಿ ಸದ್ದು ಮಾಡುತ್ತ, ಬೆಂಕಿಯನ್ನು ಚೆಲ್ಲುತ್ತ ಕಕ್ಷೆಯತ್ತ ನೆಗೆಯುವಾಗ ಸುತ್ತಮುತ್ತಲಿನ ಪ್ರದೇಶವು ಬಂಗಾರದ ಬೆಳಕಿನಿಂದ ಹೊಳೆಯಿತು.

ಉಪಗ್ರಹವು ವ್ಯೋಮಕ್ಕೆ ಹಾರಿದ ಎಂಟು ನಿಮಿಷಗಳಲ್ಲಿ, ಹಾಸನದಲ್ಲಿರುವ ಉಪಗ್ರಹ ನಿಯಂತ್ರಣ ಕೇಂದ್ರದಲ್ಲಿ ಅದನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲಾಯಿತು. ಮೊದಲ ಸಂಕೇತಗಳು ದೊರಕಿದ ತಕ್ಷಣವೇ ಉಪಗ್ರಹ ಸುಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲಾಯಿತು.

- **ಕಾಂಗ್ರೆಸ್ ಧರಣಿ, ಬಿಜೆಪಿ ಸಭಾತ್ಯಾಗ**

ಬೆಂಗಳೂರು, ಏ. 3– ಬೆಂಗಳೂರಿಗೆ ನೀರು ಸರಬರಾಜು ಮಾಡುವ ಯೋಜನೆಯನ್ನು ವಿದೇಶಿ ಮೂಲದ ಬೈವಾಟರ್ ಸಂಸ್ಥೆಗೆ ವಹಿಸಿಕೊಡುವ ಹಿನ್ನೆಲೆಯಲ್ಲಿ ಭಾರಿ ಅವ್ಯವಹಾರ ನಡೆದಿರಬಹುದಾದ ಶಂಕೆ ಇರುವುದರಿಂದ ಜಂಟಿ ಸದನ ಸಮಿತಿ ರಚಿಸಬೇಕೆಂಬ ವಿರೋಧಿ ಬೇಡಿಕೆಯನ್ನು ನಿರಾಕರಿಸಿದ್ದನ್ನು ಪ್ರತಿಭಟಿಸಿ ವಿಧಾನಸಭೆಯಲ್ಲಿ ಇಂದು ಕಾಂಗ್ರೆಸ್ ಧರಣಿ ನಡೆಸಿದರೆ, ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಆದರೆ, ಕಾವೇರಿ ನಾಲ್ಕನೇ ಹಂತದ ಎರಡನೇ ಘಟ್ಟದ ನೀರು ಪೂರೈಕೆ ಗುತ್ತಿಗೆಯನ್ನು ನೀಡುವ ಬಗ್ಗೆ ಸರ್ಕಾರ ಯಾವುದೇ ಸಂಸ್ಥೆಯ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲರು ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಗುರುವಾರ, 4.4.1974

- **ಉಗ್ರ ಚಳವಳಿಗಳ ಹೆದರಿಕೆ: ರಾಜ್ಯಗಳಿಗೆ ಕೇಂದ್ರದ ಮುನ್ನೆಚ್ಚರಿಕೆ**

ನವದೆಹಲಿ, ಏ. 3– ಮೇ ತಿಂಗಳಿಂದ ಸೆಪ್ಟೆಂಬರ್‌ವರೆಗಿನ ಕೊರತೆ ಅವಧಿಯಲ್ಲಿ ಜನತಾ ಚಳವಳಿ ಉಗ್ರ ಸ್ವರೂಪ ತಾಳಿ ಅಪಾಯದ ಮಟ್ಟಕ್ಕೆ ಹೋಗಬಹುದೆಂದೂ ಇದಕ್ಕಾಗಿ ಸಕಾಲಿಕ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಕೇಂದ್ರ ಗೃಹ ಖಾತೆಯು ಆಹಾರ ಕೊರತೆ ಇರುವ ಎಲ್ಲ ರಾಜ್ಯ ಸರ್ಕಾರಗಳಿಗೆ ಎಚ್ಚರಿಸಿದೆ.

ಈ ಬಗ್ಗೆ ಕೇಂದ್ರವು ಸುತ್ತೋಲೆಯೊಂದನ್ನು ಕಳುಹಿಸಿದೆ. ಗುಜರಾತ್ ಮತ್ತು ಬಿಹಾರದಲ್ಲಿನ ಘಟನೆಗಳು ಇತರ ಕೊರತೆ ರಾಜ್ಯಗಳಿಗೆ ಮುನ್ನೆಚ್ಚರಿಕೆಯಾಗಿವೆ. ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಮಧ್ಯಪ್ರದೇಶದಲ್ಲೂ ಇಂತಹ ಚಳವಳಿಗಳು ಆರಂಭವಾಗಬಹುದು. ಪಶ್ಚಿಮ ಬಂಗಾಳದಲ್ಲಿ ಈ ಬೆದರಿಕೆ ಬಹಳ ಹೆಚ್ಚಾಗಿದೆ. ಇಲ್ಲಿ ಆಸ್ಫೋಟಕ ಪರಿಸ್ಥಿತಿಯನ್ನು ತಪ್ಪಿಸಲು ತ್ವರಿತವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮುಖ್ಯಮಂತ್ರಿ ರಾಯ್ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮೊಹಿತಾ ಚರ್ಚಿಸಿದರು.

- **ಹಂತ ಹಂತದ ಪಾನನಿರೋಧ ಜಾರಿ ಇಲ್ಲ: ದೇವರಾಜ ಅರಸು**

ಬೆಂಗಳೂರು, ಏ. 3– ರಾಜ್ಯದಲ್ಲಿ ಹಂತ ಹಂತವಾಗಿ ಪಾನನಿರೋಧವನ್ನು ಜಾರಿಗೆ ತರಲು ಸರ್ಕಾರ ಯೋಚಿಸುತ್ತಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನಪರಿಷತ್ತಿನಲ್ಲಿ ಲಿಖಿತ ಉತ್ತರ ನೀಡಿದರು.

ಶ್ರೀ ಎಂ.ವಿ.ವೆಂಕಟಪ್ಪ ಅವರ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಅವರ ಗೈರುಹಾಜರಿಯಲ್ಲಿ ಕಂದಾಯ ಸಚಿವ ಶ್ರೀ ಎನ್.ಹುಚ್ಚಮಾಸ್ತಿಗೌಡ ಅವರು ಉತ್ತರ ನೀಡಿದರು.

ಹಿಡಿತ ಉಳಿಸಿಕೊಳ್ಳಬೇಕು ಎಂದಾದರೆ, ಹಿಂದೆಲ್ಲಾ ಆಗಿದ್ದನ್ನು ಮೀರಿ ನಿಲ್ಲಬೇಕಿದೆ

ಲೋಕಸಭೆ: ಇತಿಹಾಸ ಕಾಂಗ್ರೆಸ್ಸಿಗೆ ಪೂರಕವಾಗಿಲ್ಲ

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತದಾರರ ಮೇಲಿನ ಹಿಡಿತವನ್ನು ಉಳಿಸಿಕೊಳ್ಳಬೇಕು ಎಂದಾದರೆ, ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಪಕ್ಷವು ಭಗೀರಥ ಪ್ರಯತ್ನವನ್ನೇ ನಡೆಸಬೇಕಾದೀತು ಎಂಬುದನ್ನು ಕರ್ನಾಟಕದ ಮತದಾರರು ವಿಧಾನಸಭಾ ಚುನಾವಣೆಗಳಲ್ಲಿ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಮತ ಚಲಾಯಿಸುವ ಬಗೆಯು ಹೇಳುತ್ತಿದೆ. ಅಂದರೆ, ರಾಜ್ಯದ ಚುನಾವಣಾ ಇತಿಹಾಸವು ಕಾಂಗ್ರೆಸ್ಸಿಗೆ ಅನುಕೂಲಕರವಾಗಿ ಇಲ್ಲ. ರಾಜ್ಯದ ಮತದಾರರ ಮೇಲೆ ಹಿಡಿತವನ್ನು ಉಳಿಸಿಕೊಳ್ಳಬೇಕು ಎಂದಾದರೆ ಕಾಂಗ್ರೆಸ್ ಪಕ್ಷವು ಹಿಂದೆಲ್ಲ ಆಗಿದ್ದನ್ನು ಮೀರಿ ನಿಲ್ಲುವ ಕೆಲಸ ಮಾಡಬೇಕು.

ಐದು ಗ್ಯಾರಂಟಿಗಳ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷವು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಳ್ಳೆಯ ಸಾಧನೆ ತೋರಿತು. ಆ ಹೊತ್ತಿನಲ್ಲಿ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಯಾವ ಚುರುಕುತನವೂ ಕಾಣುತ್ತಿರಲಿಲ್ಲ. ಬಿಜೆಪಿಗೆ ತನ್ನ ಪ್ರಮುಖ ಎದುರಾಳಿ ಕಾಂಗ್ರೆಸ್ಸನ್ನು ಎದುರಿಸುವ ವಿಶ್ವಾಸ ಇದ್ದಂತೆ ಕಾಣುತ್ತಿರಲಿಲ್ಲ. ಆದರೆ ಲೋಕಸಭಾ ಚುನಾವಣೆಯು ಭಿನ್ನ. ಕಾಂಗ್ರೆಸ್ ಪಕ್ಷವು ಬಹಳ ಆತ್ಮವಿಶ್ವಾಸದಿಂದ ಇರುವ ಹಾಗೂ ಶಕ್ತಿಶಾಲಿಯಾದ ನರೇಂದ್ರ ಮೋದಿ ಅವರನ್ನು ಎದುರಿಸಬೇಕಿದೆ. ಹಾಗೆಯೇ, ಹಿಂದಿನ ಎರಡು ಚುನಾವಣೆಗಳು ತೋರಿಸಿರುವಂತೆ, 'ಮೋದಿಯ ಗ್ಯಾರಂಟಿ'ಗಳು ಮತದಾರರಿಗೆ ಹೆಚ್ಚು ಮಹತ್ವದ್ದಾಗಿರುವಂತೆ ಕಾಣುತ್ತವೆ.

ಒಕ್ಕೂಟ ಸರ್ಕಾರದ ಆಯ್ಕೆಯಲ್ಲಿ ಹಾಗೂ ರಾಜ್ಯದ ಆಡಳಿತ ನಡೆಸುವ ಸರ್ಕಾರದ ಆಯ್ಕೆಯಲ್ಲಿ ಭಿನ್ನ ನಿಲುವನ್ನು ಮತದಾರರು ಮೊದಲು ತೋರಲು ಆರಂಭಿಸಿದ ರಾಜ್ಯಗಳ ಸಾಲಿನಲ್ಲಿ ಕರ್ನಾಟಕವೂ ಒಂದು. ಇದನ್ನು 1984–85ರಲ್ಲಿ ಮತದಾರರು ಬಹಳ ಸ್ಪಷ್ಟವಾಗಿ ತೋರಿಸಿದರು. 1984ರ ಡಿಸೆಂಬರ್‌ನಲ್ಲಿ, ಇಂದಿರಾ ಗಾಂಧಿ ಅವರ ಹತ್ಯೆಯ ನಂತರದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷವು ದಾಖಲೆಯ ಗೆಲುವನ್ನು ಸಾಧಿಸಿತು. ಅದು ಲೋಕಸಭೆಯಲ್ಲಿ 404 ಸ್ಥಾನಗಳನ್ನು ಗೆದ್ದುಕೊಂಡಿತು, ಒಟ್ಟು ಶೇಕಡ 49.01ರಷ್ಟು ಮತಗಳನ್ನು ಪಡೆದುಕೊಂಡಿತು. ಇಂದಿರಾ ಅವರ ಹತ್ಯೆಯು ಕರ್ನಾಟಕದ ಮತದಾರರನ್ನು ಕೂಡ ಸ್ತಂಭೀಭೂತರನ್ನಾಗಿಸಿತ್ತು. ಅವರು ಇಂದಿರಾ ಅವರ ಉತ್ತರಾಧಿಕಾರಿ, ಅವರ ಮಗ ರಾಜೀವ್ ಅವರಿಗೆ ಭಾರಿ ಬೆಂಬಲ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಶೇ 52ರಷ್ಟು ಮತಗಳನ್ನು ಪಡೆದುಕೊಂಡಿತು, ರಾಜ್ಯದ 28 ಲೋಕಸಭಾ ಸ್ಥಾನಗಳ ಪೈಕಿ 24ರಲ್ಲಿ ಕಾಂಗ್ರೆಸ್ ಜಯ ಸಾಧಿಸಿತು. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ಪಕ್ಷವು ಬರೀ ಶೇ 35ರಷ್ಟು ಮತಗಳನ್ನು ಪಡೆಯಿತು, ಲೋಕಸಭಾ ಕ್ಷೇತ್ರಗಳ ಪೈಕಿ ನಾಲ್ಕು ಕಡೆ ಮಾತ್ರ ಗೆಲುವು ಕಂಡಿತು.

ರಾಜಕೀಯ ತಂತ್ರಗಾರಿಕೆಯಲ್ಲಿ ಅದ್ಭುತ ಪರಿಣತಿ ಸಾಧಿಸಿದ್ದ ಹೆಗಡೆ ಅವರು ಚುನಾವಣಾ ಫಲಿತಾಂಶವನ್ನು ತಮಗೆ ಜನಾದೇಶ ಇಲ್ಲವಾಗಿರುವುದರ ಸೂಚನೆ ಎಂದು ಪರಿಗಣಿಸಿದರು. ಆಗ ಅವರು ಜನತಾ ಪಕ್ಷ – ಕರ್ನಾಟಕ ಕ್ರಾಂತಿ ರಂಗ ಮೈತ್ರಿ ಸರ್ಕಾರವನ್ನು ಮುನ್ನಡೆಸುತ್ತಿದ್ದರು. ಹೆಗಡೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು, ರಾಜ್ಯ ವಿಧಾನಸಭೆಗೆ ಮತ್ತೆ ಚುನಾವಣೆ ನಡೆಯಬೇಕಾಯಿತು. ಮೂರು ತಿಂಗಳ ನಂತರ, ಅಂದರೆ 1985ರ ಮಾರ್ಚ್ ತಿಂಗಳಲ್ಲಿ, ಚುನಾವಣೆ ನಡೆಯಿತು. ಈ ಬಾರಿ ಮತದಾರರು ಹೆಗಡೆ ಅವರ ಪರ ಒಲವು ವ್ಯಕ್ತಪಡಿಸಿದರು. ಅವರ ಪಕ್ಷವು ರಾಜ್ಯ ವಿಧಾನಸಭೆಯ 224 ಸ್ಥಾನಗಳ ಪೈಕಿ 139 ಸ್ಥಾನಗಳಲ್ಲಿ ಗೆಲುವು ಕಂಡಿತು. ಲೋಕಸಭಾ ಚುನಾವಣೆಯಲ್ಲಿ ಶೇ 52ರಷ್ಟು ಮತಗಳನ್ನು ಪಡೆದಿದ್ದ ಕಾಂಗ್ರೆಸ್ ಪಕ್ಷವು ವಿಧಾನಸಭಾ ಚುನಾವಣೆಯಲ್ಲಿ ಶೇ 41ರಷ್ಟು ಮತಗಳನ್ನು ಮಾತ್ರ ಪಡೆದುಕೊಂಡಿತು.

ಮತದಾರರ ಅನುಕಂಪವು ಹೆಗಡೆ ಅವರ ಕಡೆ ಕೆಲವೇ ತಿಂಗಳುಗಳಲ್ಲಿ ತಿರುಗಿದೆ ಎಂಬುದು ಚುನಾವಣಾ ಪ್ರಚಾರ ಅಭಿಯಾನದ ಸಂದರ್ಭದಲ್ಲಿಯೇ ಗೊತ್ತಾಗುವಂತೆ ಇತ್ತು. ಲೋಕಸಭಾ ಚುನಾವಣೆಯಲ್ಲಿ ತಾವು ಕಾಂಗ್ರೆಸ್ಸಿನ ಪರವಾಗಿ ಮತ ಚಲಾಯಿಸಿದ್ದರೂ ಅದು ಹೆಗಡೆ ಅವರ ಬಗ್ಗೆ ಅವಿಶ್ವಾಸ ತೋರಿದ ನಡೆ ಅಲ್ಲವೇ ಅಲ್ಲ ಎಂಬ ಭಾವನೆಯು ಹೆಚ್ಚಿನವರಲ್ಲಿ ಎದ್ದು ಕಾಣುತ್ತಿತ್ತು. ಹೀಗಾಗಿ ವಿಧಾನಸಭಾ ಚುನಾವಣೆಯಲ್ಲಿ ಜನರು ಬಹಳ ಸಹಜವಾಗಿ ಹೆಗಡೆ ಅವರನ್ನೇ ಆಯ್ಕೆ ಮಾಡಿದರು. ಲೋಕಸಭಾ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಭಿನ್ನ ಬಗೆಯಲ್ಲಿ ತಮ್ಮ ಒಲವು ವ್ಯಕ್ತಪಡಿಸುವುದು ಕರ್ನಾಟಕದಲ್ಲಿ ಶುರುವಾಯಿತು. ಈಗ ಲೋಕಸಭಾ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಜನ ಭಿನ್ನ ರೀತಿಯಲ್ಲಿ ತಮ್ಮ ತೀರ್ಮಾನ ಹೇಳುತ್ತಿರುವುದು ಬಹುತೇಕ ರಾಜ್ಯಗಳಲ್ಲಿ ಕಾಣುತ್ತಿದೆ.

ಈ ಪ್ರವೃತ್ತಿಯು ಈಚಿನ ವರ್ಷಗಳಲ್ಲಿ ಮುಂದುವರಿದಿರುವಂತೆ ಕಾಣುತ್ತಿದೆ. 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಕೇವಲ 40 ಸ್ಥಾನಗಳಿಗೆ ಕುಸಿಯಿತು. ಅದಕ್ಕೂ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 110 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಕಾಂಗ್ರೆಸ್ ಪಕ್ಷವು 122 ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿಯಿತು. ಯಡಿಯೂರಪ್ಪ ಅವರು ಬಿಜೆಪಿ ಬಗ್ಗೆ ಅಸಮಾಧಾನಗೊಂಡು, ಪಕ್ಷ ತೊರೆದು, ತಮ್ಮದೇ ಆದ ಪ್ರಾದೇಶಿಕ ಪಕ್ಷವನ್ನು ಕಟ್ಟಿದ್ದ ಕಾರಣದಿಂದಾಗಿ ಬಿಜೆಪಿಯ ಮತ ಗಳಿಕೆ ಪ್ರಮಾಣವು 2013ರಲ್ಲಿ ಶೇ 19.9ಕ್ಕೆ ಕುಸಿದಿತ್ತು. ಅದಾದ ಒಂದು ವರ್ಷದಲ್ಲಿ ಯಡಿಯೂರಪ್ಪ ಅವರು ಬಿಜೆಪಿಗೆ ಮರಳಿದರು, ಜನರ ಒಲವು ಕೂಡ ಬದಲಾಗಿತ್ತು. ಹಿಂದಿನ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಸೋಲು ಕಂಡಿದ್ದ ಬಿಜೆಪಿ, 2014ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 17 ಸ್ಥಾನಗಳನ್ನು ಗೆದ್ದುಕೊಂಡಿತು, ಕಾಂಗ್ರೆಸ್ 9 ಸ್ಥಾನಗಳಲ್ಲಿ ಗೆಲುವು ಕಂಡಿತು.

ಬಿಜೆಪಿಯ ಪುನಶ್ಚೇತನವು ಬಹಳ ತ್ವರಿತವಾಗಿ ಆಗಿತ್ತು. ಇದಕ್ಕೆ ಎರಡು ಕಾರಣಗಳು ಕೆಲಸ ಮಾಡಿದ್ದವು. ಯಡಿಯೂರಪ್ಪ ಅವರು ಬಿಜೆಪಿಗೆ ಮರಳಿದ್ದುದು ಹಾಗೂ ನರೇಂದ್ರ ಮೋದಿ ಅವರು ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದು ಆ ಕಾರಣಗಳು. 2014ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಮೋದಿ ಅವರನ್ನು ರಾಷ್ಟ್ರನಾಯಕನನ್ನಾಗಿ ಮೊದಲ ಬಾರಿಗೆ ಕಾಣಲು, ಅವರ ಮಾತುಗಳನ್ನು ಆಲಿಸಲು ಸಾಧ್ಯವಾಯಿತು. ರಾಜ್ಯದ ಮತದಾರರ ಮೇಲೆ ಮೋದಿ ಅವರು ಪ್ರಭಾವ ಬೀರಿರುವುದು ಆಗಲೇ ಕಾಣುತ್ತಿತ್ತು.

2018ರಲ್ಲಿ ಕರ್ನಾಟಕದಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣವಾಯಿತು. ಬಿಜೆಪಿ 104 ಸ್ಥಾನಗಳನ್ನು ಮಾತ್ರ ಪಡೆಯಿತು. ಕಾಂಗ್ರೆಸ್ 80 ಹಾಗೂ ಜೆಡಿಎಸ್ 37 ಸ್ಥಾನಗಳನ್ನು ಪಡೆದವು. ಎರಡೂ ಪಕ್ಷಗಳು ಅಸ್ಥಿರ ಮೈತ್ರಿ ಸರ್ಕಾರ ರಚಿಸಿದವು, ಎಚ್‌.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದರು. ಆಡಳಿತಾರೂಢ ಮೈತ್ರಿಕೂಟದ 16 ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನಂತರ, ಇಬ್ಬರು ಪಕ್ಷೇತರ ಶಾಸಕರು ಬಿಜೆಪಿಗೆ ನಿಷ್ಠೆ ತೋರಿಸಿದ ಪರಿಣಾಮವಾಗಿ ಸರ್ಕಾರವು 14 ತಿಂಗಳಲ್ಲಿ ಪತನಗೊಂಡಿತು. ಯಡಿಯೂರಪ್ಪ ಅವರು ಮತ್ತೆ ಅಧಿಕಾರ ಹಿಡಿದರು. 2019ರ ಲೋಕಸಭಾ ಚುನಾವಣೆಯಲ್ಲಿ ಮತದಾರರು ಬಹಳ ಸ್ಪಷ್ಟವಾದ ಜನಾದೇಶ ನೀಡಿದರು. ಕಾಂಗ್ರೆಸ್ ಮತ್ತು ಜೆಡಿಎಸ್ ತಲಾ ಒಂದು ಸ್ಥಾನವನ್ನು ಮಾತ್ರ ಗೆದ್ದುಕೊಂಡವು. ಬಿಜೆಪಿ 25 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಒಂದು ಕ್ಷೇತ್ರದಲ್ಲಿ ಬಿಜೆಪಿ ಬೆಂಬಲಿತ ಸುಮಲತಾ ಅಂಬರೀಷ್ ಗೆಲುವು ಕಂಡರು.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 2019ರ ಲೋಕಸಭಾ ಚುನಾವಣೆಯಲ್ಲಿ ತಾನು ತೋರಿದ್ದ ಕಳಪೆ ಸಾಧನೆಯನ್ನು ಮರೆಯಲು ಸಾಧ್ಯವಾಯಿತು. ಆ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 135 ಸ್ಥಾನಗಳಲ್ಲಿ ಗೆಲುವು ಕಂಡಿತು. ಅಧಿಕಾರಕ್ಕೆ ಮರಳಿತು. ಬಿಜೆಪಿಗೆ ಆಗ ಸಿಕ್ಕಿದ್ದು 66 ಸ್ಥಾನಗಳು ಮಾತ್ರ.

ಮತದಾರರ ಈ ಪ್ರವೃತ್ತಿಯು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿಗೆ ಹೆಚ್ಚಿನ ಅನುಕೂಲ ಕಲ್ಪಿಸುವಂತೆ ಇದೆ. ಅಲ್ಲದೆ, ಕೆಲವು ಪ್ರಮುಖ ಸಂಗತಿಗಳು ಬಿಜೆಪಿಗೆ ಬಲ ತಂದುಕೊಡುವ ಕೆಲಸ ಮಾಡಿವೆ. ಎಚ್‌.ಡಿ. ದೇವೇಗೌಡರ ಜೆಡಿಎಸ್ ಪಕ್ಷವು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವನ್ನು (ಎನ್‌ಡಿಎ) ಸೇರಿ, ಬಿಜೆಪಿ ಜೊತೆ ಸೀಟು ಹಂಚಿಕೆ ಒಪ್ಪಂದ ಮಾಡಿಕೊಂಡಿರುವುದು, ಬಿಜೆಪಿಯಿಂದ ಹೊರನಡೆದಿದ್ದ ಜಗದೀಶ ಶೆಟ್ಟರ್ ಅವರಂತಹ ನಾಯಕರು ಈಚಿನ ತಿಂಗಳುಗಳಲ್ಲಿ ಪಕ್ಷಕ್ಕೆ ವಾಪಸಾಗಿರುವುದು ಅಂತಹ ಸಂಗತಿಗಳು.

ಚುರುಮುರಿ

ಬಡಾಯಿ ಬಂಡಾಯ

• ಗುರು ಪಿ.ಎಸ್.

'ನಾನು ಬಂಡಾಯ ಅಭ್ಯರ್ಥಿಯಾಗಿ ನಿಲ್ತೀನಿ' ದೃಢವಾಗಿ ಹೇಳಿದ ಮುದ್ದಣ್ಣ. 'ಯಾಕಣ್ಣ, ಏನಾಯ್ತು?' ಗಾಬರಿಯಿಂದ ಕೇಳಿದ ವಿಜಿ.

'ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಿದೆ'.

'ಸ್ವಾಭಿಮಾನಕ್ಕೆ ತಾನೆ, ದೇಹಕ್ಕೇನೂ ಆಗಿಲ್ವಲ್ಲ'.

'ದೇಹಕ್ಕೆ ಏಟಾದರೆ ಸಹಿಸ್ಕೊಬಹುದು, ಸ್ವಾಭಿಮಾನಕ್ಕೆ ಪೆಟ್ಟಾದರೆ ಸಹಿಸಲಾರೆ'.

'ಅಂದ್ರೆ, ನೀನು ತಾಯಿಯಂತೆ ಪ್ರೀತಿಸುವ ಪಾರ್ಟಿಯೇ ನಿನಗೆ ಬೇಡವಾಯ್ತಾ ಅಣ್ಣ'.

'ನನ್ನ ಹೋರಾಟ ಫ್ಯಾಮಿಲಿ ಪಾಲಿಟಿಕ್ಸ್ ವಿರುದ್ಧ, ಪಾರ್ಟಿ ವಿರುದ್ಧವಲ್ಲ'.

'ನೀನು ಹೃದಯದಲ್ಲಿ ಇಟ್ಕೊಂಡಿರೋ ನಿಮ್ ನಾಯಕನೂ ನಿಮಗೆ ಬೇಡವಾದರಾ ಅಣ್ಣ?'

'ಇಲ್ಲ, ಅವರನ್ನು ಮತ್ತೆ ವಿಶ್ವಗುರು ಆಗಿಸುವುದೇ ನನ್ನ ಗುರಿ'.

'ಬಂಡಾಯ ಅಭ್ಯರ್ಥಿ ಅಂತೀಯ, ಪಾರ್ಟಿಗೂ ಬೈಯಲ್ಲ, ಮೇಲ್ಗಡೆಯವರಿಗೂ ಏನೂ ಅನ್ನಲ್ಲ ಅಂದ್ರೆ ಹೇಗಣ್ಣ, ನಿನ್ನ ಮಾತು ಡೌಟು ತರಿಸ್ತಿದೆ'.

'ನಿನಗ್ಯಾಕೆ ಈ ಅನುಮಾನ ಬಂತು?'

'ಹಿಂದೆ ಬಿ ಗ್ರೇಡ್ ಮಾಡಿದ್ದಾಗ್ಲೂ ಹಿಂಗೇ ಹೇಳಿ ಯೂಟರ್ನ್ ಮಾಡಿದ್ದೆ'.

'ಏಯ್, ಅದು ಬಿ ಗ್ರೇಡ್ ಅಲ್ಲ, ಬ್ರಿಗೇಡ್. ಈ ಬಾರಿ ನನ್ನ ನಿಲುವು ದೃಢವಾಗಿದೆ'.

'ಆದರೂ, ನಿನ್ನ ಹೃದಯದಲ್ಲಿರೋ ನಾಯಕ ಫೋನ್ ಮಾಡಿದರೆ ತಣ್ಣಗಾಗ್ತೀಯಣ್ಣ ನೀನು' ಜೊತೆಯಲ್ಲಿದ್ದ ಅನೇಕರು ದನಿಗೂಡಿಸಿದರು.

'ಮೇಲಿನವರು ನನ್ನನ್ನ ಕೇರ್ ಮಾಡ್ತಿಲ್ಲ, ನನ್ನ ಬೆಂಬಲಿಗರು ನೋಡಿದರೆ ನನ್ನ ಮಾತೇ ನಂಬುತ್ತಿಲ್ಲವಲ್ಲ' ಎಂದು ಮನದಲ್ಲೇ ಒದ್ದಾಡಿದ ಮುದ್ದಣ್ಣ, 'ಆ ಬ್ರಹ್ಮನೇ ಬಂದು ಹೇಳಿದರೂ ನನ್ನ ನಿರ್ಧಾರದಿಂದ ಹಿಂದೆ ಸರಿಯಲ್ಲ' ಎಂದ.

ಕೊನೆಗೂ, ದೆಹಲಿಯಿಂದ ಫೋನ್ ಬಂತು. 'ಹೈ' ನಾಯಕರ ಜೊತೆ ಮಾತನಾಡಿ ಹೊರಬಂದ ಮುದ್ದಣ್ಣ, 'ಪಕ್ಷ ನನ್ನ ತಾಯಿ ಇದ್ದಂತೆ. ಅದರ ವಿರುದ್ಧ ನಿಂತರೆ ತಾಯಿಯನ್ನೇ ವಿರೋಧಿಸಿದಂತೆ...' ಭಾಷಣ ಮುಂದುವರಿಯಿತು.

'ಅಣ್ಣಾ, ಅದೇನೋ ಬ್ರಹ್ಮ ಬಂದು ಹೇಳಿದ್ರೂ... ಅಂದಿದ್ರಿ'.

'ಹೌದು, ಹೇಳಿದ್ದೆ. ಈಗಲೂ ಬ್ರಹ್ಮ ಬಂದು ಹೇಳಿಲ್ವಲ್ಲ, ನನ್ನ ಹೃದಯದಲ್ಲಿರುವ ನಾಯಕ...' ಎನ್ನುತ್ತಿದ್ದಂತೆ ಬೆಂಬಲಿಗರೆಲ್ಲ ಚದುರಿಹೋದರು.

ಸಂಗತ

ಸಲ್ಲದ ಹೋಲಿಕೆ ಮಾಡುವುದೇಕೆ?

ವ್ಯತ್ಯಾಸಗಳನ್ನು ವೈವಿಧ್ಯಗಳೆಂದು ಭಾವಿಸಿ ಮುನ್ನಡೆದರೆ ಪಯಣ ಪಥದಲ್ಲಿ ಆತಂಕಗಳು, ವಿರೋಧಾಭಾಸಗಳು ಎದುರಾಗಲಾರವು

• ರಾಜಕುಮಾರ ಕುಲಕರ್ಣಿ

ಸಮಾರಂಭವೊಂದರಲ್ಲಿ ಭೇಟಿಯಾದ ಸ್ನೇಹಿತರೊಬ್ಬರು ತುಂಬ ವ್ಯಥೆಯಲ್ಲಿರುವಂತೆ ತೋರಿತು. ದಾಯಾದಿಗಳು ಹೊಸ ಮನೆ ಕಟ್ಟಿಸಿದ್ದು, ಸಂಬಂಧಿಕರ ಮಗನಿಗೆ ಅಮೆರಿಕದಲ್ಲಿ ನೌಕರಿ ಸಿಕ್ಕಿದ್ದು, ಸಹೋದ್ಯೋಗಿಗೆ ಕೆಲಸದಲ್ಲಿ ಬಡ್ತಿ, ಪಕ್ಕದ ಮನೆಯವರು ಕಾರು ಕೊಂಡಿದ್ದು ಹೀಗೆ ಮಾತಿನುದ್ದಕ್ಕೂ ಬೇರೆಯವರ ಪ್ರಗತಿ ವಿವರಿಸುತ್ತ, ತಮ್ಮಿಂದ ಇದೆಲ್ಲ ಸಾಧ್ಯವಾಗುತ್ತಿಲ್ಲವೆಂದು ಅಸಹಾಯಕತೆ ವ್ಯಕ್ತಪಡಿಸಿದರು.

ನನಗೆ ತಿಳಿದಿರುವಂತೆ, ನನ್ನ ಸ್ನೇಹಿತರದು ಅನುಕೂಲಸ್ಥ ಕುಟುಂಬ. ಸರ್ಕಾರಿ ಉದ್ಯೋಗದಲ್ಲಿದ್ದು ಕೈತುಂಬ ಸಂಬಳ ಪಡೆಯುತ್ತಿದ್ದಾರೆ. ಹೀಗಿದ್ದೂ ಬೇರೆಯವರ ಬದುಕಿನೊಂದಿಗೆ ತಮ್ಮ ಬದುಕನ್ನು ಹೋಲಿಸಿ ವ್ಯಥೆಪಟ್ಟುಕೊಳ್ಳುವ ಖಯಾಲಿ ಅವರಿಗೆ ಚಟದಂತೆ ಅಂಟಿಕೊಂಡಿದೆ. ಉಂಡರೂ ಹಸಿವು, ಉಟ್ಟರೂ ಬೆತ್ತಲೆ ಎನ್ನುವಂಥ ಮನಃಸ್ಥಿತಿಯಿಂದ ಬದುಕಿನ ಸಂತೋಷದ ಕ್ಷಣಗಳನ್ನು ಅನುಭವಿಸಲು ಅವರಿಂದ ಸಾಧ್ಯವಾಗುತ್ತಿಲ್ಲ. 'ಹುಲಿ ಮೈಬಣ್ಣ ನೋಡಿ ನರಿ ಮೈ ಸುಟಗೊಂಡಿತ್ತಂತ' ಎಂಬ ಮಾತು ಜನಪದದಲ್ಲಿ ಚಾಲ್ತಿಯಲ್ಲಿದೆ. ಹುಲಿಯ ಮೈ ಬಣ್ಣಕ್ಕೆ ಮರುಳಾದ ನರಿಯೊಂದು ತಾನೂ ಅದರಂತಾಗಲು ಮೈಯನ್ನು ಸುಟ್ಟುಕೊಂಡು ಜೀವವನ್ನೇ ಬಲಿಕೊಟ್ಟ ಕಾಲ್ಪನಿಕ ಪ್ರಸಂಗವನ್ನು ಈ ಹೇಳಿಕೆ ಅರ್ಥೈಸುತ್ತದೆ.

ಸಾಮಾಜಿಕ ಬದುಕಿನಲ್ಲಿ ಮನುಷ್ಯ ಮನುಷ್ಯರ ನಡುವೆ ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಅನೇಕ ರೀತಿಯ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ವೈವಿಧ್ಯಗಳೆಂದು ಭಾವಿಸಿ ಮನುಷ್ಯ ಮುನ್ನಡೆದರೆ ಅವನ ಪಯಣದ ಪಥದಲ್ಲಿ ಯಾವ ಆತಂಕಗಳಾಗಲೀ ವಿರೋಧಾಭಾಸಗಳಾಗಲೀ ಎದುರಾಗಲಾರವು. ದುರಂತವಿರುವುದು ಮನುಷ್ಯನು ವ್ಯತ್ಯಾಸಗಳನ್ನು ವೈವಿಧ್ಯಗಳೆಂದು ನೋಡದೆ ಸಂಕಷ್ಟಗಳೆಂದು ಭಾವಿಸುವುದರಲ್ಲಿದೆ. ಪರಿಣಾಮವಾಗಿ, ಮನುಷ್ಯ ಇನ್ನೊಬ್ಬರ ಬದುಕಿನೊಂದಿಗೆ ತನ್ನ ಬದುಕನ್ನು ಹೋಲಿಸಿಕೊಂಡು ಬದುಕನ್ನು ನರಕಗೊಳಿಸಿಕೊಳ್ಳುತ್ತಾನೆ. ಮನುಷ್ಯನ ಈ ಸ್ವಭಾವವನ್ನು ನೋಡಿಯೇ ಡಿವಿಜಿ 'ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು| ಹರುಷಕದೆ ದಾರಿಯೆಲೊ ಮಂಕುತಿಮ್ಮ' ಎಂದಿರುವರು.

ಇತ್ತೀಚೆಗೆ ಮದುವೆ ಮನೆಯಲ್ಲಿ ತಾಯಂದಿರಿಬ್ಬರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕುರಿತು ಬಂಧುಗಳೊಡನೆ ಮಾತನಾಡುತ್ತಿದ್ದಾಗ, ಪರಸ್ಪರ ಸ್ಪರ್ಧೆಗೆ ಇಳಿದಿರುವಂತೆ ಭಾಸವಾಗುತ್ತಿತ್ತು. ಸಂತೋಷದಿಂದ ಆಟವಾಡಿಕೊಂಡಿದ್ದ ಮಕ್ಕಳಿಬ್ಬರನ್ನೂ ಕರೆದು ಅವರ ಪ್ರತಿಭೆಯನ್ನು ಅಲ್ಲಿ ನೆರೆದಿದ್ದವರೆದುರು ಬಲವಂತವಾಗಿ ಪ್ರದರ್ಶಿಸಲಾಯಿತು. ಸಹಜವೆನ್ನುವಂತೆ ಒಂದು ಮಗುವಿನ ಶೈಕ್ಷಣಿಕ ಪ್ರಗತಿಯು ಇನ್ನೊಂದು ಮಗುವಿನ ಪ್ರಗತಿಗಿಂತ ಒಂದಿಷ್ಟು ಹಿಂದಿತ್ತು. ಇದು ಆ ಮಗುವಿನ ತಾಯಿಗೆ ನಿರೀಕ್ಷಿಸಲಾಗದ ಸೋಲಿನಂತೆ ಭಾಸವಾಯಿತು. ವಾಚಾಮಗೋಚರವಾಗಿ ಬೈಯುತ್ತ ತನಗೆ ಬಂಧುಗಳೆದುರು ಅಪಮಾನವಾಯಿತೆಂದು ಮದುವೆ ಮನೆಯಲ್ಲೇ ಮಗುವನ್ನು ದೈಹಿಕವಾಗಿ ಶಿಕ್ಷಿಸಿದಳು. ಇದರಿಂದ, ಅದುವರೆಗೂ ಸಂಭ್ರಮದಿಂದ ಕೂಡಿದ್ದ ವಾತಾವರಣಕ್ಕೆ ಸೂತಕದ ಕಳೆ ಆವರಿಸಿದಂತಾಯಿತು.

ಮಕ್ಕಳ ಆಟ, ಪಾಠ, ಶಾಲೆ, ವೃತ್ತಿ ಹೀಗೆ ಪ್ರತಿಯೊಂದು ಹಂತದಲ್ಲಿ ಪಾಲಕರು ಬೇರೆಯವರೊಂದಿಗೆ ಹೋಲಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಬೇರೆಯವರ ನಿರ್ಧಾರಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ದಾಯಾದಿಗಳು, ನೆರೆಹೊರೆಯವರು, ಬಂಧುಗಳು, ಪರಿಚಿತರ ಮಕ್ಕಳು ಏನನ್ನು ಕಲಿಯುತ್ತಿದ್ದಾರೆ ಎಂದು ಗಮನಿಸಿ ಅದನ್ನೇ ತಮ್ಮ ಮಕ್ಕಳಿಗೂ ಒದಗಿಸಲು ಮುಂದಾಗುತ್ತಾರೆ. ತಮಗೆ ಇಷ್ಟವಿರಲಿ ಇಲ್ಲದಿರಲಿ ಪಾಲಕರ ಆಸೆಯನ್ನು ಪೂರೈಸಲು ಮಕ್ಕಳು ತಮ್ಮ ಆಸಕ್ತಿಯನ್ನು ಬಲಿ ಕೊಡಬೇಕು. ಪಾಲಕರು ಅಪೇಕ್ಷಿಸಿದಂತೆ ಶೈಕ್ಷಣಿಕವಾಗಿ ಹೆಚ್ಚಿನದನ್ನು ಸಾಧಿಸಲು ವಿಫಲರಾಗುವ ಮಕ್ಕಳ ಬದುಕು ಕೆಲವೊಮ್ಮೆ ತೀವ್ರ ಸಂಕಷ್ಟದಲ್ಲಿ ಪರ್ಯವಸಾನಗೊಳ್ಳುವುದು ಸಾಮಾನ್ಯವಾಗಿದೆ.



ಕವಿ ಕೆ.ಎಸ್.ನರಸಿಂಹಸ್ವಾಮಿ ತಮ್ಮ ಕಾವ್ಯವನ್ನು ಅಡಿಗರ ಕಾವ್ಯದೊಂದಿಗೆ ಹೋಲಿಸಿ ಹೀಗೆ ಹೇಳಿರುವರು- 'ಅಡಿಗರು ಒಮ್ಮೆ ಹೇಳಿದರು ನನ್ನ ಅನುಭವ ತೆಳುವೆಂದು, ಒಪ್ಪುತ್ತೇನೆ. ಅವರ ದನಿ ಯಕ್ಷಗಾನದ ರೀತಿ, ನನ್ನ ದನಿ ತಂಪಾದ ಸಂಜೆಯಲಿ ಗೆಳೆಯರಿಬ್ಬರು ಕೂತು ಎತ್ತರಕ್ಕೇರದೆಯೇ ಮಾತನಾಡುವ ರೀತಿ'. ಹೀಗೆ ಹೇಳುವುದರ ಮೂಲಕ ಹೋಲಿಕೆ ನಗಣ್ಯ ಎನ್ನುವ ನಿರ್ಧಾರಕ್ಕೆ ಕವಿ ಬಂದಂತಿದೆ. ತನ್ನತನವನ್ನು ಬಿಟ್ಟುಕೊಡದ ಕಠಿಣ ನಿಲುವು ಈ ಮಾತಿನಲ್ಲಿ ವ್ಯಕ್ತವಾಗುತ್ತದೆ.

ಪರಿಸರದಲ್ಲಿ ಮನುಷ್ಯನೊಬ್ಬನನ್ನು ಹೊರತುಪಡಿಸಿ ಬೇರೆ ಯಾವ ಪ್ರಾಣಿ, ಪಕ್ಷಿ, ಮರಗಿಡಗಳೂ ಒಂದು ಇನ್ನೊಂದನ್ನು ಹೋಲಿಸಿಕೊಂಡು ಸ್ಪರ್ಧೆಗೆ ಇಳಿಯಲಾರವು. ಯಶವಂತ ಚಿತ್ತಾಲರ ಕಥೆಯಲ್ಲಿ ಹೀಗೊಂದು ಮಾತಿದೆ-'ಸೃಷ್ಟಿಯೊಳಗಿನ ಪ್ರತಿಯೊಂದು ಜೀವಸಂಗತಿ ಉಳಿದೆಲ್ಲ ಜೀವಸಂಗತಿಗಳೊಡನೆ ನಿಶ್ಶಬ್ದ ಮೌನದಲ್ಲಿ ಸಂವಾದ ನಡೆಸಿರುವಂಥದ್ದು-ಹುಟ್ಟುವಂತೆ, ಬೆಳೆಯುವಂತೆ, ಆರೋಗ್ಯ ಕಾಪಾಡಿಕೊಳ್ಳುವಂತೆ ಒಂದು ಇನ್ನೊಂದರ ಜೀವನೋತ್ಸಾಹವನ್ನು ಎತ್ತಿಹಿಡಿಯುವಂತೆ ಸತತ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವಂಥದ್ದು ಎಂಬ ಕಲ್ಪನೆಗೆ ಮೈನವಿರಿಗೊಳಗಾಯಿತು. ಮನುಷ್ಯ ಮಾತ್ರ ಈ ಕ್ರಿಯೆಗೆ ಹೇಗೆ ಹೊರತಾದನೋ ಎಂದು ದಿಗಿಲುಗೊಂಡೆ'.

ಈ ಆತಂಕ ನಮ್ಮೆಲ್ಲರ ಆತಂಕವಾಗಬೇಕು. ವಿವೇಚನಾಶಕ್ತಿ ಇರುವ ಮನುಷ್ಯನ ಬದುಕು ಹೋಲಿಕೆಯಿಂದ ನರಕವಾಗಬಾರದು. ಈ ವಿಷಯದಲ್ಲಿ ಮನುಷ್ಯನು ಪರಿಸರದಲ್ಲಿರುವ ಉಳಿದೆಲ್ಲ ಜೀವಸಂಗತಿಗಳಿಂದ ಪಾಠ ಕಲಿಯಬೇಕಾದದ್ದು ಬಹಳಷ್ಟಿದೆ.

ವಾಚಕರ ವಾಣಿ

ವಿಮಾನ ನಿಲ್ದಾಣಗಳ ಕಡೆಗಣಿಸುವಿಕೆ ಸಲ್ಲ

ಕಲಬುರಗಿಯು ಕಲ್ಯಾಣ ಕರ್ನಾಟಕದ ಅತಿ ದೊಡ್ಡ ನಗರ ಹಾಗೂ ವಿಭಾಗೀಯ ಕೇಂದ್ರ. ಅಂತೆಯೇ, ಇಲ್ಲಿ ಹೈಕೋರ್ಟ್ ಪೀಠ ಸೇರಿದಂತೆ ಹಲವಾರು ಕಚೇರಿಗಳಿವೆ. ಎರಡು ಸರ್ಕಾರಿ ವಿಶ್ವವಿದ್ಯಾಲಯಗಳು ಸೇರಿ ಒಟ್ಟು ಐದು ವಿಶ್ವವಿದ್ಯಾಲಯಗಳಿವೆ. ನಾಲ್ಕು ವೈದ್ಯಕೀಯ ಕಾಲೇಜುಗಳು ಹಾಗೂ ಬಹುಸಂಖ್ಯೆಯಲ್ಲಿ ಬ್ಯಾಂಕ್‌ಗಳು, ಶಿಕ್ಷಣ ಸಂಸ್ಥೆಗಳಿವೆ. ಕೆಎಟಿ ಮತ್ತು ಮಾಹಿತಿ ಆಯೋಗದ ಪೀಠಗಳು ಸಹ ಇಲ್ಲಿವೆ. 2019ರ ನವೆಂಬರ್‌ನಲ್ಲಿ ಇಲ್ಲಿ ಆರಂಭವಾದ ವಿಮಾನ ನಿಲ್ದಾಣ ಉತ್ತಮ ಪ್ರಗತಿ ತೋರಿತ್ತು. ದೇಶದ ವಿವಿಧ ನಗರಗಳಿಗೆ ನೂತನ ವಿಮಾನಗಳ ನಿರೀಕ್ಷೆಯಲ್ಲಿ ನಾವು ಸ್ಥಳೀಯರಿದ್ದೆವು. ಆದರೆ, ಇದೇ 1ರಿಂದ ವಿಮಾನಗಳ ಸೇವೆಯಲ್ಲಿ ಭಾರಿ ಕಡಿತವಾಗಿದೆ. ಬೆಂಗಳೂರಿಗೆ ಸೋಮವಾರ ಮತ್ತು ಮಂಗಳವಾರ ಮಾತ್ರ ರಾತ್ರಿ ವೇಳೆ ಎರಡು ವಿಮಾನಗಳ ಸೇವೆ ಇದ್ದು, ಉಳಿದ ದಿನಗಳಲ್ಲಿ ಇಲ್ಲದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ವಾರದ ಎಲ್ಲಾ ದಿನ ಲಭ್ಯ ಇದ್ದ ತಿರುಪತಿ ವಿಮಾನ ನಾಲ್ಕು ದಿನಕ್ಕೆ ಕಡಿತಗೊಂಡಿದ್ದು, ಅದರ ಸೇವೆಯೂ ರಾತ್ರಿ ವೇಳೆ ಮಾತ್ರ ಇರಲಿದೆ. ನಸುಕಿನಲ್ಲಿ ಇಲ್ಲಿಂದ ಬೆಂಗಳೂರಿಗೆ ಹಾರಿ, ರಾತ್ರಿ ವಿಮಾನದಲ್ಲಿ ಕಲಬುರಗಿಗೆ ಅದೇ ದಿನ ಮರಳುವ ಜನರ ಕನಸು ನನಸಾಗಲಿಲ್ಲ. ಕಲಬುರಗಿಯ ಕಥೆ ಇದಾದರೆ, ಬೀದರ್‌ಗೆ ವಿಮಾನ ಸೇವೆ ಸ್ಥಗಿತಗೊಂಡು ಹಲವಾರು ತಿಂಗಳುಗಳಾಗಿವೆ. ಈ ರೀತಿ ಕಲ್ಯಾಣ ಕರ್ನಾಟಕದ ಎರಡು ವಿಮಾನ ನಿಲ್ದಾಣಗಳ ಕಡೆಗಣಿಸುವಿಕೆ ನ್ಯಾಯಸಮ್ಮತ ಅಲ್ಲ. ರಾಜ್ಯ ಸರ್ಕಾರ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಲಿ ಎನ್ನುವುದು ಜನರ ಆಶಯ.

ವೆಂಕಟೇಶ್ ಮುದಗಲ್, ಕಲಬುರಗಿ

ಸಾವಿರಾರು ಕೋಟಿ ರೂಪಾಯಿ ಮರಳಿ ಬಾರಲಿಲ್ಲವೇಕೆ?

₹ 2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ ಹಿಂದಿನ ವರ್ಷದ ಮೇ ತಿಂಗಳಲ್ಲಿ ಆರ್‌ಬಿಐ ಘೋಷಿಸಿದಾಗಿನಿಂದ ಶೇ 97.69ರಷ್ಟು ನೋಟುಗಳು ಬ್ಯಾಂಕ್‌ಗಳಿಗೆ ಮರಳಿದ್ದು, ಇನ್ನೂ 8,202 ಕೋಟಿ ಮೌಲ್ಯದ ನೋಟುಗಳು ಸಾರ್ವಜನಿಕರ ಬಳಿ ಇವೆ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 2). ಇದೇನೂ ಕಡೆಗಣಿಸುವ ಮೊತ್ತವಲ್ಲ. ಆರ್‌ಬಿಐ ಪ್ರಕಾರ, ಈ ನೋಟುಗಳೆಲ್ಲವೂ ಜನರ ಬಳಿಯೇ ಇವೆ! ಹಾಗಾದರೆ ಇವು ಮರಳದಿರಲು ಕಾರಣವೇನು? ಎಲ್ಲ ಜನರಿಗೂ ಈ ಬಗೆಗೆ ತಿಳಿದಿರಲಿಲ್ಲವೇ ಎನ್ನುವ ಮಾಹಿತಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತಿಳಿಯಪಡಿಸುವುದು ಆರ್‌ಬಿಐನ ಕರ್ತವ್ಯವಾಗಿದೆ. ಅಂದಹಾಗೆ ಇನ್ನೂ ಖುದ್ದಾಗಿ ಆರ್‌ಬಿಐ ಕಚೇರಿಗೇ ತೆರಳಿ ನೋಟು ವಿನಿಮಯ ಮಾಡಿಕೊಳ್ಳಬಹುದು ಎಂದು ಕೂಡ ವರದಿಗಳು ತಿಳಿಸುತ್ತವೆ.

ಮುಳ್ಳೂರು ಪ್ರಕಾಶ್, ಮೈಸೂರು

ಜಲವಿದ್ದರೆ ಜನ, ಜನರಿದ್ದರೆ ಮತದಾನ...

ರಾಜ್ಯದಾದ್ಯಂತ ಈಗ ಲೋಕಸಭೆ ಚುನಾವಣೆಯ ಜ್ವರ ಹೆಚ್ಚಾಗಿದೆ. ಬಿಸಿಲಿನ ಬೇಗೆಯಲ್ಲಿಯೂ ರಾಜಕೀಯ ಪಕ್ಷಗಳು ಮತ್ತು ನಾಯಕರು ಮತಬೇಟೆಯಲ್ಲಿ ತೊಡಗಿದ್ದರೆ, ನಿರ್ಭೀತವಾಗಿ ಮತ ಚಲಾಯಿಸುವ ಬಗ್ಗೆ ಅಧಿಕಾರಿಗಳು ಜನಜಾಗೃತಿ ಅಭಿಯಾನ ನಡೆಸುತ್ತಿದ್ದಾರೆ. ಇದರ ಜೊತೆಜೊತೆಗೆ ಜಲಜಾಗೃತಿ ಅಭಿಯಾನವನ್ನೂ ಅತ್ಯಗತ್ಯವಾಗಿ ನಡೆಸಬೇಕಾಗಿದೆ. ಕುಡಿಯುವ ನೀರಿನ ಪೂರೈಕೆಗೆ ಸಂಕಷ್ಟ ಎದುರಾಗಿದೆ. ಮಳೆಯ ಕೊರತೆಯಿಂದ ಜಲಾಶಯಗಳು, ಕೆರೆಕಟ್ಟೆಗಳು ಬರಿದಾಗುತ್ತಿದ್ದು ನೀರಿಲ್ಲದೆ ಜೀವಜಂತುಗಳು, ಜನ- ಜಾನುವಾರುಗಳು ಪರದಾಡುವಂತೆ ಆಗಿದೆ. ಇರುವ ನೀರನ್ನು ಮಿತವಾಗಿ ಬಳಸುವ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವ, ಅನವಶ್ಯವಾಗಿ ನೀರನ್ನು ಬಳಸಿ ಪೋಲು ಮಾಡುವವರಿಗೆ ತಿಳಿಹೇಳುವ ಪ್ರಯತ್ನ ಆಗಬೇಕಾಗಿದೆ. ಚುನಾವಣೆಯ ಈ ಸಮಯದಲ್ಲಿ ಸಭೆ- ಸಮಾರಂಭಗಳು, ರೋಡ್ ಷೋಗಳಲ್ಲಿ ಮತದಾನದ ಜಾಗೃತಿಯ ಜೊತೆಗೆ ಕುಡಿಯುವ ನೀರು ಮತ್ತು ಅದರ ಬಳಕೆ ಬಗ್ಗೆ ಜಲಜಾಗೃತಿ ಆಂದೋಲನವನ್ನೂ ಹಮ್ಮಿಕೊಳ್ಳುವುದು ಅತ್ಯಂತ ಸೂಕ್ತ.

ನೀರಿನ ಮಿತ ಬಳಕೆಯ ಬಗ್ಗೆ ಸ್ಟಾರ್ ಪ್ರಚಾರಕರು, ಸೆಲೆಬ್ರಿಟಿಗಳಿಂದ ಹೇಳಿಸಿದರೆ ಜನರಿಗೆ ಅದು ತಟ್ಟಬಹುದು. ಜಲವಿದ್ದರೆ ಜನ, ಜನರಿದ್ದರೆ ಮತದಾನ. ಹಾಗಾಗಿ, ಚುನಾವಣಾ ಆಯೋಗವು ಜೀವಜಲವಾದ ಕುಡಿಯುವ ನೀರಿನ ಕೊರತೆ ಮತ್ತು ಅದರ ಪರಿಣಾಮದ ಬಗ್ಗೆ ಸಭೆಗಳಲ್ಲಿ ತಿಳಿಹೇಳುವ ಕಾರ್ಯ ಮಾಡಿಸುವುದು ಹೆಚ್ಚು ಸೂಕ್ತ.

ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್.ಪೇಟೆ

ಜಲ, ಅಲಲಾ...!

ಕಲ್ಲಿಗೆ ಸಿಗದಷ್ಟು ಕೆಳಗೆ
ಕಾಸಿಗೆ ಸಿಗದಷ್ಟು ಮೇಲೆ
ಹೋಗಬಹುದೇ
ಜೀವಜಲ!?

ಕರಿಯಪ್ಪ ಆರ್., ತುಮಕೂರು

ಕೇರಳ ಸಚಿವರ ಅಸಂಗತ ಹೇಳಿಕೆ

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ನೀರಿನ ಅಭಾವ ತಲೆದೋರಿರುವುದರಿಂದ, ಇಲ್ಲಿನ ಐ.ಟಿ. ಕಂಪನಿಗಳನ್ನು ಕೇರಳದ ಕೈಗಾರಿಕಾ ಸಚಿವರು ತಮ್ಮ ರಾಜ್ಯಕ್ಕೆ ಆಹ್ವಾನಿಸುವ ಮೂಲಕ ಅವುಗಳಿಗೆ ಗಾಳ ಹಾಕುವ ಪ್ರಯತ್ನ ನಡೆಸಿದ್ದಾರೆ (ಪ್ರ.ವಾ., ಏ. 2). ಕೇರಳದ ಅಸಂಖ್ಯಾತ ಜನರು ಕೆಲಸ ಹುಡುಕಿಕೊಂಡು ಹಾಗೂ ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿನತ್ತ ಧಾವಿಸಿ ಬರುತ್ತಿರುವುದು ಸಚಿವರ ಗಮನಕ್ಕೆ ಬಂದಿಲ್ಲವೇ? ಕೇರಳ ಮೂಲದ ಎಷ್ಟೋ ಜನರಿಗೆ ಬದುಕು ಕಟ್ಟಿಕೊಟ್ಟ ಬೆಂಗಳೂರು ಅವರಿಗೆ ಆಸರೆಯಾಗಿದೆ. ಜೊತೆಗೆ ಪ್ರಸ್ತುತ ಟೀ ಅಂಗಡಿಯ ಕೆಲಸದಿಂದ ಹಿಡಿದು ರೆಸ್ಟೊರೆಂಟ್ ಮಾಲೀಕರವರೆಗೆ ಆ ರಾಜ್ಯದ ನಾಗರಿಕರು ಇಲ್ಲಿದ್ದಾರೆ. ಕೇರಳದಲ್ಲಿ ಕೆಲವು ವರ್ಷಗಳ ಹಿಂದೆ ಅತಿವೃಷ್ಟಿ ಸಂಭವಿಸಿದ್ದಾಗ ಕರ್ನಾಟಕದ ನಾಯಕರು ಕೇರಳದ ಕಂಪನಿಗಳಿಗೆ ಇಂತಹುದೇ ಆಹ್ವಾನ ನೀಡಿದ್ದರೇ?

ನೈಸರ್ಗಿಕ ವಿಕೋಪಗಳಿಗೆ ಎಲ್ಲರೂ ತಲೆಬಾಗಲೇಬೇಕು. ನಮ್ಮ ರಾಜ್ಯಕ್ಕೆ ಬಂದಿರುವ ಸಮಸ್ಯೆಯನ್ನು ಇಲ್ಲಿನ ಸರ್ಕಾರ ಸಮರ್ಥವಾಗಿ ನಿರ್ವಹಿಸುತ್ತದೆ ಎಂಬ ಅರಿವು ಅವರಿಗೆ ಇರಬೇಕು. ನೆರೆ ರಾಜ್ಯಕ್ಕೆ ಬಂದೊದಗಿದ ಸಂದಿಗ್ಧ ಪರಿಸ್ಥಿತಿಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಸರಿಯಲ್ಲ. ಇದು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತದಲ್ಲದೆ ದೇಶದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಪೂರಕವಾದ ನಡೆಯಲ್ಲ.

ಮಲ್ಲಿಕಾರ್ಜುನ್ ತೇಲಿ ಗೋಠೆ, ಜಮಖಂಡಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅರುಣಾಚಲ ಪ್ರದೇಶವನ್ನು ಅತಿಕ್ರಮಿಸುತ್ತಿದೆಯೇ ಚೀನಾ?

ಕಾಂಗ್ರೆಸ್ ಸರ್ಕಾರವು ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಟ್ಟಿತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆರೋಪಿಸಿದ ಬೆನ್ನಲ್ಲೇ, ಮೋದಿ ಅವರ ಸರ್ಕಾರದ ಅವಧಿಯಲ್ಲಿ ಚೀನಾವು ಅರುಣಾಚಲ ಪ್ರದೇಶದ ಎಷ್ಟು ಭಾಗವನ್ನು ಅತಿಕ್ರಮಿಸಿದೆ ಎಂಬುದೂ ಚರ್ಚೆಗೆ ಬಂದಿದೆ. ಚೀನಾಕ್ಕೆ ಒಂದಿನಿತೂ ಜಾಗವನ್ನೂ ಬಿಟ್ಟುಕೊಟ್ಟಿಲ್ಲ ಎಂದು ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಹಲವು ವರ್ಷಗಳಿಂದ ಹೇಳುತ್ತಲೇ ಇದೆ. ಆದರೆ ಚೀನಾವು ಭಾರತದ ನೆಲದಲ್ಲಿ ರಸ್ತೆ, ಗಡಿಠಾಣೆ, ಹಳ್ಳಿಗಳನ್ನು ನಿರ್ಮಿಸಿದೆ ಎಂಬುದನ್ನು ಉಪಗ್ರಹ ಚಿತ್ರಗಳು ತೋರಿಸುತ್ತವೆ

ಪ್ರಜಾವಾಣಿ ವಾರ್ತೆ

ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗ. ಚೀನಾದ (ಟಿಬೆಟ್ ಭಾಗ) ದಕ್ಷಿಣದ ಗಡಿಗೆ ಅಂಟಿಕೊಂಡಿರುವ ಅರುಣಾಚಲ ಪ್ರದೇಶವು ಸಂಪೂರ್ಣವಾಗಿ ತಮ್ಮದು ಎಂಬುದು ಚೀನಾದ ವಾದ. ಈಚಿನ ವರ್ಷಗಳಲ್ಲಿ ಚೀನಾದ ಸೈನಿಕರು ಹಲವು ಬಾರಿ ಗಡಿದಾಟಿ ಭಾರತದ ಒಳಗೆ ಬಂದು ತಂಟೆ–ತಕರಾರು ನಡೆಸಿದ್ದಾರೆ. ಗಾಲ್ವನ್ ಕಣಿವೆ ಸಂಘರ್ಷ, ಬುಮ್‌ಲಾ ಪಾಸ್ ಸಂಘರ್ಷ ಅಂತಹ ಯತ್ನಗಳಿಗೆ ಉದಾಹರಣೆ. ಈ ಸ್ವರೂಪದ ಅತಿಕ್ರಮಣದ ಜತೆಗೆ ಚೀನಾವು ಭಾರತದ ನೆಲದಲ್ಲಿ ಹಳ್ಳಿಗಳನ್ನು ನಿರ್ಮಿಸುತ್ತಿದೆ, ರಸ್ತೆ–ಹೆದ್ದಾರಿಗಳನ್ನು ನಿರ್ಮಿಸುತ್ತಿದೆ ಎಂದು ಅರುಣಾಚಲ ಪ್ರದೇಶ ಜನರು ಆರೋಪಿಸುತ್ತಲೇ ಇದ್ದಾರೆ. ಕೇಂದ್ರ ಸರ್ಕಾರವು ಅದನ್ನು ನಿರಾಕರಿಸುತ್ತಲೇ ಬಂದಿದೆ, ಈಗಲೂ ನಿರಾಕರಿಸುತ್ತಿದೆ.

ಚೀನಾ ಮತ್ತು ಭಾರತದ ಮಧ್ಯದ ಗಡಿ– ಮೆಕ್‌ಮಹನ್ ರೇಖೆ ಮತ್ತು ವಾಸ್ತವ ನಿಯಂತ್ರಣ ರೇಖೆಗಳ (ಎಲ್‌ಎಸಿ) ದಕ್ಷಿಣ ಭಾಗಕ್ಕೆ, ಅಂದರೆ ಭಾರತದ ಗಡಿಯೊಳಗೆ ಕೆಲವು ಸುಸಜ್ಜಿತ ಹಳ್ಳಿಗಳು ಮತ್ತು ಹೆದ್ದಾರಿಗಳು ನಿರ್ಮಾಣವಾಗಿರುವುದು ಉಪಗ್ರಹ ಚಿತ್ರಗಳಲ್ಲಿ ಕಾಣುತ್ತದೆ. ಅತಿಸ್ಪಷ್ಟವಾದ ಉಪಗ್ರಹ ಚಿತ್ರಗಳನ್ನು ಒದಗಿಸುವ ಪ್ಲಾನೆಟ್ ಲ್ಯಾಬ್ಸ್‌ನ ಉಪಗ್ರಹ ಚಿತ್ರಗಳನ್ನು ಬಳಸಿಕೊಂಡು ಎನ್‌ಡಿಟಿ.ವಿ 'ಭಾರತದ ನೆಲದಲ್ಲಿ ಹಳ್ಳಿ ನಿರ್ಮಿಸಿದ ಚೀನಾ' ಎಂಬ ವರದಿ ಸರಣಿಯನ್ನೂ ಪ್ರಕಟಿಸಿತ್ತು.

ಗೂಗಲ್ ಮ್ಯಾಪ್ಸ್ ಮತ್ತು ಗೂಗಲ್ ಅರ್ಥ್ ನಕ್ಷೆಗಳನ್ನು ಪರಿಶೀಲಿಸಿದಾಗ, ಎಲ್‌ಎಸಿಯಿಂದ ದಕ್ಷಿಣಕ್ಕೆ ಭಾರತದ ಗಡಿಭಾಗದಲ್ಲಿ ಹಲವು ಹಳ್ಳಿಗಳು ನಿರ್ಮಾಣವಾಗಿರುವುದು ಕಾಣುತ್ತದೆ. ಈ ಹಳ್ಳಿಗಳಲ್ಲಿ ಕೆಲವಕ್ಕೆ ಭಾರತದ ಕಡೆಯಿಂದ ಸಂಪರ್ಕ ರಸ್ತೆಗಳೇ ಇಲ್ಲ. ಆದರೆ ಚೀನಾದ ಕಡೆಯಿಂದ ಸಂಪರ್ಕ ರಸ್ತೆಗಳಿದ್ದು, ಚೀನಾದ ನೆಲದಲ್ಲಿ ನೂರಾರು ಕಿ.ಮೀ.ನಷ್ಟು ಒಳಕ್ಕೆ ಆ ರಸ್ತೆಗಳು ಸಂಪರ್ಕ ಕಲ್ಪಿಸುತ್ತವೆ. ಅಪ್ಪರ್ ಸುಬನ್‌ಸಿರಿ ಜಿಲ್ಲೆಯಲ್ಲಿ ಸುಬನ್‌ಸಿರಿ ನದಿ ದಂಡೆಯಲ್ಲಿ ಚೀನಾ ಹಳ್ಳಿಯೊಂದನ್ನು ನಿರ್ಮಾಣ ಮಾಡಿದೆ ಎಂಬ ಆರೋಪವಿದೆ. ಅರುಣಾಚಲ ಪ್ರದೇಶದ ಬಿಜೆಪಿ ಸಂಸದ ತಾಪಿರ್ ಗಾವ್ ಈ ಬಗ್ಗೆ ಲೋಕಸಭೆಯಲ್ಲೂ ಪ್ರಶ್ನೆ ಎತ್ತಿದ್ದರು. ಚೀನಾವು ಭಾರತದ ನೆಲವನ್ನು ಅತಿಕ್ರಮಿಸುತ್ತಿದೆ ಎಂದು ಹಲವು ಬಾರಿ ಕಳವಳ ವ್ಯಕ್ತಪಡಿಸಿದ್ದರು.

ಅಮೆರಿಕದ ರಕ್ಷಣಾ ಸಚಿವಾಲಯವು ದಕ್ಷಿಣ ಏಷ್ಯಾದಲ್ಲಿ ಚೀನಾದ ಬಲವರ್ಧನೆ ಕುರಿತು ವರದಿ ಪ್ರಕಟಿಸಿತ್ತು. 'ಚೀನಾವು ಭಾರತದ ಅರುಣಾಚಲ ಪ್ರದೇಶದಲ್ಲಿ ನಿರ್ಮಾಣ ಕಾರ್ಯ ನಡೆಸಿದೆ. ರಸ್ತೆ, ಹಳ್ಳಿಗಳು, ಗಡಿಠಾಣೆ, ಹೆಲಿಪ್ಯಾಡ್‌ಗಳನ್ನು ನಿರ್ಮಿಸಿದೆ' ಎಂದು ಆ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಈ ಎಲ್ಲವನ್ನೂ ಕೇಂದ್ರ ಸರ್ಕಾರ ನಿರಾಕರಿಸುತ್ತಿದೆಯಷ್ಟೆ. ತನ್ನ ಪ್ರತಿಪಾದನೆ ಬಲಪಡಿಸುವಂತಹ ಯಾವುದೇ ಸಾಕ್ಷ್ಯಗಳನ್ನು ಒದಗಿಸುತ್ತಿಲ್ಲ.



ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ಅಮೆರಿಕದ ರಕ್ಷಣಾ ಸಚಿವಾಲಯದ ವರದಿಗಳು, ಗೂಗಲ್ ಅರ್ಥ್, ಗೂಗಲ್ ಮ್ಯಾಪ್ಸ್
ಚಿತ್ರಕೃಪೆ: ಗೂಗಲ್ ಅರ್ಥ್

ಸರ್ಕಾರದ ಪ್ರತಿಪಾದನೆ

2020ರಲ್ಲಿ ಲಡಾಖ್‌ನ ಗಾಲ್ವನ್‌ನಲ್ಲಿ ಚೀನಾ–ಭಾರತದ ಮಧ್ಯೆ ಸೇನಾ ಸಂಘರ್ಷ ನಡೆದಿತ್ತು. ಚೀನಾವು ಭಾರತದೊಳಗೆ ಹೊಕ್ಕಿದೆ ಎಂಬ ಅನುಮಾನವನ್ನು ಈ ಸಂಘರ್ಷವು ಹುಟ್ಟು ಹಾಕಿತ್ತು. 2021ರಲ್ಲಿ ಚೀನಾವು ಅರುಣಾಚಲ ಪ್ರದೇಶದೊಳಗೂ ನುಗ್ಗಿದೆ ಎಂಬುದನ್ನು ಎನ್‌ಡಿಟಿವಿ ವರದಿ ಮಾಡಿತ್ತು. ತನ್ನ ವಿಸ್ತೃತ ವರದಿಯನ್ನು ವಿದೇಶಾಂಗ ಸಚಿವಾಲಯಕ್ಕೂ ಕಳುಹಿಸಿಕೊಟ್ಟಿತ್ತು ಮತ್ತು ಸಚಿವಾಲಯದ ಪ್ರತಿಕ್ರಿಯೆಯನ್ನೂ ಕೇಳಿತ್ತು. ಇದಕ್ಕೆ ಸರ್ಕಾರ ನೀಡಿದ ಉತ್ತರವು ಆತಂಕಕ್ಕೀಡು ಮಾಡುವಂತಹದ್ದಾಗಿತ್ತು. 'ಭಾರತದ ಗಡಿಗೆ ಅಂಟಿಕೊಂಡಿರುವ ಪ್ರದೇಶಗಳಲ್ಲಿ ಚೀನಾವು ಹಲವು ಕಾಮಗಾರಿಗಳನ್ನು ನಡೆಸುತ್ತಿರುವ ಕುರಿತ ವರದಿಗಳನ್ನು ನಾವು ಗಮನಿಸಿದ್ದೇವೆ. ಚೀನಾವು ಇಂಥ ಕಾಮಗಾರಿಗಳನ್ನು ಹಲವು ವರ್ಷಗಳಿಂದ ನಡೆಸುತ್ತಲೇ ಇದೆ' ಎಂದು ವಿದೇಶಾಂಗ ಸಚಿವಾಲಯವು ಉತ್ತರಿಸಿತ್ತು.

ಈಗ 2024ರಲ್ಲಿ ಅರುಣಾಚಲ ಪ್ರದೇಶವನ್ನೂ ಒಳಗೊಂಡ ನಕ್ಷೆಯನ್ನು, ಅರುಣಾಚಲ ಪ್ರದೇಶದ ಹಳ್ಳಿಗಳಿಗೆ ಹೊಸ ಹೆಸರನ್ನೂ ಚೀನಾವು ಬಿಡುಗಡೆ ಮಾಡಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು, 'ನಾನು ನಿಮ್ಮ ಮನೆಯ ಹೆಸರನ್ನು ಬದಲಾಯಿಸಿದರೆ, ಅದು ನನ್ನ ಮನೆಯಾಗಿ ಬಿಡುತ್ತದೆಯೇ? ಅರುಣಾಚಲ ಪ್ರದೇಶವು ಭಾರತದ ರಾಜ್ಯವಾಗಿತ್ತು, ಭಾರತದ ರಾಜ್ಯವಾಗಿದೆ ಮತ್ತು ಅದು ಎಂದಿಗೂ ಭಾರತದ ರಾಜ್ಯವಾಗಿಯೇ ಇರಲಿದೆ' ಎಂದಿದ್ದಾರೆ. 'ಚೀನಾವು ಅರುಣಾಚಲ ಪ್ರದೇಶದ ಒಳಹೊಕ್ಕಿಲ್ಲ' ಎಂದು ಮುಖ್ಯಮಂತ್ರಿ ಪೆಮಾ ಖಂಡು ಅವರೂ ಹೇಳುತ್ತಾರೆ.

ಜೈಶಂಕರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ಮನೀಷ್ ತಿವಾರಿ ಅವರು, 'ಚೀನಾವು ಬಿಡುಗಡೆ ಮಾಡಿರುವ ಹೊಸ ನಕ್ಷೆ ಹಾಗೂ ಭಾರತದ ಹಳ್ಳಿಗಳಿಗೆ ನೀಡಿರುವ ಹೊಸ ಹೆಸರುಗಳ ಬೆಳವಣಿಗೆ ಕುರಿತು ದುರ್ಬಲವಾದ ಹೇಳಿಕೆಯನ್ನು ನೀಡಿದ್ದಾರೆ. ಇಂಥ ಹೇಳಿಕೆಗಳು ಭಾರತ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಅದರಲ್ಲೂ ಇಂಥ ಹೇಳಿಕೆಯು ವಿದೇಶಾಂಗ ಸಚಿವರೊಬ್ಬರಿಗೆ ಶೋಭೆ ತರುವಂಥದ್ದಲ್ಲ' ಎಂದಿದ್ದಾರೆ. ವಿದೇಶಾಂಗ ಸಚಿವಾಲಯ ಅಂದು ನೀಡಿದ ಪ್ರತಿಕ್ರಿಯೆ ಹಾಗೂ ಇಂದು ಸಚಿವರು ನೀಡಿದ ಉತ್ತರವು ವಿರೋಧ ಪಕ್ಷಗಳ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಶ್ರೀಲಂಕಾದ ಕಚ್ಚತೀವು ದ್ವೀಪದ ಕುರಿತು ಪುಂಖಾನುಪುಂಖವಾಗಿ ಮಾತನಾಡುವ ಪ್ರಧಾನಿ ಮೋದಿ ಹಾಗೂ ಸಚಿವ ಜೈಶಂಕರ್ ಅವರು ಚೀನಾ ಕುರಿತು ಯಾಕೆ ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸುವುದಿಲ್ಲ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. 'ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿಯೂ ಚೀನಾದ ಕುರಿತು ವಿರೋಧ ಪಕ್ಷಗಳು ಪ್ರಶ್ನೆಗಳನ್ನು ಎತ್ತುತ್ತವೆ. ಆದರೆ, ಪ್ರಧಾನಿ ಮೋದಿ ಅಥವಾ ವಿದೇಶಾಂಗ ಸಚಿವ ಜೈಶಂಕರ್ ಅವರು ಮಾತ್ರ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಕಾಂಗ್ರೆಸ್ ಹೇಳಿದೆ.

ಸಿನಿ ಬಿಟ್ಸ್

'ರಿಷಿ ಜೊತೆ ಸಿನಿಮಾ ಮಾಡಬೇಕು'

ಸ್ಯಾಂಡಲ್‌ವುಡ್‌ನ 'ಅಧ್ಯಕ್ಷ' ಶರಣ್, 'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ರಿಷಿ ಜೊತೆ ಸಿನಿಮಾ ಮಾಡಬೇಕು ಎಂಬ ಆಸೆಯನ್ನು ಮುಂದಿಟ್ಟಿದ್ದಾರೆ.

ಶರಣ್ ಅಭಿನಯದ 'ಅವತಾರ ಪುರುಷ–2' ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ 'ರಾಮನ ಅವತಾರ'ವೆತ್ತಲು ಸಿದ್ಧವಾಗಿರುವ ರಿಷಿ ಅತಿಥಿಯಾಗಿ ಬಂದಿದ್ದರು. ಈ ವೇಳೆ ಮಾತನಾಡಿದ ಶರಣ್, 'ಇತ್ತೀಚಿನ ದಿವಸಗಳಲ್ಲಿ ಕಾಮಿಡಿ ಎಂಬ ವಿಚಾರ ಬಂದಾಗ, ಅದ್ಭುತವಾದ ಕಾಮಿಡಿ ಟೈಮಿಂಗ್ ಹಾಗೂ ಹಾಸ್ಯಪ್ರಜ್ಞೆಯುಳ್ಳ ನಾಯಕ ನಟರಲ್ಲಿ ರಿಷಿ ಒಬ್ಬರು. ನಾವಿಬ್ಬರೂ ಒಂದೆರಡು ಪ್ರಾಜೆಕ್ಟ್‌ಗಳಲ್ಲಿ ಜೊತೆಯಾಗಿ ನಟಿಸಬೇಕಿತ್ತು. ಆದರೆ ಅದು ಆಗಲಿಲ್ಲ. ಮೊನ್ನೆ ಸಿಂಪಲ್ ಸುನಿ ಬಂದಿದ್ದಾಗ, 'ಆಪರೇಷನ್ ಅಲಮೇಲಮ್ಮ' ರೀತಿಯ ಸ್ಕ್ರಿಪ್ಟ್ ಮಾಡಿ. ನಾವಿಬ್ಬರೂ ಕೆಲಸ ಮಾಡೋಣ' ಎಂದಿದ್ದೆ. ಯಾರ ಜೊತೆ ಡ್ಯುಯಲ್ ಹೀರೊ ಆಗಿ ನಟಿಸಬೇಕು ಎಂದು ಕೇಳಿದರೆ, ನಾನು ರಿಷಿ ಹೆಸರನ್ನೇ ಹೇಳುತ್ತೇನೆ. ಒಂದೊಳ್ಳೆಯ ಸ್ಕ್ರಿಪ್ಟ್ ನಮಗಿಬ್ಬರಿಗೂ ಬರಲಿ' ಎಂದರು.

'ಎರಡು ಮೂರು ವರ್ಷದ ಪಯಣ ಈ 'ಅವತಾರ ಪುರುಷ' ಸಿನಿಮಾ. ಇದು ಬಹಳ ಇಷ್ಟಪಟ್ಟು ಒಪ್ಪಿಕೊಂಡ ಸಿನಿಮಾ. ಸುನಿ ಹಾಗೂ ಪುಷ್ಕರ್ ಬಂದು ಈ ಚಿತ್ರದ ಕಥೆ ಹೇಳಿದಾಗ ಮೊದಲು ಕೊಂಚ ಗಲಿಬಿಲಿಯಾಗಿತ್ತು. ಸುನಿ ಕಾಮಿಡಿ ಜಾನರ್ ಸಿನಿಮಾ ಮಾಡುವಾತ. ನಾನೂ ಹಾಸ್ಯ ಪಾತ್ರಗಳನ್ನು ಮಾಡುತ್ತಾ ಬಂದವನು. ಒಂದು ಕಾಮಿಡಿ ಸಬ್ಜೆಕ್ಟ್ ಸಿನಿಮಾ ತಂದಿರಬಹುದು ಎಂದುಕೊಂಡಿದ್ದೆ. ಆದರೆ ಸುನಿ ಕಥೆ ಹೇಳುತ್ತಾ, ಇದು ಪೂರ್ಣ ಹಾಸ್ಯ ಪ್ರಧಾನ ಚಿತ್ರವಲ್ಲ. ಅಲ್ಲಲ್ಲಿ ಹಾಸ್ಯವಿರುತ್ತದೆ ಎಂದರು. ನಾನೂ ಪಾತ್ರಗಳಲ್ಲಿ ಪ್ರಯೋಗ ಮಾಡುತ್ತಾ ಬಂದವನು. ಹೀಗಾಗಿ 'ಅನಿಲ'ನ ಪಾತ್ರವನ್ನು ಒಪ್ಪಿಕೊಂಡೆ' ಎಂದರು ಶರಣ್.

ಶ್ರೀನುಗೆ ಜೊತೆಯಾದ ಜಗನ್ನಾಥ್

ಈ ಹಿಂದೆ 'ತೂಫಾನ್', 'ಬಳ್ಳಾರಿ ದರ್ಬಾರ್' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ್ದ ಸ್ಟೈಲ್ ಶ್ರೀನು 'ಮೈರಾ' ಚಿತ್ರಕ್ಕೆ ಅಣಿಯಾಗಿದ್ದಾರೆ. ಕನ್ನಡ, ತೆಲುಗಿನಲ್ಲಿ ಏಕಕಾಲಕ್ಕೆ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕಾಗಿ ತೆಲುಗಿನ ಹೆಸರಾಂತ ನಿರ್ದೇಶಕ ಪುರಿ ಜಗನ್ನಾಥ್, ಶ್ರೀನು ಜೊತೆ ಕೈಜೋಡಿಸಿದ್ದಾರೆ.

'ನಾನು ಈಗಾಗಲೇ ಕನ್ನಡ ಮತ್ತು ತೆಲುಗು ಚಿತ್ರರಂಗದಲ್ಲಿ ಕೆಲಸ ಮಾಡಿದ್ದೇನೆ. ಹೀಗಾಗಿ 'ಮೈರಾ' ಚಿತ್ರವನ್ನು ಇವೆರಡು ಭಾಷೆಗಳಲ್ಲಿ ಮಾಡುತ್ತಿದ್ದೇನೆ. ಪ್ಯಾನ್ ಇಂಡಿಯಾ ಚಿತ್ರವಾಗಿದ್ದು ಉಳಿದ ಭಾಷೆಗಳಿಗೆ ಡಬ್ ಆಗಲಿದೆ. ಈಗಿನ ಟ್ರೆಂಡ್‌ಗೆ ಸೂಕ್ತವಾಗಿರುವ ಬಿಗ್‌ಬಜೆಟ್ ಕಥೆ. ಪುರಿ ಜಗನ್ನಾಥ್ ನಮಗೆ ಮಾರ್ಗದರ್ಶಕರಾಗಿ ಜೊತೆಯಾಗುತ್ತಾರೆ. ಈ ಬಗ್ಗೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿರುವೆ' ಎನ್ನುತ್ತಾರೆ ಶ್ರೀನು.

ಪುರಿ ಜಗನ್ನಾಥ್ ಪುತ್ರನೇ ಈ ಸಿನಿಮಾಕ್ಕೆ ನಾಯಕ ಎನ್ನುತ್ತಿವೆ ಮೂಲಗಳು. 'ಪುರಿ ಪುತ್ರನ ಜೊತೆಗೆ ಸಿನಿಮಾ ಮಾಡುವ ಕುರಿತು ಮಾತುಕತೆ ನಡೆದಿರುವುದು ನಿಜ. ಆ ಬಗ್ಗೆ ಈಗಲೇ ಪ್ರತಿಕ್ರಿಯಿಸಲಾರೆ' ಎಂದು ಶ್ರೀನು ತಿಳಿಸಿದ್ದಾರೆ. 'ಮೈರಾ' ಚಿತ್ರ ಪ್ರೀಪ್ರೊಡಕ್ಷನ್ ಹಂತದಲ್ಲಿದೆ. ಕಲಾವಿದರು ಹಾಗೂ ತಾಂತ್ರಿಕವರ್ಗದ ಕುರಿತು ಶೀಘ್ರದಲ್ಲಿ ಅಪ್‌ಡೇಟ್ ನೀಡುವುದಾಗಿ ಚಿತ್ರತಂಡ ಹೇಳಿದೆ.


ಶ್ರೀನು, ಪುರಿ ಜಗನ್ನಾಥ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಭಾರತದ ಅಸ್ಮಿತೆ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದು ದಿನ ಮದರ್ ಥೆರೆಸಾ ಅವರಲ್ಲಿಗೆ ಓರ್ವ ವ್ಯಕ್ತಿ ಬಂದು ಹೇಳಿದ: 'ಮದರ್, ನಮ್ಮ ಮನೆಯ ಹತ್ತಿರ ಒಂದು ಕುಟುಂಬವಿದೆ, ಅವರಿಗೆ ಎಂಟು ಮಕ್ಕಳು. ನನಗನಿಸುವ ಹಾಗೆ ಅವರು ಕೆಲವು ದಿನಗಳಿಂದ ಉಪವಾಸ ಇದ್ದಾರೆ. ಏನಾದರೂ ಸಹಾಯ ಮಾಡದಿದ್ದರೆ ಪರಿಸ್ಥಿತಿ ಕಷ್ಟವಾಗಬಹುದು'.

ತಕ್ಷಣ ಮದರ್ ಥೆರೆಸಾ ಅಕ್ಕಿಯ ಚೀಲ ತೆಗೆದುಕೊಂಡು ಆ ವ್ಯಕ್ತಿ ಹೇಳಿದ ಸ್ಥಳಕ್ಕೆ ಹೋದರು. ಅಕ್ಕಿಯನ್ನು ನೋಡಿ ಆ ಮನೆಯ ಮಕ್ಕಳು ಹಾಗೂ ತಾಯಿಯ ಬಾಡಿದ ಮುಖಗಳು ಅರಳಿದವು, ಕಣ್ಣುಗಳು ಹೊಳೆದವು. ಧನ್ಯವಾದ ಹೇಳಿದ ತಾಯಿ ತಕ್ಷಣ ಅಕ್ಕಿಯನ್ನು ಎರಡು ಪಾಲು ಮಾಡಿ ಒಂದು ಪಾಲನ್ನು ಅಲ್ಲೇ ಇಟ್ಟು ಮತ್ತೊಂದು ಪಾಲನ್ನು ತೆಗೆದುಕೊಂಡು ಲಗುಬಗೆಯಿಂದ ಹೊರಗೆ ಹೋದರು. ಕೆಲ ನಿಮಿಷಗಳ ನಂತರ ಆಕೆ ವಾಪಾಸು ಬಂದಾಗ ಮದರ್ ಎಲ್ಲಿ ಹೋಗಿದ್ದೆಂದು ವಿಚಾರಿಸಿದರು. ಆಗ ಆ ತಾಯಿ, 'ಅವರು ಕೂಡ ಹಸಿದುಕೊಂಡಿದ್ದಾರಲ್ಲ' ಎಂದರು.

ಏನೆಂದು ನೋಡಿದರೆ ತಮ್ಮ ಪಕ್ಕದ ಮನೆಯವರು ಹಸಿದಿದ್ದರೆಂದು ಗೊತ್ತಿದ್ದ ಆ ತಾಯಿ ಅಕ್ಕಿಯಲ್ಲಿ ಅರ್ಧಭಾಗವನ್ನು ಅವರಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದರು. ಆಕೆ ಅಕ್ಕಿ ಕೊಟ್ಟದ್ದು ತನಗೆ ವಿಶೇಷವೆನಿಸಲಿಲ್ಲ, ಆದರೆ ತಾನು ಹೊಟ್ಟೆಗಿಲ್ಲದೇ ಉಪವಾಸ ನರಳುತ್ತಿದ್ದ ಸಂದರ್ಭದಲ್ಲಿಯೂ ಪಕ್ಕದ ಮನೆಯವರು ಹಸಿದಿದ್ದಾರೆ ಎಂದು ಯೋಚನೆ ಮಾಡಿದಳಲ್ಲ ಅದು ವಿಶೇಷ ಎಂದು ಮದರ್ ಥೆರೆಸಾ ಒಂದು ಕಾರ್ಯಕ್ರಮದಲ್ಲಿ ಹೇಳುತ್ತಿದ್ದರು.

ಈ ಘಟನೆಯಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಮದರ್ ತೆರೆಸಾ ಸಹಾಯ ಮಾಡಲು ಹೋಗಿದ್ದ ಕುಟುಂಬ ಹಿಂದೂಗಳದ್ದಾಗಿತ್ತು. ಕ್ರೈಸ್ತ ಸಹೋದರಿಯಿಂದ ಸಹಾಯ ಪಡೆದ ಹಿಂದೂ ಮಹಿಳೆ ಅಕ್ಕಿ ಪಾಲು ಮಾಡಿ ತೆಗೆದುಕೊಂಡು ಹೋಗಿದ್ದು ತಮ್ಮ ಪಕ್ಕದ ಮನೆಯ ಮುಸ್ಲಿಂ ಕುಟುಂಬಕ್ಕಾಗಿ. ನಮ್ಮ ಭಾರತ ದೇಶದ ಸೌಂದರ್ಯವಿರುವುದೇ ಇಂತಹ ಸಂಗತಿಗಳಲ್ಲಿ.

ಇಂತಹ ಸಾವಿರಾರು ಘಟನೆಗಳು ನಮ್ಮ ದೇಶದ ಮೂಲೆಮೂಲೆಯಲ್ಲಿ ಕಾಣಸಿಗುತ್ತವೆ. ಶತಶತಮಾನಗಳಿಂದ ನಮ್ಮ ದೇಶದ ಜನರು ವೈವಿಧ್ಯದಲ್ಲಿ ಏಕತೆ ಎಂಬ ಮಾತನ್ನು ಬದುಕುತ್ತಿದ್ದಾರೆ. ಭಾಷೆ, ನಂಬಿಕೆ, ಸಂಸ್ಕೃತಿ, ಆಹಾರ ಪದ್ಧತಿ, ಉಡುಪು ಇತ್ಯಾದಿ ಭಿನ್ನತೆಗಳ ಜತೆಜತೆಯೇ ಸೌಹಾರ್ದಯುತವಾಗಿ ಬಾಳುತ್ತಿರುವುದು ನಮ್ಮ ದೇಶದ ವೈಶಿಷ್ಟ್ಯ. ಸಂಕಷ್ಟದ ಸಂದರ್ಭದಲ್ಲಿ ನಾವು ಹೇಗೆ ಒಗ್ಗೂಡುತ್ತೇವೆಂಬುದಕ್ಕೆ ಬ್ರಿಟಿಷರ ಇನ್ನೂರು ವರ್ಷಗಳ ನಿಷ್ಕರುಣೆಯ ಆಡಳಿತವನ್ನು ಎಲ್ಲರೂ ಒಂದಾಗಿ ವಿರೋಧಿಸಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟದ್ದು ಅತಿದೊಡ್ಡ ಉದಾಹರಣೆಯಾಗಿದೆ. ವೈವಿಧ್ಯದ ಚೆಲುವು ಮತ್ತು ಏಕತೆಯ ಶಕ್ತಿಯೇ ಭಾರತದ ಅಸ್ಮಿತೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಏಪ್ರಿಲ್ 4, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ದಶಮಿ ಗಂ. 16-15 ನಕ್ಷತ್ರ: ಶ್ರವಣ ಗಂ. 20-12 ಯೋಗ: ಸಿದ್ಧ ಗಂ. 13-15 ಕರಣ: ವಿಷ್ಟಿ ಗಂ. 16-15, ಮೀನ ಮಾಸದ 21 ನೇ ದಿನ, ಮಳೆನಕ್ಷತ್ರ: ರೇವತಿ 2. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-28 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 24 ರಂಜಾನ್
ಅದೃಷ್ಟ ಸಂಖ್ಯೆ : 4, 2

ಮೇಷ: ಸುಂದರ ವಸ್ತು, ಚಿತ್ರ ಅಥವಾ ಸಮಾಜದ ಅತಿ ಗಣ್ಯವ್ಯಕ್ತಿಗಳನ್ನು ನೋಡುವ ಭಾಗ್ಯ ಸಿಗುವುದು. ಲೇಖನ ಬರೆಯುವುದರಿಂದ ಜನ ಸಂಪರ್ಕ ಅಭಿವೃದ್ಧಿಯಾಗಲಿದೆ. ಮೋಸ ಹೋಗುವ ಸಾಧ್ಯತೆಯಿದೆ ಜಾಗ್ರತೆವಹಿಸಿ.

ವೃಷಭ: ಅವಮಾನಿಸುತ್ತಿರುವವರೇ ಇಂದು ಸಹಾಯ ಕೋರಿ ಬರಲಿದ್ದಾರೆ. ಸಂತೋಷದ ಸಮಯದ ನಡುವೆಯೂ ಒತ್ತಡದಿಂದಿರುವುದು ಜಾಯಮಾನ-ದಂತಾಗಲಿದೆ. ಯೋಗ್ಯ ವಯಸ್ಕರಿಗೆ ವಿವಾಹ ನಿಶ್ಚಯವಾಗುವುದು.

ಮಿಥುನ: ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುವುದಿಲ್ಲ, ಜೋಪಾನವಾಗಿರಿ. ಹಿಡಿತಕ್ಕೆ ಸಿಕ್ಕದೆ ಇರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ.

ಕರ್ಕಾಟಕ: ಸೂಕ್ತ ಸಮಯದಲ್ಲಿ ಸರಿಯಾದ ಕೆಲಸ ಮಾಡುವುದರಿಂದ ಅದೃಷ್ಟ ಖುಲಾಯಿಸಲಿದೆ. ವೃತ್ತಿಯಲ್ಲಿ ಉನ್ನತ ಅಧಿಕಾರಿಗಳಿಗೆ ಸಲಹೆ ನೀಡುವ ಬಗ್ಗೆ ಹಿಂಜರಿಕೆ ಬೇಡ. ನಾಟಕ ಕಲಾವಿದವರಿಗೆ ಹೆಚ್ಚಿನ ಮನ್ನಣೆ ಸಿಗುವುದು.

ಸಿಂಹ: ಇಂದು ಸ್ವಾರ್ಥಿಗಳಾಗುವಂತೆ ಪರಿಸ್ಥಿತಿ ಎದುರಾಗಬಹುದು. ಮಕ್ಕಳ ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು. ಇಂದು ಗೃಹಿಣಿಗೆ ಸಂತೋಷದ ಸಮಯ.

ಕನ್ಯಾ: ಅಭಿಪ್ರಾಯಗಳಿಗೆ ಮನ್ನಣೆ ಇದೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಂಡು ಹಿತವಚನಗಳನ್ನು ಹೇಳಲು ಮುಂದುವರಿಯಿರಿ. ನ್ಯಾಯಾಧೀಶರಿಗೆ ಅನಿವಾರ್ಯದ ಸಂದರ್ಭ ಎದುರಾಗಲಿದೆ.

ತುಲಾ: ತಮಾಷೆಯ ಮಾತುಗಳು ಹಿರಿಯರ ಮನಸ್ಸನ್ನು ನೋಯಿಸುವುದು, ಆದ್ದರಿಂದ ಮಾತಿನಲ್ಲಿ ಹಿಡಿತವಿರಲಿ. ಸಂಗೀತ ಅಥವಾ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು. ಕುಶಲಕರ್ಮಿಗಳಿಗೆ ಆದಾಯ ಹೆಚ್ಚಲಿದೆ.

ವೃಶ್ಚಿಕ: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಏರಿಳಿತದ ನಡುವೆ, ನೀವು ಹೇಳಿದ ಮಾತುಗಳಲ್ಲಿ ನೀವೇ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಆರೋಗ್ಯದಲ್ಲಿ ಗಮನಾರ್ಹವಾದ ಸುಧಾರಣೆಯನ್ನು ಕಾಣಬಹುದು.

ಧನು: ಮನೆಯಲ್ಲಿ ಶಾಂತ ವಾತಾವರಣವಿದ್ದು ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಜಮೀನು ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ. ಸಲಹೆಯು ಶ್ರೇಷ್ಠ ಮಟ್ಟದಾಗಿರುತ್ತದೆ.

ಮಕರ: ಯಾವುದೇ ಕಾರಣಕ್ಕೂ ಈ ದಿನ ಸಾಲದ ರೂಪದಲ್ಲಿ ಹಣ ತೆಗೆದುಕೊ-ಳ್ಳುವುದು ಸರಿಯಲ್ಲ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ. ರೈತರು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವಿರಿ.

ಕುಂಭ: ಮನೆ ಕಟ್ಟುವ ವಿಚಾರದಲ್ಲಿ ಮನೆಯ ಹಿರಿಯರೊಂದಿಗೆ ಗಂಭೀರ ಚರ್ಚೆಯನ್ನು ಮಾಡುವುದು ಉಚಿತವಾದುದು. ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗುವಂತೆ ಆಗಲಿದೆ.

ಮೀನ: ಅಧಿಕಾರದಲ್ಲಿ ಸ್ಥಾನಮಾನ ಪಡೆಯುವ ಬಯಕೆಯಿಂದಾಗಿ ದೇವರ ಸೇವೆಯಂತಹ ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ದಾಂಪತ್ಯದಲ್ಲಿ ಉತ್ತಮವಾದ ಅನ್ಯೋನ್ಯತೆಯು ವೃದ್ಧಿಯಾಗಲಿದೆ.

ಪದಬಂಧ 5641

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಲು ನಾಜೂಕಾಗಿರುವ ಸ್ವಭಾವ (5)
3.ನಾಯಿಕೊಡೆಯಿಲ್ಲಿ ಉಲ್ಟಾ ಆಗಿದೆ (3)
5.ರುಚಿಕಟ್ಟಾದ ಭೋಜನ (5)
7.ಫಲ ಇದ್ದಾಗಲೇ ಇದು ಯಶಸ್ವಿ! (3)
8.ತಪ್ಪು ಮಾಡದಿರುವವನು (5)
10.ತಪ್ಪು ಒಪ್ಪುಗಳ ವಿಮರ್ಶೆ (3)
11.ನವ ಬಾಳಿದು (5)
14.ಮಲೆಯಲ್ಲಿ ಸಿಕ್ಕಿರುವ ಸಾಂಬಾರ ದ್ರವ್ಯ (3)
15.ಪ್ರಸೂತಿ ಕೋಣೆಯಿದು (5)

ಮೇಲಿಂದ ಕೆಳಕ್ಕೆ
1.ಕೈ ಕೊನೆಗಿಟ್ಟರೆ ಹಂದಿ ಕಾಣುವುದೇ? (3)
2.ಪ್ರತಿಬಿಂಬವೂ ಅಗಿರುವ ಚಿಹ್ನೆ (3)
4.ಬಿಗಿಯಿಲ್ಲದಿರುವುದು ಇಲ್ಲಿದೆ (3)
6.ವರನಲ್ಲಿರುವ ಪ್ರತಿನಿಧಿ (3)
7.ಸತ್ತವರನ್ನು ಹೂಳುವ ಸ್ಥಳ (3)
8.ಎದುರು ನೋಡುವುದು (3)
9.ರಾಯರಿಂದ ಬಂದಿರುವ ನಿರೂಪ (3)
10.ಅತ್ಯಂತ ಶ್ರೇಷ್ಠವಾದುದು (3)
12.ಮಧುಮಕ್ಕಳು ಪರಸ್ಪರ ಬೆಲ್ಲದೊಡನೆ ಹಾಕುವ ಸಾಂಬಾರ ಜಿನಿಸು (3)
13.ಮಾದರಿಯನ್ನು ಹೀಗೂ ಹೇಳುವರು (3)



5640ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಕ 3.ಜನಕ
5.ಹರಿ 6.ನರ
8.ಕತ್ತರಿ 9.ಮುಂಗೋಪ
11.ರವ 13.ರುಳಿ
14.ನೆರಳು 15.ಕದನ

ಮೇಲಿಂದ ಕೆಳಕ್ಕೆ:
1.ಉದಾರಿ 2.ಕನ್ನಡಕ
3.ಜವಾಬ್ದಾರಿ 4.ಕವನ
5.ಹಲಾಲುಕೋರ 7.ರತ್ನಗಂಬಳಿ
9.ಮುಂಗುರುಳು 10.ಪರಿಷೇಕ
12.ವರ್ತನೆ 13.ರುಚಿನ

ಸುಡೊಕು 6026

						8	2	
8		9						5
	6	5				3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6025 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,453
ಇಂದಿನ ಅಂತ್ಯ	22,453
▼	18
ದಿನದ ಕನಿಷ್ಠ	22,346

ವಿನಿಮಯ ದರ

$ ಡಾಲರ್	83.50
£ ಪೌಂಡ್	104.88
€ ಯುರೊ	89.82
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹440
12 ಕ್ಕೆ	₹62
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1510 (1500)
ಸೋಯಾ (ರಿಫೈನ್ಡ್)	₹980 (980)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹975 (972)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-9300
ತಿಪಟೂರು	₹8300-9351

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹180.50
ಆರ್‌ಎಸ್‌ಎಸ್-5	₹174
ಗುಡ್ ಲಾಟ್	₹164

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-451
ದ್ವಿತಳಿ (ಬಿ.ವಿ)	₹300-542

ಚಿನ್ನ, ಬೆಳ್ಳಿ ಧಾರಣೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಆಗಿದೆ. ಈ ವಾರದಲ್ಲಿ ಎರಡನೇ ಬಾರಿಗೆ ಹಳದಿ ಲೋಹದ ಬೆಲೆ ಏರಿಕೆ ಕಂಡಿದೆ.

ಚಿನ್ನದ ದರವು 10 ಗ್ರಾಂಗೆ ₹830 ಏರಿಕೆಯಾಗಿದ್ದು, ₹69,200ಕ್ಕೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹1,700 ಹೆಚ್ಚಳವಾಗಿದೆ. ಪ್ರಸ್ತುತ ಒಂದು ಕೆ.ಜಿ ಬೆಳ್ಳಿ ಧಾರಣೆಯು ₹80,700ಕ್ಕೆ ತಲುಪಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ಧಾರಣೆಯು ₹71,780 ಆಗಿದೆ.

'ಅಮೆರಿಕದ ಆರ್ಥಿಕತೆ ಬೆಳವಣಿಗೆಯು ನಿರೀಕ್ಷೆಗಿಂತಲೂ ಹೆಚ್ಚು ಪ್ರಗತಿ ಕಾಣಲಿದೆ ಎಂದು ಅಂದಾಜಿಸಲಾಗಿದೆ. ಈ ನಡುವೆಯೇ ಅಲ್ಲಿನ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತವು ಅನಿಶ್ಚಿತತೆಯಿಂದ ಕೂಡಿದೆ. ಇದು ಚಿನ್ನದ ಬೆಲೆ ಏರಿಕೆಗೆ ಕಾರಣವಾಗಿದೆ' ಎಂದು ಜೆಎಂ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಉಪಾಧ್ಯಕ್ಷ (ಸರಕು ಮತ್ತು ಕರೆನ್ಸಿ ಸಂಶೋಧನೆ) ಪ್ರಣವ್ ಮೆರ್ ಹೇಳಿದ್ದಾರೆ.

ಪರೋಕ್ಷ ತೆರಿಗೆ ಸಂಗ್ರಹ ಏರಿಕೆ

₹20.18 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ದಾಖಲೆ

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ₹14.84 ಲಕ್ಷ ಕೋಟಿ ಪರೋಕ್ಷ ತೆರಿಗೆ ಸಂಗ್ರಹಕ್ಕೆ ಪರಿಷ್ಕೃತ ಗುರಿ ನಿಗದಿಯಾಗಿತ್ತು. ಇದಕ್ಕಿಂತಲೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ತಿಳಿಸಿದೆ.

ಸೀಮಾ ಹಾಗೂ ಅಬಕಾರಿ ಸುಂಕ ಒಳಗೊಂಡ ಪರೋಕ್ಷ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ ಎಂದು ಸಿಬಿಐಸಿ ಅಧ್ಯಕ್ಷ ಸಂಜಯ್ ಕುಮಾರ್ ಅಗರ್ವಾಲ್ ಅವರು, ಕ್ಷೇತ್ರ ಅಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ಮಾಹಿತಿ ನೀಡಿದ್ದಾರೆ.

'ಈ ಗುರಿ ಸಾಧನೆಯು ವೃತ್ತಿ ಪರತೆಯನ್ನಷ್ಟೇ ಪ್ರತಿಬಿಂಬಿಸುವುದಿಲ್ಲ. ಮಂಡಳಿಯ ಸಾಂಘಿಕ ಕೆಲಸಕ್ಕೆ ಕನ್ನಡಿ ಹಿಡಿದಿದೆ. ನಿಮ್ಮ ಈ ಅಮೂಲ್ಯ ಕೊಡುಗೆಗೆ ಆಭಾರಿಯಾಗಿದ್ದೇನೆ' ಎಂದು ತಿಳಿಸಿದ್ದಾರೆ.

₹20.18 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ: 2023-24ನೇ ಆರ್ಥಿಕ ವರ್ಷದಲ್ಲಿ ₹20.18 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದು, ಇದು ಹೊಸ ಮೈಲಿಗಲ್ಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 11.7ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಪರಿಷ್ಕೃತ ಕೇಂದ್ರ ಜಿಎಸ್‌ಟಿಯಲ್ಲಿ ಪರಿಹಾರ ಸೆಸ್ ₹9.57 ಲಕ್ಷ ಕೋಟಿ, ಅಬಕಾರಿ ತೆರಿಗೆ ₹3.08 ಲಕ್ಷ ಕೋಟಿ ಹಾಗೂ ಕಸ್ಟಮ್ಸ್ ಸುಂಕ ₹2.19 ಲಕ್ಷ ಕೋಟಿ ಇದೆ ಎಂದು ವಿವರಿಸಿದ್ದಾರೆ.

ಭಾರತದ ಜಿಡಿಪಿ ಶೇ 7.5ರಷ್ಟು ಪ್ರಗತಿ: ವಿಶ್ವಬ್ಯಾಂಕ್

ವಾಷಿಂಗ್ಟನ್ (ಪಿಟಿಐ): ಭಾರತದ ಆರ್ಥಿಕತೆಯು 2023-24ನೇ ಆರ್ಥಿಕ ವರ್ಷದಲ್ಲಿ ಶೇ7.5ರಷ್ಟು ಪ್ರಗತಿ ಕಾಣಲಿದೆ ಎಂದು ವಿಶ್ವ ಬ್ಯಾಂಕ್ ತಿಳಿಸಿದೆ.

ಈ ಮೊದಲು ಜಿಡಿಪಿಯು ಶೇ 6.3ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿತ್ತು. ಬುಧವಾರ ಬಿಡುಗಡೆಗೊಳಿಸಿರುವ ವರದಿಯಲ್ಲಿ ಇದನ್ನು ಪರಿಷ್ಕರಿಸಲಾಗಿದೆ.

ಭಾರತದಲ್ಲಿ ಹೂಡಿಕೆ ಹಾಗೂ ಉಪಭೋಗದ ಹೆಚ್ಚಳವಾಗಿದೆ. ಇದು ಆರ್ಥಿಕತೆಯ ವಿಸ್ತರಣೆಗೆ ಸಹಕಾರಿಯಾಗಿದೆ. ಅಲ್ಲದೆ, ಸೇವಾ ಮತ್ತು ಕೈಗಾರಿಕಾ ವಲಯದ ಬೆಳವಣಿಗೆಯು ಈ ಸಾಧನೆಗೆ ನೆರವಾಗಲಿವೆ ಎಂದು ತಿಳಿಸಿದೆ.

ಭಾರತದ ಆರ್ಥಿಕತೆಯು ನಿರೀಕ್ಷೆಗೂ ಮೀರಿ ಬೆಳವಣಿಗೆ ದಾಖಲಿಸಲಿದೆ. ಪಾಕಿಸ್ತಾನ ಹಾಗೂ ಶ್ರೀಲಂಕಾದ ಆರ್ಥಿಕತೆಯು ಚೇತರಿಕೆ ಹಾದಿಯಲ್ಲಿವೆ. ಹಾಗಾಗಿ, ದಕ್ಷಿಣ ಏಷ್ಯಾದ ಜಿಡಿಪಿ ಬೆಳವಣಿಗೆಯು ಶೇ6.0ರಷ್ಟು ದಾಖಲಾಗಿದೆ ಎಂದು ತಿಳಿದಿದೆ.

ಅಲ್ಲದೇ, ಮುಂದಿನ ಎರಡು ವರ್ಷಗಳಲ್ಲಿ ದಕ್ಷಿಣ ಏಷ್ಯಾ ಭಾಗದ ಆರ್ಥಿಕತೆಯು ಕ್ಷಿಪ್ರಗತಿಯಲ್ಲಿ ಬೆಳವಣಿಗೆ ಕಾಣಲಿದೆ. 2024-25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.1ರಷ್ಟು ಪ್ರಗತಿ ಕಾಣಲಿದೆ ಎಂದು ವಿವರಿಸಿದೆ.

ಆರ್‌ಬಿಐ ಎಂಪಿಸಿ ಸಭೆ ಆರಂಭ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ಬುಧವಾರ ಆರಂಭಗೊಂಡಿದೆ.

ಚಿಲ್ಲರೆ ಹಣದುಬ್ಬರ ನಿಯಂತ್ರಣ ಹಾಗೂ ಆರ್ಥಿಕತೆಯ ವೇಗ ಕಾಯ್ದುಕೊಳ್ಳುವ ಸವಾಲು ಆರ್‌ಬಿಐನ ಮುಂದಿದೆ. ಹಾಗಾಗಿ, ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆಯಿದೆ. ಶುಕ್ರವಾರದಂದು ಗವರ್ನರ್ ಶಕ್ತಿಕಾಂತ ದಾಸ್ ಅವರು, ಬಡ್ಡಿದರಕ್ಕೆ ಸಂಬಂಧಿಸಿದಂತೆ ಸಭೆಯ ನಿರ್ಣಯವನ್ನು ಪ್ರಕಟಿಸಲಿದ್ದಾರೆ.2024-25ನೇ ಹಣಕಾಸು ವರ್ಷದಲ್ಲಿ ನಡೆಯುತ್ತಿರುವ ಮೊದಲ ಸಭೆ ಇದಾಗಿದೆ. ಪ್ರಸ್ತುತ ರೆಪೊ ದರವು ಶೇ 6.5ರಷ್ಟಿದೆ.

ವಿಸ್ತಾರಾ ಪೈಲಟ್‌ಗಳ ಜೊತೆ ಸಿಇಒ ಚರ್ಚೆ

ಮುಂಬೈ (ಪಿಟಿಐ): ವಿಸ್ತಾರಾ ವಿಮಾನ ಸೇವೆಯಲ್ಲಿ ವ್ಯತ್ಯಯ ಮುಂದುವರಿದಿದ್ದು, ಬುಧವಾರವೂ 26 ವಿಮಾನಗಳ ಹಾರಾಟ ರದ್ದಾಗಿದೆ.

ಇದರ ಬೆನ್ನಲ್ಲೇ ವಿಮಾನಯಾನ ಕಂಪನಿಯ ಸಿಇಒ ವಿನೋದ್ ಕಣ್ಣನ್ ಹಾಗೂ ಹಿರಿಯ ಅಧಿಕಾರಿಗಳು ಬುಧವಾರ ಪೈಲಟ್‌ಗಳೊಟ್ಟಿಗೆ ವರ್ಚುವಲ್ ಸಭೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳು ಕೂಡ ಸಭೆಯಲ್ಲಿ ಪಾಲ್ಗೊಂಡಿದ್ದರು. ಆದರೆ, ಅಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕಂಪನಿಯ ವಕ್ತಾರರು ಯಾವುದೇ ಮಾಹಿತಿ ಹಂಚಿಕೊಳ್ಳಲು ನಿರಾಕರಿಸಿದ್ದಾರೆ.

ಪೈಲಟ್‌ಗಳಿಗೆ ಕೆಲಸ ಸಮಯ ನಿಗದಿ ಹಾಗೂ ಕರ್ತವ್ಯಕ್ಕೆ ನಿಯೋಜನೆಗೆ ಸಂಬಂಧಿಸಿದಂತೆ ಎದುರಾಗಿರುವ ಬಿಕ್ಕಟ್ಟನ್ನು ಮೇ ತಿಂಗಳೊಳಗೆ ಬಗೆಹರಿಸಲಾಗುವುದು ಎಂದು ಕಂಪನಿಯ ಹಿರಿಯ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಭರ್ಜರಿ ಮಾರಾಟ

ಮಹಾರಾಷ್ಟ್ರದ ನಾಗ್ಪುರದ ಜಾಮಾ ಮಸೀದಿ ಸಮೀಪ ವ್ಯಾಪಾರಿಯೊಬ್ಬರು ರಂಜಾನ್ ಮಾಸದ ಅಂಗವಾಗಿ ಶ್ಯಾವಿಗೆ ಮಾರಾಟ ಮಾಡಿದರು -ಪಿಟಿಐ ಚಿತ್ರ

ಕಳೆದ ಮಾರುಕಟ್ಟೆ ವರ್ಷದಲ್ಲಿ ಶೇ 15ರಷ್ಟು ಉತ್ಪಾದನೆ ಕುಸಿತ

ಮಾವು ಉತ್ಪಾದನೆ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ (ಜುಲೈನಿಂದ ಜೂನ್‌ವರೆಗೆ) 24 ದಶಲಕ್ಷ ಟನ್‌ನಷ್ಟು ಮಾವಿನ ಉತ್ಪಾದನೆಯಾಗುವ ನಿರೀಕ್ಷೆಯಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 14ರಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಅಧೀನದಲ್ಲಿರುವ ಕೇಂದ್ರೀಯ ಉಪೋಷ್ಣ ವಲಯದ ತೋಟಗಾರಿಕೆ ಸಂಸ್ಥೆ (ಐಸಿಎಆರ್–ಸಿಐಎಸ್‌ಎಚ್) ತಿಳಿಸಿದೆ.

ಏಪ್ರಿಲ್‌ನಿಂದ ಮೇ ತಿಂಗಳವರೆಗೆ ಬಿಸಿ ಗಾಳಿ ಹೆಚ್ಚಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಆದರೆ, ಇದು ಮಾವಿನ ಇಳುವರಿ ಮೇಲೆ ಅಷ್ಟೊಂದು ಪರಿಣಾಮ ಬೀರುವುದಿಲ್ಲ ಎಂದು ಸಂಸ್ಥೆಯ ನಿರ್ದೇಶಕ ಟಿ. ದಾಮೋದರನ್ ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ರೈತರು ಮೇ ತಿಂಗಳ ಅವಧಿಯಲ್ಲಿ ಮಾವಿನ ಗಿಡಗಳಿಗೆ ನೀರುಣಿಸುವ ಮೂಲಕ ಹಣ್ಣುಗಳು ಹೆಚ್ಚಿನ ಪ್ರಮಾಣದಲ್ಲಿ ನೆಲಕ್ಕೆ ಬೀಳದಂತೆ ತಡೆಯಲು ಮುಂಜಾಗ್ರತಾ ಕ್ರಮಕೈಗೊಳ್ಳಬೇಕು' ಎಂದು ಸಲಹೆ ನೀಡಿದ್ದಾರೆ.

ಅಂಕಿ ಅಂಶಗಳು

21 ದಶಲಕ್ಷ ಟನ್ – 2022–23ನೇ ಮಾರುಕಟ್ಟೆ ವರ್ಷದಲ್ಲಿನ ಉತ್ಪಾದನೆ

24 ದಶಲಕ್ಷ ಟನ್ – 2023–24ನೇ ಮಾರುಕಟ್ಟೆ ವರ್ಷದಲ್ಲಿನ ಉತ್ಪಾದನೆ ನಿರೀಕ್ಷೆ

'ಸದ್ಯ ಮಾವು ಹೂ ಬಿಡುವ ಪ್ರಕ್ರಿಯೆ ಮುಗಿದಿದೆ. ಪರಾಗಸ್ಪರ್ಶ ಹಂತವೂ ಮುಕ್ತಾಯವಾಗಿದ್ದು, ಕಾಯಿಯಾಗುವ ಹಂತ ಶುರುವಾಗಿದೆ. ಸಾಮಾನ್ಯ ಬಿಸಿ ಗಾಳಿಯು ಇಳುವರಿ ಮೇಲೆ ಪರಿಣಾಮ ಬೀರುವುದಿಲ್ಲ. ಆದರೆ, ಅದು ಪರೋಕ್ಷವಾಗಿ ಇಳುವರಿ ಹೆಚ್ಚಳಕ್ಕೆ ನೆರವಾಗಲಿದೆ' ಎಂದು ಹೇಳಿದ್ದಾರೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿ ದೇಶದಲ್ಲಿನ ಅರ್ಧದಷ್ಟು ಮಾವಿನ ಉತ್ಪಾದನೆಯಾಗುತ್ತದೆ. ಈ ಬಾರಿಯೂ ಉತ್ಪಾದನೆ ಹೆಚ್ಚಿರಲಿದೆ. ಆದರೆ, ಕಳೆದ ವರ್ಷ ಹವಾಮಾನ ವೈಪರೀತ್ಯದಿಂದ ಶೇ 15ರಷ್ಟು ಉತ್ಪಾದನೆ ಕುಸಿದಿತ್ತು. ಈ ವರ್ಷ ಪರಿಸ್ಥಿತಿ ಸುಧಾರಿಸಲಿದೆ ಎಂದು ವಿವರಿಸಿದ್ದಾರೆ.

ಸಾಮಾನ್ಯ ಬಿಸಿ ಗಾಳಿ ಬೀಸುವ ವೇಳೆಯೂ ರೈತರು ಮಾವಿನ ಗಿಡಗಳ ರಕ್ಷಣೆಗೆ ಅಗತ್ಯ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಬೇಕು. ಮಣ್ಣಿನ ತೇವಾಂಶವನ್ನು ಕಾಯ್ದುಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಮಾವು 'ಹಣ್ಣುಗಳ ರಾಜ'ನೆಂದು ಪ್ರಸಿದ್ಧಿ ಪಡೆದಿದೆ. ಮಾವು ಬೆಳೆಯುವ ದೇಶಗಳ ಪೈಕಿ ಭಾರತವೂ ಒಂದಾಗಿದೆ. ವಿಶ್ವದ ಉತ್ಪಾದನೆಯಲ್ಲಿ ದೇಶದ ಪಾಲು ಶೇ 42ರಷ್ಟಿದೆ.

ತೈವಾನ್‌ನಲ್ಲಿ ಪ್ರಬಲ ಭೂಕಂಪ

7.4 ತೀವ್ರತೆ: 9 ನಾಗರಿಕರ ಸಾವು, 900ಕ್ಕೂ ಹೆಚ್ಚು ಮಂದಿಗೆ ಗಾಯ

ತೈಪೆ (ಎಎಫ್‌ಪಿ/ಎಪಿ): ತೈವಾನ್‌ನಲ್ಲಿ ಬುಧವಾರ ಪ್ರಬಲ ಭೂಕಂಪ ಸಂಭವಿಸಿದ್ದು, ಒಂಬತ್ತು ಮಂದಿ ಮೃತಪಟ್ಟಿದ್ದಾರೆ.

ಈ ಘಟನೆಯಲ್ಲಿ 900ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಹಲವು ಕಟ್ಟಡಗಳು ಹಾನಿಗೀಡಾಗಿವೆ.

ಕಳೆದ 25 ವರ್ಷಗಳಲ್ಲೇ ಸಂಭವಿಸಿದ ಪ್ರಬಲ ಭೂಕಂಪ ಇದಾಗಿದೆ. ಬುಧವಾರ ನಸುಕಿನಲ್ಲಿ ಜನದಟ್ಟಣೆಯ ಸಮಯದಲ್ಲಿ ಈ ವಿಕೋಪ ಸಂಭವಿಸಿತು. ಕಲ್ಲಿದ್ದಲು ಗಣಿಗಳಲ್ಲಿ ಹಲವು ಕಾರ್ಮಿಕರು ಸಿಲುಕಿಕೊಂಡಿದ್ದಾರೆ.

ತೈವಾನ್‌ನ ಭೂಕಂಪನ ಮೇಲ್ವಿಚಾರಣಾ ಸಂಸ್ಥೆ ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.2 ಇತ್ತು ಎಂದು ಹೇಳಿದರೆ, ಅಮೆರಿಕದ ಜಿಯಾಲಾಜಿಕಲ್ ಸರ್ವೆ ರಿಕ್ಟರ್ ಮಾಪಕದಲ್ಲಿ 7.4 ತೀವ್ರತೆ ಇತ್ತು ಎಂದು ಹೇಳಿದೆ.ಕಂಪನದ ಕೇಂದ್ರ ಬಿಂದು ತೈವಾನ್‌ನ ಪೂರ್ವ ಕರಾವಳಿಯಲ್ಲಿರುವ ಹುವಾಲಿಯನ್‌ನಿಂದ ಸುಮಾರು 18 ಕಿಲೋಮೀಟರ್ (11 ಮೈಲಿ) ದೂರದಲ್ಲಿ ಮತ್ತು ಸುಮಾರು 35 ಕಿಲೋಮೀಟರ್ (21 ಮೈಲಿ) ಆಳದಲ್ಲಿ ಇತ್ತು. ಭೂಕಂಪನದ ನಂತರ ಹಲವು ಬಾರಿ ಭೂಮಿ ಕಂಪಿಸಿರುವುದು ವರದಿಯಾಗಿದೆ.

ಎಲ್ಲೆಲ್ಲಿ, ಏನೇನೆಲ್ಲ ತೊಂದರೆ...

- ಸುಮಾರು 934 ಜನರು ಗಾಯಗೊಂಡಿದ್ದಾರೆ
- ಭೂಕಂಪನದ ನಂತರ ರಾಷ್ಟ್ರೀಯ ಉದ್ಯಾನದಲ್ಲಿ ಮಿನಿ ಬಸ್‌ನಲ್ಲಿದ್ದ 50 ಜನರು ಸಂಪರ್ಕಕ್ಕೆ ಸಿಕ್ಕಿಲ್ಲ
- ಕಲ್ಲಿದ್ದಲಿನ ಒಂದು ಗಣಿಯಲ್ಲಿ 64 ಜನರು ಸಿಲುಕಿದ್ದರೆ, ಮತ್ತೊಂದರಲ್ಲಿ 6 ಮಂದಿ ಸಿಲುಕಿಕೊಂಡಿದ್ದಾರೆ
- 24 ಕಡೆ ಭೂಕುಸಿತ ಉಂಟಾಗಿದೆ. 35 ರಸ್ತೆಗಳಿಗೆ ಭಾರಿ ಹಾನಿಯಾಗಿದೆ. ಅಲ್ಲದೆ, ಹಲವು ಕಡೆ ಸೇತುವೆಗಳು ಮತ್ತು ಸುರಂಗಗಳಿಗೆ ಹಾನಿ ಉಂಟಾಗಿದೆ.
- 2ನೇ ವಿಶ್ವ ಸಮರಕ್ಕೆ ಪೂರ್ವದಲ್ಲಿ ನಿರ್ಮಿಸಲಾದ ಪರಿವರ್ತನಾ ಶಾಲೆ ಮತ್ತು ತೈಪೆಯ ದಕ್ಷಿಣದಲ್ಲಿರುವ ಟಾಯುವಾನ್‌ನಲ್ಲಿರುವ ಮುಖ್ಯ ವಿಮಾನ ನಿಲ್ದಾಣದ ಕೆಲವು ವಿಭಾಗಗಳಿಗೆ ಸಣ್ಣಪುಟ್ಟ ಹಾನಿ ಆಗಿದೆ

ಟೆಸ್ಲಾ ಇ.ವಿ ಘಟಕದ ಸ್ಥಳ ಪರಿಶೀಲನೆ

ನ್ಯೂಯಾರ್ಕ್ (ರಾಯಿಟರ್ಸ್): ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಭಾರತದಲ್ಲಿ ಎಲೆಕ್ಟ್ರಿಕ್ (ಇ.ವಿ) ಕಾರು ಉತ್ಪಾದನಾ ಘಟಕ ಸ್ಥಾಪಿಸಲು ಸ್ಥಳ ಪರಿಶೀಲನೆಗಾಗಿ ಈ ತಿಂಗಳು ತಂಡವನ್ನು ಕಳುಹಿಸಲಿದೆ ಎಂದು 'ಫೈನಾನ್ಶಿಯಲ್ ಟೈಮ್ಸ್' ಬುಧವಾರ ವರದಿ ಮಾಡಿದೆ.

ಟೆಸ್ಲಾ ಕಂಪನಿಯು ಇ.ವಿ ಕಾರು ಉತ್ಪಾದನಾ ಘಟಕ ಸ್ಥಾಪನೆಗೆ ಅಂದಾಜು ₹16,700 ಕೋಟಿಯಿಂದ ₹25,000 ಕೋಟಿ ಹೂಡಿಕೆ ಮಾಡಲಿದೆ.

ಭಾರತವು ಕಳೆದ ತಿಂಗಳು ಕನಿಷ್ಠ ₹4,176 ಕೋಟಿ ಹೂಡಿಕೆ ಮಾಡಲು ಮತ್ತು ಮೂರು ವರ್ಷಗಳಲ್ಲಿ ದೇಶೀಯ ಉತ್ಪಾದನೆಯನ್ನು ಪ್ರಾರಂಭಿಸಲು ಬದ್ಧವಾಗಿರುವ ಕಾರು ತಯಾರಕ ಕಂಪನಿಗಳು ಉತ್ಪಾದಿಸುವ ಕೆಲವು ಎಲೆಕ್ಟ್ರಿಕ್ ವಾಹನಗಳ ಮೇಲಿನ ಆಮದು ತೆರಿಗೆಗಳನ್ನು ಕಡಿಮೆ ಮಾಡಿದೆ.

ಕಂಪನಿಯು ಅಮೆರಿಕದಿಂದ ತಂಡವನ್ನು ಅಧ್ಯಯನಕ್ಕಾಗಿ ಭಾರತಕ್ಕೆ ಕಳುಹಿಸಲಿದೆ. ತಂಡದವರು, ದೇಶದಲ್ಲಿ ವಾಹನ ಉತ್ಪಾದನಾ ಕೇಂದ್ರಗಳು ಹೆಚ್ಚಿರುವ ಮಹಾರಾಷ್ಟ್ರ, ಗುಜರಾತ್, ತಮಿಳುನಾಡಿನ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಾಕ್‌ನ ಮುಖ್ಯ ನ್ಯಾಯಮೂರ್ತಿ ಎಚ್ಚರಿಕೆ

'ನ್ಯಾಯಾಂಗದ ಸ್ವಾತಂತ್ರ್ಯ ಮೇಲಿನ ದಾಳಿ ಸಹಿಸಲ್ಲ'

ಇಸ್ಲಾಮಾಬಾದ್ (ಪಿಟಿಐ): ನ್ಯಾಯಾಂಗದ ಸ್ವಾತಂತ್ರ್ಯದ ಮೇಲಿನ ದಾಳಿಯನ್ನು ಸಹಿಸಲಾಗದು ಎಂದು ಪಾಕಿಸ್ತಾನದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಖಾಜಿ ಫಯೆಜ್ ಐಸಾ ಬುಧವಾರ ಹೇಳಿದ್ದಾರೆ.

ಗುಪ್ತಚರ ಸಂಸ್ಥೆಗಳು ನ್ಯಾಯಾಂಗದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿವೆ ಎನ್ನುವ ಆರೋಪದ ವಿಚಾರಣೆಯನ್ನು ಪೂರ್ಣ ಪೀಠಕ್ಕೆ ವಹಿಸಿದ ಅವರು, ನ್ಯಾಯಾಂಗದ ಸ್ವಾತಂತ್ರ್ಯದ ಮೇಲಿನ ಯಾವುದೇ ದಾಳಿಯನ್ನು ತಡೆಯುವುದಾಗಿ ಪ್ರತಿಜ್ಞೆ ಕೂಡ ಮಾಡಿದರು.

ವಿಚಾರಣೆಯನ್ನು ಏಪ್ರಿಲ್ 29ಕ್ಕೆ ಮುಂದೂಡಿದ ಮುಖ್ಯ ನ್ಯಾಯಮೂರ್ತಿ, 'ಮುಂದಿನ ವಿಚಾರಣೆಗೆ ನಾವು ಪೂರ್ಣ ಪೀಠ ರಚಿಸುತ್ತೇವೆ. ಈ ಪ್ರಕರಣದ ವಾದವನ್ನು ನಾವು ಪ್ರತಿದಿನ ಆಲಿಸುತ್ತೇವೆ' ಎಂದರು.

ವಿಚಾರಣೆಯ ವೇಳೆ ಅಟಾರ್ನಿ ಜನರಲ್ ಮನ್ಸೂರ್ ಅವಾನ್ ಅವರು, ಸರ್ಕಾರವು ತನಿಖೆಗೆ ಆಯೋಗ ರಚಿಸಿದೆ. ಆದರೆ, ಇದು ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ವಕೀಲರಿಂದ ವಾಗ್ದಾಳಿಗೆ ಗುರಿಯಾಗಿದೆ ಎಂದು ಪೀಠಕ್ಕೆ ತಿಳಿಸಿದರು.

ಗುಪ್ತಚರ ಸಂಸ್ಥೆಗಳ ಹಸ್ತಕ್ಷೇಪದ ಕುರಿತು ಇಸ್ಲಾಮಾಬಾದ್ ಹೈಕೋರ್ಟ್‌ನ (ಐಎಚ್‌ಸಿ) ಆರು ನ್ಯಾಯಮೂರ್ತಿಗಳು ಮಾಡಿರುವ ಗಂಭೀರ ಆರೋಪದ ತನಿಖೆಗಾಗಿ ಸರ್ಕಾರ ರಚಿಸಿದ್ದ ಏಕವ್ಯಕ್ತಿ ತನಿಖಾ ಆಯೋಗದ ನೇತೃತ್ವದಿಂದ ಪಾಕಿಸ್ತಾನದ ಮಾಜಿ ಮುಖ್ಯ ನ್ಯಾಯಮೂರ್ತಿ ತಸ್ಸಾದಕ್ ಹುಸೇನ್ ಜಿಲಾನಿ ಅವರು ಹಿಂದೆ ಸರಿದ ನಂತರ, ಸುಪ್ರೀಂ ಕೋರ್ಟ್ ಈ ಕ್ರಮಕೈಗೊಂಡಿದೆ. ಗುಪ್ತಚರ ಸಂಸ್ಥೆಗಳ ಹಸ್ತಕ್ಷೇಪದ ಬಗ್ಗೆ ಆರು ನ್ಯಾಯಮೂರ್ತಿಗಳು ಬರೆದ ಪತ್ರ ಆಧರಿಸಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಪಿ) ಐಸಾ ಅವರ ನೇತೃತ್ವದ ಏಳು ನ್ಯಾಯಮೂರ್ತಿಗಳನ್ನೊಳಗೊಂಡ ಪೀಠವು ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸುತ್ತಿದೆ.

ಪ್ರಾಥಮಿಕ ಸುತ್ತಿನಲ್ಲಿ ಬೈಡನ್, ಟ್ರಂಪ್‌ಗೆ ಗೆಲುವು

ವಾಷಿಂಗ್ಟನ್(ಪಿಟಿಐ): ಅಮೆರಿಕ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿಗಳ ಆಯ್ಕೆಗಾಗಿ ನಡೆಯುವ ಪ್ರಾಥಮಿಕ ಸುತ್ತಿನ ಚುನಾವಣೆಗಳಲ್ಲಿ, ಅಧ್ಯಕ್ಷ ಜೋ ಬೈಡನ್ ಹಾಗೂ ಪ್ರತಿಸ್ಪರ್ಧಿ, ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಗೆಲುವು ಸಾಧಿಸಿದ್ದಾರೆ.

ಪಕ್ಷದ ವತಿಯಿಂದ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿಯ ಆಯ್ಕೆಗಾಗಿ, ರೋಡ್ ಐಲ್ಯಾಂಡ್, ಕನೆಕ್ಟಿಕಟ್, ನ್ಯೂಯಾರ್ಕ್ ಹಾಗೂ ವಿನ್‌ಕನ್ಸಿನ್ ರಾಜ್ಯಗಳಲ್ಲಿ ಮಂಗಳವಾರ ನಡೆದ ಚುನಾವಣೆಗಳಲ್ಲಿ, ಆಯಾ ಪಕ್ಷಗಳ ನೂರಾರು ಪ್ರತಿನಿಧಿಗಳು ಹಕ್ಕು ಚಲಾಯಿಸಿದರು. ಅಭ್ಯರ್ಥಿ ಸ್ಥಾನಕ್ಕೆ ಆಯ್ಕೆ ಬಯಸಿ ಹಲವರು ನಾಮಪತ್ರ ಸಲ್ಲಿಸಿದ್ದರು.

ಅಂತಿಮವಾಗಿ, ಡೆಮಾಕ್ರಟಿಕ್ ಪಕ್ಷದ ಬೈಡನ್ ಅವರು ಶೇ 80ಕ್ಕೂ ಅಧಿಕ ಮತ ಪಡೆದರೆ, ಟ್ರಂಪ್ ಅವರು ಶೇ 75ಕ್ಕಿಂತ ಹೆಚ್ಚು ಮತಗಳನ್ನು ಪಡೆದು, ಗೆಲುವಿನ ನಗೆ ಬೀರಿದರು. ನವೆಂಬರ್ 5ರಂದು ಅಧ್ಯಕ್ಷೀಯ ಚುನಾವಣೆ ನಡೆಯಲಿದೆ.

ತಾಯ್ನಾಡಿಗೆ ಮರಳಿದ ರಾಜೀವ್ ಹಂತಕರು

ಚೆನ್ನೈ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ಮೂವರು ಬುಧವಾರ ತಮ್ಮ ತಾಯ್ನಾಡು ಶ್ರೀಲಂಕಾಕ್ಕೆ ಮರಳಿದ್ದಾರೆ. ಸುಪ್ರೀಂ ಕೋರ್ಟ್‌ನಿಂದ ಬಿಡುಗಡೆ ಆದೇಶ ಹೊರಬಿದ್ದ ಎರಡು ವರ್ಷಗಳ ಬಳಿಕ ಅವರು ತಮ್ಮ ದೇಶಕ್ಕೆ ಹೊರಟಿದ್ದಾರೆ.

'30 ವರ್ಷಗಳ ಕಾಲ ಜೈಲು ಶಿಕ್ಷೆ ಅನುಭವಿಸಿದ್ದ ವಿ.ಮುರುಗನ್ ಅಲಿಯಾಸ್ ಶ್ರೀಕರಣ್, ಎಸ್. ಜಯಕುಮಾರ್, ಬಿ.ರಾಬರ್ಟ್ ಪಾಯಸ್ ಅವರು ವಿಮಾನದ ಮೂಲಕ ಕೊಲಂಬೊಗೆ ಹೊರಟರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಶ್ರೀಲಂಕಾ ಹೈ-ಕಮಿಷನ್ ಅವರು ಮುರುಗನ್ ಮತ್ತಿತರರಿಗೆ ಪ್ರಯಾಣ ದಾಖಲೆಗಳನ್ನು ನೀಡಿದ್ದು, ವಿದೇಶೀಯರ ಸ್ಥಳೀಯ ನೋಂದಣಿ ಕಚೇರಿಯ ಆದೇಶದ ಬಳಿಕ ಅವರು ತಮ್ಮ ಊರುಗಳಿಗೆ ಮರಳಲಿದ್ದಾರೆ ಎಂದು ತಮಿಳುನಾಡು ಸರ್ಕಾರ ಕಳೆದ ತಿಂಗಳು ಮದ್ರಾಸ್ ಹೈಕೋರ್ಟ್‌ಗೆ ತಿಳಿಸಿತ್ತು. ರಾಜೀವ್ ಹತ್ಯೆ ಪ್ರಕರಣದ 7 ಅಪರಾಧಿಗಳನ್ನು ಬಂಧನದಿಂದ ಮುಕ್ತಗೊಳಿಸುವಂತೆ ಸುಪ್ರೀಂ ಕೋರ್ಟ್ 2022 ನವೆಂಬರ್‌ನಲ್ಲಿ ಆದೇಶ ನೀಡಿತ್ತು.

ಶ್ರೀಕಿಗೆ ಬೆದರಿಕೆ ಗನ್‌ಮ್ಯಾನ್ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಹಗರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ ಬೆದರಿಕೆ ಕರೆಗಳು ಬರುತ್ತಿದ್ದು, ನಗರ ಪೊಲೀಸರು ಗನ್‌ಮ್ಯಾನ್ ಭದ್ರತೆ ಒದಗಿಸಿದ್ದಾರೆ.

ಬಿಟ್‌ಕಾಯಿನ್ ಹಗರಣದಲ್ಲಿ ತನಿಖೆ ನಡೆಸಲು ರಾಜ್ಯ ಸರ್ಕಾರ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿತ್ತು. ಶ್ರೀಕಿ ಬಂಧನ ಬಳಿಕ ನಡೆದ ವಿಚಾರಣೆ ವೇಳೆ ಪ್ರಮುಖ ರಾಜಕಾರಣಿಗಳು ಹಾಗೂ ಐಪಿಎಸ್ ಅಧಿಕಾರಿಗಳ ಹೆಸರನ್ನು ಆತ ಪ್ರಸ್ತಾಪಿಸಿದ್ದ. ಅದಾದ ಮೇಲೆ ಶ್ರೀಕಿಗೆ ಬೆದರಿಕೆ ಕರೆಗಳು ಬರುತ್ತಿದ್ದವು ಎನ್ನಲಾಗಿದೆ.

'ಗನ್‌ಮ್ಯಾನ್ ಬೇಡವೆಂದು ಶ್ರೀಕಿ ಹೇಳಿದ್ದ. ಆದರೆ, ಗುಪ್ತಚರ ಇಲಾಖೆ ಮಾಹಿತಿ ಆಧರಿಸಿ ಗನ್‌ಮ್ಯಾನ್ ಭದ್ರತೆ ಒದಗಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಶ್ರೀಕಿಯನ್ನು ಬಳಸಿಕೊಂಡು ರಾಜಕಾರಣಿಗಳು ಬಿಟ್‌ಕಾಯಿನ್ ಹಗರಣ ಎಸಗಿರುವ ಮಾಹಿತಿ ತನಿಖಾ ತಂಡಕ್ಕೆ ಸಿಕ್ಕಿದೆ. ಶ್ರೀಕಿ ಹೆಸರು ಹೇಳಿದ್ದ ಕೆಲವು ಹಿರಿಯ ಅಧಿಕಾರಿಗಳನ್ನೂ ಈಚೆಗೆ ಎಸ್‌ಐಟಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು. ಇನ್ನೂ ಕೆಲವರಿಗೆ ನೋಟಿಸ್ ನೀಡಲು ಎಸ್‌ಐಟಿ ಸಿದ್ಧತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಶ್ರೀಕಿ ಬೆಂಗಳೂರಿನ ನಿವಾಸಿಯಾಗಿದ್ದು, 2014ರಿಂದ 2017ರ ವರೆಗೆ ವಿದೇಶದಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿಎಸ್ಸಿ ವ್ಯಾಸಂಗ ಮಾಡಿದ್ದ. ಪದವಿ ಪಡೆದ ಬಳಿಕ ವೆಬ್‌ಸೈಟ್ ಹ್ಯಾಕ್ ಮಾಡಲು ಶುರುಮಾಡಿದ್ದ. ಆರಂಭದಲ್ಲಿ ಸಣ್ಣಪುಟ್ಟ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ ಅನುಭವ ಪಡೆದಿದ್ದ ಈತ, ನಂತರ ದೊಡ್ಡ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುತ್ತಿದ್ದ. ವೆಬ್‌ಸೈಟ್ ಹ್ಯಾಕ್ ಮಾಡಿ ಬಿಟ್‌ಕಾಯಿನ್ ಬಳಸಿ ಹಣವನ್ನು ಪಡೆಯುತ್ತಿದ್ದ. ಈ ಎಲ್ಲ ಕೆಲಸಕ್ಕೆ ಡಾರ್ಕ್ ವೆಬ್ ಬಳಕೆ ಮಾಡುತ್ತಿದ್ದ.ಡಾರ್ಕ್‌ವೆಬ್ ಮೂಲಕ ವಿದೇಶದಿಂದ 'ಹೈಡ್ರೊ ಗಾಂಜಾ' ತರಿಸಿದ್ದ ಆರೋಪದಡಿ ಶ್ರೀಕಿ ಹಾಗೂ ಇತರರ ವಿರುದ್ಧ ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ಪ್ರಕರಣ ದಾಖಲಾಗಿತ್ತು.

ಅಕ್ರಮ ಗಣಿಗಾರಿಕೆ: ಮಾಜಿ ಶಾಸಕನಿಗೆ ₹140 ಕೋಟಿ ದಂಡ

ಇಂದೋರ್ (ಪಿಟಿಐ): ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಮಾಜಿ ಶಾಸಕ ಸಂಜಯ್ ಶುಕ್ಲಾ ಮತ್ತು ಇತರ ಮೂವರಿಗೆ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಇಂದೋರ್ ಜಿಲ್ಲಾಡಳಿತ ₹140.60 ಕೋಟಿ ದಂಡ ವಿಧಿಸಲು ಸೂಚಿಸಿ, ನೋಟಿಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಮಧ್ಯಪ್ರದೇಶದ ಇಂದೋರ್‌ಗೆ ಹೊಂದಿಕೊಂಡಿರುವ ಬರೋಲಿ ಗ್ರಾಮದ ಎರಡು ಸ್ಥಳಗಳಲ್ಲಿ 5.50 ಹೆಕ್ಟೇರ್ ಮತ್ತು 3.40 ಹೆಕ್ಟೇರ್‌ನಲ್ಲಿ ಅಕ್ರಮ ಗಣಿಗಾರಿಕೆ ನಡೆದಿರುವುದನ್ನು ಗಣಿಗಾರಿಕೆ ಇಲಾಖೆ ಪತ್ತೆಹಚ್ಚಿದೆ.

ಈ ಎರಡೂ ಕಡೆ ನಡೆದಿರುವ ಮುರುಮ್ ಮತ್ತು ಕಲ್ಲು ಅಕ್ರಮ ಗಣಿಗಾರಿಕೆ ಸಂಬಂಧ ಶುಕ್ಲಾ ಮತ್ತು ಅವರ ಸಹೋದರ ರಾಜೇಂದ್ರ ಶುಕ್ಲಾ ಹಾಗೂ ಬರೋಲಿ ಗ್ರಾಮದ ಮೆಹರ್ಬನ್ ಸಿಂಗ್ ರಜಪೂತ್ ಅವರಿಗೆ ಇದೇ 19ರಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ (ಎಡಿಎಂ) ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಿದೆ. ಹಾಜರಾಗದಿದ್ದರೆ ಏಕಪಕ್ಷೀಯವಾಗಿ ಕ್ರಮ ತೆಗೆದುಕೊಳ್ಳುವುದಾಗಿ ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.

ಬರೋಲಿ ಗ್ರಾಮದ ಎರಡು ಸ್ಥಳಗಳಲ್ಲಿ ಸುಮಾರು 4 ಲಕ್ಷ ಕ್ಯುಬಿಕ್ ಮೀಟರ್ 'ಮರುಮ್' (ಮಣ್ಣು ಹಾಗೂ ಕಲ್ಲು ಬೆರೆತಿರುವುದು) ಮತ್ತು 2.23 ಲಕ್ಷ ಕ್ಯೂಬಿಕ್ ಮೀಟರ್ ಕಲ್ಲುಗಳನ್ನು ಅಕ್ರಮವಾಗಿ ಗಣಿಗಾರಿಕೆ ಮಾಡಲಾಗಿದ್ದು, ಶುಕ್ಲಾ ಮತ್ತು ಇತರ ಮೂವರಿಗೆ ಮಧ್ಯಪ್ರದೇಶ ಖನಿಜಗಳ (ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ಸಂಗ್ರಹಣೆ ತಡೆಗಟ್ಟುವಿಕೆ) ನಿಯಮಗಳು- 2022ರ ಅಡಿಯಲ್ಲಿ ₹140.60 ಕೋಟಿ ದಂಡ ವಿಧಿಸಲು ಉದ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈವರೆಗೆ ನನಗೆ ಯಾವುದೇ ನೋಟಿಸ್ (ಅಕ್ರಮ ಗಣಿಗಾರಿಕೆ ಕುರಿತು) ಬಂದಿಲ್ಲ. ನೋಟಿಸ್ ಬಂದ ನಂತರವೇ ಈ ಬಗ್ಗೆ ನಾನು ಏನನ್ನಾದರೂ ಹೇಳಲು ಸಾಧ್ಯ' ಎಂದು ಸಂಜಯ್ ಶುಕ್ಲಾ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ ಶಾಸಕರಾಗಿದ್ದ ಸಂಜಯ್ ಅವರು 2023ರ ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಇಂದೋರ್-1 ಕ್ಷೇತ್ರದಿಂದ ಬಿಜೆಪಿ ಹಿರಿಯ ನಾಯಕ ಕೈಲಾಶ್ ವಿಜಯ್ ವರ್ಗಿಯಾ ಅವರ ಎದುರು ಪರಾಭವಗೊಂಡಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

MACHINE OPERATOR
Laser cutting machine 3KW Double bed (drawing/operator) Bending machine NC Sharing machine NC 2 to 3 years experience payment 30 K Location: Devakathikoppa shivamogga Call: 9964892600 9618002978

REQUIRED EXPERIENCED
Telecaller, Loan Recovery Supervisor. For BankLoan collection. Salary 30,000+ Incentive Contact: 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಘಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ವೈಯಕ್ತಿಕ

Change of Name

I, Poonam Kumari Singh D/O Bijay Kumar Singh born on 03/07/1988 residing at 202B, MDVR Prime Rose Apartment, Yelanhalli, Begur Koppa Road, Bangalore have changed my name to Poonam Singh vide affidavit dated 19/03/2024, sworn before notary B.M Chandrashekar at Bangalore.

ಪ್ರವಾಸ

Travel

ಸುವರ್ಣ ಯಾತ್ರ ನೇಪಾಳ ಪಶುಪತಿನಾಥ, ಅಯೋಧ್ಯ ಮುಕ್ತಿನಾಥ, ಮನೋಕಮನ ಕಠ್ಮಂಡು ಪೋಕ್ರ ಪ್ರವಾಸ 29/4/24. 9 ದಿನಗಳು 8660233673 9019462508

★ಶ್ರೀಶ್ರೇಯಸ್ ಟೂರ್ಸ್★ 12.04.2024 6ದಿನಗಳು ಊಟಿ ವಾಲ್‌ವರ್ತ್ಯ,ಇಷಾಫೌಂಡೇಷನ್, 12.04.2024 5ದಿನಗಳು ಕಾಶಿ, ಅಯೋಧ್ಯಾ,ಗಯಾ, ಅಲಹಾಬಾದ್.27.04.2024, 18.05.2024 12/15/21ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ)ನ 6ರಾಜ್ಯಗಳು ಅಸ್ಸಾಂ, ಅರುಣಾಚಲ,ಮೇಘಾಲಯ, ನಾಗಲ್ಯಾಂಡ್,ತ್ರಿಪುರ, ಮಿಝೋರಾಂ.28.04.2024 ನರ್ಮದಾಪುಷ್ಕರಾಲು, ಪ್ರತಿ 5ದಿನಕ್ಕೊಮ್ಮೆ ವೋಲ್ವೋ ಬಸ್ಸಿನಲ್ಲಿ ಉಜ್ಜಯಿನಿ,ಓಂಕಾರೇಶ್ವರ, ಮಹೇಶ್ವರ.12.05.2024 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.18.05.2024 10ದಿನಗಳು ಅಯೋಧ್ಯೆ,ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಪ್ರವಾಸ. 8073824856/ 9206979202

05.05.2024ರಿಂದ 25ದಿನಗಳ ಚಾರಧಾಮ್`ಸಮೇತ, ವೈಷ್ಣೋದೇವಿ,ಅಮೃತಸರ್`, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್`ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿಪುರ,ವಾಘಬಾರ್ಡರ್`,ಇತ್ಯಾದಿ. ಏಷ್ಯನ್`ಟ್ರಾವೆಲ್`ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಎಎಪಿ ನಾಯಕಿ ಆತಿಶಿ ಆರೋಪ ● ತೂಕ 65 ಕೆ.ಜಿಯೇ ಇದೆ– ಜೈಲು ಅಧಿಕಾರಿ ಪ್ರತಿಕ್ರಿಯೆ

‘ಕೇಜ್ರಿವಾಲ್ ತೂಕದಲ್ಲಿ ಇಳಿಕೆ’

ನವದೆಹಲಿ (ಪಿಟಿಐ): ಅಬಕಾರಿ ನೀತಿಗೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾರ್ಚ್ 21ರಂದು ಇ.ಡಿ ಬಂಧನಕ್ಕೆ ಒಳಗಾದಾಗಿನಿಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ದೇಹತೂಕವು ವಿಪರೀತ ಕಡಿಮೆಯಾಗಿದೆ. ಅವರ ಆರೋಗ್ಯಕ್ಕೆ ಬಿಜೆಪಿ ಸಮಸ್ಯೆ ಒಡ್ಡುತ್ತಿದೆ ಎಂದು ಎಎಪಿ ನಾಯಕಿ ಆತಿಶಿ ಬುಧವಾರ ಆರೋಪಿಸಿದ್ದಾರೆ.

ಮುಖ್ಯಮಂತ್ರಿಯ ಆರೋಗ್ಯದ ದೃಷ್ಟಿಯಿಂದ ಕಾನೂನಿನ ನೆರವು ಕೇಳುವುದಾಗಿಯೂ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆದರೆ, ನ್ಯಾಯಾಂಗ ಬಂಧನಕ್ಕೆ ಒಳಗಾದಾಗಿನಿಂದ ಕೇಜ್ರಿವಾಲ್ ಅವರ ದೇಹತೂಕದಲ್ಲಿ ಬದಲಾವಣೆ ಆಗಿಲ್ಲ ಎಂದು ತಿಹಾರ್ ಜೈಲಿನ ಆಡಳಿತಾಧಿಕಾರಿ ಪ್ರಕಟಣೆಯ ಮೂಲಕ ಪ್ರತಿಕ್ರಿಯಿಸಿದ್ದಾರೆ.

‘ಏಪ್ರಿಲ್ 1ರಂದು ಕೇಜ್ರಿವಾಲ್ ಬಂಧನಕ್ಕೆ ಒಳಗಾದ ನಂತರ ಇಬ್ಬರು ವೈದ್ಯರು ಅವರನ್ನು ತಪಾಸಣೆ ನಡೆಸಿದ್ದರು. ಆಗ ಅವರ ದೇಹಸ್ಥಿತಿ ಸಹಜವಾಗಿಯೇ ಇತ್ತು. ದೇಹತೂಕ ಆಗ 65 ಕೆ.ಜಿ. ಇತ್ತು. ಈಗಲೂ ತೂಕ ಇಳಿಕೆಯಾಗಿಲ್ಲ. ಕೋರ್ಟ್ ಆದೇಶದಂತೆ, ಮನೆಯಿಂದ ಸಿದ್ಧಪಡಿಸಿದ ಆಹಾರವನ್ನೇ ಅವರಿಗೆ ಪೂರೈಸಲಾಗುತ್ತಿದೆ. ಹೀಗಾಗಿ ಅವರ ದೇಹದ ಆರೋಗ್ಯದಲ್ಲಿ ಏರುಪೇರು ಆಗುವಂತಹದ್ದೇನೂ ಆಗಿಲ್ಲ’ ಎಂದು ಜೈಲಿನ ಹಿರಿಯ ಅಧಿಕಾರಿ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಜೈಲು ಅಧಿಕಾರಿ ಪ್ರಕಟಣೆ ಹೊರಡಿಸಿದ ಬೆನ್ನಲ್ಲೇ ಪತ್ರಿಕಾಗೋಷ್ಠಿ ನಡೆಸಿದ ಎಎಪಿ ಶಾಸಕ ದಿಲೀಪ್ ಪಾಂಡೆ, ‘ತಿಹಾರಿ ಜೈಲಿನಲ್ಲಿ ಅವರು ಕೆಲವು ದಿನಗಳಿಂದ ಇದ್ದಾರಷ್ಟೆ. ಆದರೆ, ಮಾರ್ಚ್ 21ರಂದು ಬಂಧನಕ್ಕೆ ಒಳಗಾದಾಗಿನಿಂದ ಇಲ್ಲಿಯವರೆಗೆ 4.5 ಕೆ.ಜಿ. ದೇಹತೂಕ ಕಡಿಮೆಯಾಗಿರುವುದನ್ನು ದಾಖಲೆಯೇ ಹೇಳುತ್ತದೆ. ಬಂಧನಕ್ಕೆ ಮೊದಲು ಅವರ ದೇಹತೂಕ 69.5 ಕೆ.ಜಿ. ಇತ್ತು. ಈಗ 65 ಕೆ.ಜಿಗೆ ಇಳಿದಿದೆ. ಆರೋಗ್ಯದ ವಿಚಾರದಲ್ಲಿ ಬೇಜವಾಬ್ದಾರಿಯಿಂದ ವರ್ತಿಸುವುದು ಸರಿಯಲ್ಲ’ ಎಂದು ಹೇಳಿದ್ದಾರೆ.

ಏಪ್ರಿಲ್ 7ಕ್ಕೆ ಉಪವಾಸ ಸತ್ಯಾಗ್ರಹ

ಅರವಿಂದ ಕೇಜ್ರಿವಾಲ್ ಬಂಧನ ವಿರೋಧಿಸಿ ಜಂತರ್ ಮಂತರ್‌ನಲ್ಲಿ ಏಪ್ರಿಲ್ 7ರಂದು ಎಎಪಿ ಮುಖಂಡರು ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಪಕ್ಷದ ನಾಯಕ ಗೋಪಾಲ್ ರಾಯ್ ತಿಳಿಸಿದರು.

‘ನಿಮ್ಮ ಮನೆ, ನೀವು ಇರುವ ಸ್ಥಳ ಎಲ್ಲಿಯೇ ಆಗಲಿ ಯಾರು ಬೇಕಾದರೂ ಉಪವಾಸ ಸತ್ಯಾಗ್ರಹ ಮಾಡುವ ಮೂಲಕ ನಮ್ಮ ಪ್ರತಿಭಟನೆಗೆ ಬೆಂಬಲ ಸೂಚಿಸಬಹುದು. ಏಪ್ರಿಲ್ 7ರಂದು ದೆಹಲಿ ಸರ್ಕಾರದ ಸಚಿವರು, ಎಎಪಿ ಸಂಸದರು, ಶಾಸಕರು, ಮಹಾನಗರ ಪಾಲಿಕೆ ಸದಸ್ಯರು ಜಂತರ್ ಮಂತರ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸುವರು. ವಿದ್ಯಾರ್ಥಿ ಸಂಘಟನೆಗಳು, ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳೂ ಪ್ರತಿಭಟನೆಯಲ್ಲಿ ಭಾಗವಹಿಸಬಹುದು’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಕರೆ ನೀಡಿದರು.

ಕೇಜ್ರಿವಾಲ್ ಭೇಟಿಗೆ ಅವಕಾಶ ಕೋರಿ ಪತ್ರ

ಚಂಡೀಗಢ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಭೇಟಿ ಮಾಡಲು ಅವಕಾಶ ನೀಡುವಂತೆ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರು ತಿಹಾರ ಜೈಲಿನ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ ಎಂದು ಎಎಪಿ ಪಕ್ಷದ ಮೂಲಗಳು ಬುಧವಾರ ತಿಳಿಸಿವೆ.

‘ಮುಖ್ಯಮಂತ್ರಿ ಕಚೇರಿಯಿಂದ ಪತ್ರ ರವಾನೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ಮಾರ್ಚ್ 21ರಂದು ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ಏಪ್ರಿಲ್ 15ರವರೆಗೆ ಕೇಜ್ರಿವಾಲ್ ಅವರು ನ್ಯಾಯಾಂಗ ಬಂಧನದಲ್ಲಿರಲಿದ್ದಾರೆ.

ತೀರ್ಪು ಕಾಯ್ದಿರಿಸಿದ ಕೋರ್ಟ್

ಒಂದನೇ ಪುಟದಿಂದ...

ಅರ್ಜಿದಾರರ ವಿರುದ್ಧ ಇನ್ನೂ ಆರಂಭಿಕ ಹಂತದ ತನಿಖೆ ನಡೆಯುತ್ತಿದೆ’ ಎಂದರು.

ಜಾರಿ ನಿರ್ದೇಶನಾಲಯವು ಪಕ್ಷಪಾತ ಮಾಡಿದೆ ಎಂಬ ಆರೋಪಗಳನ್ನು ನಿರಾಕರಿಸಿದ ರಾಜು, ‘ಪ್ರಕರಣವು ಪುರಾವೆಗಳನ್ನು ಆಧರಿಸಿದೆ ಮತ್ತು ಅಪರಾಧಿಗಳನ್ನು ಬಂಧಿಸಿ, ಜೈಲಿನಲ್ಲಿರಿಸಬೇಕು’ ಎಂದು ಪ್ರತಿಪಾದಿಸಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕೇಜ್ರಿವಾಲ್‌ಗೆ ರಕ್ಷಣೆ ನೀಡಲು ಹೈಕೋರ್ಟ್ ನಿರಾಕರಿಸಿದ ಬಳಿಕ, ಇ.ಡಿ ಮಾರ್ಚ್ 21ರಂದು ಅವರನ್ನು ಬಂಧಿಸಿತ್ತು. ಇ.ಡಿ ಕಸ್ಟಡಿ ಅವಧಿ ಮುಗಿದ ಬಳಿಕ, ವಿಚಾರಣಾ ನ್ಯಾಯಾಲಯವು ಅವರಿಗೆ ಏಪ್ರಿಲ್ 1ರಂದು ನ್ಯಾಯಾಂಗ ಬಂಧನ ವಿಧಿಸಿತು.

ಇದಕ್ಕೂ ಮುನ್ನ ಕೇಜ್ರಿವಾಲ್‌ಗೆ ಮಧ್ಯಂತರ ಪರಿಹಾರ ನೀಡಲು ಮಾರ್ಚ್ 27ರಂದು ನಿರಾಕರಿಸಿದ್ದ ದೆಹಲಿ ಹೈಕೋರ್ಟ್, ಈ ಕುರಿತ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಇ.ಡಿಗೆ ಸೂಚಿಸಿತ್ತು.

ಆತಿಶಿಗೆ ಬಿಜೆಪಿ ನೋಟಿಸ್

ಒಂದನೇ ಪುಟದಿಂದ...

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೆಹಲಿ ಬಿಜೆಪಿ ಘಟಕದ ಮುಖ್ಯಸ್ಥ ವೀರೇಂದ್ರ ಸಚ್‌ದೇವ, ‘ತಮ್ಮನ್ನು ಯಾರು, ಯಾವಾಗ, ಹೇಗೆ ಸಂಪರ್ಕಿಸಿದರು ಎನ್ನುವುದನ್ನು ಆತಿಶಿ ತಿಳಿಸಿಲ್ಲ. ದೆಹಲಿಯಲ್ಲಿ ಎಎಪಿ ಸಂಕಷ್ಟದಲ್ಲಿದೆ. ಈ ಹತಾಶೆಯಲ್ಲಿ ಆ ಪಕ್ಷದವರು ಆಧಾರಗಳಿಲ್ಲದೆ ಆರೋಪ ಮಾಡುತ್ತಿದ್ದಾರೆ. ನಾವು ಆತಿಶಿ ಅವರನ್ನು ಸುಮ್ಮನೆ ಬಿಡಲು ಸಿದ್ಧವಿಲ್ಲ’ ಎಂದು ಹೇಳಿದರು.

ತನಿಖಾ ತಂಡಕ್ಕೆ ಆತಿಶಿ ತಮ್ಮ ಫೋನ್ ನೀಡಲಿ. ಆಗ ಅವರಿಗೆ ಯಾರು ಕರೆ ಮಾಡಿದ್ದರು ಎನ್ನುವುದು ತಿಳಿಯುತ್ತದೆ ಎಂದರು.

‘ಆತಿಶಿ ಅವರಿಗೆ ಮಾನನಷ್ಟ ಹೇಳಿಕೆಗೆ ಪ್ರತಿಕ್ರಿಯೆ ಕೋರಿ ನೋಟಿಸ್ ನೀಡಿದ್ದೀವಿ. ಇದು ಮಾನನಷ್ಟ ಮಾಡುವಂತಹ, ಕಲ್ಪಿತವಾದ, ತಪ್ಪು ಹೇಳಿಕೆ. ಅವರು ಹೇಳಿಕೆಯನ್ನು ವಾಪಸ್ ಪಡೆಯಬೇಕು. ಇಲ್ಲವಾದರೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ದೆಹಲಿ ಬಿಜೆಪಿ ವಕೀಲರು ತಿಳಿಸಿದರು.

ಸಂಜಯ್‌ಗೆ ಜಾಮೀನು ಹೆಚ್ಚಿದ ಎಎಪಿ ಸ್ಥೈರ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಎಎಪಿ ಪಕ್ಷದ ಪ್ರಮುಖ ನಾಯಕರು ಜೈಲು ಸೇರುತ್ತಿರುವ ಸಂಕಷ್ಟದ ಸಂದರ್ಭದಲ್ಲಿಯೇ, ಅದರ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರಿಗೆ ಜಾಮೀನು ದೊರೆತಿರುವುದು ಎಎಪಿ ನಾಯಕರು, ಕಾರ್ಯಕರ್ತರಲ್ಲಿ ನೈತಿಕ ಸ್ಥೈರ್ಯ ಹೆಚ್ಚಿಸುವಂತೆ ಮಾಡಿದೆ.

ಸಿಂಗ್ ಅವರ ಜೈಲುವಾಸ ವಿಸ್ತರಿಸುವುದಕ್ಕೆ ಜಾರಿ ನಿರ್ದೇಶನಾಲಯ ಯಾವುದೇ ಪುರಾವೆ ಒದಗಿಸಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು, ಎಎಪಿ ನಾಯಕರ ಉತ್ಸಾಹವನ್ನೂ ಹೆಚ್ಚಿಸಿದೆ.

ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ ಒಂದು ದಿನದ ಬಳಿಕ ಸಿಂಗ್ ಅವರಿಗೆ ಜಾಮೀನು ಮಂಜೂರಾಗಿದೆ. ಆದಾಗ್ಯೂ, ಈ ಪಕ್ಷದ ಹಿರಿಯ ನಾಯಕರಾದ ಮನೀಶ್ ಸಿಸೋಡಿಯಾ, ಸತ್ಯೇಂದ್ರ ಜೈನ್ ಸಹ ಇನ್ನೂ ಜೈಲಿನಲ್ಲಿ ಇದ್ದಾರೆ.

‘ಇ.ಡಿ ವಿರೋಧಿಸದ ಕಾರಣ ಸಂಜಯ್ ಅವರಿಗೆ ಜಾಮೀನು ದೊರೆತಿದೆ. ಹೀಗಾಗಿ ಇನ್ನು ಮುಂದೆ ಇ.ಡಿಯು ಮೋದಿ ಸರ್ಕಾರದ ಸೂಚನೆಯಂತೆ ಕೆಲಸ ಮಾಡುತ್ತಿದೆ ಎನ್ನುವಂತಿಲ್ಲ’ ಎಂದು ಬಿಜೆಪಿ ಹೇಳುತ್ತಿದೆ. ಆದರೆ, ಸುಪ್ರೀಂ ಕೋರ್ಟ್‌ನಿಂದ ಎದುರಾಗಬಹುದಾದ ಪ್ರತಿಕೂಲ ಹೇಳಿಕೆಗಳನ್ನು ತಪ್ಪಿಸಲು ಜಾಮೀನು ಅರ್ಜಿಗೆ ಇ.ಡಿ ವಿರೋಧಿಸಲಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ.

ಕೇಜ್ರಿವಾಲ್ ಬಂಧನದ ಬಳಿಕ ಪಕ್ಷದ ಕಾರ್ಯ ಚಟುವಟಿಕೆ, ಪ್ರತಿಭಟನೆ, ‘ಇಂಡಿಯಾ’ ಮೈತ್ರಿಕೂಟದ ಜತೆ ಸಂವಹನ ನಡೆಸುವ ಕಾರ್ಯಗಳ ಜವಾಬ್ದಾರಿ ಎರಡನೇ ಸಾಲಿನ ನಾಯಕರ ಮೇಲೆ ಬಿದ್ದಿದೆ. ಇದೀಗ ಸಂಜಯ್ ಸಿಂಗ್ ಅವರಿಗೆ ಜಾಮೀನು ದೊರೆತಿರುವುದರಿಂದ ಅವರ ಸೇವೆಯೂ ದೊರೆಯಲಿದೆ.

ಸಿಂಗ್ ಅವರ ಅನುಭವ, ಹಿರಿತನವು ಲೋಕಸಭೆ ಚುನಾವಣೆಯ ಪ್ರಚಾರದಲ್ಲೂ ಪಕ್ಷಕ್ಕೆ ನೆರವಾಗಲಿದೆ. ಅಲ್ಲದೆ ಎಎಪಿ ಮಿತ್ರ ಪಕ್ಷಗಳ ಜತೆಗೆ ಸಮನ್ವಯ ಮತ್ತು ಸಹಕಾರ ವೃದ್ಧಿಸಲೂ ಸಹಾಯವಾಗುತ್ತದೆ. ಸಿಂಗ್ ಅವರು ಈ ಹಿಂದೆ ಕೇಜ್ರಿವಾಲ್ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಂತಹ ಹಿರಿಯ ನಾಯಕರ ನಡುವೆ ಸೇತುವೆಯಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ದೆಹಲಿ, ಪಂಜಾಬ್ ಸೇರಿದಂತೆ ಇತರೆಡೆ ಪಕ್ಷದ ಕೆಲ ನಾಯಕರಲ್ಲಿನ ಅತೃಪ್ತಿಯನ್ನು ಶಮನಗೊಳಿಸಬೇಕಾದ ಪ್ರಮುಖ ಸವಾಲು ಸಿಂಗ್ ಅವರ ಮೇಲಿದೆ.

ಉತ್ತರ ಪ್ರದೇಶದ ಸುಲ್ತಾನ್‌ಪುರದ 52 ವರ್ಷದ ನಾಯಕರಾದ ಸಿಂಗ್, ಗಣಿಗಾರಿಕೆ ವಿಷಯದಲ್ಲಿ ಡಿಪ್ಲೊಮಾ ಎಂಜಿನಿಯರಿಂಗ್ ಪೂರೈಸಿದ್ದಾರೆ. ರಾಜ್ಯಸಭಾ ಸದಸ್ಯರೂ ಆಗಿರುವ ಅವರು ವಾಕ್ಚಾತುರ್ಯಕ್ಕೆ ಹೆಸರುವಾಸಿ. ವಿವಿಧ ಪಕ್ಷಗಳ ನಡುವೆ ಉತ್ತಮ ಸಂಪರ್ಕ ಹೊಂದಿರುವ ನಾಯಕ.

ಎಎಪಿ ಸಂಸದ ಸಂಜಯ್ ಸಿಂಗ್ ಅವರು ತಿಹಾರ್ ಜೈಲಿನಿಂದ ಆಚೆ ಬಂದ ಬಳಿಕ ಜನರನ್ನುದ್ದೇಶಿಸಿ ಮಾತನಾಡಿದರು –ಪಿಟಿಐ ಚಿತ್ರ

ಬಾನ್ಸುರಿ ಹೆಸರು ತೆಗೆಯಲು ನಿರ್ದೇಶನ

ನವದೆಹಲಿ (ಪಿಟಿಐ): ಎಎಪಿ ನಾಯಕ ಸಂಜಯ್ ಸಿಂಗ್ ಅವರಿಗೆ ಜಾಮೀನು ಮಂಜೂರು ಮಾಡಿದ ಆದೇಶದಲ್ಲಿ ಅಚಾತುರ್ಯದಿಂದ ಪಟ್ಟಿಗೆ ಸೇರಿರುವ ವಕೀಲರಾದ ಬಾನ್ಸುರಿ ಸ್ವರಾಜ್ ಅವರ ಹೆಸರನ್ನು ಕೈಬಿಡಲು ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿದೆ.

ಜಾರಿ ನಿರ್ದೇಶನಾಲಯದ ಪರ ವಾದ ಮಂಡಿಸಿದ ವಕೀಲ ಜೊಹೆಬ್ ಹುಸೇನ್ ಅವರು, ‘ಸ್ವರಾಜ್ ಅವರು ಈ ಪ್ರಕರಣದಲ್ಲಿ ಹಾಜರಾಗಿಲ್ಲ ಅಥವಾ ಅವರು ಈ ವಿಷಯದಲ್ಲಿ ಇ.ಡಿಯನ್ನು ಪ್ರತಿನಿಧಿಸಿಲ್ಲ’ ಎಂದು ತಿಳಿಸಿದರು.

ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಪೀಠವು, ‘ಸರಿ, ನಾವು ಆದೇಶವನ್ನು ಸರಿಪಡಿಸುತ್ತೇವೆ’ ಎಂದು ಹೇಳಿತು. ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಅವರ ಪುತ್ರಿಯೂ ಆಗಿರುವ ಬಾನ್ಸುರಿ ಸ್ವರಾಜ್, ನವದೆಹಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಜೈಲಿನಿಂದ ಬಿಡುಗಡೆ

ನವದೆಹಲಿ (ಪಿಟಿಐ): ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಅವರು ಬುಧವಾರ ಐಎಲ್‌ಬಿಎಸ್ ಆಸ್ಪತ್ರೆಯಿಂದ ಬಿಡುಗಡೆಯಾಗಿ, ಜೈಲಿಗೆ ತೆರಳಿದರು. ಜಾಮೀನು ಆದೇಶದ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಅವರು ಜೈಲಿನಿಂದ ಬಿಡುಗಡೆ ಆಗಿದ್ದಾರೆ.

ಸಂಜಯ್ ಅವರಿಗೆ ಮಂಗಳವಾರವಷ್ಟೇ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಯಕೃತ್ ಸಂಬಂಧಿ ಸಮಸ್ಯೆಗಾಗಿ ಸಿಂಗ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು 24 ಗಂಟೆಗಳ ಕಾಲ ಆಸ್ಪತ್ರೆಯಲ್ಲಿದ್ದರು. ಈ ವೇಳೆಯೇ ಅವರಿಗೆ ಜಾಮೀನು ದೊರೆತ ಸುದ್ದಿ ತಿಳಿಯಿತು ಎಂದು ಆಸ್ಪತ್ರೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ

ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

‘6 ವಾರ ವಕೀಲರ ತಂಡದ ಬದಲಾವಣೆ ಬೇಡ’

● ಆಶಿಶ್ ತ್ರಿಪಾಠಿ

ನವದೆಹಲಿ: ಸರ್ಕಾರದ ಚುಕ್ಕಾಣಿ ಹಿಡಿದ ರಾಜಕೀಯ ಪಕ್ಷ ಬದಲಾದ ಆರು ವಾರಗಳವರೆಗೆ ಸರ್ಕಾರದ ವಕೀಲರ ತಂಡವನ್ನು ಬದಲಾಯಿಸಬಾರದು ಎಂದು ಸುಪ್ರೀಂ ಕೋರ್ಟ್, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಹೇಳಿದೆ.

‘ಅಧಿಕಾರದ ಚುಕ್ಕಾಣಿಯು ಒಂದು ರಾಜಕೀಯ ಪಕ್ಷದಿಂದ ಇನ್ನೊಂದು ರಾಜಕೀಯ ಪಕ್ಷಕ್ಕೆ ವರ್ಗಾವಣೆ ಆದ ನಂತರದಲ್ಲಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಈ ಕೋರ್ಟ್‌ನಲ್ಲಿ ತಮ್ಮನ್ನು ಪ್ರತಿನಿಧಿಸುವ ವಕೀಲರ ತಂಡವನ್ನು ಬದಲಾಯಿಸಿರುವುದು ಕಳೆದ ಕೆಲವು ತಿಂಗಳಲ್ಲಿ ಗಮನಕ್ಕೆ ಬಂದಿದೆ. ಬದಲಾವಣೆಯ ಕಾರಣದಿಂದಾಗಿ ಪ್ರಕರಣಗಳ ವಿಚಾರಣೆಯನ್ನು ಕಾಲಕಾಲಕ್ಕೆ ಮುಂದೂಡಬೇಕಾಗಿದೆ’ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭುಇಯಾಂ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

ವಕೀಲರ ತಂಡವು ಬದಲಾಗಿರುವ ಕಾರಣ ಉತ್ತರಾಖಂಡ ಸರ್ಕಾರದ ವಕೀಲರಿಗೆ ಜಾಮೀನು ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ, ಸೂಚನೆ ಇಲ್ಲ ಎಂಬುದನ್ನು ಪೀಠಕ್ಕೆ ತಿಳಿಸಲಾಯಿತು. ಕಳೆದ ಏಳೆಂಟು ವರ್ಷಗಳಿಂದ ವಕೀಲರ ಒಂದೇ ತಂಡವು ಸರ್ಕಾರವನ್ನು ಪ್ರತಿನಿಧಿಸುತ್ತಿದ್ದ ಕಾರಣ, ಅದನ್ನು ಬದಲಾಯಿಸಲಾಗಿದೆ ಎಂದು ಉತ್ತರಾಖಂಡ ಸರ್ಕಾರದ ಕಾನೂನು ಇಲಾಖೆಯ ಕಾರ್ಯದರ್ಶಿ ಪೀಠಕ್ಕೆ ತಿಳಿಸಿದರು.

‘ತಮ್ಮ ವಕೀಲರ ತಂಡವನ್ನು ಬದಲಾಯಿಸುವ ಅಧಿಕಾರವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದ ಸರ್ಕಾರಗಳಿಗೆ ಇದೆ ಎಂಬುದು ನಿಜ. ಆದರೆ, ಹಾಗೆ ಬದಲಾವಣೆ ಮಾಡುವಾಗ ಕೋರ್ಟ್‌ನ ಕೆಲಸಗಳಿಗೆ ತೊಂದರೆ ಆಗದಂತೆ ಅವು ನೋಡಿಕೊಳ್ಳಬೇಕು. ಹೀಗಾಗಿ, ವಕೀಲರ ತಂಡವನ್ನು ಬದಲಾಯಿಸುವಾಗ ಹಳೆಯ ತಂಡವನ್ನು ಕನಿಷ್ಠ ಆರು ವಾರಗಳವರೆಗೆ ಮುಂದುವರಿಸುವುದು ಸೂಕ್ತವಾಗುತ್ತದೆ. ಆಗ ನ್ಯಾಯಾಲಯಗಳಿಗೆ ವಿಚಾರಣೆ ಮುಂದೂಡಬೇಕಾದ ಅನಿವಾರ್ಯ ಎದುರಾಗುವುದಿಲ್ಲ’ ಎಂದು ಪೀಠ ಹೇಳಿದೆ.

ಈ ಸೂಚನೆಯ ಪ್ರತಿಯನ್ನು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸುವ ವಕೀಲರಿಗೆ ರವಾನಿಸುವಂತೆ ರಿಜಿಸ್ಟ್ರಿಗೆ ತಿಳಿಸಿದೆ.

ನೆರೆ ಪರಿಹಾರ: ತಮಿಳುನಾಡಿನಿಂದ ‘ಸುಪ್ರೀಂ’ಗೆ ಅರ್ಜಿ

ನವದೆಹಲಿ (ಪಿಟಿಐ): ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ತನಗೆ ನೀಡಬೇಕಾದ ಹಣವನ್ನು ಕೇಂದ್ರ ಸರ್ಕಾರ ತಡೆಹಿಡಿದಿದೆ ಎಂದು ಆರೋಪಿಸಿರುವ ತಮಿಳುನಾಡು ಸರ್ಕಾರ, ಹಣ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರವು ಸಂವಿಧಾನದ 131ನೇ ವಿಧಿಯಡಿ ಕೇಂದ್ರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದೆ.

ಇತ್ತೀಚೆಗೆ ಎದುರಾಗಿದ್ದ ಪ್ರವಾಹ ಮತ್ತು ಮೈಚಾಂಗ್ ಚಂಡಮಾರುತದಿಂದ ಭಾರಿ ಹಾನಿಯಾಗಿದ್ದು, ₹37,000 ಕೋಟಿಗೂ ಹೆಚ್ಚು ನೆರವು ನೀಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಅದು ಮನವಿ ಮಾಡಿದೆ.

ಮಧ್ಯಂತರ ಪರಿಹಾರವಾಗಿ ₹2,000 ಕೋಟಿ ಬಿಡುಗಡೆಗೆ ಕೇಂದ್ರಕ್ಕೆ ನಿರ್ದೇಶಿಸುವಂತೆಯೂ ಅದು ಅರ್ಜಿಯಲ್ಲಿ ಕೋರಿದೆ. ಕರ್ನಾಟಕ ಸರ್ಕಾರ ಸಹ ಬರ ಪರಿಸ್ಥಿತಿ ಎದುರಿಸಲು ಕೇಂದ್ರ ಸರ್ಕಾರ ತನಗೆ ಹಣಕಾಸಿನ ನೆರವು ನೀಡುತ್ತಿಲ್ಲ ಎಂದು ಆರೋಪಿಸಿ ಸುಪ್ರೀಂ ಕೋರ್ಟ್‌ಗೆ ಇತ್ತೀಚೆಗೆ ಅರ್ಜಿ ಸಲ್ಲಿಸಿತ್ತು. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ಹಣ ಬಿಡುಗಡೆ ಮಾಡಲು ನಿರ್ದೇಶಿಸುವಂತೆ ಕೋರಿತ್ತು.

ಮಿಜೋರಾಂ: ಮಳೆಯಿಂದ 2,500 ಕಟ್ಟಡ ಹಾನಿ

ಐಜ್ವಾಲ್ (ಪಿಟಿಐ): ಕಳೆದ ಮೂರು ದಿನಗಳಲ್ಲಿ ಮಿಜೋರಾಂನಲ್ಲಿ ಅಬ್ಬರಿಸಿದ ಬಿರುಗಾಳಿ ಸಹಿತ ಮಳೆಯಿಂದಾಗಿ 2,500ಕ್ಕೂ ಅಧಿಕ ಮನೆಗಳು, ಶಾಲೆಗಳು ಮತ್ತು ಸರ್ಕಾರಿ ಕಟ್ಟಡಗಳು ಹಾನಿಗೊಂಡಿವೆ ಮತ್ತು ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

‘ಮಿಜೋರಾಂನ ಕೆಲವೆಡೆ ಭಾನುವಾರದಿಂದ ಮಂಗಳವಾರದವರೆಗೆ ಸುರಿದ ಭೀಕರ ಗಾಳಿ ಮತ್ತು ಆಲಿಕಲ್ಲು ಸಹಿತವಾದ ಮಳೆಯಿಂದ ಬಹಳ ಹಾನಿ ಸಂಭವಿಸಿದೆ. ಗಾಳಿಗೆ ಮರವೊಂದು ಉರುಳಿಬಿದ್ದ ಪರಿಣಾಮ ಮಹಿಳೆಯೊಬ್ಬರು(45) ಮೃತಪಟ್ಟಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯ ವಿಪತ್ತು ನಿರ್ವಹಣೆ ಮತ್ತು ಪುನರ್ವಸತಿ ಇಲಾಖೆ ಅಧಿಕಾರಿಗಳ ಪ್ರಕಾರ, 5 ಜಿಲ್ಲೆಗಳ 15 ಚರ್ಚ್‌ಗಳು, 5 ಜಿಲ್ಲೆಗಳ 17 ಶಾಲೆಗಳು, 2 ಜಿಲ್ಲೆಗಳಲ್ಲಿನ 11 ಪರಿಹಾರ ಶಿಬಿರಗಳು, 11 ಅಂಗನವಾಡಿ ಕೇಂದ್ರಗಳು ಮತ್ತು ಹಲವು ಸರ್ಕಾರಿ ಕಚೇರಿಗಳು ಸೇರಿದಂತೆ 2,500 ಕಟ್ಟಡಗಳಿಗೆ ಹಾನಿಯಾಗಿದೆ.

ಮಿಜೋರಾಂನ ಉತ್ತರದಲ್ಲಿರುವ ಕೊಲಸಿಬ್ ಜಿಲ್ಲೆಯಲ್ಲಿ ಹೆಚ್ಚು ಹಾನಿ ಸಂಭವಿಸಿದ್ದು, 795 ಮನೆಗಳು, 7 ಶಾಲೆಗಳು, 6 ಚರ್ಚ್‌ಗಳು, 8 ಅಂಗನವಾಡಿ ಕೇಂದ್ರಗಳು ಮತ್ತು 11 ನೌಕರರ ವಸತಿ ಕೇಂದ್ರಗಳು ಸೇರಿದಂತೆ 800ಕ್ಕೂ ಅಧಿಕ ಕಟ್ಟಡಗಳಿಗೆ ಹಾನಿಯಾಗಿದೆ ಎಂದು ತಿಳಿಸಿದ್ದಾರೆ.

ಆರ್ಥಿಕ ಸುಧಾರಣೆ ಹರಿಕಾರನ ಸಂಸದೀಯ ಪಯಣ ಅಂತ್ಯ

ಮನಮೋಹನ್ ಸಿಂಗ್

ನವದೆಹಲಿ (ಪಿಟಿಐ): ವಿನಮ್ರತೆ, ಪಾಂಡಿತ್ಯದಿಂದ ಎಲ್ಲರ ಗೌರವಕ್ಕೆ ಪಾತ್ರರಾದ ಹಾಗೂ ಮಿತಭಾಷಿಯೂ ಆದ ಡಾ.ಮನಮೋಹನ್ ಸಿಂಗ್ ಅವರು ಸುದೀರ್ಘ 33 ವರ್ಷಗಳ ಸಂಸದೀಯ ಜೀವನದಿಂದ ನಿವೃತ್ತಿ ಹೊಂದಿದ್ದಾರೆ.

91 ವರ್ಷದ ಸಿಂಗ್ ಅವರ ರಾಜ್ಯಸಭಾ ಸದಸ್ಯತ್ವ ಬುಧವಾರ ಕೊನೆಗೊಂಡಿತು. 1990ರಲ್ಲಿ ಆರ್ಥಿಕ ಸುಧಾರಣೆಗಳು, ಉದಾರೀಕರಣ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ ವ್ಯವಸ್ಥೆಗೆ ಹೊಸ ದಿಕ್ಕು ತೋರಿದ ಶ್ರೇಯ ಸಿಂಗ್ ಅವರದು.

ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಮನಮೋಹನ್ ಸಿಂಗ್ ಅವರು ಹಣಕಾಸು ಸಚಿವರಾಗಿದ್ದರು. ನಂತರ, 2004ರಿಂದ 2014ರ ವರೆಗೆ ಪ್ರಧಾನಿಯಾಗಿದ್ದರು. ಈ ಅವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರ ಕುರಿತು ಕೇಳಿಬಂದಿದ್ದ ಆರೋಪಗಳ ಕುರಿತು ಕ್ರಮ ಕೈಗೊಳ್ಳಲಿಲ್ಲ ಎಂಬ ಟೀಕೆಗಳನ್ನು ಸಿಂಗ್ ಎದುರಿಸಿದರು.

ಆರು ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ ಸಿಂಗ್ ಅವರು, ಒಮ್ಮೆಯೂ ಲೋಕಸಭೆ ಸದಸ್ಯರಾಗಿ ಆಯ್ಕೆಯಾಗಲಿಲ್ಲ. 1999ರಲ್ಲಿ ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಅವರು, ಬಿಜೆಪಿಯ ವಿಜಯ ಕುಮಾರ್ ಮಲ್ಹೋತ್ರ ವಿರುದ್ಧ ಪರಾಭವಗೊಂಡಿದ್ದರು.

ಅಸ್ಸಾಂನಿಂದ ಐದು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಅವರು, ಅಲ್ಪಾವಧಿಗೆ ರಾಜಸ್ಥಾನದಿಂದ ಆಯ್ಕೆಯಾಗಿ ಮೇಲ್ಮನೆ ಪ್ರವೇಶಿಸಿದ್ದರು. 1998ರ ಮಾರ್ಚ್ 21ರಿಂದ 2004ರ ಮೇ 21ರ ವರೆಗೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು.

ಆ್ಯಪಲ್ ಬಳಕೆದಾರರಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ಕಂಪ್ಯೂಟರ್ ತುರ್ತು ಸ್ಪಂದನ ತಂಡವು (ಸಿಇಆರ್‌ಟಿ-ಇನ್) ಆ್ಯಪಲ್ ಉತ್ಪನ್ನಗಳ ಬಳಕೆದಾರರಿಗೆ ಎಚ್ಚರಿಕೆಯ ಸಂದೇಶವನ್ನು ನೀಡಿದ್ದು, ಹ್ಯಾಕರ್‌ಗಳು ಅವುಗಳನ್ನು ದುರ್ಬಳಕೆ ಮಾಡಿಕೊಳ್ಳುವ ಅಪಾಯ ಇದೆ ಎಂದು ಹೇಳಿದೆ.

‘ಮೊಬೈಲ್‌ನ ಆ್ಯಪ್ ಹಾಗೂ ವೆಬ್ ಬ್ರೌಸರ್ ನಡುವೆ ಸಂವಹನಕ್ಕೆ ನೆರವಾಗುವ ವೆಬ್‌ಆರ್‌ಟಿಸಿಯಲ್ಲಿ ಇರುವ ತಂತ್ರಾಂಶದಲ್ಲಿನ ಲೋಪವೊಂದರ ಕಾರಣದಿಂದಾಗಿ ಈ ದುರ್ಬಳಕೆಯ ಸಾಧ್ಯತೆ ಇದೆ. ಹ್ಯಾಕರ್‌ಗಳು ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾದರೆ, ಉದ್ದೇಶಿತ ಸ್ಮಾರ್ಟ್ ಸಾಧನಗಳಲ್ಲಿ ತಮ್ಮಿಚ್ಛೆಯ ಕೋಡ್ ಕೆಲಸ ಮಾಡುವಂತೆ ಅವರು ಮಾಡಬಲ್ಲರು’ ಎಂದು ಸಿಇಆರ್‌ಡಿ–ಇನ್ ಹೇಳಿದೆ.

ಲೋಪವನ್ನು ಬಳಸಿಕೊಂಡು ಹ್ಯಾಕರ್‌ಗಳು, ಸ್ಮಾರ್ಟ್ ಸಾಧನದ ಬಳಕೆದಾರರು ನಿರ್ದಿಷ್ಟ ಲಿಂಕ್ ಮೇಲೆ ಕ್ಲಿಕ್ ಮಾಡುವಂತೆ ವಂಚಿಸಬಲ್ಲರು. ಆ ಮೂಲಕ ಅವರು ಸ್ಮಾರ್ಟ್ ಸಾಧನದ ಮೇಲೆ ದೂರದಿಂದಲೇ ನಿಯಂತ್ರಣ ಸಾಧಿಸಬಲ್ಲರು. ಐಫೋನ್ ಎಕ್ಸ್‌ಎಸ್, ಐಪ್ಯಾಡ್‌ಪ್ರೊ, ಐಪ್ಯಾಡ್ ಏರ್, ಐಪ್ಯಾಡ್ ಮತ್ತು ಐಪ್ಯಾಡ್ ಮಿನಿ ಸಾಧನಗಳು ಐಒಎಸ್ ಹಾಗೂ ಐಪ್ಯಾಡ್‌ಒಎಸ್ 17.4.1 ಕಾರ್ಯಾಚರಣೆ ಆವೃತ್ತಿ ಅಥವಾ ಅದಕ್ಕೂ ಹಿಂದಿನ ಆವೃತ್ತಿಗಳನ್ನು ಹೊಂದಿದ್ದರೆ ಅವು ಈ ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಿದೆ.

ಕೇಜ್ರಿವಾಲ್ ಫೋನ್ ‘ಅನ್‌ಲಾಕ್’ಗೆ ನಕಾರ

ಜೈಲಿನಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಐಫೋನ್‌ನ ಪಾಸ್‌ವರ್ಡ್ ಅನ್‌ಲಾಕ್ ಮಾಡಿಕೊಡಲು ಆ್ಯಪಲ್ ಕಂಪನಿಯು ನಿರಾಕರಿಸಿದೆ. ಫೋನ್‌ನ ಬಳಕೆದಾರ ಮಾತ್ರ ಪಾಸ್‌ವರ್ಡ್ ಬಳಸಿ ಅದನ್ನು ಅನ್‌ಲಾಕ್ ಮಾಡಲು ಸಾಧ್ಯ ಎಂದು ಕಂಪನಿ ತಿಳಿಸಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಇ.ಡಿ. ಅಧಿಕಾರಿಗಳು ಈ ವಿಚಾರವಾಗಿ ಆ್ಯಪಲ್ ಕಂಪನಿಗೆ ‘ಅನಧಿಕೃತ’ ಮನವಿ ಸಲ್ಲಿಸಿದ್ದರು. ತನಿಖೆಯ ಭಾಗವಾಗಿ ಅವರ ಐಫೋನ್ ಅನ್‌ಲಾಕ್ ಮಾಡಿಕೊಡುವಂತೆ ಕೋರಿದ್ದರು ಎಂದು ವರದಿಗಳು ಹೇಳಿವೆ.

ಮತ್ತೆ ಮೂವರು ನಕ್ಸಲರ ಶವ ಪತ್ತೆ

ರಾಯಪುರ (ಪಿಟಿಐ): ಛತ್ತಿಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಮತ್ತು ನಕ್ಸಲರ ನಡುವೆ ಮಂಗಳವಾರ ನಡೆದ ಗುಂಡಿನ ಚಕಮಕಿಯಲ್ಲಿ ಮತ್ತೆ ಮೂವರು ನಕ್ಸಲರು ಹತರಾಗಿದ್ದು, ಬುಧವಾರ ಮುಂಜಾನೆ ಅವರ ಮೃತ ದೇಹ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಇದರೊಂದಿಗೆ ಮಂಗಳವಾರದ ಕಾರ್ಯಾಚರಣೆಯಲ್ಲಿ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ’ ಎಂದಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆ ಭದ್ರತಾ ಪಡೆಗಳು ಮಂಗಳವಾರ ಬಂಡುಕೋರರ ವಿರುದ್ಧ ಮಹತ್ವದ ಕಾರ್ಯಾಚರಣೆ ನಡೆಸಿದ್ದವು. ಈ ವೇಳೆ ಗುಂಡಿನ ಚಕಮಕಿ ನಡೆದಿದ್ದು, ಮಹಿಳೆ ಸೇರಿದಂತೆ 10 ನಕ್ಸಲರ ಶವ ಪತ್ತೆಯಾಗಿದ್ದವು. ಶೋಧಕಾರ್ಯ ಮುಂದುವರಿಸಿದ್ದ ಪೊಲೀಸರಿಗೆ ಬುಧವಾರ ಮುಂಜಾನೆ ಮತ್ತೆ ಮೂವರು ನಕ್ಸಲರ ಶವ ಸಿಕ್ಕಿದೆ.

‘ಮೃತ ನಕ್ಸಲರ ಗುರುತು ಪತ್ತೆಯಾಗಿಲ್ಲ. ಆದರೆ, ಪ್ರಾಥಮಿಕ ಮಾಹಿತಿಗಳ ಪ್ರಕಾರ ಅವರು ‘ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿ’ ಎಂಬ ಬಂಡುಕೋರ ಸಂಘಟನೆಗೆ ಸೇರಿದವರೆಂದು ತಿಳಿದು ಬಂದಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಘರ್ಷ ಪೀಡಿತ ಮಣಿಪುರ ಬುಡಕಟ್ಟು ಸಮುದಾಯದ ಮೈತೇಯಿ, ಕುಕಿಗಳ ಅಪೇಕ್ಷೆ

‘ಶಾಂತಿ ಮೂಡಲಿ; ಬಳಿಕ ಮತ ಚಲಾವಣೆ’

● ಸುಮಿರ್ ಕರ್ಮಾಕರ್

ಇಂಫಾಲ್/ಮೋರೆ(ಮಣಿಪುರ): ಸಂಘರ್ಷದಿಂದ ನಲುಗಿ, ಚೇತರಿಸಿಕೊಳ್ಳಲು ಹೆಣಗುತ್ತಿರುವ ಮಣಿಪುರದಲ್ಲಿ ಲೋಕಸಭಾ ಚುನಾವಣೆಗೆ ಸಿದ್ಧತೆಗಳು ನಡೆದಿವೆ. ಆದರೆ, ‘ನಮ್ಮ ಹಕ್ಕು ಚಲಾವಣೆಗೂ ಮುನ್ನ ರಾಜ್ಯದಲ್ಲಿ ಶಾಂತಿ ಸ್ಥಾಪನೆಯಾಗಬೇಕು’ ಎಂಬುದು ಇಲ್ಲಿನ ಪ್ರಮುಖ ಬುಡಕಟ್ಟು ಸಮುದಾಯದವರಾದ ಮೈತೇಯಿ ಮತ್ತು ಕುಕಿಗಳ ಒಕ್ಕೊರಲ ಆಗ್ರಹವಾಗಿದೆ.

ಇಂಫಾಲ್‌ದಲ್ಲಿ ಮೈತೇಯಿ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಮೋರೆ ಪಟ್ಟಣದಲ್ಲಿ ಕುಕಿಗಳ ಸಂಖ್ಯಾಬಾಹುಳ್ಯವಿದೆ. ಕಳೆದ ವರ್ಷ ಮೇನಲ್ಲಿ ಸಂಘರ್ಷ ಶುರುವಾದ ನಂತರ, ತಮ್ಮ ವಾಸಸ್ಥಾನಗಳನ್ನು ತೊರೆದಿರುವ ಇವರು ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ.

‘ಲೋಕಸಭಾ ಚುನಾವಣೆಯಲ್ಲಿ ನಾವು ತಪ್ಪದೇ ಮತ ಚಲಾವಣೆ ಮಾಡಬೇಕು ಎನ್ನುವುದು ಎಲ್ಲ ರಾಜಕೀಯ ಪಕ್ಷಗಳು ಹಾಗೂ ಚುನಾವಣಾ ಆಯೋಗದ ಬಯಕೆಯಾಗಿದೆ. ಆದರೆ, ನಾವು ಮತ ಚಲಾವಣೆ ಮಾಡುವುದಕ್ಕೂ ಮುನ್ನ ಇಲ್ಲಿ ಶಾಂತಿ ನೆಲೆಸಬೇಕು ಎಂಬುದೇ ನಮ್ಮ ಆದ್ಯತೆಯಾಗಿದೆ’ ಎಂದು ಎರಡೂ ಸಮುದಾಯದವರು ಹೇಳುತ್ತಾರೆ.

ಇನ್ನೊಂದೆಡೆ, ರಾಜ್ಯದಲ್ಲಿ ತೆರೆಯಲಾಗಿರುವ ಪರಿಹಾರ ಶಿಬಿರಗಳ ಸಮೀಪ ಮತಗಟ್ಟೆಗಳನ್ನು ಸ್ಥಾಪಿಸುವ ಚುನಾವಣಾ ಆಯೋಗ ನಿರ್ಧಾರದ ಬಗ್ಗೆಯೂ ಈ ಸಮುದಾಯಗಳಲ್ಲಿ ಅಸಮಾಧಾನ ಇದೆ.

ಮೈತೇಯಿ ಸಮುದಾಯದವರಿಗಾಗಿ ಇಂಫಾಲ್‌ನಲ್ಲಿ ಸ್ಥಾಪಿಸಿರುವ ಪರಿಹಾರ ಶಿಬಿರದಲ್ಲಿ ಆಶ್ರಯ ಪಡೆದಿರುವ ಚಿಂಗ್‌ಥಮ್ ಐಬೋಮ್ಚ ಹಾಗೂ ಬೀರೇನ್ ಚಂದಮ್ –ಪ್ರಜಾವಾಣಿ ಚಿತ್ರ

‘ಇಲ್ಲಿ (ಪರಿಹಾರ ಶಿಬಿರಗಳ ಬಳಿ) ಸ್ಥಾಪಿಸಲಿರುವ ಮತಗಟ್ಟೆಗಳಲ್ಲಿ ನಮ್ಮ ಹಕ್ಕು ಚಲಾಯಿಸಲು ನಮಗೆ ಇಷ್ಟ ಇಲ್ಲ. ನಮ್ಮ ಮನೆಗಳಿಗೆ ಮರಳಿ, ಅಲ್ಲಿಯೇ ಮತ ಚಲಾಯಿಸಲು ಬಯಸುತ್ತೇವೆ’ ಎಂದು ಮೈತೇಯಿ ಸಮುದಾಯದ ಮಹಿಳೆ ಚಿಂಗ್‌ಥಮ್ ಐಬೋಮ್ಚ ಎಂಬುವವರು ‘ಪ್ರಜಾವಾಣಿ’ಗೆ ತಿಳಿಸಿದರು.

> **ನಾವು ನಮ್ಮ ಊರುಗಳಿಗೆ ಮರಳಿ, ಹೊಸ ಜೀವನ ಆರಂಭಿಸಬೇಕು. ಇದು ಸಾಧ್ಯವಾಗಬೇಕಾದರೆ ಶಾಂತಿ ಸ್ಥಾಪನೆಯಾಗಬೇಕು. ಇದೇ ನಮ್ಮ ಪ್ರಾರ್ಥನೆ**
> **ಕಲೇಬ್ ಬೈಟೆ,** ಕುಕಿ ಸಮುದಾಯದ ವ್ಯಕ್ತಿ

ಮೈತೇಯಿ ಸಮುದಾಯದ ಮತ್ತೊಬ್ಬ ವ್ಯಕ್ತಿ ಬೀರೇನ್ ಚಂದಮ್ ಅವರು, ‘ರಾಜಕೀಯ ಪಕ್ಷಗಳು, ಚುನಾವಣಾ ಆಯೋಗದಿಂದ ಮತದಾನದ ಬಗ್ಗೆ ಮಾತ್ರ ಮಾತುಗಳು ಕೇಳಿಬರುತ್ತವೆ. ಇಲ್ಲಿ ಯಾವಾಗ ಶಾಂತಿ ಸ್ಥಾಪನೆಯಾಗುತ್ತದೆ ಎಂಬ ಬಗ್ಗೆ ಯಾರೂ ಹೇಳುತ್ತಿಲ್ಲ’ ಎಂದು ಬೀರೇನ್ ಹೇಳುತ್ತಾರೆ.

ಚಿಂಗ್‌ಥಮ್ ಅವರು ಕುಕಿ ಜನರೇ ಹೆಚ್ಚಾಗಿರುವ ಮೋರೆ ಪಟ್ಟಣದ ನಿವಾಸಿ. ಸಂಘರ್ಷದ ವೇಳೆ ದುಷ್ಕರ್ಮಿಗಳು ಅವರ ಮನೆಗೆ ಬೆಂಕಿ ಹಚ್ಚಿದ ನಂತರ, ಆಕೆ ತನ್ನ 15 ವರ್ಷದ ಮಗನೊಂದಿಗೆ ಊರು ತೊರೆದು, ಇಂಫಾಲ್‌ನಲ್ಲಿರುವ ಶಿಬಿರದಲ್ಲಿ ಆಶ್ರಯ ಪಡೆದಿದ್ದಾರೆ.

‘ಮನೆಗೆ ಬಿದ್ದ ಬೆಂಕಿಯಲ್ಲಿ ಎಲ್ಲ ವಸ್ತುಗಳು ಸುಟ್ಟು ಭಸ್ಮವಾಗಿವೆ. ನಾನು ಏನನ್ನೂ ತಂದಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಮೋರೆ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಸ್ಥಾಪಿಸಿರುವ ಶಿಬಿರಗಳಲ್ಲಿ ಕುಕಿ–ಝೋ ಸಮುದಾಯಕ್ಕೆ ಸೇರಿದ 79 ಮಂದಿ ಆಶ್ರಯ ಪಡೆದಿದ್ದಾರೆ. ಈ ಚುನಾವಣೆಯಲ್ಲಿ ಮತ ಚಲಾಯಿಸುವ ಕುರಿತು ಇವರು ಇನ್ನೂ ನಿರ್ಧರಿಸಿಲ್ಲ.

‘ನಮ್ಮ ಸಮುದಾಯದ ಸಂಘಟನೆಗಳ ಮುಖಂಡರು ಕೈಗೊಳ್ಳುವ ನಿರ್ಧಾರವನ್ನು ಎದುರು ನೋಡುತ್ತಿದ್ದೇವೆ. ಅವರು ಸೂಚಿಸಿದರೆ ಮತ ಚಲಾವಣೆ ಮಾಡುತ್ತೇವೆ. ಇಲ್ಲದಿದ್ದರೆ ಮತದಾನದಿಂದ ದೂರ ಉಳಿಯುತ್ತೇವೆ’ ಕುಕಿ ಸಮುದಾಯದ ಕಲೇಬ್ ಬೈಟೆ ಹೇಳುತ್ತಾರೆ.

‘ದಾಖಲೆಗಳು ಇಲ್ಲ’: ಮತ ಚಲಾಯಿಸಬೇಕು ಎಂದರೂ, ಇಲ್ಲಿನ ಶಿಬಿರಗಳಲ್ಲಿ ಆಶ್ರಯ ಪಡೆದವರಿಗೆ ಮತ್ತೊಂದು ಸಮಸ್ಯೆ ಎದುರಾಗಿದೆ.

‘ಮತದಾನ ದಿನಾಂಕದ 10 ದಿನಗಳಿಗೂ ಮೊದಲು ಗುರುತಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು’ ಎಂದು ಮಣಿಪುರದ ಮುಖ್ಯ ಚುನಾವಣಾ ಅಧಿಕಾರಿ ಸೂಚನೆ ನೀಡಿದ್ದಾರೆ. ಶಿಬಿರಗಳಲ್ಲಿ ಆಶ್ರಯ ಪಡೆದಿರುವ ಮೈತೇಯಿ ಮತ್ತು ಕುಕಿ ಸಮುದಾಯದವರು, ರಾಜ್ಯದಲ್ಲಿ ಭುಗಿಲೆದ್ದ ಹಿಂಸಾಚಾರ ಸಂಬಂಧಿತ ಅವಘಡಗಳಲ್ಲಿ ತಮ್ಮ ಎಲ್ಲ ದಾಖಲೆ ಪತ್ರಗಳನ್ನು ಕಳೆದುಕೊಂಡಿರುವುದು ಸಮಸ್ಯೆಗೆ ಕಾರಣ.

ವಿಶಾಖಪಟ್ಟಣದಲ್ಲಿ ರನ್ ಹೊಳೆ ಹರಿಸಿದ ಶ್ರೇಯಸ್ ಬಳಗ • ಸುಸ್ತಾದ ಡೆಲ್ಲಿ ಕ್ಯಾಪಿಟಲ್ಸ್

ಕೋಲ್ಕತ್ತ ತಂಡಕ್ಕೆ ಹ್ಯಾಟ್ರಿಕ್ ಜಯ

ವಿಶಾಖಪಟ್ಟಣ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿಯೇ ಎರಡನೇ ಸರ್ವಾಧಿಕ ಮೊತ್ತವನ್ನು ದಾಖಲಿಸಿದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ನಂತರ ಬೌಲಿಂಗ್‌ನಲ್ಲೂ ಉತ್ತಮ ಪ್ರದರ್ಶನ ನೀಡಿ ಬುಧವಾರ 106 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು. ಈ ಮೂಲಕ 17ನೇ ಆವೃತ್ತಿಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿತು.

ಕೋಲ್ಕತ್ತ ತಂಡದ ಆರಂಭ ಆಟಗಾರ ಸುನಿಲ್ ನಾರಾಯಣ್ (85, 39ಎ) ಅವರು ಸ್ಫೋಟಕ ಇನಿಂಗ್ಸ್ ಆಡಿದ ಮೇಲೆ, 18ರ ಹರೆಯದ ರಘುವಂಶಿ ಮಿಂಚಿನ ಅರ್ಧ ಶತಕ ಹೊಡೆದರು. ಕೊನೆಯಲ್ಲಿ ಆಂಡ್ರೆ ರಸೆಲ್ ಮತ್ತು ರಿಂಕು ಸಿಂಗ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಶ್ರೇಯಸ್ ಅಯ್ಯರ್ ಬಳಗ 7 ವಿಕೆಟ್‌ಗೆ 272 ರನ್‌ಗಳ ಭಾರಿ ಮೊತ್ತ ಕಲೆಹಾಕಿತು.

ಈ ಕಠಿಣ ಸವಾಲನ್ನು ಬೆನ್ನಟ್ಟಿದ ಡೆಲ್ಲಿ ಕ್ಯಾಪಿಟಲ್ಸ್‌ಗೆ ಕೋಲ್ಕತ್ತ ಬೌಲರ್‌ಗಳು ಆರಂಭದಲ್ಲೇ ಆಘಾತ ನೀಡಿದರು. 33 ರನ್ ಗಳಿಸುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಡೇವಿಡ್ ವಾರ್ನರ್ (18), ಪ್ರಥ್ವಿ ಶಾ (10), ಮಿಚೆಲ್ ಮಾರ್ಷ್ (0) ಮತ್ತು ಅಭಿಷೇಕ್ ಪೊರೆಲ್ (0) ಬೇಗನೇ ನಿರ್ಗಮಿಸಿದರು.

ನಂತರ ನಾಯಕ ರಿಷಭ್ ಪಂತ್ (55; 25ಎ, 4x4, 6x5) ಮತ್ತು ಟ್ರಿಸ್ಟನ್ ಸ್ಟಬ್ಸ್ (54; 32ಎ, 4x4, 6x4) ಐದನೇ ವಿಕೆಟ್‌ಗೆ 93 ರನ್ ಸೇರಿಸಿ ಕೊಂಚ ಹೋರಾಟ ತೋರಿದರು. ಆದರೆ, ತಂಡವು 17.2 ಓವರ್‌ಗಳಲ್ಲಿ 166 ರನ್‌ಗೆ ಕುಸಿಯಿತು. ಕೋಲ್ಕತ್ತ ತಂಡದ ವೈಭವ್ ಅರೋರಾ ಮತ್ತು ವರುಣ್ ಚಕ್ರವರ್ತಿ ತಲಾ 3 ವಿಕೆಟ್ ಪಡೆದು ಮಿಂಚಿದರು. ಎರಡು ವಿಕೆಟ್‌ಗಳು ಮಿಚೆಲ್ ಸ್ಟಾರ್ಕ್ ಪಾಲಾದವು.

ಇದಕ್ಕೂ ಮೊದಲು ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ಕೋಲ್ಕತ್ತಕ್ಕೆ ಫಿಲ್ ಸಾಲ್ಟ್ ಮತ್ತು ಸುನಿಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 27 ಎಸೆತಗಳಲ್ಲಿ 60 ರನ್ ಸೇರಿಸಿ ಮಿಂಚಿನ ಆರಂಭ ಒದಗಿಸಿದರು.

ಸುನಿಲ್ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಡೆಲ್ಲಿ ಬೌಲರ್‌ಗಳನ್ನು ಹಿಗ್ಗಾಮುಗ್ಗ ದಂಡಿಸಿ ಬೌಂಡರಿ, ಸಿಕ್ಸರ್‌ಗಳನ್ನು ಸಿಡಿಸಿದರು. ಅವರ ಇನಿಂಗ್ಸ್‌ನಲ್ಲಿ ಏಳು ಸಿಕ್ಸರ್, ಏಳು ಬೌಂಡರಿಗಳಿದ್ದವು. 53 ರನ್ ಗಳಿಸಿದ್ದಾಗ ನೀಡಿದ್ದ ಜೀವದಾನಕ್ಕೆ ಡೆಲ್ಲಿ ಕೈಸುಟ್ಟುಕೊಳ್ಳಬೇಕಾಯಿತು.

ರಘುವಂಶಿ ಅವರು ಆರ್‌ಸಿಬಿ ವಿರುದ್ಧ ಪಂದ್ಯದಲ್ಲಿ ತಂಡದಲ್ಲಿದ್ದರೂ, ಆಡುವ ಅವಕಾಶ ಪಡೆದಿರಲಿಲ್ಲ. ಇಲ್ಲಿ ತಮಗೆ ದೊರೆತ ಅವಕಾಶ ಸಮರ್ಥವಾಗಿ ಬಳಸಿಕೊಂಡು 27 ಎಸೆತಗಳಲ್ಲಿ 54 ರನ್ ಚಚ್ಚಿದರು. ಸುನಿಲ್ ಮತ್ತು ರಘುವಂಶಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 48 ಎಸೆತಗಳಲ್ಲಿ 104 ರನ್‌ಗಳು ಹರಿದುಬಂದವು.

ಆಂಡ್ರೆ ರಸೆಲ್ (41, 19 ಎಸೆತ) ಮತ್ತು 'ಫಿನಿಷರ್' ರಿಂಕು ಸಿಂಗ್ (26, 8 ಎಸೆತ) ಅವರು ಕೊನೆಯಲ್ಲಿ ಮೊತ್ತವನ್ನು ಹಿಗ್ಗಿಸಿ ದಾಖಲೆಯತ್ತ ಒಯ್ದರು. ನಾಕಿಯಾ ಅವರು ಮಾಡಿದ 19ನೇ ಓವರ್‌ನಲ್ಲಿ ರಿಂಕು 24 ರನ್ ಚಚ್ಚಿದರು.

ಕೋಲ್ಕತ್ತ ಬ್ಯಾಟರ್‌ಗಳು ಒಟ್ಟು 18 ಸಿಕ್ಸರ್‌ಗಳು ಮತ್ತು 22 ಬೌಂಡರಿಗಳನ್ನು ಬಾರಿಸಿ, ಡೆಲ್ಲಿ ಬೌಲರ್‌ಗಳಿಗೆ ದುಃಸ್ವಪ್ನವಾದರು. ಖಲೀಲ್ ಅಹ್ಮದ್ ಮೊದಲ ಓವರ್‌ನಲ್ಲೇ ಡೀಪ್ ಪಾಯಿಂಟ್‌ಗೆ ಬೌಂಡರಿ ಬಾರಿಸುವ ಮೂಲಕ ಸುನಿಲ್ ನಾರಾಯಣ್ ರನ್ ಹೊಳೆಗೆ ಚಾಲನೆ ನೀಡಿದ್ದರು. ಇಶಾಂತ್ ಅವರ ಎರಡನೇ ಓವರ್‌ನಲ್ಲಿ ಮೂರು ಸಿಕ್ಸರ್ ಸಹಿತ 26 ರನ್ ಹೊಡೆದು ಅಪಾಯದ ಸಂಕೇತ ರವಾನಿಸಿದರು. ಪವರ್ ಪ್ಲೇ ಅವಧಿಯಲ್ಲೇ 88 ರನ್‌ಗಳು ಹರಿದುಬಂದವು. ಡೆಲ್ಲಿಯ ಬೌಲಿಂಗ್ ಕೂಡ ಪರಿಣಾಮಕಾರಿಯಾಗಿರಲಿಲ್ಲ. 15 ವೈಡ್‌ಗಳಿದ್ದವು. ಸಾಕಷ್ಟು ಫುಲ್ಟಾಸ್‌ಗಳನ್ನು ಮಾಡಿ ಎದುರಾಳಿ ಬ್ಯಾಟರ್‌ಗಳಿಗೆ ಹೊಡೆಯಲು ಅವಕಾಶ ಕೊಟ್ಟರು.

ಅನುಭವಿ ಇಶಾಂತ್ ಕೊನೆಯ ಓವರ್ ಬಿಗುವಾಗಿ ಮಾಡಿ 8 ರನ್ ನೀಡಿ 2 ವಿಕೆಟ್ ಕೂಡ ಪಡೆದರು. ಅದರಲ್ಲೂ ರಸೆಲ್ ಅವರನ್ನು ಅಮೋಘ ಯಾರ್ಕರ್ ಮೂಲಕ ಬೌಲ್ಡ್ ಮಾಡಿದ್ದು ಗಮನ ಸೆಳೆಯಿತು. ಹೀಗಾಗಿ ಕಳೆದ ತಿಂಗಳ ಕೊನೆಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ (ಮುಂಬೈ ವಿರುದ್ಧ) ದಾಖಲೆ ಮೊತ್ತ (277) ಅಬಾಧಿತವಾಗಿ ಉಳಿಯಿತು.

ಈ ಗೆಲುವಿನೊಂದಿಗೆ ಕೋಲ್ಕತ್ತ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿದರೆ, ಡೆಲ್ಲಿ ತಂಡವು 9ನೇ ಸ್ಥಾನಕ್ಕೆ ಕುಸಿಯಿತು.



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸುನಿಲ್ ನಾರಾಯಣ್ –ಪಿಟಿಐ ಚಿತ್ರ

ಐಪಿಎಲ್‌ನಲ್ಲಿ ತಂಡವೊಂದರ ಗರಿಷ್ಠ ರನ್

ತಂಡ	ರನ್	ಎದುರಾಳಿ	ವರ್ಷ
ಸನ್‌ರೈಸರ್ಸ್ ಹೈದರಾಬಾದ್	3ಕ್ಕೆ 277	ಮುಂಬೈ ಇಂಡಿಯನ್ಸ್	2024
ಕೋಲ್ಕತ್ತ ನೈಟ್ ರೈಡರ್ಸ್	7ಕ್ಕೆ 272	ಡೆಲ್ಲಿ ಕ್ಯಾಪಿಟಲ್ಸ್	2024
ರಾಯಲ್ ಚಾಲೆಂಜರ್ಸ್ ಬೆಂಗಳೂರು	5ಕ್ಕೆ 263	ಪುಣೆ ವಾರಿಯರ್ಸ್ ಇಂಡಿಯಾ	2013
ಲಖನೌ ಸೂಪರ್ ಜೈಂಟ್ಸ್	5ಕ್ಕೆ 256	ಪಂಜಾಬ್ ಕಿಂಗ್ಸ್	2023
ರಾಯಲ್ ಚಾಲೆಂಜರ್ಸ್ ಬೆಂಗಳೂರು	3ಕ್ಕೆ 248	ಗುಜರಾತ್ ಲಯನ್ಸ್	2016

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್: 7ಕ್ಕೆ 272 (20 ಓವರುಗಳಲ್ಲಿ)
ಸಾಲ್ಟ್ ಸಿ ಸ್ಟಬ್ಸ್ ಬಿ ನಾಕಿಯಾ 18 (12ಎ, 4x4)
ನಾರಾಯಣ್ ಸಿ ಪಂತ್ ಬಿ ಮಾರ್ಷ್ 85 (39, 4x7, 6x7)
ರಘುವಂಶಿ ಸಿ ಶರ್ಮಾ ಬಿ ನಾಕಿಯಾ 54 (27ಎ, 4x5, 6x3)
ರಸೆಲ್ ಬಿ ಇಶಾಂತ್ 41 (19ಎ, 4x4, 6x3)
ಅಯ್ಯರ್ ಸಿ ಸ್ಟಬ್ಸ್ ಬಿ ಖಲೀಲ್ 18 (11, 6x2)
ರಿಂಕು ಸಿಂಗ್ ಸಿ ವಾರ್ನರ್ ಬಿ ನಾಕಿಯಾ 26 (8ಎ, 4x1, 6x3)
ವೆಂಕಟೇಶ್ ಔಟಾಗದ 5 (2ಎ, 4x1)
ರಮಣದೀಪ್ ಸಿ ಪೃಥ್ವಿ ಬಿ ಇಶಾಂತ್ 2 (2ಎ)
ಮಿಚೆಲ್ ಸ್ಟಾರ್ಕ್ ಔಟಾಗದೇ 1 (1ಎ)
ಇತರೆ: 22 (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 15)
ವಿಕೆಟ್ ಪತನ: 1-60 (ಫಿಲ್ ಸಾಲ್ಟ್, 4.3), 2-164 (ಸುನಿಲ್ ನಾರಾಯಣ್, 12.3), 3-176 (ಅಂಗ್‌ಕ್ರಿಶ್ ರಘುವಂಶಿ, 13.2), 4-232 (ಶ್ರೇಯಸ್ ಅಯ್ಯರ್, 17.2), 5-264 (ರಿಂಕು ಸಿಂಗ್, 18.6), 6-264 (ರಸೆಲ್, 19.1), 7-266 (ರಮಣದೀಪ್, 19.3)
ಬೌಲಿಂಗ್: ಖಲೀಲ್ ಅಹ್ಮದ್ 4-0-43-1; ಇಶಾಂತ್ ಶರ್ಮಾ 3-0-43-2; ಆ್ಯನ್ರಿಚ್ ನಾಕಿಯಾ 4-0-59-3; ರಾಸಿಕ್ ಸಲಾಂ 3-0-47-0; ಸುಮಿತ್ ಕುಮಾರ್ 2-0-19-0; ಅಕ್ಷರ್ ಪಟೇಲ್ 1-0-18-0, ಮಿಚೆಲ್ ಮಾರ್ಷ್ 3-0-37-1.

ಡೆಲ್ಲಿ ಕ್ಯಾಪಿಟಲ್ಸ್ 166 (17.2 ಓವರ್‌ಗಳಲ್ಲಿ)
ವಾರ್ನರ್ ಬಿ ಸ್ಟಾರ್ಕ್ 18 (13ಎ, 4x2, 6x1)
ಪೃಥ್ವಿ ಸಿ ವರುಣ್ ಬಿ ಅರೋರಾ 10 (7ಎ, 4x2)
ಮಿಚೆಲ್ ಸಿ ರಮಣ್‌ದೀಪ್ ಬಿ ಸ್ಟಾರ್ಕ್ 0 (2ಎ)
ಅಭಿಷೇಕ್ ಸಿ ನಾರಾಯಣ್ ಬಿ ಅರೋರಾ 0 (5ಎ)
ರಿಷಭ್ ಸಿ ಶ್ರೇಯಸ್ ಬಿ ವರುಣ್ 55 (25ಎ, 4x4, 6x5)
ಟ್ರಿಸ್ಟನ್ ಸಿ ಸ್ಟಾರ್ಕ್ ಬಿ ವರುಣ್ 54 (32ಎ, 4x4, 6x4)
ಅಕ್ಷರ್ ಸಿ ಸಬ್ (ಪಾಂಡೆ) ಬಿ ವರುಣ್ 0 (1ಎ)
ಸುಮಿತ್ ಸಿ ಸಬ್ (ಎಂ.ಕೆ. ಪಾಂಡೆ) ನಿ ನಾರಾಯಣ್ 7 (6ಎ, 6x1)
ರಾಸಿಕ್ ಸಿ ಸಾಲ್ಟ್ ಬಿ ಅರೋರಾ 1 (5ಎ)
ಆ್ಯನ್ರಿಚ್ ಸಿ ಶ್ರೇಯಸ್ ಬಿ ರಸೆಲ್ 4 (6ಎ)
ಇಶಾಂತ್ ಶರ್ಮಾ ಔಟಾಗದೆ 1 (3ಎ)
ಇತರೆ: 16 (ಬೈ 4, ಲೆಗ್‌ಬೈ 6, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-21 (ಪೃಥ್ವಿ ಶಾ; 1.5), 2-26 (ಮಿಚೆಲ್ ಮಾರ್ಷ್; 2.5), 3-27 (ಅಭಿಷೇಕ್ ಪೊರೆಲ್; 3.6), 4-33 (ಡೇವಿಡ್ ವಾರ್ನರ್; 4.3), 5-126 (ರಿಷಭ್ ಪಂತ್; 12.2), 6-126 (ಅಕ್ಷರ್ ಪಟೇಲ್; 12.3), 7-159 (ಟ್ರಿಸ್ಟನ್ ಸ್ಟಬ್ಸ್; 14.5), 8-159 (ಸುಮಿತ್ ಕುಮಾರ್, 15.1), 9-161 (ರಾಸಿಕ್ ಸಲಾಂ, 16.1), 10-166 (ಆ್ಯನ್ರಿಚ್ ನಾಕಿಯಾ, 17.2)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 3-0-25-2, ವೈಭವ್ ಅರೋರಾ 4-0-27-3, ಆಂಡ್ರೆ ರಸೆಲ್ 1.2-0-14-1, ಸುನಿಲ್ 4-0-29-1, ವರುಣ್ ಚಕ್ರವರ್ತಿ 4-0-33-3, ವೆಂಕಟೇಶ್ ಅಯ್ಯರ್ 1-0-28-0
ಪಂದ್ಯದ ಆಟಗಾರ: ಸುನಿಲ್ ನಾರಾಯಣ್

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 106 ರನ್‌ಗಳ ಜಯ

ಕಿಂಗ್ಸ್‌ಗೆ ಟೈಟನ್ಸ್ ಸವಾಲು

ಆತ್ಮವಿಶ್ವಾಸದಲ್ಲಿ ಗಿಲ್ ಬಳಗ; ಪಂಜಾಬ್‌ಗೆ 'ಫಿನಿಷರ್' ಕೊರತೆ

ಅಹಮದಾಬಾದ್ (ಪಿಟಿಐ): ಕಳೆದ ಪಂದ್ಯದಲ್ಲಿ ಮಯಂಕ್ ಯಾದವ್ ಅವರ ವೇಗದ ದಾಳಿಗೆ ಕಂಗೆಟ್ಟಿದ್ದ ಪಂಜಾಬ್ ಕಿಂಗ್ಸ್, ಮೊಟೆರಾದಲ್ಲಿ ಗುರುವಾರ ನಡೆಯುವ ಐಪಿಎಲ್ ಮುಖಾಮುಖಿಯಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ.

ಒಂದೆಡೆ, ತವರಿನಿಂದ ಹೊರಗೆ ಆಡಿದ ಎರಡೂ ಪಂದ್ಯಗಳಲ್ಲಿ ಸೋತಿರುವ ಶಿಖರ್ ಧವನ್ ಪಡೆ, ಚೈತನ್ಯ ನೀಡುವ ಗೆಲುವಿಗೆ ಯತ್ನಿಸಲಿದೆ. ಇನ್ನೊಂದೆಡೆ, ಸನ್‌ರೈಸರ್ಸ್ ಹೈದರಾಬಾದ್ ತಂಡದ ಮೇಲೆ ಏಳು ವಿಕೆಟ್‌ಗಳ ಸುಲಭ ಜಯ ಪಡೆದಿರುವ ಗುಜರಾತ್ ಟೈಟನ್ಸ್ ತವರಿಗೆ ಈ ಪಂದ್ಯವಾಡಲು ಆತ್ಮವಿಶ್ವಾಸದಿಂದ ಸಜ್ಜಾಗಿದೆ.

ಪಂಜಾಬ್ ಕಿಂಗ್ಸ್, ಲಖನೌದಲ್ಲಿ ನಡೆದ ಪಂದ್ಯದಲ್ಲಿ ಒಂದು ಹಂತದಲ್ಲಿ ಗೆಲುವಿನತ್ತ ಮುನ್ನಡೆದಿದ್ದರೂ, ಚೊಚ್ಚಲ ಪಂದ್ಯ ಆಡಿದ ಮಯಂಕ್ ಅವರ ಉರಿವೇಗದ ದಾಳಿಯಿಂದಾಗಿ ಹಿಡಿತ ಕಳೆದುಕೊಂಡಿತು. ಪದೇ ಪದೇ 150 ಕಿ.ಮೀ. ವೇಗದ ಎಸೆತಗಳನ್ನು ಮಯಂಕ್ ಪ್ರಯೋಗಿಸಿದ್ದರು.

ಆದರೆ ಟೈಟನ್ಸ್ ಎದುರು ಪಂಜಾಬ್‌ಗೆ ಭಿನ್ನ ರೀತಿಯ ದಾಳಿ ಎದುರಾಗಲಿದೆ. ಅನುಭವಿ ಮೋಹಿತ್ ಶರ್ಮಾ ಅವರು ವೈವಿಧ್ಯಮಯ ದಾಳಿಯಿಂದಾಗಿ ಯಶಸ್ಸು ಪಡೆಯುತ್ತಿದ್ದಾರೆ. ಸ್ಲೋ ಬೌನ್ಸರ್, ಯಾರ್ಕರ್, ಬ್ಯಾಟರ್‌ಗಳನ್ನು ವಂಚಿಸುವ 'ನಕಲ್ ಬಾಲ್' ಪ್ರಯೋಗಿಸುತ್ತಿದ್ದಾರೆ. ಅವರ ಜೊತೆಗೆ ರಶೀದ್ ಖಾನ್ ಮತ್ತು ನೂರ್ ಅಹ್ಮದ್ ಅವರ ಸ್ಪಿನ್ ಅಸ್ತ್ರವೂ ಪರಿಣಾಮಕಾರಿ ಎನಿಸಿದೆ. ಅಫ್ಗಾನಿಸ್ತಾನದ ಇನ್ನೊಬ್ಬ ಆಲ್‌ರೌಂಡರ್ ಅಜ್ಮತ್‌ಉಲ್ಲಾ ಒಮರ್‌ಝೈ ಕೂಡ ಉಪಯುಕ್ತ ಬೌಲರ್.

ಮೊಣಕಾಲಿನ ಸ್ನಾಯು ನೋವಿಗೆ ಒಳಗಾಗಿರುವ ಪಂಜಾಬ್ ಕಿಂಗ್ಸ್‌ನ ಬ್ಯಾಟರ್ ಲಿಯಾಮ್ ಲಿವಿಂಗ್‌ಸ್ಟೋನ್ ಈ ಪಂದ್ಯಕ್ಕೆ ಲಭ್ಯರಿದ್ದಾರೆಯೇ ಎನ್ನುವುದು ಖಚಿತವಾಗಿಲ್ಲ. ಅವರು ಅಲಭ್ಯರಾದಲ್ಲಿ 'ಫಿನಿಷರ್' ಕೊರತೆ ಕಾಡಲಿದ

ಪಂಜಾಬ್‌ಗೆ 'ಡೆತ್ ಬೌಲಿಂಗ್' ಸಮಸ್ಯೆಯೂ ಕಳವಳಕ್ಕೆ ಕಾರಣವಾಗಿದೆ. ಹರ್ಷಲ್ ಪಟೇಲ್ ಪ್ರತಿ ಓವರ್‌ಗೆ 11.41 ರನ್ ತೆತ್ತು ದುಬಾರಿಯಾಗುತ್ತಿದ್ದಾರೆ. ರಾಹುಲ್ ಚಾಹರ್ ಅವರೂ ಪರಿಣಾಮಕಾರಿ ಆಗಿಲ್ಲ. ಭಾರತ ತಂಡದ ಬೌಲರ್ ಅರ್ಷದೀಪ್ ಸಿಂಗ್ ಮೊದಲಿನ ಲಯ ಕಂಡುಕೊಂಡಿಲ್ಲ. ಇದೂ ಕಿಂಗ್ಸ್ ಚಿಂತೆಗೆ ಕಾರಣವಾಗಿದೆ.

ಟೈಟನ್ಸ್ ಪಂದ್ಯದ ಬ್ಯಾಟರ್‌ಗಳು ಒಟ್ಟಾಗಿ ಅಬ್ಬರಿಸಿಲ್ಲ. ಆದರೆ ಬೌಲರ್‌ಗಳು ಪಂದ್ಯ ಗೆಲ್ಲಿಸಿಕೊಡುತ್ತಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನೆಮಾ ಆ್ಯಪ್

ಪಂಜಾಬ್ ಕಿಂಗ್ಸ್ ತಂಡದ ನಾಯಕ ಶಿಖರ್ ಧವನ್

ಪಂಜಾಬ್ ಕಿಂಗ್ಸ್ ನಾಯಕ ಶುಭಮನ್ ಗಿಲ್ ಪಿಟಿಐ ಚಿತ್ರ

ಮುಖಾಮುಖಿ

ಆಡಿರುವ ಪಂದ್ಯಗಳು 3

ಗುಜರಾತ್‌ಗೆ ಗೆಲುವು	ಪಂಜಾಬ್‌ಗೆ ಗೆಲುವು
2	1

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	3	3	0	6	2.518
ರಾಜಸ್ಥಾನ ರಾಯಲ್ಸ್	3	3	0	6	1.249
ಚೆನ್ನೈ ಸೂಪರ್ ಕಿಂಗ್ಸ್	3	2	1	4	0.976
ಲಖನೌ ಸೂಪರ್ ಜೈಂಟ್ಸ್	3	2	1	4	0.483
ಗುಜರಾತ್ ಟೈಟನ್ಸ್	3	2	1	4	-0.738
ಸನ್‌ರೈಸರ್ಸ್ ಹೈದರಾಬಾದ್	3	1	2	2	0.204
ಪಂಜಾಬ್ ಕಿಂಗ್ಸ್	3	1	2	2	-0.337
ರಾಯಲ್ ಚಾಲೆಂಜರ್ಸ್ ಬೆಂಗಳೂರು	4	1	3	2	-0.876
ಡೆಲ್ಲಿ ಕ್ಯಾಪಿಟಲ್ಸ್	4	1	3	2	-1.347
ಮುಂಬೈ ಇಂಡಿಯನ್ಸ್	3	0	3	0	-1.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (203 ರನ್)
ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (7 ವಿಕೆಟ್)

ಗಾಯ: ಬೌಲರ್ ಮಾವಿ ಹೊರಕ್ಕೆ

ಲಖನೌ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ತಂಡದ ವೇಗದ ಬೌಲರ್ ಶಿವಂ ಮಾವಿ ಅವರು ಪಕ್ಕೆಲುಬಿನ ಗಾಯದಿಂದ ಚೇತರಿಸಿಕೊಳ್ಳುವಲ್ಲಿ ವಿಫಲವಾಗಿರುವ ಕಾರಣ ಈ ಋತುವಿನ ಐಪಿಎಲ್ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

25 ವರ್ಷದ ಶಿವಂ, ಕಳೆದ ವರ್ಷದ ಆಗಸ್ಟ್‌ನಲ್ಲಿ ಕೊನೆಯ ಬಾರಿ ಸ್ಪರ್ಧಾತ್ಮಕ ಕ್ರಿಕೆಟ್ ಆಡಿದ್ದರು. ರಣಜಿಯಲ್ಲಿ ಉತ್ತರ ಪ್ರದೇಶ ತಂಡಕ್ಕೆ ಆಡಲಾಗಿರಲಿಲ್ಲ. ಕಳೆದ ಆಗಸ್ಟ್‌ನಲ್ಲಿ ಅವರಿಗೆ ಪಕ್ಕೆಲುಬಿನ ಗಾಯವಾಗಿತ್ತು. ಆದರೆ ಕಳೆದ ವರ್ಷ ಹರಾಜಿನ ಪ್ರಕ್ರಿಯೆ ನಂತರ ಪೂರ್ವ ಸಿದ್ಧತಾ ತರಬೇತಿ ವೇಳೆ ಕಾಣಿಸಿಕೊಂಡಿದ್ದರು.

ಭಾರತದ ಪರ ಶಿವಂ ಆರು ಟಿ20 ಪಂದ್ಯಗಳನ್ನಾಡಿದ್ದಾರೆ. ಈ ಹಿಂದೆ ಕೋಲ್ಕತ್ತ ನೈಟ್ ರೈಡರ್ಸ್‌ಗೆ ಆಡಿದ್ದ ಅವರು 2023ರಲ್ಲಿ ಗುಜರಾತ್ ಟೈಟನ್ಸ್‌ನಲ್ಲಿದ್ದರೂ ಪಂದ್ಯ ಆಡುವ ಅವಕಾಶ ದೊರೆತಿರಲಿಲ್ಲ. ರಾಜಸ್ಥಾನ ರಾಯಲ್ಸ್‌ಗೆ ಹೋಗಿದ್ದ ಆವೇಶ್ ಖಾನ್ ಸ್ಥಾನಕ್ಕೆ ಮಾವಿ ಅವರನ್ನು ಲಖನೌ ₹6.4 ಕೋಟಿಗೆ ಪಡೆದಿತ್ತು.

ತವರಿಗೆ ಮರಳಿದ ಮುಸ್ತಫಿಜುರ್

ನವದೆಹಲಿ (ಪಿಟಿಐ): ಅಮೆರಿಕ ಮತ್ತು ವೆಸ್ಟ್‌ಇಂಡೀಸ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ವೀಸಾ ಪ್ರಕ್ರಿಯೆ ಪೂರ್ಣಗೊಳಿಸಲು ಬಾಂಗ್ಲಾದೇಶಕ್ಕೆ ಮರಳಿರುವುದರಿಂದ ಚೆನ್ನೈ ಸೂಪರ್ ಕಿಂಗ್ಸ್‌ನ ಎಡಗೈ ವೇಗದ ಬೌಲರ್ ಮುಸ್ತಫಿಜುರ್ ರಹಮಾನ್ ಶುಕ್ರವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಮುಂದಿನ ಪಂದ್ಯದಿಂದ ಹೊರಗುಳಿಯುವ ಸಾಧ್ಯತೆ ಇದೆ.

'ವೀಸಾ ಪ್ರಕ್ರಿಯೆ ಪೂರ್ಣಗೊಳಿಸುವ ಸಲುವಾಗಿ ಮುಸ್ತಫಿಜುರ್ ಅವರು ತವರಿಗೆ ಮರಳಿದ್ದಾರೆ. ಪಾಸ್‌ಪೋರ್ಟ್ ಮರಳಿ ಪಡೆದ ಬಳಿಕ ಹಿಂತಿರುಗುತ್ತಾರೆ. ಗುರುವಾರ ವೀಸಾಗೆ ಅರ್ಜಿ ಸಲ್ಲಿಸಲು ಕೊನೆಯ ದಿನ' ಎಂದು ಸಿಎಸ್‌ಕೆ ಸಿಇಒ ಕಾಶಿ ವಿಶ್ವನಾಥನ್ ತಿಳಿಸಿದರು. 7 ವಿಕೆಟ್ ಕಬಳಿಸಿರುವ ರೆಹಮಾನ್ ಈ ಬಾರಿಯ ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿಕೊಂಡಿದ್ದಾರೆ.

16 ವರ್ಷಗಳಿಂದ ಒಂದೇ ಕಥೆ: ರಾಯುಡು ಟೀಕೆ

'ಆರ್‌ಸಿಬಿ ಹಿನ್ನಡೆ; ಸೀನಿಯರ್‌ಗಳೇ ಕಾರಣ'

ನವದೆಹಲಿ (ಪಿಟಿಐ): 'ಹರಾಜಿನಲ್ಲಿ ಭಾರಿ ಮೊತ್ತ ಪಡೆದು ಬಂದಿರುವ ಅಂತರರಾಷ್ಟ್ರೀಯ ಆಟಗಾರರು ಒತ್ತಡದ ಸ್ಥಿತಿಯನ್ನು ನಿಭಾಯಿಸಲು ವಿಫಲರಾಗಿ, ಯುವ ಆಟಗಾರರ ಹೆಗಲ ಮೇಲೆ ಭಾರ ಹೇರುತ್ತಿರುವುದರಿಂದಲೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಶಸ್ತಿ ಬರ ಎದುರಿಸುತ್ತಿದೆ...'

– ಇದು ಭಾರತ ತಂಡದ ಮಾಜಿ ಆಟಗಾರ ಅಂಬಟಿ ರಾಯುಡು ಅವರ ಅಭಿಪ್ರಾಯ.

ಈ ಹಿಂದೆ ಐಪಿಎಲ್ ಟ್ರೋಫಿ ಗೆದ್ದ ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿದ್ದ ರಾಯುಡು, ಬೆಂಗಳೂರು ತಂಡದ ಹಿನ್ನಡೆಗೆ ಯಾರ ಹೆಸರನ್ನೂ ಹೇಳಲಿಲ್ಲ. ಆದರೆ– ಪ್ರಮುಖ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಫಫ್ ಡುಪ್ಲೆಸಿ ಅವರನ್ನು ಉದ್ದೇಶಿಸಿ ಪರೋಕ್ಷವಾಗಿ ಹೇಳಿಕೆ ನೀಡಿದಂತಿತ್ತು.

ಆರ್‌ಸಿಬಿ ಈ ಋತುವಿನಲ್ಲಿ ಆಡಿದ ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಸೋತಿದೆ. ಕೊಹ್ಲಿ ಅವರು 140ರ ಸ್ಟ್ರೈಕ್ ರೇಟ್‌ನಲ್ಲಿ 203 ರನ್ ಗಳಿಸಿದ್ದಾರೆ. ಆದರೆ ಪವರ್‌ಪ್ಲೇನಲ್ಲಿ ಅವರು ತಂಡಕ್ಕೆ ಸ್ಫೋಟಕ ಆರಂಭ ನೀಡಿಲ್ಲ. ಅನುಭವಿ ಡುಪ್ಲೆಸಿ ಅವರು ನಾಲ್ಕು ಪಂದ್ಯಗಳಲ್ಲಿ 65 ರನ್ ಗಳಿಸಿದ್ದರೆ, ಆಸ್ಟ್ರೇಲಿಯಾದ ತಾರೆ ಮ್ಯಾಕ್ಸ್‌ವೆಲ್ ಕಾಣಿಕೆ ಬರೇ 31.

'ಬೌಲರ್‌ಗಳು ಉದಾರವಾಗಿ ರನ್ ನೀಡುತ್ತಿದ್ದಾರೆ. ಬ್ಯಾಟರ್‌ಗಳು ನಿರೀಕ್ಷೆಗಿಂತ ಕೆಳಮಟ್ಟದಲ್ಲಿ ಆಡುತ್ತಿದ್ದಾರೆ' ಎಂದು ಆರ್‌ಸಿಬಿ, ಮಂಗಳವಾರ ಲಖನೌ ತಂಡಕ್ಕೆ 28 ರನ್‌ಗಳಿಂದ ಸೋತ ನಂತರ ಸ್ಟಾರ್ ಸ್ಪೋರ್ಟ್ಸ್‌ಗೆ ತಿಳಿಸಿದರು.

'ಒತ್ತಡದ ಸ್ಥಿತಿಯಲ್ಲಿ ಯಾರು ಬ್ಯಾಟ್ ಮಾಡುತ್ತಿದ್ದಾರೆ? ಯುವ ಆಟಗಾರರು ಮತ್ತು ದಿನೇಶ್ ಕಾರ್ತಿಕ್ ಮಾತ್ರ. ಒತ್ತಡದ ಸ್ಥಿತಿ ನಿವಾರಿಸಬೇಕಾಗಿದ್ದ ದೊಡ್ಡ ಅಂತರರಾಷ್ಟ್ರೀಯ ತಾರೆಗಳು ಎಲ್ಲಿ ಹೋಗಿದ್ದಾರೆ? ಎಲ್ಲರೂ ಡ್ರೆಸಿಂಗ್ ರೂಮಿನಲ್ಲಿದ್ದಾರೆ' ಎಂದು ರಾಯುಡು ತಿವಿದರು.

ಕಾರ್ತಿಕ್ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಮಿಂಚಿದ್ದರು. ಮಂಗಳವಾರದ ಪಂದ್ಯದಲ್ಲಿ ಇಂಪ್ಯಾಕ್ಟ್ ಪ್ಲೇಯರ್ ಮಹಿಪಾಲ್ ಲೊಮ್ರೊರ್ 230ರ ಸ್ಟ್ರೈಕ್‌ರೇಟಿನಲ್ಲಿ ರನ್ ಗಳಿಸಿದ್ದರು.

'16 ವರ್ಷಗಳಾಗಿವೆ. ಆರ್‌ಸಿಬಿಯದ್ದು ಒಂದೇ ಕಥೆ. ಒತ್ತಡವಿದ್ದಾಗ ತಾರಾ ಆಟಗಾರರು ಗೆಲ್ಲಿಸುವುದಿಲ್ಲ. ಯುವ ಆಟಗಾರರ ಹೆಗಲ ಮೇಲೆ'ದರ ಹೊರೆ ಹೇರಲಾಗುತ್ತಿದೆ' ಎಂದು 38 ವರ್ಷದ ಬ್ಯಾಟರ್ ಹೇಳಿದರು.

ಅಂಬಟಿ ರಾಯುಡು

ಫಿಟ್ನೆಸ್ ಪರೀಕ್ಷೆ: ಸೂರ್ಯ ತೇರ್ಗಡೆ

ನವದೆಹಲಿ (ಪಿಟಿಐ): ಭಾರತ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಹೆಚ್ಚಿನ ಎಲ್ಲಾ ಫಿಟ್ನೆಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಋತುವಿನ ತಮ್ಮ ಮೊದಲ ಐಪಿಎಲ್ ಪಂದ್ಯವನ್ನು ಶೀಘ್ರದಲ್ಲೇ ಆಡಲಿದ್ದಾರೆ.

ಮುಂಬೈ ಇಂಡಿಯನ್ಸ್ ಪ್ರಧಿನಿಸುತ್ತಿರುವ ಸೂರ್ಯಕುಮಾರ್ ಅವರು ಈಚೆಗೆ ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

'ಎನ್‌ಸಿಎಯಿಂದ ಆರ್‌ಟಿಪಿ (ರಿಟರ್ನ್ ಟು ಪ್ಲೇ) ಪ್ರಮಾಣಪತ್ರ ವನ್ನು ಪಡೆಯಲು ಕಡ್ಡಾಯವಾದ ಒಂದು ಪರೀಕ್ಷೆ ಹೊರತುಪಡಿಸಿ ಸೂರ್ಯ ಎಲ್ಲಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾರೆ. ಗುರುವಾರ ಇನ್ನೂ ಒಂದು ಪರೀಕ್ಷೆ ಬಾಕಿ ಉಳಿದಿದ್ದು, ಅದರ ನಂತರ ಸ್ಪಷ್ಟ ಚಿತ್ರಣ ಹೊರಬರಲಿದೆ' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಏಪ್ರಿಲ್ 7 ಅಥವಾ 11 ರಂದು ನಡೆಯುವ ಪಂದ್ಯಗಳಿಗೆ ಕಣಕ್ಕಿಳಿಯಬಹುದು ಎಂದು ಹೇಳಿದ್ದಾರೆ.

ಶ್ರೇಯಾಂಕಾಗೆ ತವರಲ್ಲಿ ಅದ್ದೂರಿ ಸ್ವಾಗತ

ಡಬ್ಲ್ಯುಪಿಎಲ್ ಪ್ರಶಸ್ತಿ ವಿಜೇತ ಆರ್‌ಸಿಬಿ ಮಹಿಳಾ ತಂಡದ ಆಟಗಾರ್ತಿ ಶ್ರೇಯಾಂಕಾ ಪಾಟೀಲ ಅವರನ್ನು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಕೋಳಕೂರ ಗ್ರಾಮದಲ್ಲಿ ಬುಧವಾರ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಪ್ರಜಾವಾಣಿ ವಾರ್ತೆ

ಜೇವರ್ಗಿ (ಕಲಬುರಗಿ): ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ವಿಜೇತ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡದ ಆಟಗಾರ್ತಿ ಶ್ರೇಯಾಂಕಾ ಪಾಟೀಲ ಅವರನ್ನು ಕೋಳಕೂರಿನಲ್ಲಿ ಬುಧವಾರ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು.

ಶ್ರೇಯಾಂಕ ಮೂಲತಃ ಕಲಬುರಗಿ ಜಿಲ್ಲೆಯ ಕೋಳಕೂರ ಗ್ರಾಮದವರು. ತವರಿಗೆ ಬಂದ ಅವರನ್ನು ಗ್ರಾಮದ ಹೊರವಲಯದಿಂದ ಸಿದ್ಧಬಸವೇಶ್ವರ ದೇವಸ್ಥಾನದವರೆಗೆ ಭವ್ಯ ಮೆರವಣಿಗೆ ಮೂಲಕ ಕರೆದೊಯ್ಯಲಾಯಿತು. ಮೆರವಣಿಗೆ ಬಳಿಕ ಶ್ರೇಯಾಂಕ ಪಾಟೀಲ ಸಿದ್ಧಬಸವೇಶ್ವರರ ದರ್ಶನ ಪಡೆದರು.

'ಒಲಿಂಪಿಕ್ಸ್‌ಗೆ ನಿರ್ದಿಷ್ಟ ಉಗ್ರ ಸಂಘಟನೆ ಬೆದರಿಕೆ ಇಲ್ಲ'

ಪ್ಯಾರಿಸ್ (ಎಎಫ್‌ಪಿ): ಪ್ಯಾರಿಸ್ ಒಲಿಂಪಿಕ್ಸ್‌ಗೆ ನಿರ್ದಿಷ್ಟ ಉಗ್ರ ಸಂಘಟನೆಯ ಬೆದರಿಕೆ ಬಂದಿಲ್ಲ. ಆಯೋಜಕರು ನಿಗದಿಯಂತೆ ಉದ್ಘಾಟನಾ ಸಮಾರಂಭವನ್ನು ಸೀನ್ ನದಿಯಲ್ಲಿ ನಡೆಸಲು ಯೋಜನೆ ಹಾಕಿಕೊಂಡಿದ್ದಾರೆ ಎಂದು ಕ್ರೀಡಾ ಸಚಿವರು ಬುಧವಾರ ಹೇಳಿದ್ದಾರೆ.

ಜುಲೈ 26 ರಿಂದ ಪ್ರಾರಂಭವಾಗುವ ಪ್ಯಾರಿಸ್ ಕ್ರೀಡಾಕೂಟದ ಮೇಲೆಯೂ ಆತಂಕ ಮೂಡಿಸಿದೆ.

'ಇದುವರೆಗೆ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕೂಟಗಳನ್ನು ಗುರಿಯಾಗಿಸಿಕೊಂಡು ಯಾವುದೇ ನಿರ್ದಿಷ್ಟ ಭಯೋತ್ಪಾದನೆ ಸಂಬಂಧಿತ ಬೆದರಿಕೆ ಬಂದಿಲ್ಲ' ಎಂದು ಕ್ರೀಡಾ ಸಚಿವೆ ಅಮೇಲಿ ಔಡಿಯಾ-ಕ್ಯಾಸ್ಟೆರಾ ಅವರು ಫ್ರಾನ್ಸ್ 2 ಚಾನೆಲ್‌ಗೆ ತಿಳಿಸಿದರು.

ಕ್ರೀಡೆಗಳ ಆರಂಭಕ್ಕೂ ಮುನ್ನ, ಅಥ್ಲೀಟ್‌ಗಳು ಕ್ರೀಡಾಂಗಣದಲ್ಲಿ ಪಥ ಸಂಚಲನ ನಡೆಸುವುದು ಸಂಪ್ರದಾಯ. ಈ ಬಾರಿ ಸ್ಪರ್ಧಾಳುಗಳು ಚಿಕ್ಕ ದೋಣಿಗಳ ಮೂಲಕ ಸಾಗುವರು. 5 ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ಹಾಗೂ ಅಕ್ಕಪಕ್ಕದ ಕಟ್ಟಡಗಳಿಂದ ವೀಕ್ಷಿಸುವವರು ಈ ನೌಕಾಯಾನ ಸಾಹಸಕ್ಕೆ ಸಾಕ್ಷಿಯಾಗಲಿದ್ದಾರೆ.

ಅಂಗವಿಕಲರ ರಾಷ್ಟ್ರಮಟ್ಟದ ಟ್ವೆಂಟಿ-20 ಕ್ರಿಕೆಟ್ ಟೂರ್ನಿ

ಸದರ್ನ್ ಸ್ಟ್ರೈಕರ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರಾಜೇಶ್ ಕಣ್ಣೂರ್ (67) ಮತ್ತು ನರೇಂದ್ರ ಮಂಗೋರೆ (ಅಜೇಯ 59; 22ಎ, 4X3, 6X7) ಅವರ ಅರ್ಧಶತಕಗಳ ನೆರವಿನಿಂದ ಸದರ್ನ್ ಸ್ಟ್ರೈಕರ್ಸ್ ತಂಡವು ಅಜಿತ್ ವಾಡೇಕರ್ ಸ್ಮರಣಾರ್ಥ ನಡೆದ ಅಂಗವಿಕಲರ ರಾಷ್ಟ್ರಮಟ್ಟದ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿತು.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಸದರ್ನ್ ಸ್ಟ್ರೈಕರ್ಸ್ ತಂಡ ವೆಸ್ಟರ್ನ್ ರೇಂಜರ್ಸ್ ತಂಡವನ್ನು 60 ರನ್‌ಗಳಿಂದ ಮಣಿಸಿತು. 197 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ರೇಂಜರ್ಸ್ ತಂಡಕ್ಕೆ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 137 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ರೇಂಜರ್ಸ್ ಪರ ತಂಡದ ನಾಯಕ ಕುನಾಲ್ ಫನಾಸೆ 46 (32ಎ, 4X8) ರನ್ ಗಳಿಸಿದ್ದು ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ಉತ್ತಮ ಆಟ ಮೂಡಿಬರಲಿಲ್ಲ.

ಇದಕ್ಕೂ ಮುನ್ನ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಸ್ಟ್ರೈಕರ್ಸ್‌ಗೆ ನಯನ್ ಶಿಂದೆ ಮತ್ತು ರಾಜೇಶ್ ಕಣ್ಣೂರ್ ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 120 ರನ್ ಸೇರಿಸಿತು.

ರಾಜೇಶ್ ಅವರು ಗಣೇಶ ನವಘಾನೆ ಬೌಲಿಂಗ್‌ನಲ್ಲಿ ರಾಜೇಶ್ ಸುರ್ವೆಗೆ ಕ್ಯಾಚಿತ್ತರು. ಅವರು 8 ಬೌಂಡರಿ, 3 ಸಿಕ್ಸರ್ ಬಾರಿಸಿದರು. ಅರ್ಧಶತಕದ ಹೊಸ್ತಿಲಲ್ಲಿದ್ದ ನಯನ್ ಶಿಂಧೆ (49) ರನ್‌ಔಟ್ ಆದರು.

ಈ ಹಂತದಲ್ಲಿ ಜತೆಯಾದ ನರೇಂದ್ರ ಮಂಗೋರೆ ಮತ್ತು ಎಂ.ಸುಗಣೇಶ್ ಜೋಡಿ 33 ಎಸೆತಗಳಲ್ಲಿ 73 ರನ್ ಗಳಿಸಿ ತಂಡದ ಮೊತ್ತ ಹಿಗ್ಗಿಸಿತು. ಬಿರುಸಿನ ಆಟವಾಡಿದ ನರೇಂದ್ರ 21 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಅವರು ಸತತ ನಾಲ್ಕು ಸಿಕ್ಸರ್ ಸಿಡಿಸಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಸದರ್ನ್ ಸ್ಟ್ರೈಕರ್ಸ್: 20 ಓವರ್‌ಗಳಲ್ಲಿ 2ಕ್ಕೆ 197 (ರಾಜೇಶ್ ಕಣ್ಣೂರ್ 67, ನರೇಂದ್ರ ಮಂಗೋರೆ 59, ನಯನ್ ಶಿಂಧೆ 49; ಗಣೇಶ ನವಘಾನೆ 28ಕ್ಕೆ 1). ವೆಸ್ಟರ್ನ್ ರೇಂಜರ್ಸ್: 20 ಓವರ್‌ಗಳಲ್ಲಿ 7ಕ್ಕೆ 137 (ಕುನಾಲ್ ಫನಾಸೆ 46, ಅತುಲ್ ಸುರ್ವೆ 26, ಸತೀಶ ರಾಠೋಡ್ 15; ರಮೇಶ ನಾಯ್ಡು 11ಕ್ಕೆ 2, ಕೃಷ್ಣ ಬಗಾದಿ 15ಕ್ಕೆ 2, ವಿ.ಎನ್.ಜಿತೇಂದ್ರ 19ಕ್ಕೆ 1). ಫಲಿತಾಂಶ: ಸದರ್ನ್ ಸ್ಟ್ರೈಕರ್ಸ್‌ಗೆ 60 ರನ್‌ಗಳ ಜಯ. ಪಂದ್ಯಶ್ರೇಷ್ಠ: ನರೇಂದ್ರ ಮಂಗೋರೆ.

ಅಜಿತ್ ವಾಡೇಕರ್ ಸ್ಮರಣಾರ್ಥ ಹುಬ್ಬಳ್ಳಿಯಲ್ಲಿ ನಡೆದ ಅಂಗವಿಕಲರ ರಾಷ್ಟ್ರಮಟ್ಟದ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ಸದರ್ನ್ ಸ್ಟ್ರೈಕರ್ಸ್ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಹಾಕಿ: ಪಾಲಚಂಡ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ನಾಪೋಕ್ಲು: ಸಾಂಘಿಕ ಆಟ ಪ್ರದರ್ಶಿಸಿದ ಪಾಲಚಂಡ ತಂಡವು ಇಲ್ಲಿನ ಚೆರಿಯ ಪರಂಬುವಿನ ಜನರಲ್ ಕೆ.ಎಸ್ ತಿಮ್ಮಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೊಡವ ಕುಟುಂಬಗಳ ನಡುವಿನ ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ 6–0ಯಿಂದ ಬಿದ್ದಂಡ ತಂಡದ ವಿರುದ್ಧ ಸುಲಭ ಜಯ ಗಳಿಸಿತು.

ಬುಧವಾರದ ಪಂದ್ಯದಲ್ಲಿ ಪಾಲಚಂಡ ತಂಡದ ಪರ ಪ್ರಾರ್ಥನ್ ಪೊನ್ನಣ್ಣ ಮತ್ತು ಚೇತನ್ ಬೋಪಣ್ಣ ತಲಾ 2 ಗೋಲು ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಆತಿಥೇಯ ಕುಂಡ್ಯೋಳಂಡ ತಂಡ 3–2ರ ಅಂತರದಿಂದ ಪುಚ್ಚಿಮಾಡ ವಿರುದ್ಧ ಗೆಲುವು ಸಾಧಿಸಿ, ಮುಂದಿನ ಸುತ್ತು ಪ್ರವೇಶಿಸಿತು.

ಪಂದ್ಯಗಳ ಫಲಿತಾಂಶ: ನಂಬುಡಮಂಡ 3–1ರಿಂದ ಪೊನ್ನಾಲತಂಡ ವಿರುದ್ಧ; ವಾಟೇರಿರ 3–0ಯಿಂದ ನಡಿಕೇರಿಯಂಡ ವಿರುದ್ಧ; ಪಾಲೆಯಡ 3-0ಯಿಂದ ತಂಬಂಡ ವಿರುದ್ಧ; ಕಲ್ಲೆಂಗಡ 3–0ಯಿಂದ ಪಳಂಗೇಟಿರ ವಿರುದ್ಧ; ಚೊಟ್ಟೇರ 2–1ರಿಂದ ಕಾಯಪಂಡ ವಿರುದ್ಧ; ಬಾಚಮಂಡ 3–0 ಯಿಂದ ಕೊಕ್ಕಲಮಾಡ ವಿರುದ್ಧ; ಚೆರುವಾಳಂಡ 2–1ರಿಂದ ಬಲ್ಲಿಯಂಡ ವಿರುದ್ಧ; ಮುದ್ದಿಯಂಡ 5–2ರಿಂದ ಬೊಜ್ಜಂಗಡ ವಿರುದ್ಧ; ಮೊಣ್ಣಂಡ 3–0ಯಿಂದ ಆಪಟ್ಟಿರ ವಿರುದ್ಧ ಗೆಲುವು ಸಾಧಿಸಿದವು.

ಕೇಕಡ ಮತ್ತು ಕೂಪದಿರ ತಂಡಗಳ ಪಂದ್ಯ ಸಮಬಲಗೊಂಡು, ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಕೂಪದಿರ 3-1ರಿಂದ ಗೆಲುವು ಸಾಧಿಸಿತು.

ಅಮ್ಮನಕುಟ್ಟಂಡ ವಿರುದ್ಧ ಬೊಟ್ಟೋಳಂಡ, ಕಿರಿಯಮಾಡ ವಿರುದ್ಧ ಬೈರಟಿರ, ನೆಲ್ಲಿರ ವಿರುದ್ಧ ಕುಪ್ಪಣಮಾಡ, ಜಂಬಂಡ ವಿರುದ್ಧ ಚೊಟ್ಟೆಕ್‌ಮಾಡ, ಬೋಳ್ತಂಡ ತಂಡದ ವಿರುದ್ಧ ಅದೇಂಗಡ ವಾಕ್‌ಓವರ್‌ನಲ್ಲಿ ಮುಂದಿನ ಸುತ್ತು ಪ್ರವೇಶಿಸಿದವು.

ಟಿ20: ಮಹಿಳಾ ತಂಡ ಬಾಂಗ್ಲಾ ಪ್ರವಾಸ

ಢಾಕಾ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಆತಿಥೇಯರ ವಿರುದ್ಧ ಐದು ಪಂದ್ಯಗಳ ಟಿ20 ಅಂತರರಾಷ್ಟ್ರೀಯ ಸರಣಿಗಾಗಿ ಏಪ್ರಿಲ್ 28 ರಿಂದ ಮೇ 9 ರವರೆಗೆ ಬಾಂಗ್ಲಾದೇಶ ಪ್ರವಾಸ ಕೈಗೊಳ್ಳಲಿದೆ. ಮೊದಲ ಪಂದ್ಯ ಏಪ್ರಿಲ್ 28 ರಂದು ನಡೆಯಲಿದ್ದು, ನಂತರ ಏಪ್ರಿಲ್ 30 (ಹಗಲು/ರಾತ್ರಿ), ಮೇ 2, ಮೇ 6 ಮತ್ತು ಮೇ 9 ರಂದು ಪಂದ್ಯಗಳು ನಡೆಯಲಿವೆ.

ಸಂಕ್ಷಿಪ್ತ ಸುದ್ದಿ

ಬ್ಯಾಡ್ಮಿಂಟನ್: ಅನ್ಮೋಲ್ ಮುನ್ನಡೆ

ಅಸ್ತಾನಾ (ಪಿಟಿಐ): ಭಾರತದ ಯುವ ಬ್ಯಾಡ್ಮಿಂಟನ್ ಆಟಗಾರ್ತಿ ಅನ್ಮೋಲ್ ಖರ್ಬ್ ಅವರು ಇಲ್ಲಿ ನಡೆಯುತ್ತಿರುವ ಕಜಕಸ್ತಾನ ಇಂಟರ್‌ನ್ಯಾಷನಲ್ ಚಾಲೆಂಜ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 17 ವರ್ಷದ ಅನ್ಮೋಲ್ ಅವರು 21-13, 22-20 ರಿಂದ ಅಗ್ರ ಶ್ರೇಯಾಂಕದ ಸ್ವದೇಶದ ಮಾಳವಿಕಾ ಬನ್ಸೋಡ್ ಅವರಿಗೆ ಆಘಾತ ನೀಡಿದರು.

ನಗಾಲ್‌ಗೆ ಸೋಲು

ಮರಕೇಶ್ (ಮೊರೊಕ್ಕೊ) (ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಇಲ್ಲಿ ನಡೆಯುತ್ತಿರುವ ಮರಕೇಶ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಿ ಕ್ವಾರ್ಟರ್‌ನಲ್ಲಿ ಪರಾಭವಗೊಳ್ಳುವ ಮುನ್ನ ತೀವ್ರ ಹೋರಾಟ ನಡೆಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 95ನೇ ಸ್ಥಾನದಲ್ಲಿರುವ ನಗಾಲ್, 61ನೇ ಸ್ಥಾನದಲ್ಲಿರುವ ಇಟಲಿಯ ಲೊರೆಂಜೊ ಸೊನೆಗೊ ವಿರುದ್ಧ 6-1 3-6 4-6 ಅಂತರದಲ್ಲಿ ಸೋಲನುಭವಿಸಿದರು.

ಲಂಕಾಕ್ಕೆ ಸರಣಿ ಜಯ

ಚಿತ್ತಗಾಂಗ್ (ಬಾಂಗ್ಲಾದೇಶ) (ಎಪಿ): ವೇಗಿ ಲಾಹಿರು ಕುಮಾರ (50ಕ್ಕೆ4) ಅವರ ಅಮೋಘ ಬೌಲಿಂಗ್ ನೆರವಿನಿಂದ ಬಾಂಗ್ಲಾದೇಶ ವಿರುದ್ಧದ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಶ್ರೀಲಂಕಾ 192 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಸಿಲ್ಹೆಟ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಬಾಂಗ್ಲಾದೇಶ 328 ರನ್‌ಗಳಿಂದ ಸೋಲನುಭವಿಸಿತ್ತು. ಸರಣಿಯನ್ನು ಸ್ವೀಪ್ ಮಾಡುವ ಮೂಲಕ ಬಾಂಗ್ಲಾದೇಶದಲ್ಲಿ ಟೆಸ್ಟ್ ಪಂದ್ಯವನ್ನು ಸೋಲದ ದಾಖಲೆ ಉಳಿಸಿಕೊಂಡಿದೆ.

ಪ್ಯಾರಾ ಈಜು: ನವೀನ್‌ಗೆ 3 ಪದಕ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ಬಿ.ಕಾಂ. ವಿದ್ಯಾರ್ಥಿ ನವೀನ್ ವೆಂಕಟೇಶ್ ಅವರು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಈಚೆಗೆ ನಡೆದ 23ನೇ ರಾಷ್ಟ್ರೀಯ ಪ್ಯಾರಾ ಈಜು ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ ಮತ್ತು ಎರಡು ಬೆಳ್ಳಿ ಪದಕ ಗೆದ್ದಿದ್ದಾರೆ.

ನವೀನ್ ಅವರು 100 ಮೀ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರೆ, 50 ಮೀ ಬ್ರೆಸ್ಟ್ ಸ್ಟ್ರೋಕ್ ಮತ್ತು 50 ಮೀ ಬ್ಯಾಕ್ ಸ್ಟ್ರೋಕ್‌ನಲ್ಲಿ ತಲಾ ಬೆಳ್ಳಿಯ ಸಾಧನೆ ಮಾಡಿದ್ದಾರೆ ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್.ದೊರೆಸ್ವಾಮಿ ತಿಳಿಸಿದ್ದಾರೆ.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ್ 1 ಆಯುರ್ವೇದಿಕ್ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದ ದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ, ಯಾವುದೇ ಅಡ್ಡ ಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ :
08037836183